ಬುಧವಾರ, ಡಿಸೆಂಬರ್ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 336 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕೃಷಿಕ್ಷೇತ್ರಕ್ಕೂ ಕಾಲಿಡುತ್ತಿದೆ. ಇನ್ನು ಮುಂದೆ ಜೇನುಸಾಕಣೆಯ ಕೆಲಸವನ್ನು ಸುಗಮಗೊಳಿಸಲಿದೆ

ಆಳ-ಅಗಲ
ಪರಿಶಿಷ್ಟರ ಮೇಲೆ ದೌರ್ಜನ್ಯ: ರಾಜ್ಯದ ಸ್ಥಿತಿ ಶೋಚನೀಯ
ಮಿಚಾಂಗ್: ಮೃತರ ಸಂಖ್ಯೆ 12ಕ್ಕೆ ಏರಿಕೆ 10
'ಇಂಡಿಯಾ' ಸಭೆ 17ಕ್ಕೆ ಮುಂದೂಡಿಕೆ 7

ಸೆನ್ಸೆಕ್ಸ್	ನಿಫ್ಟಿ	₹/$
69,296 ▲	20,855 ▲	83.37 ▲

ತೆಲಂಗಾಣ: ರೇವಂತ್ ರೆಡ್ಡಿ ಮುಖ್ಯಮಂತ್ರಿ, ನಾಳೆ ಪ್ರಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಎ. ರೇವಂತ್ ರೆಡ್ಡಿ ಅವರು ತೆಲಂಗಾಣದ ಹೊಸ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಕಾಂಗ್ರೆಸ್ ಪ್ರಕಟಿಸಿದೆ. ನೂತನ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭವು ಗುರುವಾರ ನಡೆಯಲಿದೆ.

ಉಪ ಮುಖ್ಯಮಂತ್ರಿ ಸ್ಥಾನ ಒಂದು ಅಥವಾ ಅದಕ್ಕಿಂತ ಹೆಚ್ಚು ಇರಲಿದೆಯೇ ಎಂಬ ಬಗ್ಗೆ ಪಕ್ಷ ಏನನ್ನೂ ಹೇಳಿಲ್ಲ. ಸರ್ಕಾರದಲ್ಲಿ ರಾಜ್ಯದ ಹಿರಿಯ ನಾಯಕರು ಯಾವ ಪಾತ್ರ ವಹಿಸುವರು ಎನ್ನುವುದನ್ನೂ ವಿವರಿಸಿಲ್ಲ ಆದರೆ ರೇವಂತ್ ಅವರ ನೇತೃತ್ವದ ಸರ್ಕಾರವು 'ಏಕವ್ಯಕ್ತಿ' ಪ್ರದರ್ಶನ ಆಗಿರುವುದಿಲ್ಲ. ತಂಡವಾಗಿ ಕೆಲಸ ಮಾಡಲಿದೆ ಎಂದು ಸ್ಪಷ್ಟಪಡಿಸಿದೆ.

ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರೇವಂತ್ ಬದಲು ಹೊಸ ಅಧ್ಯಕ್ಷರ ನೇಮಕವಾಗಲಿದೆಯೆ ಎಂಬುದನ್ನೂ ತಿಳಿಸಿಲ್ಲ.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಂದಾಜು ₹66 ಕೋಟಿ ಮೌಲ್ಯದ ಚರ ಹಾಗೂ ಸ್ಥಿರಾಸ್ತಿ ಪತ್ತೆ

ಕುಬೇರರಿಗೆ 'ಲೋಕಾ' ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದನೆ ಮಾಡಿದ ಆರೋಪದ ಮೇಲೆ ರಾಜ್ಯದ 13 ಅಧಿಕಾರಿಗಳ ಮನೆ, ಕಚೇರಿ ಸೇರಿದಂತೆ 68 ಸ್ಥಳಗಳ ಮೇಲೆ ಏಕಕಾಲದಲ್ಲಿ ಮಂಗಳವಾರ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಅಪಾರ ಪ್ರಮಾಣದ ಅಕ್ರಮ ಆಸ್ತಿ ಪತ್ತೆ ಹಚ್ಚಿದ್ದಾರೆ.

'ಕುಬೇರ ಅಧಿಕಾರಿ'ಗಳ ಮೇಲೆ ಎಫ್‌ಐಆರ್ ದಾಖಲಿಸಿಕೊಂಡಿರುವ ಲೋಕಾಯುಕ್ತ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

ಬೆಂಗಳೂರು, ಬೀದರ್, ಕಲಬುರಗಿ, ಕೊಪ್ಪಳ, ಬಳ್ಳಾರಿ, ಧಾರವಾಡ, ಕೋಲಾರ, ಮೈಸೂರಿನಲ್ಲಿ ಅಧಿಕಾರಿಗಳ ಮನೆಯ ಬಾಗಿಲುಗಳನ್ನು ಬೆಳಿಗ್ಗೆಯೇ ಬಡಿದ ಪೊಲೀಸರು, ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದಂತೆ ಇಡೀ ದಿನ ಶೋಧ ಕಾರ್ಯ ನಡೆಸಿದರು. ದಾಳಿ ವೇಳೆ ಅಂದಾಜು ₹66 ಕೋಟಿ ಮೌಲ್ಯದ ಚರ ಹಾಗೂ ಸ್ಥಿರಾಸ್ತಿ ಪತ್ತೆಯಾಗಿದೆ.

ಬೆಸ್ಕಾಂ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾಲು ಉತ್ಪಾದಕರ ಸಹಕಾರ ಸಂಘ, ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ, ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕರು... ಹೀಗೆ ವಿವಿಧ ಇಲಾಖೆಯ ಅಧಿಕಾರಿಗಳ ಮನೆ ಮತ್ತು ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದಾರೆ.

5ನೇ ಪುಟ ನೋಡಿ

ಚನ್ನಕೇಶವ ಬಾವಮೈದ ಮನೆಯಲ್ಲಿ ₹92 ಲಕ್ಷ ನಗದು



ಚನ್ನಕೇಶವ

ಬೆಸ್ಕಾಂ ಜಯನಗರ ಉಪ ವಿಭಾಗದ (ಬನಶಂಕರಿ ಪ್ರಥಮ ಹಂತ) ಕಾರ್ಯನಿರ್ವಾಹಕ ಎಂಜಿನಿಯರ್ ಎಚ್.ಡಿ.ಚನ್ನಕೇಶವ ಅವರ ಬಾವಮೈದ ತರುಣ್ ಅವರ ಸಹಕಾರ ನಗರದಲ್ಲಿರುವ ಮನೆಯಲ್ಲಿ ₹92.95 ಲಕ್ಷ ನಗದು, 55 ಗ್ರಾಂ ಚಿನ್ನಾಭರಣ ಪತ್ತೆಯಾಗಿದೆ.

ಕುಸಿದು ಬಿದ್ದ ಇಇ: ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದಾಗ, ಜಕ್ಕೂರಿನ ಅಮೃತಹಳ್ಳಿಯ ಮನೆಯಲ್ಲಿದ್ದ ಚನ್ನಕೇಶವ ಅವರು ಕುಸಿದು ಬಿದ್ದರು. ಲೋಕಾಯುಕ್ತ ಪೊಲೀಸರೇ ಅವರಿಗೆ ಬಿ.ಪಿ ಮಾತ್ರೆ ತಂದುಕೊಟ್ಟರು. ನಂತರ, ಪರಿಶೀಲನಾ ಕಾರ್ಯ ಮುಂದುವರಿಸಿದರು.

ಎಚ್‌ಡಿ.ಚನ್ನಕೇಶವ ಅವರ ಮನೆಯಲ್ಲಿ ಪತ್ತೆಯಾದ ಆಭರಣಗಳು ಮತ್ತು ನಗದು

ಮೃತರ ಕುಟುಂಬಗಳಿಗೆ ತಲಾ ₹7 ಲಕ್ಷ ಪರಿಹಾರ

ಗೋದಾಮು ದುರಂತ: 7 ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ನಗರದ ಅಲಿಯಾಬಾದ್ ಕೈಗಾರಿಕಾ ಪ್ರದೇಶದಲ್ಲಿನ 'ರಾಜ್ ಗುರು ಫುಡ್ಸ್' ಗೋದಾಮಿನಲ್ಲಿ ಮೆಕ್ಕೆಜೋಳ ಸ್ವಚ್ಛಗೊಳಿಸುವ ಯಂತ್ರದ ಪಿಲ್ಲರ್‌ಗಳು ಕುಸಿದು ಬಿದ್ದು, ಅದರಡಿ ಸಿಲುಕಿದ್ದ ಬಿಹಾರದ ಏಳು ಕಾರ್ಮಿಕರು ಉಸಿರುಗಟ್ಟಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಿಹಾರದ ಸಮಷ್ಠಿಪುರ ಮತ್ತು ಬೇಗುಸರಾಯ್ ಜಿಲ್ಲೆಯ ರಂಬಿತ್ (36), ರಾಜೇಶ್ ಮುಖಿಯಾ (20), ಶಂಭು ಮುಖಿಯಾ (40), ರಾಮಬಾಲಕ (40), ಲುಕೋ ಯಾದವ್ (55), ಕೃಷ್ಣಕುಮಾರ್ ಮುಖಿಯಾ (18) ಮತ್ತು ಧುಲಾಚಂದ್ ಮುಖಿಯಾ (33) ಮೃತರು.

> **ಇಂತಹ ದುರ್ಘಟನೆ ಮರುಕಳಿಸುವುದನ್ನು ತಡೆಯಲು ಎಲ್ಲ ಕಾರ್ಖಾನೆ, ವ್ಯಾಪಾರ ಕೇಂದ್ರಗಳಲ್ಲಿ ಸುರಕ್ಷತಾ ವ್ಯವಸ್ಥೆಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು**
> **ಎಂ.ಬಿ.ಪಾಟೀಲ**
> ಸಚಿವ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ

ಕಾರ್ಮಿಕರಾದ ಸೋನು ಕರಮ ಚಂದ್, ರವೀಶ್ ಕುಮಾರ್, ಅನಿಲ್, ಕಲ್ಮೇಶ್ವರ್ ಮುಖಿಯಾ, ಕಿಶೋರ್ ಹಂಜಾರಿಮಲ್ ಜೈನ್ ಮತ್ತು ಪ್ರಕಾಶ್ ಧುಮಗೊಂಡ ಎಂಬವರು ಗಾಯಗೊಂಡಿದ್ದು, ಚಿಕಿತ್ಸೆ ಕೊಡಿಸಲಾಗಿದೆ.

'ಸೋಮವಾರ ಎಂದಿನಂತೆ ಗೋಣಿ ಚೀಲಕ್ಕೆ ಮೆಕ್ಕೆಜೋಳವನ್ನು ತುಂಬಿಸುವ ಕಾರ್ಯದಲ್ಲಿ 50ಕ್ಕೂ ಹೆಚ್ಚು ಕಾರ್ಮಿಕರು ನಿರತರಾಗಿದ್ದರು. ಮೆಕ್ಕೆಜೋಳ ಸ್ವಚ್ಛಗೊಳಿಸುವ ಯಂತ್ರದ ಪಿಲ್ಲರ್‌ಗಳು ಸಂಜೆ 5ರ ಸುಮಾರಿಗೆ ಏಕಾಏಕಿ ಕುಸಿದು, ಭಾರಿ ಸ್ಫೋಟದ ಸದ್ದು ಕೇಳಿಸಿತು. ಆತಂಕದಿಂದ ಕೆಲವರು ಓಡಿದರು. 13 ಕಾರ್ಮಿಕರು ಮೆಕ್ಕೆಜೋಳದ ರಾಶಿಯಲ್ಲಿ ಸಿಲುಕಿದರು. ಅವರಲ್ಲಿ 7 ಮಂದಿ ಮೃತಪಟ್ಟರೆ, ಇನ್ನೂ 6 ಮಂದಿಗೆ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದರು.

10ನೇ ಪುಟ ನೋಡಿ

ಒಳ ಪುಟಗಳು

ಅರ್ಜುನನಿಗೆ ನೋವಿನ ವಿದಾಯ 6
ಜತೆಗಿದ್ದವರೇ ಬೆನ್ನಿಗೆ ಚೂರಿ ಹಾಕಿದರು: ಹರಿಪ್ರಸಾದ್ 6
ಸಿಬ್ಬಂದಿಗೆ ವೇತನ: ಮನೆ ಅಡ ಇಟ್ಟ ಬೈಜು ರವೀಂದ್ರನ್? 11

ಸಮಾಜ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

67ನೇ
ಮಹಾಪರಿನಿರ್ವಾಣ ದಿನ

ಭಾರತರತ್ನ, ಸಂವಿಧಾನ ಶಿಲ್ಪಿ **ಡಾ. ಬಿ.ಆರ್. ಅಂಬೇಡ್ಕರ್** ರವರ
ಪ್ರತಿಮೆಗೆ ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಸಿದ್ದರಾಮಯ್ಯ
ಮತ್ತು
ಮಾನ್ಯ ಸಮಾಜ ಕಲ್ಯಾಣ ಸಚಿವರಾದ
ಡಾ. ಹೆಚ್. ಸಿ. ಮಹದೇವಪ್ಪ
ಅವರಿಂದ

ಡಿಸೆಂಬರ್ 6, 2023, ಬುಧವಾರ ಬೆಳಿಗ್ಗೆ 9.00 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ (ಪೂರ್ವ ದ್ವಾರ), ಬೆಂಗಳೂರು

ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು
ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವುದು.

"ವಿದ್ಯಾವಂತರಾಗಿ, ಸಂಘಟಿತರಾಗಿ ಮತ್ತು ಉತ್ತೇಜಿತರಾಗಿರಿ....!"
-ಡಾ. ಬಿ.ಆರ್. ಅಂಬೇಡ್ಕರ್

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

@SWDGok

ಬೆಂಗಳೂರಿನಲ್ಲಿ ರ‍್ಯಾಪಿಡೊ ಕ್ಯಾಬ್ ಸೇವೆ

ನವದೆಹಲಿ (ಪಿಟಿಐ): ಬೈಕ್ ಟ್ಯಾಕ್ಸಿ ಸೇವೆಗೆ ಜನಪ್ರಿಯ ಆಗಿರುವ ರ‍್ಯಾಪಿಡೊ ಕಂಪನಿಯು ಕ್ಯಾಬ್ ಸೇವೆಗೆ ಆರಂಭಿಸಿರುವುದಾಗಿ ಮಂಗಳವಾರ ಘೋಷಿಸಿದೆ. ಬೆಂಗಳೂರು, ಹೈದರಾಬಾದ್, ದೆಹಲಿ–ಎನ್‌ಸಿಆರ್‌ನಲ್ಲಿ 1.2 ಲಕ್ಷ ಕ್ಯಾಬ್‌ಗಳೊಂದಿಗೆ ಸೇವೆ ಆರಂಭಿಸಿದ್ದು, 2024ರ ಸೆಪ್ಟೆಂಬರ್ ವೇಳೆಗೆ 35 ನಗರಗಳಿಗೆ ಸೇವೆಯನ್ನು ವಿಸ್ತರಿಸುವ ಯೋಜನೆ ಹೊಂದಿರುವುದಾಗಿ ಕಂಪನಿಯ ಸಂಸ್ಥಾಪಕ ಪವನ್ ಗುಂತುಪಲ್ಲಿ ತಿಳಿಸಿದ್ದಾರೆ.

ಶೂನ್ಯ ಕಮಿಷನ್ ಮಾದರಿಯ ಮೂಲಕ ಚಾಲಕರ ವರಮಾನ ಹೆಚ್ಚಿಸಲಾಗುವುದು. ಆದರೆ ಬಳಕೆದಾರರಿಗೆ ಹೊರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ಕ್ಯಾಬ್‌ಚಾಲಕರು ಗ್ರಾಹಕರಿಂದ ನೇರವಾಗಿ ಹಣ ಪಡೆಯಲಿದ್ದಾರೆ. ರ‍್ಯಾಪಿಡೊ ಕಂಪನಿಯು ಯಾವುದೇ ಕಮಿಷನ್ ಕಡಿತ ಮಾಡುವುದಿಲ್ಲ. ಆದರೆ, ನಿರ್ದಿಷ್ಟ ಮಟ್ಟದ ಗಳಿಕೆಯನ್ನು ಮೀರಿದ ಬಳಿಕ ಚಂದಾದಾರಿಕೆ ಶುಲ್ಕವನ್ನು ಪಾವತಿಸಬೇಕಾಗಲಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ಹಬ್ಬ: ಸಂಸ್ಕೃತಿ ಇಲಾಖೆ ನಡೆಸಿದ ಪ್ರಾಥಮಿಕ ತನಿಖೆಯಿಂದ ದೃಢ

ನಡೆಯದ ಕಾರ್ಯಕ್ರಮಕ್ಕೂ ದರಪಟ್ಟಿ

● ವರುಣ ಹೆಗಡೆ

ಮುಖ್ಯಾಂಶಗಳು

- ₹ 44.27 ಲಕ್ಷ ತಡೆ ಹಿಡಿದ ಆರ್ಥಿಕ ಇಲಾಖೆ
- 2023ರ ಮಾರ್ಚ್ 25ರಿಂದ 26ರವರೆಗೆ ನಡೆದಿದ್ದ ಕಾರ್ಯಕ್ರಮ
- ಈ ಉತ್ಸವದಲ್ಲಿ ಅವ್ಯವಹಾರ ನಡೆದಿದೆ ಎಂಬುದು ಆರೋಪ

ಬೆಂಗಳೂರು: ಬಿಜೆಪಿ ನೇತೃತ್ವದ ಹಿಂದಿನ ರಾಜ್ಯ ಸರ್ಕಾರ ನಗರದಲ್ಲಿ ಹಮ್ಮಿಕೊಂಡಿದ್ದ 'ನಮ್ಮ ಬೆಂಗಳೂರು ಹಬ್ಬ'ದಲ್ಲಿ ಪೂರ್ಣ ಪ್ರಮಾಣದಲ್ಲಿ ನಡೆಯದ ಕಾರ್ಯಕ್ರಮಗಳಿಗೂ ದರಪಟ್ಟಿ ಸಲ್ಲಿಸಲಾಗಿದೆ ಎನ್ನುವುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ. ಇದರಿಂದಾಗಿ ಹಬ್ಬ ನಿರ್ವಹಣೆ ಮಾಡಿದ್ದ ಸಂಸ್ಥೆಗೆ ₹44.27 ಲಕ್ಷವನ್ನು ಆರ್ಥಿಕ ಇಲಾಖೆ ತಡೆ ಹಿಡಿದಿದೆ.

ಬೆಂಗಳೂರಿನ ಸಂಸ್ಕೃತಿ, ಕಲೆ ಹಾಗೂ ಪರಂಪರೆಯನ್ನು ಇಲ್ಲಿ ನೆಲೆಸಿರುವವರಿಗೆ ಪರಿಚಯಿಸುವ ಉದ್ದೇಶದಿಂದ 2023ರ ಮಾರ್ಚ್ 25 ಮತ್ತು 26ರಂದು ಕಬ್ಬನ್ ಉದ್ಯಾನ ಹಾಗೂ ವಿಧಾನಸೌಧದ ಆವರಣದಲ್ಲಿ ಬೆಂಗಳೂರು ಹಬ್ಬ ನಡೆಸಲಾಗಿತ್ತು. ವಿವಿಧ ಜಾನಪದ ಕಲಾ ತಂಡಗಳು, ಚಲನಚಿತ್ರ ಗಾಯಕರ ಬ್ಯಾಂಡ್‌ಗಳು, ರಿಯಾಲಿಟಿ ಶೋಗಳ ಗಾಯಕರು ಪ್ರದರ್ಶನ ನೀಡಿದ್ದರು. ಈ ಉತ್ಸವದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿದ ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಹಾಗೂ ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಎರಡು ದಿನಗಳ ಉತ್ಸವದ ನಿರ್ವಹಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್' ಸಂಸ್ಥೆಗೆ ನೀಡಿತ್ತು. ಈ ಸಂಸ್ಥೆ ನೀಡಿದ್ದ ದರಪಟ್ಟಿಗೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿತ್ತು.

ಈ ಬಗ್ಗೆ ತನಿಖೆ ನಡೆಸಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕಳೆದ ಅಕ್ಟೋಬರ್‌ನಲ್ಲಿ ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ಇಲಾಖೆಯ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು ಸಮಿತಿಯ ಸದಸ್ಯರಾಗಿದ್ದಾರೆ. ಸಂಪೂರ್ಣ ತನಿಖೆ ನಡೆಸಿ, ವರದಿ ಸಲ್ಲಿಸಲು ಮೂರು ತಿಂಗಳು ಕಾಲಾವಕಾಶ ನೀಡಲಾಗಿದೆ. ಸಮಿತಿಯು ಧ್ವನಿ–ಬೆಳಕಿನ ವ್ಯವಸ್ಥೆ, ಕುರ್ಚಿ–ಟೇಬಲ್, ಆಮಂತ್ರಣ ಪತ್ರಿಕೆ, ವೇದಿಕೆ ನಿರ್ವಹಣೆ ಸೇರಿ ವಿವಿಧ ವ್ಯವಸ್ಥೆಗೆ ಸಂಸ್ಥೆ ಸಲ್ಲಿಸಿರುವ ದರಪಟ್ಟಿಯನ್ನು ಪರಿಶೀಲನೆ ನಡೆಸುತ್ತಿದೆ.

₹5.59 ಕೋಟಿ: ಇಲಾಖೆಯು ಟೆಂಡರ್ ಕರೆಯದೆ ಕಾರ್ಯಕ್ರಮ ನಿರ್ವಹಣೆಯ ಅವಕಾಶವನ್ನು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಗೆ ನೀಡಿತ್ತು. ಸಂಸ್ಥೆಯು ಈ ಉತ್ಸವಕ್ಕೆ ಒಟ್ಟು ₹5.59 ಕೋಟಿ ಹಣ ವೆಚ್ಚವಾಗಿರುವುದಾಗಿ ದರಪಟ್ಟಿಯನ್ನು ಇಲಾಖೆಗೆ ಸಲ್ಲಿಸಿತ್ತು. ಸಮಿತಿಯ ತನಿಖೆ ಪ್ರಗತಿಯಲ್ಲಿ ಇರುವುದರಿಂದ ಕಲಾವಿದರಿಗೂ ಹಣ ಪಾವತಿಯಾಗಿಲ್ಲ.

'ಬೆಂಗಳೂರು ಹಬ್ಬಕ್ಕೆ ಸಂಬಂಧಿಸಿದಂತೆ ಸಂಸ್ಥೆ ಸಲ್ಲಿಸಿದ ದರಪಟ್ಟಿ ಮಾರುಕಟ್ಟೆ ದರಕ್ಕಿಂತ ಹೆಚ್ಚಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಆದ್ದರಿಂದ ಎಲ್ಲ ಬಿಲ್‌ಗಳನ್ನು ಮರುಪರಿಶೀಲನೆ ಮಾಡಲಾಗುತ್ತಿದೆ. ಸಂಸ್ಥೆಗೆ ಹಣವನ್ನು ತಡೆಹಿಡಿಯಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಆಮಂತ್ರಣ ಪತ್ರಿಕೆ ಬದಲು ಕರಪತ್ರ'

ಹಬ್ಬ ನಿರ್ವಹಣೆ ಮಾಡಿದ ಸಂಸ್ಥೆಯು 2 ಸಾವಿರ ಆಮಂತ್ರಣ ಪತ್ರಿಕೆ ಮುದ್ರಿಸಿರುವುದಾಗಿ ದರಪಟ್ಟಿ ಸಲ್ಲಿಸಿತ್ತು. ಆದರೆ, ಪ್ರಾಥಮಿಕ ತನಿಖೆಯಲ್ಲಿ ಆಹ್ವಾನ ಪತ್ರಿಕೆ ಮುದ್ರಿಸಿಲ್ಲ ಎನ್ನುವುದು ದೃಢಪಟ್ಟಿದೆ. ಬದಲಾಗಿ, ಕರಪತ್ರಗಳನ್ನು ಮುದ್ರಿಸಿ ನೀಡಲಾಗಿದೆ. ಆದ್ದರಿಂದ ದರಗಳನ್ನು ಮಿತಿಗೊಳಿಸುವ ಬಗ್ಗೆ ನಿರ್ಧಾರ ಕೈಗೊಳ್ಳಬಹುದು ಎನ್ನಲಾಗಿದೆ.

'ಬೆಂಗಳೂರು ಹಬ್ಬದಲ್ಲಿ ಪ್ರದರ್ಶನ ನೀಡಿದ ಕಲಾವಿದರು ಬಡವರಾಗಿದ್ದಾರೆ. ಅವ್ಯವಹಾರದ ಬಗ್ಗೆ ಪಾರದರ್ಶಕವಾಗಿ ತನಿಖೆ ನಡೆಸಬೇಕು. ತಪ್ಪಿತಸ್ಥರನ್ನು ಶಿಕ್ಷಿಸಿ, ಕಲಾವಿದರಿಗೆ ಬಾಕಿ ಉಳಿಸಿಕೊಂಡಿರುವ ಹಣ ಪಾವತಿಸುವ ಮೂಲಕ ನ್ಯಾಯ ಒದಗಿಸಬೇಕು' ಎಂದು ಕಲಾವಿದ ಜಯಸಿಂಹ ಎಸ್. ಆಗ್ರಹಿಸಿದರು.

ಸುದ್ದಿ 2 ನಿಮಿಷ

ಒಳಚರಂಡಿ ಕಾಮಗಾರಿ, ರಸ್ತೆ ಡಾಂಬರೀಕರಣಕ್ಕೆ ಚಾಲನೆ

ಪೀಣ್ಯ ದಾಸರಹಳ್ಳಿ:' ಕ್ಷೇತ್ರದಲ್ಲಿ ಒಳಚರಂಡಿಗಳನ್ನು ಮಾಡಿ 15 ವರ್ಷಗಳಾಗಿದ್ದು, ಮಳೆ ಬಂದಾಗ ಬಹಳಷ್ಟು ಕಡೆ ನೀರು ನಿಂತು ಸಮಸ್ಯೆಯಾಗಿತ್ತು. ಅಂಥ ಜಾಗಗಳನ್ನು, ಗುರುತಿಸಿ ಸರಿಪಡಿಸಿ ರಸ್ತೆ ಡಾಂಬರೀಕರಣ ಮಾಡಲಾಗುತ್ತಿದೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕ್ಷೇತ್ರದ ಮೂರು ಸ್ಥಳಗಳಲ್ಲಿ ಒಳಚರಂಡಿ ಕಾಮಗಾರಿ ಮತ್ತು ಎರಡು ಕಡೆ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಬಹುಕೋಟಿ ವೆಚ್ಚದಲ್ಲಿ ಪೀಣ್ಯ ಮೂರನೇ ಹಂತದ 14ನೇ ಕ್ರಾಸ್ ನಿಂದ ಎನ್‌ಟಿಟಿಎಫ್‌ವರೆಗೆ ಎಲ್ಲ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿ ಕಾಮಗಾರಿಗೆ ಪೂಜೆ ಮಾಡಲಾಗಿದೆ. ಚಿಕ್ಕಸಂದ್ರದಲ್ಲಿ ಎಲೆಕ್ಷನ್ ಮುಂಚೆ ರಸ್ತೆಗೆ ಜಲ್ಲಿಕಲ್ಲು ಹಾಕಲಾಗಿತ್ತು. ಒಂದು ವರ್ಷವಾದರೂ ಗುತ್ತಿಗೆದಾರ ಡಾಂಬರು ಹಾಕಿರಲಿಲ್ಲ. ಅವರನ್ನು ಕರೆತಂದು ರಸ್ತೆಗಳಿಗೆ ಡಾಂಬರೀಕರಣ ಮಾಡಿಸಲಾಯಿತು' ಎಂದರು.

ಈ ವೇಳೆ ಬಿಜೆಪಿಯ ಶೆಟ್ಟಿಹಳ್ಳಿ ಸುರೇಶ್ ಸಿ.ಎನ್. ದಯಾನಂದ್, ಎಚ್.ಆರ್. ಪ್ರಕಾಶ್, ನಿಸರ್ಗ ಕೆಂಪರಾಜು, ಪಾರ್ವತಮ್ಮ, ಶಾಂತಮ್ಮ ಮತ್ತು ಸ್ಥಳೀಯರಾದ ಗೋಪಾಲಕೃಷ್ಣ, ಪೀಣ್ಯ ಕೈಗಾರಿಕಾ ಸಂಘದ ಪದಾಧಿಕಾರಿಗಳು, ಮುಖಂಡರು ಇದ್ದರು.

ರಾಜ್ಯದಲ್ಲಿ ಬರ ಸ್ಥಿತಿ: ನೆರವಿಗೆ ಧಾವಿಸಲು ಪ್ರಧಾನಿಗೆ ಪತ್ರ

ಬೆಂಗಳೂರು: ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನೆರವಿಗೆ ಧಾವಿಸುವಂತೆ ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಮ್ ಆದ್ಮಿ ಪಕ್ಷವು ಪತ್ರ ಬರೆದಿದೆ.

ರಾಜ್ಯದ ಬರ ಪರಿಸ್ಥಿತಿ ನಿಭಾಯಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲಗೊಂಡಿವೆ. ಜನಸಾಮಾನ್ಯರು ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ತಕ್ಷಣ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರ ಪರಿಸ್ಥಿತಿ ಸಂಕಷ್ಟಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ನಿಗಾ ವಹಿಸಬೇಕು ಎಂದು ಪಕ್ಷದ ಮುಖಂಡರು ಆಗ್ರಹಿಸಿದ್ದಾರೆ.

ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಅವರನ್ನು ಬೆಂಗಳೂರು ಘಟಕದ ಅಧ್ಯಕ್ಷ ಸತೀಶ್ ಕುಮಾರ್ ಅವರ ನೇತೃತ್ವದಲ್ಲಿ ಮುಖಂಡರು ಭೇಟಿ ಮಾಡಿ ಮನವಿ ನೀಡಿದರು.

ಬಳಿಕ ಮಾತನಾಡಿದ ಸತೀಶ್ ಕುಮಾರ್, ಬರಪೀಡಿತ ಪ್ರದೇಶದ ರೈತರಿಗೆ ಎಕರೆಗೆ ₹25 ಸಾವಿರ ಪರಿಹಾರ ನೀಡಬೇಕು. ಪಶುಸಂಗೋಪನೆಯಲ್ಲಿ ತೊಡಗಿರುವ ಹಾಗೂ ಜಾನುವಾರುಗಳನ್ನು ಹೊಂದಿರುವ ರೈತರಿಗೆ ಪ್ರತಿ ಜಾನುವಾರಿಗೆ ₹5 ಸಾವಿರ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಉದ್ಯೋಗ ಖಾತ್ರಿ ಯೋಜನೆ ಅಡಿ ಉದ್ಯೋಗ ನೀಡಬೇಕು. ಸರ್ವ ಪಕ್ಷಗಳ ನಿಯೋಗ ದೆಹಲಿಗೆ ತೆರಳಿ, ತುರ್ತು ಪರಿಸ್ಥಿತಿಗೆ ಸ್ಪಂದಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕು. ರೈತರಿಗೆ ಬೆಳೆ ವಿಮೆಯ ತುರ್ತು ಪಾವತಿ ಮಾಡಬೇಕು ಎಂದು ಒತ್ತಾಯಿಸಿದರು.

ಮೈಸೂರು ರೇಸ್

ಸ್ಟಾರ್ ಗ್ಲೋರಿ ಗೆಲ್ಲುವ ನಿರೀಕ್ಷೆ

ಡಾ. ಎಂ.ಎನ್.ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟಾರ್ ಗ್ಲೋರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ರೇಟ್ ಹೋಪ್ 1, ಗಾಡ್ಸ್ ಪವರ್ 6, ಯೂನಿಟಿ 7
2ನೇ ರೇಸ್: ರೆಡ್ ಹಿಲ್ಸ್ 1, ಫಿಫ್ಟಿ ಗ್ರ್ಯಾಂಡ್ 10, ವಾರ್ ಸಾಂಗ್ 7
3ನೇ ರೇಸ್: ಲಕ್ಕಿ ಪಾಯಿಂಟ್ 9, ಡಲ್ಲಾಸ್ 5, ಗೋಲ್ಡ್ ಕ್ರೆಸ್ಟ್ 3
4ನೇ ರೇಸ್: ಲ್ಯಾಂಡ್ ಆಫ್ ಗೋಲ್ಡ್ 8, ಗಿಂಟೋಕಿ 9, ಅನಲೆಕ್ಟ್ 6
5ನೇ ರೇಸ್: ಸ್ಟಾರ್ ಗ್ಲೋರಿ 2, ಅಮೆಜೋನಿಯಾ 4, ದಿ ಸಾವರಿನ್ ಆರ್ಬ್ 3
6ನೇ ರೇಸ್: ಟಾರೆಕ್ 2, ಹೀರೊಯಿಸ್ಮ್ 3, ಮೂನ್‌ಲೈಟ್ ಕ್ವೀನ್ 8
7ನೇ ರೇಸ್: ಸ್ಪಾರ್ಕ್ಲಿಂಗ್ ನೈಟ್ 9, ಎವರ್ಲಿ 8, ಎಕ್ಸುಬರೆನ್ಸ್ 2

ಉತ್ತಮ ಬೆಟ್: ರೆಡ್ ಹಿಲ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಜಾಹೀರಾತು ಮೇಲೆ ಬಿಬಿಎಂಪಿ ನೋಟಿಸ್

₹100 ಕೋಟಿಗೂ ಹೆಚ್ಚು ಬಾಕಿ ಉಳಿಸಿಕೊಂಡ ಸಂಸ್ಥೆಗಳ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಹೀರಾತು ಶುಲ್ಕ ಪಾವತಿಸದ ಮೇಲ್ಸೇತುವೆ, ಸ್ಕೈವಾಕ್, ಬಸ್ ತಂಗುದಾಣಗಳಲ್ಲಿನ ಜಾಹೀರಾತುಗಳ ಮೇಲೆ ಬಿಬಿಎಂಪಿ ನೋಟಿಸ್ ಅಂಟಿಸಲಾಗುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬಸ್ ತಂಗುದಾಣ, ಸ್ಕೈವಾಕ್‌ನಲ್ಲಿ ಜಾಹೀರಾತು ಪ್ರದರ್ಶನದ ನೆಲಬಾಡಿಗೆ, ಸೇವಾ ತೆರಿಗೆಗಳು ಸೇರಿದಂತೆ ₹100 ಕೋಟಿಗೂ ಅಧಿಕ ಬಾಕಿ ಇದೆ. ಏಜೆನ್ಸಿಗಳಿಗೆ ಡಿಮ್ಯಾಂಡ್ ನೋಟಿಸ್ ನೀಡಲಾಗಿತ್ತು. ಆದರೂ ವಸೂಲಿ ಆಗಿರಲಿಲ್ಲ. ಹೀಗಾಗಿ ಬಿಬಿಎಂಪಿ ಕೆಲವೆಡೆ ಜಾಹೀರಾತು ತೆರವು ಕಾರ್ಯಾಚರಣೆ ಕೈಗೊಂಡಿದೆ. ಬಸ್ ತಂಗುದಾಣಗಳ ಮೇಲೆ ನೋಟಿಸ್ ಅಂಟಿಸುತ್ತಿದೆ.

'ಯಾವುದೇ ರೀತಿಯ ಶುಲ್ಕ ಪಾವತಿಯಾಗದಿರುವುದನ್ನು ಸಹಿಸಲು ಸಾಧ್ಯವಿಲ್ಲ. ಎಲ್ಲವನ್ನೂ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದ್ದರು.



ಬಸ್ ತಂಗುದಾಣದ ಜಾಹೀರಾತಿನ ಮೇಲೆ ಬಿಬಿಎಂಪಿ ನೋಟಿಸ್ ಅಂಟಿಸಿರುವುದು

ಶುಲ್ಕ ಪಾವತಿಸದ ಜಾಹೀರಾತುಗಳ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದ್ದು, ಎಲ್ಲ ಅಕ್ರಮ ಜಾಹೀರಾತುಗಳನ್ನು ತೆರವುಗೊಳಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಪಾದಚಾರಿ ಮೇಲ್ಸೇತುವೆಗಳು, ಬಸ್ ತಂಗುದಾಣದ ನೆಲಬಾಡಿಗೆ, ಜಾಹೀರಾತು ಶುಲ್ಕವನ್ನು ಐದಾರು ವರ್ಷಗಳಿಂದ ವಸೂಲಿ ಮಾಡಿಲ್ಲ. ₹100 ಕೋಟಿಗೂ ಅಧಿಕ ಮೊತ್ತ ಬಾಕಿ ಉಳಿದಿದೆ. ಈ ಬಗ್ಗೆ ಹತ್ತಾರು ಕಂಪನಿಗಳಿಗೆ ಡಿಮ್ಯಾಂಡ್ ನೋಟಿಸ್ ನೀಡಿರುವ ವಿವರಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಎಸ್. ಅಮರೇಶ್ ಅವರು ಪಡೆದುಕೊಂಡಿದ್ದರು. ಇದನ್ನು ಆಧರಿಸಿ, 'ಜಾಹೀರಾತು: ₹100 ಕೋಟಿಗೂ ಹೆಚ್ಚು ಬಾಕಿ' ಶೀರ್ಷಿಕೆಯಡಿ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿತ್ತು.

ಸೈನ್ ಪೋಸ್ಟ್ ಇಂಡಿಯಾ, ಡಿಜಿಟಲ್ ಆ್ಯಡ್ ಸೈನ್ಸ್, ಟೈಮ್ಸ್ ಇನ್ನೋವೇಟಿವ್ ಮೀಡಿಯಾ, ಓಎಚ್ ಅಡ್ವರ್‌ಟೈಸ್‌ಮೆಂಟ್ ಸರ್ವೀಸಸ್, ಪ್ರಕಾಶ್ ಆರ್ಟ್ಸ್, ವಾಂಟೇಜ್ ಅಡ್ವರ್‌ಟೈಸಿಂಗ್, ಪಯನೀರ್ ಪಬ್ಲಿಸಿಟಿ ಕಾರ್ಪೊರೇಷನ್, ಸ್ಕೈಲೈನ್ ಅಡ್ವರ್‌ಟೈಸಿಂಗ್, ಸಹಯೋಗ–ಇಂಡಿಯಾ ಕೌನ್ಸಿಲ್, ಆ್ಯಡ್ ಏಜ್ ಔಟ್‌ಡೋರ್ ಅಡ್ವ ಟೈಸ್ಮೆಂಟ್, ಜೈವಿನ್ ಔಟ್ ಡೋರ್ ಮೀಡಿಯಾ, ಡಿಸೈನ್ 55 ಅಡ್ವಟೈಸ್ಮೆಂಟ್, ಅಕಾರ್ಡ್ ಡಿಸ್‌ಪ್ಲೆ ಸರ್ವೀಸ್ ಏಜೆನ್ಸಿಗಳು ಶುಲ್ಕ, ಬಾಡಿಗೆ, ಸೇವಾ ತೆರಿಗೆಯನ್ನು ಬಾಕಿ ಉಳಿಸಿಕೊಂಡಿವೆ.

PUBLIC NOTICE

It is hereby notified that my clients have agreed to purchase the Schedule Property from its sole and absolute owner namely, Dr.Srini Malini D/o Late P.N.Srinivasan and Late T.S.Sundaramma, residing at No.11911, Pepperdine Lane, Houston, TX-77071, USA.

Apart from the said owner, if any other person/s have any manner of right, title and or interest or claim or charge or lien over the Schedule property or otherwise have any lawful objection/s for sale of the Schedule Property by the aforesaid owner, they are hereby called upon to file their objection/s in writing, along with the photocopies of documents on which they rely, with the undersigned, within 14 days from the date of publication of this notice. Objection/s received thereafter will not be binding on my clients.

SCHEDULE

All that piece and parcel of the residential property bearing Municipal No.66, (Old Nos.5 and 6), PID No. 49-54-66, measuring East to West 150 ft and North to South 50 ft, with a building thereon, situated at Shankarmutt Road, Shankarapuram, Bangalore and bounded on:

East by : Shankarmutt Road
West by : Conservancy
North by : Private property
South by : Private property

Sd/- S.F.Goutam Chand
Advocate
Goutam Associates
No.60, 2nd Floor, Kanakapura Road,
Basavanagudi, Bangalore-560004.

ನಿಧನ ವಾರ್ತೆ

ಕಾಗಲವಾಡಿ ಎಸ್. ಮಾದಯ್ಯ

ಬೆಂಗಳೂರು: ರಾಜಾಜಿನಗರದ ನಿವಾಸಿ, ನಿವೃತ್ತ ಮುಖ್ಯ ಎಂಜಿನಿಯರ್ ಕಾಗಲವಾಡಿ ಎಸ್. ಮಾದಯ್ಯ (81) ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ.

ಚಾಮರಾಜನಗರ ತಾಲ್ಲೂಕಿನ ಕಾಗಲವಾಡಿ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಸ್ಪರ್ಧಾವಾಣಿ ಓದಿರಿ

ಮಾನ್ಯ ಗೌರವಾನ್ವಿತ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ,
ಅಸಲು ದಾವಾ ನಂ. 88/2019

ವಾದಿಯರು: ಶ್ರೀಮತಿ ವಿಶಾಲಾಕ್ಷಮ್ಮ ಯಾನೆ ಮಂಜುಳಾ, ವಯಸ್ಸು 70 ವರ್ಷ, ವಾಸ: ನಂದಿಹಳ್ಳಿ ಗ್ರಾಮ, ಮಣಕೂರ್ ಅಂಚೆ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ, ವಿರುದ್ಧ
ಪ್ರತಿವಾದಿಗಳು : ಶ್ರೀಮತಿ ಎಸ್.ಎಂ.ಚಂದ್ರಮ್ಮ ಮತ್ತು ಇತರರು. **3ನೇ ಪ್ರತಿವಾದಿ:** ಶ್ರೀಮತಿ ಕುಸುಮಾವತಿ ಬಿನ್ ಎಸ್.ಎಂ. ಕೊಟ್ರಯ್ಯ ವಯಸ್ಸು 39 ವರ್ಷ, ವಾಸ: ನಂ. 67, ಪ್ಲಾಟ್ ನಂ. ಎಫ್–1, 1ನೇ ಬಿ ಕ್ರಾಸ್, 7ನೇ ಸಿ ಮೇನ್, ಆರ್.ಪಿ.ಸಿ ಲೇ ಔಟ್, ಹಂಪಿನಗರ ಪಬ್ಲಿಕ್ ಲೈಬ್ರರಿ ಹತ್ತಿರ, ಹಂಪಿನಗರ, ಬೆಂಗಳೂರು–40.

ಆದೇಶ 5 ನಿಯಮ 20 ಸಿ ಪಿ ಸಿ ಪ್ರಕಾರ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಕೇಸನ್ನು ವಾದಿಯು ಪ್ರತಿವಾದಿಯರ ಮೇಲೆ ಷೆಡ್ಯೂಲ್ ಆಸ್ತಿಯ ವಿಭಜನೆಗಾಗಿ ಹಾಗೂ ಪ್ರತ್ಯೇಕ ಸ್ವಾಧೀನಕ್ಕಾಗಿ ದಾವೆ ಹಾಕಿರುತ್ತಾರೆ. ಈ ಕೇಸಿನಲ್ಲಿ ಮೇಲ್ಕಂಡ ಪ್ರತಿವಾದಿ ನಂ. 3 ಇವರು ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಗಳಾಗಿರುತ್ತಾರೆ. ಕೋರ್ಟ್‌ನಿಂದ ಸಮನ್ಸ ಹೋದಾಗ್ಯೂ ಉದ್ದೇಶ ಪೂರ್ವಕವಾಗಿ ಜಾರಿ ಮಾಡಿಸಿಕೊಂಡಿರುವುದಿಲ್ಲ.

ಈಗ ಪುನಃ ಕೋರ್ಟಿನವರು ಪತ್ರಿಕಾ ಪ್ರಕಟಣೆ ಮೂಲಕ ಮೇಲ್ಕಂಡ ಪ್ರತಿವಾದಿಯರಿಗೆ ಕೋರ್ಟ ಸಮನ್ಸ್ ಮತ್ತು ನೋಟೀಸು ಜಾರಿ ಮಾಡಲು ದಿನಾಂಕ: 30.10.2023 ರಂದು ಆದೇಶ ಮಾಡಿರುತ್ತಾರೆ. ಈ ಕೇಸಿನ ಮುದ್ದತ್ತನ್ನು ದಿನಾಂಕ: 18.12.2023 ಕ್ಕೆ ಸದರಿ ಮೇಲ್ಕಂಡ 3ನೇ ಪ್ರತಿವಾದಿಯ ಹಾಜರಾತಿಗಾಗಿ ಇಟ್ಟಿದ್ದು ಇರುತ್ತದೆ. ಆದ್ದರಿಂದ ಮೇಲ್ಕಂಡ 3ನೇ ಪ್ರತಿವಾದಿ ಯರು ಆ ದಿನ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಅವರ ಮೇಲೆ ಏಕಪಕ್ಷೀಯ ಆದೇಶ ಮಾಡಲಾಗುವುದು.

ಈ ತಿಳುವಳಿಕೆಯನ್ನು ಇದೇ 2023ನೇ ಇಸ್ವಿ ಡಿಸೆಂಬರ್ ಮಾಹೆ, 4ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

ದಿನಾಂಕ: 04–12–2023 ಸ್ಥಳ : ದಾವಣಗೆರೆ. ನ್ಯಾಯಾಲಯದ ಆದೇಶದ ಮೇರೆಗೆ.

ಶ್ರೀ ಮಂಜುನಾಥ ಮರುಳಸಿದ್ದಪ್ಪ ಹುಳ್ಳೇರ,
ವಕೀಲರು, ಸವಣೂರು ಆರ್ಕೇಡ,
ಲಾಯರ್ ರೋಡ್, ದಾವಣಗೆರೆ.
ಮೊಬೈಲ್ ನಂ: 9448705437

ಸಹಿ/– ಶಿರಸ್ತೆದಾರರು.
ಕಿರಿಯ ಸಿವಿಲ್ ನ್ಯಾಯಾಧೀಶರವರ
ನ್ಯಾಯಾಲಯ, ಹರಿಹರ,



ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಗಳವಾರ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಕಂದಾಯ ವಿಭಾಗ ಹಾಗೂ ಇತರೆ ವಿಭಾಗಗಳ ನೌಕರರು

'ಕಾರ್ಯ ಒತ್ತಡ ನಿವಾರಿಸದಿದ್ದರೆ ಕೆಲಸ ಸ್ಥಗಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿಯ ಕಾರ್ಯ ಒತ್ತಡ ಹಾಗೂ ಮಾನಸಿಕ ಕಿರುಕುಳ ನಿವಾರಿಸದಿದ್ದರೆ ಎಲ್ಲ ಕೆಲಸ ಸ್ಥಗಿತಗೊಳಿಸಿ ಹೋರಾಟ ಮಾಡಲು ನೌಕರರು ನಿರ್ಧರಿಸಿದ್ದಾರೆ.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಗಳವಾರ ನಡೆದ ಸಭೆಯಲ್ಲಿ, 'ಬೇಡಿಕೆಗಳನ್ನು ಮುಖ್ಯ ಆಯುಕ್ತರ ಗಮನಕ್ಕೆ ತಂದು ಮನವಿ ಮಾಡಿಕೊಳ್ಳಬೇಕು. ಅವರು ನಮ್ಮ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಹೋರಾಟ ನಡೆಸಬೇಕು' ಎಂದು ತೀರ್ಮಾನ ಕೈಗೊಳ್ಳಲಾಗಿದೆ.

ಚುನಾವಣೆ ಕೆಲಸ ಕಾರ್ಯಗಳಿಗೆ ಬಿಎಲ್‌ಒಗಳನ್ನು ಚುನಾವಣಾ ಆಯೋಗದಿಂದಲೇ ನೇಮಿಸಬೇಕು. ಸರ್ಕಾರಿ ರಜಾದಿನಗಳಲ್ಲಿ ಚುನಾವಣೆ ಕೆಲಸ ಹೊರತುಪಡಿಸಿ ಇತರೆ ಯಾವುದೇ ಕೆಲಸ ನಿರ್ವಹಿಸಲು ಒತ್ತಡ ಹೇರಬಾರದು. ಲೋಕಸಭಾ ಚುನಾವಣೆ ಪ್ರಕ್ರಿಯೆಯು ಮುಕ್ತಾಯಗೊಳ್ಳುವವರೆಗೂ ಕಂದಾಯ ಇಲಾಖೆಯ ಆಸ್ತಿ, ಸರ್ವೆ ಕೆಲಸ ಮಾಡಲು ಗುರಿ ನಿಗದಿಪಡಿಸಬಾರದು. ಕಂಪ್ಯೂಟರ್ ಆಪರೇಟರ್‌ಗಳನ್ನು ಪಾಲಿಕೆ ವತಿಯಿಂದ ನಿಯೋಜಿಸಬೇಕು. ಕೆಲಸ ಕಾರ್ಯಗಳನ್ನು ಬಯೋಮೆಟ್ರಿಕ್ ನಿಯಮಾವಳಿಯಂತೆ ಬೆಳಿಗ್ಗೆ 10ರಿಂದ ಸಂಜೆ 5.30ರ ಸಮಯದಂತೆ ನಿಗದಿಪಡಿಸಲು ಮನವಿ ಮಾಡಿಕೊಳ್ಳಲು ನಿರ್ಧರಿಸಲಾಯಿತು ಎಂದು ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ತಿಳಿಸಿದರು.

ಸಂವಾದದಲ್ಲಿ ಪತ್ರಕರ್ತೆ ಮಾಯಾ ಶರ್ಮ ಅಭಿಮತ

'ಮಾಧ್ಯಮಕ್ಕೆ ಪ್ರತ್ಯೇಕ ವಾಕ್ ಸ್ವಾತಂತ್ರ್ಯ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದಡಿ ಮಾಧ್ಯಮಕ್ಕೆ ಪ್ರತ್ಯೇಕ ವಾಕ್ ಸ್ವಾತಂತ್ರ್ಯ ಅಗತ್ಯವಿದೆ' ಎಂದು ಪತ್ರಕರ್ತೆ ಮಾಯಾ ಶರ್ಮ ತಿಳಿಸಿದರು.

ಮಹಾರಾಣಿ ಲಕ್ಷ್ಮೀ ಅಮ್ಮಣಿ ಕಾಲೇಜು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಸಂವಾದ ಕಾರ್ಯಕ್ರಮದಲ್ಲಿ 'ಸಂವಿಧಾನ ಮತ್ತು ಆಧುನಿಕ ಭಾರತದಲ್ಲಿ ಯುವಕರು' ಎಂಬ ವಿಷಯದ ಮೇಲೆ ಮಾತನಾಡಿದರು.

'ಸ್ವತಂತ್ರವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪತ್ರಕರ್ತರಿಗೆ ವಾಕ್ ಸ್ವಾತಂತ್ರ್ಯ ಅಗತ್ಯ. ಹೊಸದಾಗಿ ಮಾಧ್ಯಮ ಕ್ಷೇತ್ರಕ್ಕೆ ಬರುವವರು ಸಂವಿಧಾನ ಮತ್ತು ವ್ಯವಸ್ಥೆಯ ಬಗ್ಗೆ ಸಾಕಷ್ಟು ಜ್ಞಾನ ಹೊಂದಿರಬೇಕು' ಎಂದರು.

ವಕೀಲ ಎನ್.ಹರೀಶ್, 'ರಾಜಕಾರಣಿಗಳು ವಿಧಾನಸಭೆಯಲ್ಲಿ ಮಾತನಾಡದೆ, ಪ್ರಚಾರಕ್ಕಾಗಿ ಮಾಧ್ಯಮಗಳ ಮುಂದೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಜನಸಾಮಾನ್ಯರ ಸಮಸ್ಯೆಗಳಿಗೆ ವಿಧಾನ ಸಭೆಯಲ್ಲಿ ಜನಪ್ರತಿನಿಧಿಗಳು ಧ್ವನಿಯಾಗಬೇಕು' ಎಂದು ತಿಳಿಸಿದರು.

ಸಂವಾದ ಕಾರ್ಯಕ್ರಮದಲ್ಲಿ ಮಂಜುಳಾ, ನಾಗಲಕ್ಷ್ಮೀ, ಮಾಯಾ ಶರ್ಮ, ಎನ್.ಹರೀಶ್ ಹಾಗೂ ಅಲೋಕ್ ಪ್ರಸನ್ನ ಭಾಗವಹಿಸಿದ್ದರು.

ವಿಧಿ ಸಂಸ್ಥೆಯ ಅಲೋಕ್ ಪ್ರಸನ್ನ, 'ವಾಕ್ ಸ್ವಾತಂತ್ರ್ಯ, ರಾಷ್ಟ್ರೀಯ ಭದ್ರತಾ ಕಾನೂನು ಸೇರಿ ವಿವಿಧ ಕಾನೂನುಗಳಿಗೆ ಸಂವಿಧಾನದಲ್ಲಿ ಒಂದು ಮಿತಿ ಇರಬೇಕಾಗುತ್ತದೆ. ಸಂವಿಧಾನದ ಮೂಲಭೂತ ಹಕ್ಕುಗಳನ್ನು ಸಂರಕ್ಷಣೆ ಮಾಡುವುದು ಕೇವಲ ಹೈಕೋರ್ಟ್, ಸುಪ್ರೀಂ ಕೋರ್ಟ್‌ನ ಕಾರ್ಯವಲ್ಲ. ಈ ವಿಷಯದಲ್ಲಿ ಸರ್ಕಾರದ ಜವಾಬ್ದಾರಿಯೂ ಇದೆ' ಎಂದು ಹೇಳಿದರು

ಮುಖ್ಯಾಂಶಗಳು

- ಮಾಧ್ಯಮ ಕ್ಷೇತ್ರಕ್ಕೆ ಬರುವವರಿಗೆ ಸಂವಿಧಾನ, ವ್ಯವಸ್ಥೆ ಬಗ್ಗೆ ಜ್ಞಾನ ಅಗತ್ಯ
- ಜನಪ್ರತಿನಿಧಿಗಳು ಜನರ ಸಮಸ್ಯೆಗೆ ಧ್ವನಿಯಾಗಲಿ

ಕಾಲೇಜಿನ ಪ್ರಾಂಶುಪಾಲೆ ನಾಗಲಕ್ಷ್ಮೀ, ಪ್ರತಿಕೋದ್ಯಮ ವಿಭಾಗದ ಮುಖ್ಯಸ್ಥೆ ಮಂಜುಳಾ ಉಪಸ್ಥಿತರಿದ್ದರು.

ಕೆನ್ಯಾದಿಂದ ಚೀತಾ?

ನವದೆಹಲಿ: ಕೆನ್ಯಾದಿಂದ ಚೀತಾಗಳನ್ನು ತರಿಸಿಕೊಳ್ಳುವ ಸಂಬಂಧ ಪರಿಸರ ಮತ್ತು ಅರಣ್ಯ ಸಚಿವಾಲಯ ಮಂಗಳವಾರ ಅಧಿಕೃತವಾಗಿ ಪ್ರಸ್ತಾವ ಸಲ್ಲಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ದಯಾನಂದ ಸರಸ್ವತಿ ಅವರ ದ್ವಿಶತಮಾನೋತ್ಸವ ಸಮಾರಂಭ, ಅಂತರಶಾಲಾ ಪ್ರಬಂಧ, ಭಾಷಣ ಸ್ಪರ್ಧೆ: ಅತಿಥಿಗಳು: ಮೋಹನ್ ದೇವ್ ಆಳ್ವ, ಸಿ.ಜಿ. ಶ್ರೀನಿವಾಸ್, ಪಿ. ಪ್ರಕಾಶ, ರಘೋತ್ತಮ ರಾವ್, ಆಯೋಜನೆ: ಆರ್ಯ ಸಮಾಜ, ಸ್ಥಳ: ಆರ್ಯ ಸಮಾಜ, ವಿ.ವಿ. ಪುರ ಪ್ರಾರ್ಥನಾ ಸಭಾಂಗಣ, ಬೆಳಿಗ್ಗೆ 10.30

'ಆರ್ಟ್ ಮಂತ್ರಂ': ಕೆ.ಕೆ. ಹೆಬ್ಬಾರ್, ಯೂಸುಫ್ ಅರಕ್ಕಲ್, ಎಸ್.ಜಿ. ವಾಸುದೇವ್, ಎಂ.ಎಸ್. ಮೂರ್ತಿ, ರೇಖಾ ಹೆಬ್ಬಾರ್ ರಾವ್, ಜೆ.ಎಂ.ಎಸ್. ಮಣಿ, ಗುರುದಾಸ್ ಶೆಣೈ, ಎಂ.ಜಿ. ದೊಡ್ಡಮನಿ ಅವರ ಕಲಾಕೃತಿಗಳ ಪ್ರದರ್ಶನ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನ, ಬೃಹತ್ ಕಾಲ್ನಡಿಗೆ ಜಾಥಾಕ್ಕೆ ಚಾಲನೆ: ಎಚ್. ಮಾರಪ್ಪ, ಎಚ್.ಆರ್. ವಿಶ್ವನಾಥ್, ಎಂ. ಮುನಿರಾಜು, ಆಯೋಜನೆ: ದಲಿತ ಸಂಘರ್ಷ ಸಮಿತಿ (ಸಮತಾವಾದ), ಸ್ಥಳ: ಬನ್ನಪ್ಪ ಪಾರ್ಕ್‌ನಿಂದ ವಿಧಾನಸೌಧದ ಮುಂಭಾಗದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನ, ಭೀಮ ನಮನ ಸಭೆ: ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ಸಿದ್ಧರಾಜು, ಪಿ.ಎಂ. ಪರಶಿವಮೂರ್ತಿ, ಮಾಲೂರು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಆನಂದ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ: ಭಾರತೀಯ ಬೌದ್ಧ ಮಹಾಸಭಾ, ಸ್ಥಳ: ನಾಗಸೇನಾ ವಿದ್ಯಾಲಯ, ಸದಾಶಿವನಗರ, ಬೆಳಿಗ್ಗೆ 11.30

ಮಕ್ಕಳ ರಾಗ: 400 ಮಕ್ಕಳಿಂದ ಸಂಗೀತ, ನೃತ್ಯ ಮಹೋತ್ಸವ, ಆಯೋಜನೆ: ಮಕ್ಕಳ ಜಾಗೃತಿ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಮಧ್ಯಾಹ್ನ 3

ರಂಗ ನಡಿಗೆ ಶಾಲೆಗಳ ಕಡೆಗೆ: ಅತಿಥಿಗಳು: ಲಕ್ಷ್ಮೀ ಶ್ರೀನಿವಾಸ, ಶಿವು ಡಿ. ಹಿರೇಮಠ, 'ಸಾಲದ ಮಗು' ನಾಟಕ ಪ್ರದರ್ಶನ: ಕಥೆ: ಕುವೆಂಪು, ನಿರ್ದೇಶನ: ಗಣಪಗೌಡ, 'ಹಳ್ಳಿಯ್ಲೊಂದು ಹರಿಕಥಾ ಪ್ರಸಂಗ' ನಾಟಕ ಪ್ರದರ್ಶನ: ನಿರ್ದೇಶನ: ಧನ್ವಂತ್ರಿ ಬಿ.ಎ., ಆಯೋಜನೆ: ರಂಗ ಪರಂಪರೆ ಟ್ರಸ್ಟ್, ಸ್ಥಳ: ಎಚ್. ತಿಮ್ಮೇಗೌಡ ಸಭಾಂಗಣ, ಸುಂಕದಕಟ್ಟೆ, ಸಂಜೆ 6ರಿಂದ

'ಅಲೆಮಾರಿ ಭಾರತ' ನಾಟಕ ಪ್ರದರ್ಶನ: ಪ್ರಸ್ತುತಿ: ರಂಗಚಿರಂತನ, ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

PUBLIC NOTICE

This is to inform the general public that our client intends to purchase the properties mentioned in the Schedule below and hereinafter referred to as the Schedule Property from its owner 1) Sri. R. Anand Kumar and 2) Sri. Kashivishwanatha

Any person/s having any claim in respect of the Schedule Property by way of sale, exchange, gift, mortgage, charge, trust, inheritance, possession, lease, lien or otherwise howsoever is requested to inform the same in writing to the undersigned within 7 days from the date of this notice, failing which, the claim or claims, if any, of such person/s will be considered to have been waived and/or abandoned and the transfer shall be completed.

Schedule Property

ITEM NO.1: All that piece and parcel of the immovable property bearing Survey No.10/1 measuring 0-39 guntas of land situated at Gadenahalli Village, Jala Hobli, Yelahanka Taluk, Bangalore, with all rights, appurtenances, whatsoever underneath or above the surface and bounded on:

East by : Bhajanthri Inamathi land and road
West by : Halla and Kuduregere Gadi
North by : Sonappa's land and road
South by : Land belongs to vendors in survey no.10/5, (previously said land belongs to K.Anand)

ITEM NO.2: All that piece and parcel of the immovable property bearing Survey No.10/5 measuring 0-38 guntas of land situated at Gadenahalli Village, Jala Hobli, Yelahanka Taluk, Bangalore, with all rights, appurtenances, whatsoever underneath or above the surface and bounded on:

East by : Bhajanthri Inamathi land
West by : Halla and Kuduregere Gadi
North by : Land belongs to vendors in survey no.10/1, (previously said land belongs to Byrappa)
South by : Sonappa's land

KNS LEGAL
Advocates and Solicitors
No.11/3-5, 2nd Floor, Palace Loop Road, Vasanthnagar, Bengaluru – 560 052.

ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ, ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು - 560 094. ದೂ: (080)22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈಲ್ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ
01	ದೇವನಹಳ್ಳಿ, ಬೆಂಗಳೂರು ಇಲ್ಲಿರುವ ಗಗನಯಾನ್ ಫೆಸಿಲಿಟೀಸ್‌ಗೆ ಜಿಎಲ್‌ಆರ್ ಮತ್ತು ಪಂಪ್ ಕೊಠಡಿ ನಿರ್ಮಾಣ (ಸಿವಿಲ್ ಮತ್ತು ಪಿಹೆಚ್ ಕಾಮಗಾರಿಗಳು) **ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(8)/ಸಿ/89/2023-24 ದಿನಾಂಕ: 05.12.2023**	ರೂ.87.92 ಲಕ್ಷಗಳು	04 ತಿಂಗಳು	**06.12.2023 ರಂದು 11.00 ಗಂಟೆಯಿಂದ 17.12.2023 ರಂದು 23.30 ಗಂಟೆವರೆಗೆ**	19.12.2023 ರಂದು 11.00 ಗಂಟೆ ವರೆಗೆ	19.12.2023 ರಂದು 11.30 ಗಂಟೆಗೆ	ರೂ. 1,75,840/–
02	ದೇವನಹಳ್ಳಿ, ಬೆಂಗಳೂರು ಇಲ್ಲಿರುವ ಗಗನಯಾನ್ ಫೆಸಿಲಿಟೀಸ್‌ಗೆ ಭದ್ರತೆ ಹಾಗೂ ಸ್ವಾಗತ ಬ್ಲಾಕ್, ಜಿಎಲ್‌ಆರ್ ಮತ್ತು ಪಂಪ್ ಕೊಠಡಿ ನಿರ್ಮಾಣಕ್ಕೆ ವಿದ್ಯುತ್ ಕಾಮಗಾರಿಗಳು (ವಿದ್ಯುತ್ ಕಾಮಗಾರಿಗಳು) **ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(6)/2(8)ಇ/90/2023-24 ದಿನಾಂಕ: 05.12.2023**	ರೂ.32.36 ಲಕ್ಷಗಳು	03 ತಿಂಗಳು	**06.12.2023 ರಂದು 11.00 ಗಂಟೆಯಿಂದ 17.12.2023 ರಂದು 23.30 ಗಂಟೆವರೆಗೆ**	19.12.2023 ರಂದು 11.00 ಗಂಟೆ ವರೆಗೆ	19.12.2023 ರಂದು 11.30 ಗಂಟೆಗೆ	ರೂ. 64,720/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಸಿ ಮತ್ತು ಟೆಂಡರ್ ಪ್ರಕ್ರಿಯಾ ಶುಲ್ಕ ಪಾವತಿ ಮಾಡಿ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ www.tenderwizard.com/ISRO ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.ವೆಂಡರ್ ನೋಂದಣಿಯ ಕ್ರಮಾವಳಿಗಳನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಸಕ್ತಿಯುಳ್ಳ ಟೆಂಡರುದಾರರು ವೆಬ್‌ಸೈಟ್ www.isro.gov.in ಇಲ್ಲಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ಪರಿವೀಕ್ಷಿಸಬಹುದು ಮತ್ತು ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗಾಗಿ www.tenderwizard.com/ISRO ಇಲ್ಲಿಗೆ ಭೇಟಿ ನೀಡಿ.

ಸಹಿ/- ಮುಖ್ಯಸ್ಥರು, ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಚರ್ಚ್‌ಸ್ಟ್ರೀಟ್‌ನಲ್ಲಿ ನಡೆದಿದ್ದ ಘಟನೆ ● ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲು

ವೇಶ್ಯಾವಾಟಿಕೆ ಜಾಲ: ಅಧಿಕಾರಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಜಿ. ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ವೇಶ್ಯಾವಾಟಿಕೆ ಜಾಲ ಹರಡಿಕೊಂಡಿದ್ದು, ದೈಹಿಕ ಸಂಪರ್ಕದ ಆಸೆ ತೋರಿಸಿ ಜನರನ್ನು ಅಪಹರಿಸಿ ಸುಲಿಗೆ ಮಾಡಲಾಗುತ್ತಿದೆ. ಈ ಜಾಲಕ್ಕೆ ಸಿಲುಕಿ ಗುಜರಾತ್‌ನ ಸರ್ಕಾರಿ ಅಧಿಕಾರಿಯೊಬ್ಬರು ಹಣ ಕಳೆದುಕೊಂಡಿದ್ದು, ಈ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಇತ್ತೀಚೆಗೆ ನಗರಕ್ಕೆ ಬಂದಿದ್ದ ಗುಜರಾತ್ ರಾಜ್ಯದ ಸೂರತ್‌ನ ಗೆಜೆಟೆಡ್ ಅಧಿಕಾರಿಯೊಬ್ಬರು ಸುಲಿಗೆ ಸಂಬಂಧ ದೂರು ನೀಡಿದ್ದಾರೆ. ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳಿಬ್ಬರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಧಿಕಾರಿ ರೀತಿಯಲ್ಲಿ ಯಾರಾದರೂ ವೇಶ್ಯಾವಾಟಿಕೆ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡಿದ್ದರೆ ಠಾಣೆಗೆ ದೂರು ನೀಡಬಹುದು' ಎಂದು ತಿಳಿಸಿದರು.

ಪ್ರವಾಸಕ್ಕೆ ಬಂದಿದ್ದ ಅಧಿಕಾರಿ: '59 ವರ್ಷದ ಸರ್ಕಾರಿ ಅಧಿಕಾರಿ ಪ್ರವಾಸಕ್ಕೆಂದು ಬೆಂಗಳೂರಿಗೆ ನ. 29ರಂದು ಬಂದಿದ್ದರು. ಸ್ಥಳೀಯ ಹೋಟೆಲ್‌ನ ಕೊಠಡಿಯಲ್ಲಿ ಉಳಿದುಕೊಂಡಿದ್ದರು. ನ. 30ರಂದು ರಾತ್ರಿ 9 ಗಂಟೆ ಸುಮಾರಿಗೆ ಬ್ಯಾಗ್ ಖರೀದಿಸಲೆಂದು ಚರ್ಚ್‌ಸ್ಟ್ರೀಟ್‌ಗೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಧಿಕಾರಿಯನ್ನು ಪರಿಚಯಿಸಿಕೊಂಡಿದ್ದ ಆರೋಪಿ, ವೇಶ್ಯಾವಾಟಿಕೆಗೆ ಆಹ್ವಾನಿಸಿದ್ದರು. ಅವರ ಜೊತೆ ಕೆಲ ನಿಮಿಷ ಮಾತನಾಡಿದ್ದ ಅಧಿಕಾರಿ, ಕೊಠಡಿಯೊಂದಕ್ಕೆ ಹೋಗಲು ಒಪ್ಪಿಕೊಂಡಿದ್ದರು. ಅವಾಗಲೇ ಅಧಿಕಾರಿ ಹಾಗೂ ಆರೋಪಿ, ಆಟೊದಲ್ಲಿ ಇಂದಿರಾನಗರದಲ್ಲಿರುವ ಕೊಠಡಿಗೆ ಹೋಗಿದ್ದರು. ಅಲ್ಲಿ ಮತ್ತೊಬ್ಬ ಆರೋಪಿ 'ಇದ್ದರು' ಎಂದು ತಿಳಿಸಿವೆ.

'ದೂರುದಾರ ಅಧಿಕಾರಿ, ಇಬ್ಬರನ್ನು ಮಹಿಳೆಯರು ಎಂದು ತಿಳಿದಿದ್ದರು. ಆದರೆ, ಅವರಿಬ್ಬರು ಲಿಂಗತ್ವ ಅಲ್ಪಸಂಖ್ಯಾತರು ಎಂಬುದು ಕೊಠಡಿಯಲ್ಲಿ ಗೊತ್ತಾಗಿತ್ತು. ಅಧಿಕಾರಿ, ಕೊಠಡಿಯಿಂದ ಹೊರಡಲು ಮುಂದಾಗಿದ್ದರು. ಅದೇ ಸಂದರ್ಭದಲ್ಲಿ ಅವರನ್ನು ಒತ್ತಾಯದಿಂದ ಕೊಠಡಿಯಲ್ಲಿ ಕೂರಿಸಿದ್ದ ಆರೋಪಿಗಳು, ಜೀವ ಬೆದರಿಕೆಯೊಡ್ಡಿದ್ದರು.'

'ಅಧಿಕಾರಿ ಬಳಿಯ ₹ 20 ಸಾವಿರ ಹಣವನ್ನು ಆರೋಪಿಗಳು ಕಿತ್ತುಕೊಂಡಿದ್ದರು. ನಂತರ, ಮೊಬೈಲ್ ಕಸಿದುಕೊಂಡಿದ್ದರು. ಅಧಿಕಾರಿಯನ್ನು ಬೆದರಿಸಿ ಪೇಟಿಎಂ ಮೂಲಕ ₹ 30 ಸಾವಿರವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದರು. 'ಸುಲಿಗೆ ಸಂಗತಿಯನ್ನು ಯಾರಿಗಾದರೂ ಹೇಳಿದರೆ ಕೊಲೆ ಮಾಡುತ್ತೇವೆ' ಎಂದು ಬೆದರಿಸಿ ಆರೋಪಿಗಳು ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಘಟನೆಯಿಂದ ಹೆದರಿದ್ದ ಅಧಿಕಾರಿ, ಸಹೋದ್ಯೋಗಿಗಳು ಹಾಗೂ ಕುಟುಂಬಸ್ಥರಿಗೆ ವಿಷಯ ತಿಳಿಸಿದ್ದರು. ಮರುದಿನ ಪುನಃ ಚರ್ಚ್‌ಸ್ಟ್ರೀಟ್‌ಗೆ ಹೋಗಿದ್ದ ಅವರು, ಆರೋಪಿಗಳಿಗಾಗಿ ಹುಡುಕಾಡಿದ್ದರು. ಆದರೆ, ಅವರು ಸಿಕ್ಕಿರಲಿಲ್ಲ. ಬಳಿಕವೇ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ತಿಳಿಸಿವೆ.

'ಜೀವ ಬೆದರಿಕೆ (ಐಪಿಸಿ 506), ಅಪರಾಧ ಸಂಚು (ಐಪಿಸಿ 34), ಶಾಂತಿ ಭಂಗವನ್ನುಂಟು ಮಾಡಲು ಪ್ರಚೋದನೆ (ಐಪಿಸಿ 504) ಹಾಗೂ ಸುಲಿಗೆ (ಐಪಿಸಿ 384) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ತನಿಖೆ ಮುಂದುವರಿಸಿದೆ' ಎಂದು ಹೇಳಿವೆ.

'ದೂರು ನೀಡಿದರೆ ಪೊಲೀಸರು ಮೌನ'

'ಕೆಲ ಲಿಂಗತ್ವ ಅಲ್ಪಸಂಖ್ಯಾತರು, ನೈಜೀರಿಯಾ ಮಹಿಳೆಯರು ಹಾಗೂ ಇತರರು ರಸ್ತೆಯಲ್ಲಿ ನಿಂತು ಪುರುಷರನ್ನು ಮಾತನಾಡಿಸುತ್ತಾರೆ. ವೇಶ್ಯಾವಾಟಿಕೆಗೆಂದು ಕರೆದೊಯ್ದು ಸುಲಿಗೆ ಮಾಡಿ ಪರಾರಿಯಾಗುತ್ತಿದ್ದಾರೆ. ಕೃತ್ಯಗಳ ಮಾಹಿತಿ ಇದ್ದರೂ ಪೊಲೀಸರು ಮೌನವಾಗಿದ್ದಾರೆ' ಎಂದು ಚರ್ಚ್‌ಸ್ಟ್ರೀಟ್ ವ್ಯಾಪಾರಿಗಳು ದೂರಿದರು.

'ವೇಶ್ಯಾವಾಟಿಕೆ ಜಾಲದಲ್ಲಿರುವವರನ್ನು ಬಂಧಿಸುವಂತೆ ಪೊಲೀಸರಿಗೆ ಹಲವು ಬಾರಿ ಮನವಿ ಮಾಡಲಾಗಿದೆ. ನಿಯಂತ್ರಣ ಕೊಠಡಿಗೆ ಕರೆ ಮಾಡುವ ಸಂದರ್ಭದಲ್ಲಿ ಮಾತ್ರ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಬಂದು ಹೋಗುತ್ತಿದ್ದಾರೆ. ಆದರೆ, ಆರೋಪಿಗಳನ್ನು ಬಂಧಿಸುತ್ತಿಲ್ಲ' ಎಂದು ಆರೋಪಿಸಿದರು.

'ಗುಜರಾತ್ ಸರ್ಕಾರಿ ಅಧಿಕಾರಿ ರೀತಿಯಲ್ಲಿ ನಿತ್ಯವೂ ಹಲವರನ್ನು ಸುಲಿಗೆ ಮಾಡಲಾಗುತ್ತಿದೆ. ಕೆಲವರು ಮಾತ್ರ ದೂರು ನೀಡುತ್ತಿದ್ದಾರೆ. ಹಲವರು, ಮರ್ಯಾದೆಗೆ ಅಂಜಿ ದೂರು ನೀಡುತ್ತಿಲ್ಲ' ಎಂದು ವ್ಯಾಪಾರಿಗಳು ಹೇಳಿದರು.

ರಾತ್ರಿ ವೇಳೆ ಹೆಚ್ಚಿದ ಅಪರಾಧ ಪೊಲೀಸರ ವಿಶೇಷ ಗಸ್ತು

ಬೆಂಗಳೂರು: ನಗರದಲ್ಲಿ ರಾತ್ರಿ ವೇಳೆ ಅಪರಾಧಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ಗಸ್ತು ಆರಂಭಿಸಿದ್ದು, ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, 'ಬಾರ್ ಆ್ಯಂಡ್ ರೆಸ್ಟೊರೆಂಟ್, ಬೇಕರಿ, ಟೀ ಅಂಗಡಿ, ವಸತಿಗೃಹಗಳು ಹಾಗೂ ಇತರೆ ಸ್ಥಳಗಳಲ್ಲಿ ರಾತ್ರಿ ವೇಳೆ ಅಪರಾಧಗಳು ಹೆಚ್ಚಾಗುತ್ತಿವೆ. ಇದೇ ಕಾರಣಕ್ಕೆ ಕಾನೂನು ಸುವ್ಯವಸ್ಥೆ ಹಾಗೂ ಸಿಸಿಬಿ ಪೊಲೀಸರು ಜಂಟಿಯಾಗಿ ವಿಶೇಷ ಗಸ್ತು ನಡೆಸಿದ್ದರು' ಎಂದರು.

'ಡಿ. 3ರಂದು ರಾತ್ರಿ 577 ಮದ್ಯದ ಅಂಗಡಿಗಳು, 969 ಬಾರ್ ಆ್ಯಂಡ್ ರೆಸ್ಟೊರೆಂಟ್, 704 ವಸತಿಗೃಹ, 1682 ಬೇಕರಿ ಹಾಗೂ ಇತರೆ 715 ಸ್ಥಳಗಳಲ್ಲಿ ಪರಿಶೀಲನೆ ನಡೆಸಲಾಗಿದೆ. 5,111 ಮಂದಿಯನ್ನು ವಿಚಾರಣೆಗೆ ಒಳಪಡಿಸಲಾಯಿತು. ನೋಂದಣಿ ಸಂಖ್ಯೆ ಫಲಕ ಬದಲಾವಣೆ ಪತ್ತೆಗಾಗಿ 4,282 ವಾಹನಗಳನ್ನು ತಪಾಸಣೆ ನಡೆಸಲಾಯಿತು' ಎಂದು ಹೇಳಿದರು.

47 ಮಂದಿ ಬಂಧನ: 'ಡ್ರಗ್ಸ್ ಸಾಗಣೆ, ಮಾರಾಟ ಹಾಗೂ ಸೇವನೆ ವಿರುದ್ಧ ಕಾರ್ಯಾಚರಣೆ ಮುಂದುವರಿಸಲಾಗಿದೆ. ನವೆಂಬರ್‌ನಲ್ಲಿ 8 ವಿದೇಶಿಯರು ಸೇರಿದಂತೆ 47 ಮಂದಿಯನ್ನು ಬಂಧಿಸಲಾಗಿದೆ. ಈ ಸಂಬಂಧ 32 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ' ಎಂದು ದಯಾನಂದ್ ತಿಳಿಸಿದರು. 'ಬಂಧಿತರಿಂದ ₹ 10.86 ಕೋಟಿ ಮೌಲ್ಯದ ಗಾಂಜಾ, ಎಂಡಿಎಂಎ, ಎಕ್ಸ್‌ಟೆಸಿ ಜಪ್ತಿ ಮಾಡಲಾಗಿದೆ' ಎಂದರು.

ಕೋರ್ಟ್ ಪಕ್ಕ ಕೆಲಸ; ವಿಚಾರಣೆಗೆ ಗೈರು

ಪ್ರಜಾವಾಣಿ ವಾರ್ತೆ

ದೇವೇಗೌಡ

ಬೆಂಗಳೂರು: ಅಪರಾಧ ಪ್ರಕರಣದ ವಿಚಾರಣೆಗೆ ಗೈರಾಗಿ 26 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ ದೇವೇಗೌಡ ಅವರನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹಾಸನ ಜಿಲ್ಲೆಯ ಆಲೂರಿನ ದೇವೇಗೌಡ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದ. ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ. ನಂತರ, ನ್ಯಾಯಾಲಯದ ವಿಚಾರಣೆಗೆ ಹಾಜರಾಗಿರಲಿಲ್ಲ. ಈತನ ಬಂಧನಕ್ಕೆ ವಾರಂಟ್ ಸಹ ಜಾರಿಯಾಗಿತ್ತು' ಎಂದು ಪೊಲೀಸರು ಹೇಳಿದರು.

'ರಾತ್ರಿ ಹೊತ್ತು ನಡೆಯುವ ಅಪರಾಧ ತಡೆಗಾಗಿ ಇತ್ತೀಚೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದ ದೇವೇಗೌಡನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿತ್ತು. ಆತ ಕಳ್ಳತನ ಪ್ರಕರಣದ ಆರೋಪಿ ಎಂಬುದು ತಿಳಿಯಿತು' ಎಂದರು.

ನ್ಯಾಯಾಲಯದ ಬಳಿ ಹೋಟೆಲ್‌ನಲ್ಲಿ ಕೆಲಸ: '1997ರಲ್ಲಿ ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ದೇವೇಗೌಡ ಕಳ್ಳತನ ಮಾಡಿದ್ದ. ಈತನನ್ನು ಪೊಲೀಸರು ಬಂಧಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಈತ, ನ್ಯಾಯಾಲಯ ಬಳಿಯ ಹೋಟೆಲ್‌ನಲ್ಲಿ ಅಡುಗೆ ಕೆಲಸಕ್ಕೆ ಸೇರಿದ್ದ. ಅಂದಿನಿಂದ ಇಲ್ಲಿವರೆಗೂ ಹೋಟೆಲ್‌ನಲ್ಲಿಯೇ ಕೆಲಸ ಮಾಡುತ್ತಿದ್ದ' ಎಂದು ಹೇಳಿದರು.

'ನ್ಯಾಯಾಲಯ ಸಮೀಪವೇ ಹೋಟೆಲ್ ಇದ್ದರೂ ಆರೋಪಿ ಒಮ್ಮೆಯೂ ಪ್ರಕರಣದ ವಿಚಾರಣೆಗೆ ಹೋಗಿರಲಿಲ್ಲ. ಆರೋಪಿ ಗೈರು ಹಾಜರಿಯನ್ನು ಗಂಭೀರವಾಗಿ ಪರಿಗಣಿಸಿದ್ದ ನ್ಯಾಯಾಲಯ, ಬಂಧನಕ್ಕೆ ವಾರಂಟ್ ಜಾರಿ ಮಾಡಿತ್ತು. ಪೊಲೀಸರು, ಬೆಂಗಳೂರು ಹಾಗೂ ಹಾಸನ ಸೇರಿದಂತೆ ಹಲವು ಊರುಗಳಲ್ಲಿ ಆರೋಪಿಗಾಗಿ ಹುಡುಕಾಟ ನಡೆಸಿದ್ದರು. ಆದರೆ, ಆರೋಪಿ ನ್ಯಾಯಾಲಯ ಬಳಿಯ ಹೋಟೆಲ್‌ನಲ್ಲಿದ್ದ ಮಾಹಿತಿ ಯಾರಿಗೂ ಗೊತ್ತಿರಲಿಲ್ಲ. ಈತ ಡಿ. 3ರಂದು ರಾತ್ರಿ ಅನುಮಾನಾಸ್ಪದ ರೀತಿಯಲ್ಲಿ ಓಡಾಡಿ ಸಿಕ್ಕಿಬಿದ್ದ' ಎಂದು ತಿಳಿಸಿದರು.

'ನ್ಯಾಯಾಲಯ ಬಿಟ್ಟು ಎಲ್ಲ ಕಡೆಯೂ ಪೊಲೀಸರು ಹುಡುಕುತ್ತಾರೆಂಬುದು ಗೊತ್ತಿತ್ತು. ಹೀಗಾಗಿ, ನ್ಯಾಯಾಲಯ ಬಳಿಯ ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರಿದ್ದ. ವಕೀಲರು, ಪೊಲೀಸರು ಹೋಟೆಲ್‌ಗೆ ಬಂದು ಹೋಗುತ್ತಿದ್ದರು. ಆದರೆ, ಯಾರೊಬ್ಬರಿಗೂ ನಾನು ಆರೋಪಿ ಎಂಬುದು ಗೊತ್ತಾಗಿರಲಿಲ್ಲ' ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಹೇಳಿದರು.

'ಆತ್ಮಹತ್ಯೆ: ಪೊಲೀಸರಿಂದ ಪತ್ತೆ'

'ಕಾಮಾಕ್ಷಿಪಾಳ್ಯ ಬಳಿಯ ವಸತಿಗೃಹವೊಂದರ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿತ್ತು. ಕೊಠಡಿಯೊಂದರಲ್ಲಿ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದು ಗೊತ್ತಾಗಿತ್ತು, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವಸತಿಗೃಹದ ಕೊಠಡಿಯಲ್ಲಿ ಉಳಿದುಕೊಂಡಿದ್ದ ವ್ಯಕ್ತಿ, ಮೂರು ದಿನಗಳಿಂದ ಹೊರಗೆ ಬಂದಿರಲಿಲ್ಲ. ಈ ಬಗ್ಗೆ ವಸತಿಗೃಹದ ಸಿಬ್ಬಂದಿ ಸಹ ಗಮನ ಹರಿಸಿರಲಿಲ್ಲ. ಅಪರಾಧ ತಡೆಗಾಗಿ ಇತ್ತೀಚೆಗೆ ವಸತಿಗೃಹದ ಮೇಲೆ ದಾಳಿ ಮಾಡಲಾಗಿತ್ತು. ಕೊಠಡಿ ಪರಿಶೀಲಿಸಿದಾಗ, ಮೃತದೇಹ ಪತ್ತೆಯಾಯಿತು. ಆತ್ಮಹತ್ಯೆ ಬಗ್ಗೆ ವಸತಿಗೃಹದ ಸಿಬ್ಬಂದಿಗೂ ಮಾಹಿತಿ ಇರಲಿಲ್ಲ' ಎಂದರು.

ಅಪರಾಧ ಸುದ್ದಿಗಳು

ಕಾಡುಗೋಡಿಯಲ್ಲಿ ತಾಯಿ–ಮಗು ಸಾವನ್ನಪ್ಪಿದ್ದ ಪ್ರಕರಣ

'ಬೆಸ್ಕಾಂ ನಿರ್ಲಕ್ಷ್ಯ ಅವಘಡಕ್ಕೆ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಮಾರ್ಗಗಳ ನಿರ್ವಹಣೆ ಹಾಗೂ ಸುರಕ್ಷತಾ ಕ್ರಮಗಳ ವಿಚಾರದಲ್ಲಿ ಬೆಸ್ಕಾಂ ನಿರ್ಲಕ್ಷ್ಯ ತೋರಿರುವುದರಿಂದಲೇ ಕಾಡುಗೋಡಿ ಸಮೀಪ ವಿದ್ಯುತ್ ಅವಘಡದಿಂದ ತಾಯಿ–ಮಗು ಮೃತಪಟ್ಟಿದ್ದರು' ಎಂದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ವರದಿ ನೀಡಿದ್ದಾರೆ.

ಪ್ರಕರಣದ ಕುರಿತು ಬೆಂಗಳೂರು ಪೂರ್ವ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಅವರಿಗೆ ವರದಿ ಸಲ್ಲಿಸಿದ್ದಾರೆ. ವರದಿಯ ಪ್ರತಿಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೂ (ಕೆಇಆರ್‌ಸಿ) ಸಲ್ಲಿಸಿದ್ದಾರೆ ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ.

ಪ್ರಕರಣ ನಡೆದ ಸ್ಥಳ ಪರಿಶೀಲನೆ, ಸ್ಥಳದಲ್ಲಿ ದೊರೆತ ಸಾಕ್ಷ್ಯಾಧಾರಗಳು, ಸಿಬ್ಬಂದಿ ಹೇಳಿಕೆಗಳು ಮತ್ತು ಇಂಧನ ಇಲಾಖೆಯ ವಿವಿಧ ವಿಭಾಗಗಳು ನೀಡಿರುವ ಮಾಹಿತಿಗಳನ್ನು ಪರಿಶೀಲಿಸಿ ಈ ವರದಿಯನ್ನು ಸಿದ್ದಪಡಿಸಲಾಗಿದೆ.

'ಮೈತ್ರಿ ಲೇಔಟ್‌ನ ಔದುಂಬರಾ ಅಪಾರ್ಟ್‌ಮೆಂಟ್‌ನ ವಿದ್ಯುತ್ ಸ್ಥಾವರದೊಳಗೆ (ಎಲ್‌ಬಿಎಸ್) ಇಲಿಯೊಂದು ನುಸುಳಿದ ಪರಿಣಾಮ ಶಾರ್ಟ್ ಸರ್ಕೀಟ್ ಆಗಿತ್ತು. ಇದರಿಂದ ವಿದ್ಯುತ್ ಪರಿವರ್ತಕಕ್ಕೆ (ಟ್ರಾನ್ಸ್‌ಫಾರ್ಮರ್) ಜೋಡಿಸಿದ್ದ 11 ಕೆವಿ ಸಾಮರ್ಥ್ಯದ ತಂತಿಯಲ್ಲಿ ಭಾರಿ ಪ್ರಮಾಣದಲ್ಲಿ ವಿದ್ಯುತ್ ಪ್ರವಹಿಸಿತ್ತು. ತುಂಬಾ ಹಳೆಯದಾಗಿದ್ದ ಹಾಗೂ ಹಿಂದೆ ಜೋಡಣೆ ಮಾಡಲಾಗಿದ್ದ ಈ ತಂತಿ ತುಂಡಾಗಿ ಕೆಳಗೆ ಬಿದ್ದಿದೆ.

ತಂತಿ ಸಿಮೆಂಟ್ ಹಾಗೂ ಮರಳು ಇರುವ ಪಾದಚಾರಿ ಮಾರ್ಗದ ಮೇಲೆ ಬಿದ್ದಿದ್ದರಿಂದ ಅರ್ಥಿಂಗ್ ಆಗಿ ಸಂಪರ್ಕ ಕಡಿಯದೇ ವಿದ್ಯುತ್ ಪ್ರವಹಿಸುವುದು ಮುಂದುವರಿದಿತ್ತು. ಮಗು ಎತ್ತಿಕೊಂಡು ತೆರಳುತ್ತಿದ್ದ ಸೌಂದರ್ಯ ಅವರು ಈ ತಂತಿಯ ಮೇಲೆ ಕಾಲಿಟ್ಟಿದ್ದರಿಂದ ಅವಘಡ ಸಂಭವಿಸಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

'ತಂತಿ ತುಂಡಾಗಿ ಬಿದ್ದಾಗ ಫೀಡರ್ ಸ್ಟೇಷನ್‌ನಲ್ಲಿ ಟ್ರಿಪ್ ಆಗಿದೆ. ಸ್ಟೇಷನ್‌ನಲ್ಲಿದ್ದವರು ಅದನ್ನು ಟೆಸ್ಟ್ ಚಾರ್ಜ್ ಮಾಡಿದ್ದಾರೆ. ಮರಳು ಸಿಮೆಂಟ್‌ನ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ತಂತಿಯಲ್ಲಿ ವಿದ್ಯುತ್ ಪ್ರವಹಿಸುತ್ತಿದ್ದರಿಂದ ತಂತಿ ತುಂಡಾಗಿ ಬಿದ್ದಿರುವುದು ಗೊತ್ತಾಗಿಲ್ಲ. ಎರಡೂವರೆ ದಶಕದಷ್ಟು ಹಳೆಯದಾದ 11 ಕೆ.ವಿ ಸಾಮರ್ಥ್ಯದ ವಿದ್ಯುತ್ ಮಾರ್ಗದ ತಂತಿ(ವಾಹಕ)ಗಳನ್ನು ಪರಿಶೀಲಿಸಿ, ಸಮರ್ಪಕವಾಗಿ ನಿರ್ವಹಣೆ ಮಾಡಿದ್ದರೆ ಹಾಗೂ ಈ ಮಾರ್ಗದಲ್ಲಿ ಅರ್ಥ್ ಗಾರ್ಡ್ ಅಳವಡಿಕೆಯಂತಹ ಸುರಕ್ಷತಾ ಕ್ರಮಗಳನ್ನು ಅನುಸರಿಸಿದ್ದರೆ ಅವಘಡ ಸಂಭವಿಸುತ್ತಿರಲಿಲ್ಲ' ಎಂದು ವರದಿ ತಿಳಿಸಿದೆ.

ಈ ಪ್ರಕರಣದಲ್ಲಿ ಕೇಂದ್ರೀಯ ವಿದ್ಯುತ್ ಪ್ರಾಧಿಕಾರದ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿರುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಘಟನೆ ವಿವರ: ನವೆಂಬರ್ 19ರಂದು ಬೆಳಗಿನ ಜಾವ 3.50ರ ಸಮಯದಲ್ಲಿ ಕಾಡುಗೋಡಿ ಸಮೀಪದ ಹೋಪ್ ಫಾರ್ಮ್ ಬಳಿ ಪಾದಚಾರಿ ಮಾರ್ಗದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ತಾಯಿ ಮತ್ತು ಮಗು ಸುಟ್ಟು ಭಸ್ಮವಾಗಿದ್ದರು. ಈ ಅವಘಡಕ್ಕೆ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಕಾರಣ ಎಂದು ಸ್ಥಳೀಯರು ದೂರಿದ್ದರು.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು, ಐವರು ಬೆಸ್ಕಾಂ ಸಿಬ್ಬಂದಿಯನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರು. ಇಂಧನ ಸಚಿವ ಜಾರ್ಜ್ ಅವರು ಬೆಸ್ಕಾಂ, ಪೊಲೀಸ್, ವಿದ್ಯುತ್ ಪರಿವೀಕ್ಷಕರು ಹಾಗೂ ಸ್ವತಂತ್ರ ಸಮಿತಿಗಳ ಮೂಲಕ ನಾಲ್ಕು ಪ್ರತ್ಯೇಕ ತನಿಖೆ ನಡೆಸಲು ಆದೇಶಿಸಿದ್ದರು. ಈಗ ವಿದ್ಯುತ್ ಪರಿವೀಕ್ಷಕರು ತನಿಖಾ ವರದಿ ನೀಡಿದ್ದಾರೆ. ಕೆಪಿಟಿಸಿಎಲ್ ನಿವೃತ್ತ ನಿರ್ದೇಶಕ ಕೆ.ಸುಮಂತ್ ನೇತೃತ್ವದಲ್ಲಿ ರಚಿಸಿರುವ ಸ್ವತಂತ್ರ ಸಮಿತಿಯ ತನಿಖೆ ಮುಂದುವರಿದಿದೆ.

ವಿದ್ಯುತ್ ಪರಿವೀಕ್ಷಕರ ಸಲಹೆ

- ಹಳೆಯದಾದ ಮತ್ತು ಶಿಥಿಲಗೊಂಡಿರುವ ವಿದ್ಯುತ್ ವಾಹಕಗಳನ್ನು ಗುರುತಿಸಿ ಅವುಗಳನ್ನು ಯುಜಿ/ಓವರ್ ಹೆಡ್ ಕೇಬಲ್‌ಗೆ ಬದಲಾಯಿಸಿ ಮಾರ್ಗಗಳನ್ನು ಸುಸ್ಥಿಯಲ್ಲಿಡಬೇಕು.
- ಓವರ್ ಹೆಡ್ ಬೇರ್ ಕಂಡಕ್ಟರ್‌ಗಳಲ್ಲಿ ವಾಹಕವು ತುಂಡಾಗಿ ಬಿದ್ದಾಗ, ವಿದ್ಯುತ್‌ನಿಂದ ಸಂಭವಿಸುವ ಅವಘಡಗಳನ್ನು ತಡೆಗಟ್ಟಲು ಅರ್ಥ್ ಗಾರ್ಡ್ ಅಳವಡಿಸಬೇಕು.
- ಹೈ ಇಂಪೆಡೆನ್ಸ್ ಫಾಲ್ಟ್ ಉಂಟಾದಾಗ ಸಾಮಾನ್ಯವಾಗಿ ರಕ್ಷಣಾ ರಿಲೆಗಳು ಟ್ರಿಪ್ ಆಗುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಅವಶ್ಯವಾಗಿದೆ. ಇಂಥ ಕಡೆ ಹೈ ಇಂಪೆಡೆನ್ಸ್ ಹಾಲ್ಟ್ ಪ್ರೊಟೆಕ್ಷನ್ ವ್ಯವಸ್ಥೆಯಂತಹ ರಕ್ಷಣಾ ಕ್ರಮವನ್ನು ಅನುಸರಿಸಬೇಕು.

ಸಂಕ್ಷಿಪ್ತ ಸುದ್ದಿ

ಅಮಾನತು ಆದೇಶ ರದ್ದು ಮಾಡಲು ಕೆಎಟಿ ನಕಾರ

ಬೆಂಗಳೂರು: ಅತ್ತಿಬೆಲೆ ಬಾಲಾಜಿ ಟ್ರೇಡರ್ಸ್‌ಗೆ ಸೇರಿದ ಪಟಾಕಿ ಗೋದಾಮಿನಲ್ಲಿ ಅಗ್ನಿ ಅವಘಡ ಸಂಭವಿಸಿ 15ಕ್ಕೂ ಹೆಚ್ಚು ಕಾರ್ಮಿಕರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಅಧಿಕಾರಿಗಳನ್ನು ಸೇವೆಯಿಂದ ಅಮಾನತು ಮಾಡಿದ್ದ ಸರ್ಕಾರದ ಆದೇಶವನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಪುರಸ್ಕರಿಸಿದೆ.

ಅಮಾನತು ಆದೇಶ ರದ್ದುಪಡಿಸುವಂತೆ ಕೋರಿ ಆನೇಕಲ್ ತಹಶೀಲ್ದಾರ್ ಶಶಿಧರ್ ಮಾಡ್ಯಾಳ್, ಅತ್ತಿಬೆಲೆ ವೃತ್ತದ ಕಂದಾಯ ನಿರೀಕ್ಷಕ ಎ.ಪುಷ್ಪರಾಜ್ ಮತ್ತು ಅತ್ತಿಬೆಲೆ ಕಂದಾಯ ವೃತ್ತದ ಗ್ರಾಮ ಲೆಕ್ಕಾಧಿಕಾರಿ ಭಾರ್ಗೇಶ್ ಹೊಸಮನಿ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ಕೆಎಟಿ ಮುಖ್ಯಸ್ಥ ನ್ಯಾಯಮೂರ್ತಿ ಆರ್.ಬಿ.ಬೂದಿಹಾಳ್ ಅವರಿದ್ದ ಪೀಠ ವಜಾಗೊಳಿಸಿದೆ. ವಿಸ್ತೃತ ಆದೇಶ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ವಿಚಾರಣೆ ವೇಳೆ ಸರ್ಕಾರಿ ವಕೀಲ ಜಿ.ರಮೇಶ್ ನಾಯ್ಕ್, 'ಅಗ್ನಿ ಅವಘಡ ಸಂಭವಿಸಲು ಅರ್ಜಿದಾರರ ನಿರ್ಲಕ್ಷ್ಯ ಹಾಗೂ ಕರ್ತವ್ಯ ಲೋಪವೇ ಕಾರಣವಾಗಿದೆ. ಆದ್ದರಿಂದ, ಇವರನ್ನು ಅಮಾನತು ಮಾಡಿರುವ ಸರ್ಕಾರದ ಆದೇಶ ಕಾನೂನು ಪ್ರಕಾರವಾಗಿದೆ' ಎಂದು ಮಂಡಿಸಿದ್ದ ವಾದಾಂಶವನ್ನು ನ್ಯಾಯಪೀಠ ಪುರಸ್ಕರಿಸಿದೆ.

ಪ್ರಕರಣವೇನು?: ಆನೇಕಲ್ ತಾಲ್ಲೂಕಿನ ಬಾಲಾಜಿ ಟ್ರೇಡರ್ಸ್‌ನಲ್ಲಿ 2023ರ ಅಕ್ಟೋಬರ್ 7ರಂದು ಪಟಾಕಿ ದಾಸ್ತಾನಿಗೆ ಬೆಂಕಿ ಬಿದ್ದ ಪರಿಣಾಮ 14 ಜನರು ಸ್ಥಳದಲ್ಲೇ ಮೃತಪಟ್ಟ ಹಿನ್ನೆಲೆಯಲ್ಲಿ ಸರ್ಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ಆದೇಶಿಸಿತ್ತು.

₹4.50 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ರಾಮನಗರ: ನಗರದ ಯಾರಬ್ ನಗರ 2ನೇ ಹಂತದಲ್ಲಿರುವ ಬೀಡಿ ಕಾಲೊನಿಯ ಮನೆಯೊಂದಕ್ಕೆ ಕನ್ನ ಹಾಕಿರುವ ಕಳ್ಳರು, ಮನೆಯಲ್ಲಿದ್ದ ₹4.50 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದೊಯ್ದಿದ್ದಾರೆ.

ಬೆಂಗಳೂರಿನ ಯಶವಂತಪುರದ ಅಂಬೇಡ್ಕರ್ ನಗರದ ವಾಸಿ ವಸೀಂ ಖಾನ್ ಪತ್ನಿ ಫರ್ಹಾನ್ ತಾಜ್ ಎಂಬುವರು ಸುಮಾರು 365 ಗ್ರಾಂ ಚಿನ್ನಾಭರಣ ಕಳವಾಗಿರುವ ಕುರಿತು ಯಶವಂತಪುರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಕೃತ್ಯದ ನಡೆದ ಸ್ಥಳದ ಆಧಾರದ ಮೇಲೆ ಅಲ್ಲಿನ ಪೊಲೀಸರು ರಾಮನಗರ ಪುರ ಠಾಣೆಗೆ ಪ್ರಕರಣ ವರ್ಗಾವಣೆ ಮಾಡಿದ್ದಾರೆ.

ಕೃತ್ಯ ಇಲ್ಲಿ ನಡೆದಿರುವುದರಿಂದ ಅಲ್ಲಿಯವರು ಇಲ್ಲಿಗೆ ಪ್ರಕರಣ ವರ್ಗಾಯಿಸಿದ್ದಾರೆ.

ಪ್ರಕರಣ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಹೊತ್ತಿ ಉರಿದ ಹುಲ್ಲು ತುಂಬಿದ ಕ್ಯಾಂಟರ್

ಕ್ಯಾಂಟರ್ ಹೊತ್ತಿ ಉರಿಯಿತು

ದಾಬಸ್‌ಪೇಟೆ: ಸೋಂಪುರ ಹೋಬಳಿ ಇಮಚೇನಹಳ್ಳಿ ಬಳಿ ರಾಗಿ ಹುಲ್ಲು ತುಂಬಿದ ಕ್ಯಾಂಟರ್ ವಾಹನಕ್ಕೆ ವಿದ್ಯುತ್ ತಂತಿ ತಗುಲಿ ಹುಲ್ಲಿನ ಸಮೇತ ಕ್ಯಾಂಟರ್ ಹೊತ್ತಿ ಉರಿದ ಘಟನೆ ಮಂಗಳವಾರ ಮಧ್ಯಾಹ್ನ ನಡೆದಿದೆ.

ಈ ಘಟನೆಯಿಂದ ಸುಮಾರು ₹ 20 ಸಾವಿರ ಬೆಲೆಯ ಹುಲ್ಲು ಹಾಗೂ ಕ್ಯಾಂಟರ್ ವಾಹನ ಸುಟ್ಟು ಕರಕಲಾಗಿದೆ.

ದಾಬಸ್ ಪೇಟೆ ಪಟ್ಟಣದ ವ್ಯಕ್ತಿಯೊಬ್ಬರು ಕರಿಮಣ್ಣೆ ಗ್ರಾಮದಲ್ಲಿ ಜಾನುವಾರುಗಳ ಮೇವಿಗಾಗಿ 'ರಾಗಿ ಹುಲ್ಲು' ಖರೀದಿಸಿದ್ದರು. ಅದನ್ನು ಸ್ನೇಹಿತ ಮನ್ಸೂರ್ ಪಾಷಾ ಅವರ ಕ್ಯಾಂಟರ್ ವಾಹನದಲ್ಲಿ ಎರಡು ಟ್ರಿಪ್ ತೆಗೆದುಕೊಂಡು ಹೋಗಿದ್ದರು. ಮೂರನೇ ಟ್ರಿಪ್ ತೆಗೆದುಕೊಂಡು ಹೋಗುವ ವೇಳೆಗೆ ಈ ಅವಘಡ ಸಂಭವಿಸಿದೆ.

ಚಾಲಕ ಹುಲ್ಲು ಹೊರೆ ಬೀಳಿಸಿ, ವಾಹನ ಕಾಪಾಡುವ ಪ್ರಯತ್ನ ಮಾಡಿದರು ಫಲ ಕೊಡದೆ, ಹುಲ್ಲಿನ ಸಮೇತ ವಾಹನ ಹೊತ್ತಿ ಉರಿಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು. ವಾಹನ ಕಾಪಾಡಲು ಚಾಲಕ ಪ್ರಯತ್ನ ಪಟ್ಟದ್ದರಿಂದ, ತಲೆ ಕೂದಲು, ಕೈಗೆ ಸುಟ್ಟ ಗಾಯವಾಗಿದೆ. ನೆಲಮಂಗಲ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದರು.

ಗ್ರಾಮೀಣ ಭಾಗದಲ್ಲಿ ವಿದ್ಯುತ್ ತಂತಿಗಳು ಬಾಗಿವೆ. ಆದರೆ, ಬೆಸ್ಕಾಂ ಇಲಾಖೆ ಅವುಗಳನ್ನು ಸರಿಪಡಿಸುತ್ತಿಲ್ಲ. ಇದರಿಂದ ಈ ರೀತಿಯ ತೊಂದರೆಗಳು ಆಗುತ್ತಿವೆ. ಇನ್ನಾದರೂ ಬೆಸ್ಕಾಂ ಎಚ್ಚೆತ್ತುಕೊಂಡು ಬಾಗಿರುವ ವಿದ್ಯುತ್ ತಂತಿ ಸರಿಪಡಿಸಲಿ ಎಂದು ಸಾರ್ವಜನಿಕರು ಆಗ್ರಹಿಸಿದರು.

ಪೊಲೀಸರ ಸೋಗಿನಲ್ಲಿ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯದ ಎಚ್‌ಎಂಟಿ ಬಡಾವಣೆಯಲ್ಲಿರುವ ಉದ್ಯಮಿಯೊಬ್ಬರ ಮನೆಗೆ ಪೊಲೀಸರ ಸೋಗಿನಲ್ಲಿ ನುಗ್ಗಿದ್ದ ದುಷ್ಕರ್ಮಿಗಳು, ₹60 ಲಕ್ಷ ನಗದು ಹಾಗೂ ಸುಮಾರು 500 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

'ಉದ್ಯಮಿ ಮನೋಹರ್ ಅವರ ಮನೆಯಲ್ಲಿ ಸೋಮವಾರ ರಾತ್ರಿ ದರೋಡೆ ನಡೆದಿದೆ. ಅವರ ಮಗ ರೂಪೇಶ್ ಕೃತ್ಯದ ಬಗ್ಗೆ ದೂರು ನೀಡಿದ್ದು, ಅದರನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಮನೋಹರ್ ಹೊರಗಡೆ ಹೋಗಿದ್ದರು. ರೂಪೇಶ್ ಹಾಗೂ ಅವರ ತಾಯಿ ಮಾತ್ರ ಮನೆಯಲ್ಲಿದ್ದರು. ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ಪೊಲೀಸರು ಎಂಬುದಾಗಿ ಪರಿಚಯ ಮಾಡಿಕೊಂಡಿದ್ದರು. ಇದಾದ ನಂತರ, ಮಾರಕಾಸ್ತ್ರಗಳನ್ನು ತೋರಿಸಿ ತಾಯಿ–ಮಗನನ್ನು ಬೆದರಿಸಿದ್ದರು. ಜೊತೆಗೆ, ರೂಪೇಶ್ ಮೇಲೆ ಹಲ್ಲೆ ಮಾಡಿದ್ದರು.'

'ಆರೋಪಿಗಳು, ನಗದು, ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದ್ದಾರೆ. ಸಿ.ಸಿ.ಟಿ.ವಿ ಕ್ಯಾಮೆರಾದ ಡಿವಿಆರ್ ಸಹ ತೆಗೆದುಕೊಂಡು ಹೋಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ವಿದ್ಯಾರ್ಥಿನಿ ಸಾವು

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಎಸ್‌ಎಫ್‌ಎಸ್ ಕಾಲೇಜಿನಲ್ಲಿ ಮಂಗಳವಾರ ಬ್ಯಾಸ್ಕೆಟ್ ಬಾಲ್ ಆಡುತ್ತಿದ್ದ 11ನೇ ತರಗತಿ ವಿದ್ಯಾರ್ಥಿನಿ ಚಾರ್ವಿ(16) ಕುಸಿದು ಬಿದ್ದು ಮೃತಪಟ್ಟಿದ್ದಾಳೆ.

ಚಾರ್ವಿ ಬ್ಯಾಸ್ಕೆಟ್ ಬಾಲ್ ಆಡುವಾಗ ಕುಸಿದು ಬಿದ್ದಳು. ಮೂಗಿನಿಂದ ರಕ್ತಸ್ರಾವವಾಯಿತು. ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು. ಮಾರ್ಗಮಧ್ಯೆಯೇ ಮೃತಪಟ್ಟಳು ಎಂದು ಹೆಬ್ಬಗೋಡಿ ಪೊಲೀಸರು ತಿಳಿಸಿದ್ದಾರೆ.

ಶಾಲೆಗಳಿಗೆ ಬಾಂಬ್ ಬೆದರಿಕೆ ಇಂಟರ್‌ಪೋಲ್, ಸಿಬಿಐಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯ 68 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಕೆಲ ಮಾಹಿತಿ ಕೋರಿ ಸಿಬಿಐ ಹಾಗೂ ಇಂಟರ್‌ಪೋಲ್ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಈ ಬಗ್ಗೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, 'ಬಾಂಬ್ ಬೆದರಿಕೆ ಇ–ಮೇಲ್ ಸಂಬಂಧ ಒಟ್ಟು 27 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆಗೆ ಅಗತ್ಯವಿರುವ ಮಾಹಿತಿ ಕೋರಿ ಇಂಟರ್‌ಪೋಲ್ ಹಾಗೂ ಸಿಬಿಐಗೆ ಪತ್ರ ಬರೆಯಲಾಗಿದೆ' ಎಂದರು.

'2022ರ ಏಪ್ರಿಲ್ 8ರಂದು ನಗರದ 16 ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. ಈ ಪ್ರಕರಣಗಳಿಗೂ ಇದೀಗ ಬೆದರಿಕೆ ಬಂದಿರುವ ಇ–ಮೇಲ್‌ಗಳಿಗೂ ಹೋಲಿಕೆ ಕಂಡುಬರುತ್ತಿದೆ. ಇದೇ ಮಾದರಿಯಲ್ಲಿ ಅಮೆರಿಕ, ಜರ್ಮನಿ, ಮಲೇಷ್ಯಾ ಶಾಲೆಗಳಿಗೂ ಬೆದರಿಕೆ ಬಂದಿರುವುದು ಗೊತ್ತಾಗಿದೆ' ಎಂದು ಹೇಳಿದರು.

'ಬೆದರಿಕೆ ಬಗ್ಗೆ ಅಂತರ-ರಾಷ್ಟ್ರೀಯ ಮಟ್ಟದಲ್ಲಿ ತನಿಖೆ ಅಗತ್ಯವಿದೆ. ಕೆಲವೇ ದಿನಗಳಲ್ಲಿ ಮಾಹಿತಿ ನೀಡುವುದಾಗಿ ಸಿಬಿಐ ಹೇಳಿದೆ. ಮಾಹಿತಿ ಬಂದ ಕೂಡಲೇ ತನಿಖೆ ಮತ್ತಷ್ಟು ಚುರುಕುಗೊಳಿಸಲಾಗುವುದು' ಎಂದರು.

ಸಂಚಾರ ನಿಯಮ ಪಾಲನೆ ಬಿಎಂಟಿಸಿ ಸಿಬ್ಬಂದಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ, ಅಪಘಾತಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಬಿಎಂಟಿಸಿ ಚಾಲನಾ ಸಿಬ್ಬಂದಿಗೆ ಪೊಲೀಸ್ ಟ್ರಾಫಿಕ್ ಕಮಾಂಡ್ ಸೆಂಟರ್ ಸಂಚಾರ ನಿಯಮ ಪಾಲನೆ ತರಬೇತಿಯನ್ನು ಸೋಮವಾರ ಆರಂಭಿಸಲಾಯಿತು.

ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಮಾತನಾಡಿ, 'ಸಂಸ್ಥೆಯಲ್ಲಿ ಒಟ್ಟು 30 ಸಾವಿರ ಸಿಬ್ಬಂದಿ ಇದ್ದಾರೆ. ಅದರಲ್ಲಿ 25 ಸಾವಿರ ಚಾಲನಾ ಸಿಬ್ಬಂದಿಯೇ ಆಗಿದ್ದಾರೆ. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಸಲಹೆ ನೀಡಿದರು.

ಮುಖ್ಯ ಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿ.ಟಿ.ಪ್ರಭಾಕರ ರೆಡ್ಡಿ, 'ಸಂಚಾರ ನಿಯಮ ಉಲ್ಲಂಘನೆಯಿಂದಾಗಿ ಸಂಸ್ಥೆ ಕೋಟ್ಯಂತರ ರೂಪಾಯಿ ದಂಡ ಕಟ್ಟುವಂತಾಗಿದೆ. ಹಲವು ಅಪಘಾತಗಳಿಗೆ ನಿಯಮ ಉಲ್ಲಂಘನೆಯೇ ಕಾರಣವಾಗಿದೆ. 'ರಿಯಲ್ ರನ್ನಿಂಗ್ ಟೈಮ್' ಆಧಾರದ ಮೇಲೆ ಟ್ರಿಪ್‌ಗಳನ್ನು ನಡೆಸಲು ಸಮಯ ಪರಿಷ್ಕರಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಸಂಚಾರ ನಿಯಮ ಉಲ್ಲಂಘನೆಯ ವಿಡಿಯೊಗಳನ್ನು ಪೊಲೀಸ್ ಟ್ರಾಫಿಕ್ ಕಮಾಂಡ್ ಸೆಂಟರ್‌ನ ಮುಖ್ಯಸ್ಥರಾದ ಎಸಿಪಿ ಶಶಿಕಲಾ, ಸಂಚಾರ ಪೊಲೀಸ್ ಇನ್‌ಸ್ಪೆಕ್ಟರ್ ಅನಿಲ್ ಕುಮಾರ್ ಪ್ರದರ್ಶಿಸಿ ಅರಿವು ಮೂಡಿಸಿದರು.

ಪ್ರತಿದಿನ 50 ಚಾಲಕರಂತೆ ಡಿಸೆಂಬರ್ 30ರ ವರೆಗೆ ಟ್ರಾಫಿಕ್ ಕಮಾಂಡ್ ಸೆಂಟರ್‌ನಲ್ಲಿ ತರಬೇತಿ ನಡೆಯಲಿದೆ.

ಸಮಯಪ್ರಜ್ಞೆ ತೋರಿ ಪ್ರಯಾಣಿಕರ ರಕ್ಷಣೆ

ಬಿಎಂಟಿಸಿ ಚಾಲಕ, ನಿರ್ವಾಹಕರಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವರ್ತುಲ ರಸ್ತೆಯ ಚಂದ್ರಾಲೇಔಟ್ ತಂಗುದಾಣದ ಬಳಿ ಕಾರು ಹಾಗೂ ಬಿಎಂಟಿಸಿ ಬಸ್ ನಡುವೆ ಸಂಭವಿಸಿದ್ದ ಅಪಘಾತದ ವೇಳೆ ಸಮಯಪ್ರಜ್ಞೆ ಪ್ರದರ್ಶಿಸಿ ದೊಡ್ಡ ಅನಾಹುತ ತಪ್ಪಿಸಿದ ಚಾಲಕ ಹಾಗೂ ನಿರ್ವಾಹಕರಿಗೆ ಬಿಎಂಟಿಸಿ ಬಹುಮಾನ ನೀಡಿ ಗೌರವಿಸಿದೆ. ಈ ಅಪಘಾತದಲ್ಲಿ ಕಾರೊಂದು ಬೆಂಕಿಗೆ ಆಹುತಿ ಆಗಿದ್ದರೆ, ಬಸ್‌ನ ಹಿಂಬದಿ ಸುಟ್ಟು ಹೋಗಿದೆ.

ಘಟಕ–26ರ ಚಾಲಕ ಜೆ.ಗೌರೀಶ್‌ಗೆ ₹ 10 ಸಾವಿರ, ಚಾಲಕ–ಕಂ–ನಿರ್ವಾಹಕ ಗಿರಿಧರ್‌ಗೆ ₹5 ಸಾವಿರ, ಘಟಕ-21ರ ಘಟಕ ವ್ಯವಸ್ಥಾಪಕ ಪ್ರದೀಪ ಕುಮಾರ್‌ಗೆ ₹5 ಸಾವಿರ ನಗದು ಹಾಗೂ ಪ್ರಶಂಸನಾ ಪತ್ರ ನೀಡಿ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಸನ್ಮಾನಿಸಿದರು.

ಇದೇ ವೇಳೆ ಘಟಕ 26ರ ಘಟಕ ವ್ಯವಸ್ಥಾಪಕ ಎಚ್.ಗಂಗಾಧರ್ ಹಾಗೂ ಪ್ರಯಾಣಿಕ ಮಂಜುನಾಥ್‌ಗೂ ನೆನಪಿನ ಕಾಣಿಕೆ ನೀಡಿ ಶ್ಲಾಘಿಸಲಾಯಿತು.

ಮುಖ್ಯಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿ.ಟಿ.ಪ್ರಭಾಕರ ರೆಡ್ಡಿ, ಮುಖ್ಯ ತಾಂತ್ರಿಕ ಎಂಜಿನಿಯರ್ ಎ.ಎನ್. ಗಜೇಂದ್ರ ಕುಮಾರ್, ವಿಭಾಗೀಯ ನಿಯಂತ್ರಣಾಧಿಕಾರಿ ಎನ್.ಶ್ರೀನಾಥ್ ಉಪಸ್ಥಿತರಿದ್ದರು.

ಬೆಂಕಿಗೆ ಆಹುತಿಯಾಗಿದ್ದ ಕಾರು: ಚಂದ್ರಾಲೇಔಟ್‌ನ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಇಳಿಸಲು ನಿಂತಿದ್ದಾಗ ವೇಗವಾಗಿ ಬಂದ ಕಾರೊಂದು ಬಸ್‌ಗೆ ಡಿಕ್ಕಿಯಾಗಿತ್ತು. ಡಿಕ್ಕಿಯ ರಭಸಕ್ಕೆ ಕಾರಿನಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಬಸ್‌ನ ಹಿಂಭಾಗಕ್ಕೂ ಬೆಂಕಿ ತಗುಲಿತ್ತು. ಸಮಯಪ್ರಜ್ಞೆ ತೋರಿದ ಬಸ್ ಚಾಲಕ, ಕಾರಿದ್ದ ಸ್ಥಳದಿಂದ ಬಸ್ ಅನ್ನು ಸ್ವಲ್ಪ ದೂರಕ್ಕೆ ಚಲಾಯಿಸಿಕೊಂಡು ಹೋಗಿದ್ದರು. ನಂತರ, ಅಲ್ಲಿ ಪ್ರಯಾಣಿಕರನ್ನು ಬಸ್‌ನಿಂದ ಕೆಳಕ್ಕೆ ಇಳಿಸಿದ್ದರು. ಎಲ್ಲ ಪ್ರಯಾಣಿಕರು ಪಾರಾಗಿದ್ದರು. ಕಾರು ಬೆಂಕಿಗೆ ಆಹುತಿಯಾಗಿತ್ತು. ಬಸ್‌ನ ಹಿಂಬದಿ ಹಾಗೂ ಸೀಟುಗಳು ಸುಟ್ಟಿದ್ದವು. ಚಾಲಕ, ಸಮಯಪ್ರಜ್ಞೆ ತೋರಿದ್ದರಿಂದ ದೊಡ್ಡ ಅನಾಹುತ ತಪ್ಪಿತು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅಪಘಾತದ ವೇಳೆ ಸಮಯಪ್ರಜ್ಞೆ ತೋರಿ ಪ್ರಯಾಣಿಕರ ಪ್ರಾಣ ಉಳಿಸಿದ ಬಿಎಂಟಿಸಿ ಸಿಬ್ಬಂದಿಗೆ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಬಹುಮಾನ ವಿತರಿಸಿದರು

ಇವರ ಮೂಲಕ ಒಂದು ಉಪಕ್ರಮ
Apollo DIAGNOSTICS & Horlicks Women's PLUS
ಅಂದಾಜು 90% ಮಹಿಳೆಯರಿಗೆ ವಿಟಮಿನ್ ಡಿ ಯ ಕೊರತೆ ಇದೆ. ಇದು ಮೂಳೆ ಸಾಂದ್ರತೆಯ ನಷ್ಟಕ್ಕೆ ಕಾರಣವಾಗಬಹುದು
ಪಡೆಯಿರಿ ವಿಟಮಿನ್ ಡಿ ಪರೀಕ್ಷೆ
~~₹1850~~ ಕೇವಲ ₹199 ನಲ್ಲಿ
ಯಾವುದೇ ಅಪೊಲೊ ಡಯಾಗ್ನೋಸ್ಟಿಕ್ಸ್ ಪೇಷಂಟ್ ಕೇರ್ ಸೆಂಟರ್ ಅಥವಾ ಅಪೊಲೊ ಕ್ಲಿನಿಕ್ಸ್‌ಗೆ ಬನ್ನಿ ಮತ್ತು ಪರೀಕ್ಷೆ ಮಾಡಿಸಿಕೊಳ್ಳಿ
ಹೆಚ್ಚಿನ ವಿವರಗಳಿಗಾಗಿ 040 4444 2424 ಅನ್ನು ಡಯಲ್ ಮಾಡಿ

ಕ್ರಿಯಾತ್ಮಕ ದೃಶ್ಯೀಕರಣ. ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. Garg R et al. Int J Reprod Contracept Obstet Gynecol. 2018 Jun;7(6):2222-2225. 30 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರಿಗೆ ಅನ್ವಯಿಸುತ್ತದೆ. *ಎಲ್ಲಾ ಅಪೊಲೊ ಕ್ಲಿನಿಕ್ಸ್ ಮತ್ತು ಅಪೊಲೊ ಡಯಾಗ್ನೋಸ್ಟಿಕ್ ಸೆಂಟರ್‌ಗಳಲ್ಲಿ ವಾಕ್-ಇನ್ ಪರೀಕ್ಷೆಗಳಿಗೆ ಅನ್ವಯಿಸುತ್ತದೆ. ಹೋಮ್ ಸ್ಯಾಂಪಲ್ ಸಂಗ್ರಹಣೆಗಾಗಿ ಹೆಚ್ಚುವರಿ 50 ರೂಗಳನ್ನು ವಿಧಿಸಲಾಗುತ್ತದೆ ನಗರಗಳಾದ್ಯಂತ ಬೆಲೆಗಳು ಬದಲಾಗಬಹುದು.* ಯಾವುದೇ ಸಕ್ಕರೆ ಸೇರಿಸಲಾಗಿಲ್ಲ, ಸಕ್ಕರೆ ಎನ್ನುವುದು ಸುಕ್ರೋಸ್ ಅನ್ನು ಸೂಚಿಸುತ್ತದೆ, ಇದು ಪ್ರಾಕೃತಿಕವಾಗಿ ದೊರೆಯುವ ಸಕ್ಕರೆ ಹೊಂದಿದೆ. Offer valid from 15th Nov 2023 to 31st Dec 2023.
ಇದು ಆಸೆಸಲ್ಫೇಮ್ ಪೊಟ್ಯಾಷಿಯಂ ಹೊಂದಿದೆ. ಮಕ್ಕಳು, ಗರ್ಭಿಣಿಯರು ಅಥವಾ ಹಾಲುಣಿಸುವ ಮಹಿಳೆಯರಿಗೆ ಶಿಫಾರಸ್ಸು ಮಾಡಲಾಗಿಲ್ಲ.
ಕ್ಯಾಲೊರಿ ರಹಿತ ಸಿಹಿಕಾರಕ ಹೊಂದಿದೆ.

ಮೂರು ತಿಂಗಳಾದರೂ ಆದೇಶ ನೀಡದ ತಹಶೀಲ್ದಾರ್‌ಗಳು; ಮುಖ್ಯ ಆಯುಕ್ತರ ಆದೇಶವೂ ನಗಣ್ಯ

ಇನ್ನೂ ಆರಂಭವಾಗದ ಒತ್ತುವರಿ ತೆರವು

• ಆರ್. ಮಂಜುನಾಥ್

ಬೆಂಗಳೂರು: ಕೆರೆಗಳ ಒತ್ತುವರಿ ತೆರವಿಗಾಗಿ ಬಿಬಿಎಂಪಿ ಕಡತ ಸಲ್ಲಿಸಿ 14 ವಾರಗಳು ಕಳೆದರೂ ತಹಶೀಲ್ದಾರ್‌ಗಳಿಂದ ತೆರವು ಕಾರ್ಯಾಚರಣೆಗೆ ಒಂದು ಆದೇಶವೂ ಆಗಿಲ್ಲ.

ಹೈಕೋರ್ಟ್‌ಗೆ ಸಲ್ಲಿಸಲಾಗಿರುವ ಕ್ರಿಯಾಯೋಜನೆಯಂತೆ ಸೆ.5ರಿಂದ ಬಿಬಿಎಂಪಿ ಕೆರೆಗಳ ಮಾಹಿತಿಯನ್ನು ತಹಶೀಲ್ದಾರ್ ಅವರಿಗೆ ಸಲ್ಲಿಸುತ್ತಿದೆ. ಪ್ರತಿ ವಾರ 10 ಕೆರೆಗಳ ಮಾಹಿತಿಯನ್ನು ಕೆರೆಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳು ಆಯಾ ತಹಶೀಲ್ದಾರ್‌ಗಳಿಗೆ ಸಲ್ಲಿಸುತ್ತಿದ್ದಾರೆ.

ಕ್ರಿಯಾಯೋಜನೆಯಂತೆ 16 ವಾರಗಳಲ್ಲಿ 159 ಕೆರೆಗಳ ಒತ್ತುವರಿ ತೆರವು ಪ್ರಕ್ರಿಯೆ ಆರಂಭವಾಗಬೇಕು. ಪ್ರತಿ ವಾರ 10 ಕೆರೆಗಳಂತೆ 16 ವಾರಗಳಲ್ಲಿ 159 ಕೆರೆಗಳ ಒತ್ತುವರಿ ಮಾಹಿತಿಯನ್ನು ಬಿಬಿಎಂಪಿ ಅಧಿಕಾರಿಗಳು ತಹಶೀಲ್ದಾರ್‌ಗಳಿಗೆ ಸಲ್ಲಿಸಬೇಕು. ಇದರಂತೆ ಈಗಾಗಲೇ 14 ವಾರಗಳ 140 ಕೆರೆಗಳ ಪಟ್ಟಿಯನ್ನು ಸಲ್ಲಿಸಲಾಗಿದೆ.

ಮೊದಲ ವಾರದ ಕೆರೆಗಳ ಒತ್ತುವರಿ ಮಾಹಿತಿ ಸಲ್ಲಿಸಿ 90 ದಿನಗಳಾಗಿವೆ. ಎರಡನೇ ವಾರ ಹಾಗೂ ಮೂರನೇ ವಾರದ ಮಾಹಿತಿ ಸಲ್ಲಿಸಿ 70 ದಿನಗಳಾಗಿವೆ. ಈ ವೇಳೆಗೆ ಎಲ್ಲ ಪ್ರಕ್ರಿಯೆ ಮುಗಿದು ಕನಿಷ್ಠ 30 ಕೆರೆಗಳಲ್ಲಿ ಒತ್ತುವರಿ ಪೂರ್ಣ ತೆರವಾಗಬೇಕಿತ್ತು. ಆದರೆ, ತಹಶೀಲ್ದಾರ್‌ಗಳು ಒತ್ತುವರಿ ತೆರವಿಗೆ ಆದೇಶ ನೀಡುವ ಪ್ರಕ್ರಿಯೆಯನ್ನೇ ಆರಂಭಿಸಿಲ್ಲ.

ಮುಖ್ಯಾಂಶಗಳು

- ಹೈಕೋರ್ಟ್‌ಗೆ ಸಲ್ಲಿಸಿದ್ದ ಕ್ರಿಯಾಯೋಜನೆ ಅವಧಿ ಅಂತಿಮ ಘಟ್ಟಕ್ಕೆ
- 70 ದಿನಗಳಲ್ಲಿ ಒತ್ತುವರಿ ತೆರವು ಪ್ರಕ್ರಿಯೆ ಮುಗಿಯಬೇಕು
- ಬಿಬಿಎಂಪಿಯಿಂದ 140 ಕೆರೆಗಳ ಒತ್ತುವರಿ ಮಾಹಿತಿ ಸಲ್ಲಿಕೆ

'ಹೈಕೋರ್ಟ್‌ಗೆ ಸಲ್ಲಿಸಲಾಗಿರುವ ಕ್ರಿಯಾಯೋಜನೆಯಂತೆ ಬಿಬಿಎಂಪಿ ವತಿಯಿಂದ ಪ್ರತಿ ವಾರವೂ 10 ಕೆರೆಗಳ ಮಾಹಿತಿಯನ್ನು ಒದಗಿಸಲಾಗಿದೆ. ಇನ್ನು ಎರಡು ವಾರದಲ್ಲಿ 16 ವಾರಗಳ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಆದರೆ, ಈವರೆಗೂ ಕೆರೆಗಳ ಒತ್ತುವರಿ ತೆರವಿಗೆ ತಹಶೀಲ್ದಾರ್‌ಗಳಿಂದ ನಮಗೆ ಯಾವುದೇ ಆದೇಶ ಬಂದಿಲ್ಲ' ಎಂದು ಬಿಬಿಎಂಪಿ ಕೆರೆ ವಿಭಾಗದ ಅಧಿಕಾರಿಗಳು ತಿಳಿಸಿದರು.

'ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಜಿಲ್ಲಾಧಿಕಾರಿ ದಯಾನಂದ್ ಹಾಗೂ ತಹಶೀಲ್ದಾರ್‌ಗಳೊಂದಿಗೆ ಸಭೆ ನಡೆಸಿ, 'ಕೆರೆ ಹಾಗೂ ರಾಜಕಾಲುವೆ ಒತ್ತುವರಿ ತೆರವಿಗೆ ಆದೇಶ ಪ್ರಕ್ರಿಯೆಗಳನ್ನು ಅವಧಿಯೊಳಗೆ ಪೂರ್ಣಗೊಳಿಸಬೇಕು' ಎಂದು ತಾಕೀತು ಮಾಡಿದ್ದರು. ಇದಾದ ನಂತರವೂ ತಹಶೀಲ್ದಾರ್‌ಗಳಿಂದ ವಿಚಾರಣೆ ಅಥವಾ ತೆರವು ಕಾರ್ಯಾಚರಣೆಗೆ ಆದೇಶ ನೀಡುವ ಪ್ರಕ್ರಿಯೆ ನಡೆದಿಲ್ಲ' ಎಂದು ಅಧಿಕಾರಿಗಳು ಹೇಳಿದರು.

'ಯಲಹಂಕ, ದಾಸರಹಳ್ಳಿ ವಲಯದ ಕೆಲವು ಕೆರೆಗಳ ಸರ್ವೆ ಕಾರ್ಯ ನಡೆಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ಅಧಿಕೃತವಾಗಿ ಯಾವುದೇ ಆದೇಶ ಅಥವಾ ಮಾಹಿತಿ ತಹಶೀಲ್ದಾರ್ ಕಚೇರಿಗಳಿಂದ ಬಿಬಿಎಂಪಿಗೆ ಬಂದಿಲ್ಲ' ಎಂದು ಮಾಹಿತಿ ನೀಡಿದರು.

'ಒತ್ತುವರಿ ಗುರುತು, ಸರ್ವೆಗೆ ಸಿಬ್ಬಂದಿ ಕೊರತೆ ಎಂದು ಹೇಳುತ್ತಾರೆ. ಎಲ್ಲ ಇಲಾಖೆಯಲ್ಲೂ ಸಿಬ್ಬಂದಿ ಕೊರತೆ ಇದ್ದೇ ಇದೆ. ಸುಮಾರು 200 ಕೆರೆಗಳ ಜವಾಬ್ದಾರಿ ಹೊತ್ತಿರುವ ಬಿಬಿಎಂಪಿ ಕೆರೆಗಳ ವಿಭಾಗದಲ್ಲಿ 15 ಸಿಬ್ಬಂದಿ ಮಾತ್ರ ಇದ್ದಾರೆ. ನಾವೂ ಎಲ್ಲ ಕೆಲಸ ಮಾಡುತ್ತಿಲ್ಲವೇ? ಒತ್ತಡ ನಮಗಿಲ್ಲವೇ? ಕ್ರಿಯಾಯೋಜನೆಯಂತೆ ಕೆಲಸವಾಗದಿದ್ದರೆ ಹೈಕೋರ್ಟ್ ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ನಮಗೂ ಒತ್ತಡ ಇದೆ ಅಲ್ಲವೇ' ಎಂದು ಎಂಜಿನಿಯರ್‌ಗಳು ಪ್ರಶ್ನಿಸಿದರು.

ಭೂಗಳ್ಳರಿಗೆ ರಕ್ಷಣೆ: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆರೆಗಳ ಒತ್ತುವರಿ ತೆರವಿಗೆ ಹೈಕೋರ್ಟ್ ಸೂಚನೆ ಇದ್ದರೂ ತಹಶೀಲ್ದಾರ್‌ಗಳ ಮಟ್ಟದಲ್ಲಿ ಇದೀಗ ವಿಳಂಬ ಧೋರಣೆ ಇದೆ. ಭೂಗಳ್ಳರಿಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ನಿಧಾನಗತಿ ಅನುಸರಿಸುತ್ತಿದ್ದಾರೆ' ಎಂದು ಪರಿಸರ ಕಾರ್ಯಕರ್ತ ಟಿ.ಇ. ಶ್ರೀನಿವಾಸ್ ದೂರಿದರು.

ಚಿಕ್ಕಬೆಳ್ಳಂದೂರು ಕೆರೆಯ ಒಂದು ಭಾಗದಲ್ಲಿ ಕಲ್ಲು–ಮಣ್ಣು ತುಂಬಿ ಮಟ್ಟ ಮಾಡಿರುವುದು

ಗಡಿ ಗುರುತಿಸಬೇಕು: ಜಿಲ್ಲಾಧಿಕಾರಿ

'ನಮ್ಮಲ್ಲಿ ಎಲ್ಲಾ ಕೆರೆಗಳ ಅಳತೆಯನ್ನು ಹಿಂದೆಯೇ ಮಾಡಿದ್ದೇವೆ. ಈಗ ಒತ್ತುವರಿ ತೆರವಿಗೆ ಗಡಿ ಗುರುತಿಸಿಕೊಡಬೇಕಷ್ಟೆ' ಎಂದಷ್ಟೇ ಜಿಲ್ಲಾಧಿಕಾರಿ ದಯಾನಂದ್ ಪ್ರತಿಕ್ರಿಯಿಸಿದರು.

'ಹೈಕೋರ್ಟ್ ಆದೇಶದಂತೆ ಕ್ರಿಯಾಯೋಜನೆಯಂತೆ ಪ್ರಕ್ರಿಯೆ ನಡೆಯುತ್ತಿಲ್ಲ. ಮೂರು ತಿಂಗಳಾದರೂ ತೆರವಿನ ಆದೇಶವಾಗಿಲ್ಲ ಏಕೆ' ಎಂಬ ಪ್ರಶ್ನೆಗೆ ದಯಾನಂದ್ ಉತ್ತರಿಸಲಿಲ್ಲ.

'ಎಲ್ಲ ಕೆರೆಗಳಿಗೂ ನೋಡಲ್ ಅಧಿಕಾರಿ ಬೇಕು'

ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ವಹಣೆ, ಮೇಲುಸ್ತುವಾರಿ ಅಗತ್ಯವಿರುವ ಕೆರೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸದಿರುವ ಬಗ್ಗೆ ನಾಗರಿಕರಿಂದ ಆಕ್ಷೇಪ ವ್ಯಕ್ತವಾಗಿದೆ. ಕೆಲವು ಕೆರೆಗಳ ಒತ್ತುವರಿಗೆ ಅನುವಾಗಲೆಂದೇ ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿಲ್ಲ ಎಂದು ದೂರಿದ್ದಾರೆ.

'ನಗರದಲ್ಲಿರುವ 159 ಕೆರೆಗಳಲ್ಲಿ ಒತ್ತುವರಿ ಇದೆ ಎಂದು ಬಿಬಿಎಂಪಿ ಹೈಕೋರ್ಟ್‌ಗೆ ಸಲ್ಲಿಸಿರುವ ಕ್ರಿಯಾಯೋಜನೆಯಲ್ಲೇ ಅವುಗಳ ಪಟ್ಟಿ ಇದೆ. ಆದರೆ, ಈ ಎಲ್ಲ ಕೆರೆಗಳಿಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿಲ್ಲ' ಎಂದು ಪರಿಸರ ಕಾರ್ಯಕರ್ತ ಗೌಡಯ್ಯ ದೂರಿದರು.

ಕೆರೆಯ ನಡುವೆಯೇ ರಸ್ತೆ ಮಾಡಿದ್ದ ಹೊಸಕೆರೆಹಳ್ಳಿ ಕೆರೆ, ಕರಿಹೋಬನಹಳ್ಳಿ, ಕನ್ನಲ್ಲಿ, ಚಿಕ್ಕಬೆಳ್ಳಂದೂರು, ದೊಡ್ಡ ಬಿದರಕಲ್ಲು, ನರಸಪ್ಪನಹಳ್ಳಿ, ನೆಲಗೆದರನಹಳ್ಳಿ, ಲಕ್ಷ್ಮಿಪುರ ಸೇರಿದಂತೆ 19 ಕೆರೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ಕೆರೆಗಳಿಗೂ ಮೇಲುಸ್ತುವಾರಿಗೆ ಅಧಿಕಾರಿಗಳನ್ನು ನೇಮಿಸಬೇಕು ಎಂದು ಆಗ್ರಹಿಸಿದರು.

'ಕಾರ್ಯಪಾಲಕ ಎಂಜಿನಿಯರ್‌ಗಳ ಸಲಹೆ ಮೇರೆಗೆ 140 ಕೆರೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಇದು ಅಂತಿಮವಲ್ಲ, ಪರಿಷ್ಕರಣೆಗೆ ಅವಕಾಶವಿದೆ. ಎಲ್ಲ ಕೆರೆಗಳಿಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲು ಪ್ರಯತ್ನಿಸಲಾಗುತ್ತದೆ' ಎಂದು ಕೆರೆಗಳ ವಿಭಾಗದ ಅಧಿಕಾರಿಗಳು ತಿಳಿಸಿದರು.

ಮಾರ್ಷಲ್ ಸೇವೆ: ಸಮಿತಿ ರಚನೆ

ಬೆಂಗಳೂರು: ಬಿಬಿಎಂಪಿ ಘನತ್ಯಾಜ್ಯ ವಿಭಾಗದಲ್ಲಿ ಮಾರ್ಷಲ್ ಸಿಬ್ಬಂದಿ ಸೇವೆ ಅಗತ್ಯದ ಕುರಿತಂತೆ ಪರಿಶೀಲನೆ ನಡೆಸಿ, ವರದಿ ನೀಡಲು ಹಿರಿಯ ಅಧಿಕಾರಿಗಳ ಸಮಿತಿ ರಚಿಸಲಾಗಿದೆ.

ಆರೋಗ್ಯ ವಿಭಾಗದ ವಿಶೇಷ ಆಯುಕ್ತರು ಅಧ್ಯಕ್ಷರಾಗಿರುವ ಸಮಿತಿಯಲ್ಲಿ ಆಡಳಿತ, ಹಣಕಾಸು, ಯೋಜನೆಯ ವಿಶೇಷ ಆಯುಕ್ತರು, ಘನತ್ಯಾಜ್ಯ ನಿರ್ವಹಣೆ ವಿಭಾಗದ ಜಂಟಿ ಆಯುಕ್ತರು, ಮುಖ್ಯ ಆರೋಗ್ಯಾಧಿಕಾರಿ ಸದಸ್ಯರಾಗಿದ್ದು, ಆಡಳಿತದ ಉಪ ಆಯುಕ್ತರು ಸಮನ್ವಯಾಧಿಕಾರಿಯಾಗಿದ್ದಾರೆ.

ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಮಾರ್ಷಲ್‌ಗಳನ್ನು ಮುಂದುವರಿಸಬೇಕೇ, ಅದರ ಅಗತ್ಯವಿದೆಯೇ ಎಂಬ ಸಮಗ್ರ ವರದಿಯನ್ನು ನೀಡಬೇಕು ಎಂದು ಮುಖ್ಯ ಆಯುಕ್ತರು ಸಮಿತಿಗೆ ಸೂಚಿಸಿದ್ದಾರೆ.

'ಮಾರ್ಷಲ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ, ಅವರ ಸೇವೆಯಿಂದ ಪಾಲಿಕೆಗೆ ಯಾವುದೇ ಪ್ರಯೋಜನ ಇಲ್ಲ. ಇವರಿಗೆ ವೇತನ ಪಾವತಿ ಮಾಡುತ್ತಿರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ. ಇವರ ಸೇವೆ ಸ್ಥಗಿತೊಳಿಸಬೇಕು' ಎಂದು ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್.ಆರ್ ಅವರು ಸಲ್ಲಿಸಿದ್ದ ಪತ್ರವನ್ನು ಉಲ್ಲೇಖಿಸಿ ಸಮಿತಿ ರಚನೆ ಮಾಡಲಾಗಿದೆ.

'ಪಾಲಿಕೆಯಲ್ಲಿ 750 ಮಾರ್ಷಲ್‌ಗಳನ್ನು ಬಳಸಿಕೊಂಡು ಘನತ್ಯಾಜ್ಯ ನಿರ್ವಹಣೆ ವಿಭಾಗ, ಇಂದಿರಾ ಕ್ಯಾಂಟೀನ್, ವರ್ತೂರು ಮತ್ತು ಬೆಳ್ಳಂದೂರು ಕೆರೆಗಳಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಲಾಗುತ್ತಿದೆ. ಇದು ಸತ್ಯಕ್ಕೆ ದೂರವಾಗಿದ್ದು, ಪ್ರತಿ ವರ್ಷ ಕೋಟ್ಯಂತರ ರೂಪಾಯಿ ವಂಚನೆ ನಡೆಯುತ್ತಿದೆ. ಈ ಬಗ್ಗೆ ತನಿಖೆ ನಡೆಸಬೇಕು ಎಂದು ರಮೇಶ್ ಕೋರಿದ್ದರು.

ವೃಷಭಾವತಿಗೆ ತ್ಯಾಜ್ಯ: ಅಪಾರ್ಟ್‌ಮೆಂಟ್‌ಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 900 ಫ್ಲ್ಯಾಟ್‌ಗಳ ಮಿಶ್ರಿತ ತ್ಯಾಜ್ಯವನ್ನು ವೃಷಭಾವತಿ ಕಣಿವೆಗೆ ಸುರಿಯುತ್ತಿದ್ದ ಪ್ರೆಸ್ಟೀಜ್ ಬಾಗಮನೆ ಟೆಂಪಲ್ ಬೆಲ್ಸ್ ಅಪಾರ್ಟ್‌ಮೆಂಟ್‌ಗೆ ಬಿಬಿಎಂಪಿ ₹25 ಸಾವಿರ ದಂಡ ವಿಧಿಸಿದೆ.

ರಾಜರಾಜೇಶ್ವರಿ ನಗರದ ಜವರೇಗೌಡದೊಡ್ಡಿ ಮುಖ್ಯರಸ್ತೆಯಲ್ಲಿರುವ ಪ್ರೆಸ್ಟೀಜ್ ಬಾಗಮನೆ ಟೆಂಪಲ್ ಬೆಲ್ಸ್ ಅಪಾರ್ಟ್‌ಮೆಂಟ್‌ನಲ್ಲಿ 900ಕ್ಕೂ ಅಧಿಕ ಫ್ಲ್ಯಾಟ್‌ಗಳಿವೆ. ಇಲ್ಲಿ ತ್ಯಾಜ್ಯವನ್ನು ವಿಂಗಡಿಸದೆ ಒಂದು ಬಿನ್‌ನಲ್ಲಿ ಎಲ್ಲ ಕಸವನ್ನು ಸಂಗ್ರಹಿಸಲಾಗುತ್ತಿದೆ ಎಂದು ತೋರಿಸಲಾಗುತ್ತಿತ್ತು.

ಬಿಬಿಎಂಪಿ ತಪಾಸಣೆ ನಡೆಸಿದ ಸಂದರ್ಭದಲ್ಲಿ, ಯಾವುದೇ ಅನುಮತಿ ಪಡೆಯದ ವ್ಯಕ್ತಿಗೆ ಮಿಶ್ರಿತ ತ್ಯಾಜ್ಯವನ್ನು ನೀಡಲಾಗುತ್ತಿತ್ತು. ಅಪಾರ್ಟ್‌ಮೆಂಟ್‌ನಲ್ಲಿ ಮಿಶ್ರಿತ ತ್ಯಾಜ್ಯವನ್ನು ಪ್ಲಾಸ್ಟಿಕ್ ಬಿನ್‌ಗಳಲ್ಲಿ ತಂದು ಪಕ್ಕದಲ್ಲಿರುವ ವೃಷಭಾವತಿ ಕಣಿವೆಗೆ ಸುರಿಯುತ್ತಿರುವುದನ್ನೂ ಪತ್ತೆ ಮಾಡಲಾಗಿದೆ. ಚಿತ್ರಗಳ ಮೂಲಕ ಇದನ್ನು ದೃಢಪಡಿಸಲಾಗಿದ್ದು, ಕಾನೂನು ಉಲ್ಲಂಘಿಸಲಾಗಿದೆ ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನೋಟಿಸ್ ನೀಡಿದ್ದಾರೆ. 'ನಿಯಮದಂತೆ 100 ಕೆ.ಜಿಗಿಂತಲೂ ಹೆಚ್ಚಿನ ಪ್ರಮಾಣದ ತ್ಯಾಜ್ಯ ಉತ್ಪಾದಕರು, ಅವರ ಆವರಣದಲ್ಲೇ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಸಂಸ್ಕರಣೆ ನಡೆಸಬೇಕು. 900 ಫ್ಲ್ಯಾಟ್‌ಗಳಿರುವ ಪ್ರೆಸ್ಟೀಜ್ ಬಾಗಮನೆ ಟೆಂಪಲ್ ಬೆಲ್ಸ್ ಅಪಾರ್ಟ್‌ಮೆಂಟ್‌ನಲ್ಲಿ ಈ ವ್ಯವಸ್ಥೆ ಇಲ್ಲ. ಇಷ್ಟು ತ್ಯಾಜ್ಯವನ್ನು ಒಣ, ಹಸಿ, ಸ್ಯಾನಿಟರಿ ಎಂದು ಪ್ರತ್ಯೇಕವಾಗಿ ಬೇರ್ಪಡಿಸುತ್ತಿಲ್ಲ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಪ್ರಜ್ಞಾವಂತ ನಾಗರಿಕರಾದ ತಾವು ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಉತ್ಪತ್ತಿಯಾಗುವ ಎಲ್ಲ ಮಾದರಿ ತ್ಯಾಜ್ಯವನ್ನು ಒಂದೇ ಬಿನ್‌ನಲ್ಲಿ ಸಂಗ್ರಹಿಸಿಟ್ಟಿರುತ್ತೀರಿ. ಇದನ್ನು ಸರಿಪಡಿಸಲು ಪಾಲಿಕೆ ನೌಕರರು ಹೇಳಿದ್ದರೂ ಉದಾಸೀನ ತೋರಿದ್ದೀರಿ. ನಿಮ್ಮ ಅಪಾರ್ಟ್‌ಮೆಂಟ್ ತ್ಯಾಜ್ಯವನ್ನು ಅನುಮತಿ ಪಡೆದ ಅಧಿಕೃತ ಸಂಸ್ಕರಣೆ ಘಟಕಕ್ಕೆ ಮಾತ್ರ ನೀಡಬೇಕು. ಈಗ ನೀವು ತ್ಯಾಜ್ಯ ನೀಡುತ್ತಿರುವ ಸಂಸ್ಥೆ ಅನಧಿಕೃತವಾದದ್ದು. ಹೀಗಾಗಿ ದಂಡ ಪಾವತಿಸಬೇಕು' ಎಂದು ಪ್ರೆಸ್ಟೀಜ್ ಬಾಗಮನೆ ಟೆಂಪಲ್ ಬೆಲ್ಸ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘದ ಸಂತೋಷ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. 'ಇದರಂತೆ ₹25 ಸಾವಿರ ದಂಡ ಪಾವತಿಸಿದ್ದಾರೆ. ಮುಂದಿನ ದಿನಗಳಲ್ಲಿ ತ್ಯಾಜ್ಯ ವಿಲೇವಾರಿಯನ್ನು ನಿಯಮಾನುಸಾರ ಮಾಡದಿದ್ದರೆ ವಿದ್ಯುತ್ ಹಾಗೂ ನೀರಿನ ಸಂಪರ್ಕದ ಪರವಾನಗಿ ರದ್ದುಪಡಿಸಲು ಶಿಫಾರಸು ಮಾಡಲಾಗುತ್ತದೆ ಎಂದು ಎಚ್ಚರಿಸಲಾಗಿದೆ' ಎಂದು ಘನತ್ಯಾಜ್ಯ ನಿರ್ವಹಣೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದರು.

ಸುದ್ದಿ 2 ನಿಮಿಷ

ಕೆಎಎಸ್: ಒಂದು ಹೆಚ್ಚುವರಿ ಅವಕಾಶಕ್ಕೆ ಮನವಿ

ಬೆಂಗಳೂರು: 'ಕೆಪಿಎಸ್‌ಸಿ, 276 ಕೆಎಎಸ್ ಹುದ್ದೆಗಳಿಗೆ ಶೀಘ್ರವೇ ಅಧಿಸೂಚನೆ ಹೊರಡಿಸುವ ಸಾಧ್ಯತೆಯಿದ್ದು, 2011ರಲ್ಲಿ ಕೆಎಎಸ್ ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯನ್ನು ಪರಿಗಣಿಸದೆ ಒಂದು ಹೆಚ್ಚುವರಿ ಅವಕಾಶ ನೀಡಬೇಕು' ಎಂದು ರಾಜ್ಯ ದಲಿತ ಪದವೀಧರರ ಸಂಘವು ಆಗ್ರಹಿಸಿದೆ.

'2019ರಲ್ಲಿ ಕೋವಿಡ್ ಕಾರಣಕ್ಕೆ ಹಿಂದಿನ ಸರ್ಕಾರ ಆರ್ಥಿಕ ಬಿಕ್ಕಟ್ಟಿನ ಸಲುವಾಗಿ ಮೂರು ವರ್ಷಗಳ ಕಾಲ ಹುದ್ದೆಗಳ ನೇಮಕಾತಿ ತಡೆಹಿಡಿಯಲಾಗಿತ್ತು. 2011ರ ಕೆಎಎಸ್‌ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಎರಡು ಬಾರಿ ಹಾಗೂ ಹೈಕೋರ್ಟ್ ಮೂರು ಬಾರಿ ತೀರ್ಪು ನೀಡಿತ್ತು. ಇದರ ವಿರುದ್ಧವಾಗಿ ಸರ್ಕಾರವು 2021ರಲ್ಲಿ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ನೀಡಿತ್ತು. ಆದರೆ, 2011ರಲ್ಲಿ ಪರೀಕ್ಷೆ ಬರೆದು ಅನ್ಯಾಯಕ್ಕೆ ಒಳಗಾದ ಅಭ್ಯರ್ಥಿಗಳಿಗೆ ಸರ್ಕಾರ ಯಾವುದೇ ಸಾಮಾಜಿಕ ನ್ಯಾಯ ನೀಡಿಲ್ಲ' ಎಂದು ಸಂಘದ ಅಧ್ಯಕ್ಷ ವಿ. ಲೋಕೇಶ್ ದೂರಿದ್ದಾರೆ.

ಕಳೆದ 9 ವರ್ಷಗಳಿಂದ ಕೆಎಎಸ್ ಹುದ್ದೆಗಳನ್ನು ಭರ್ತಿ ಮಾಡದೆ ವಿಳಂಬ ಮಾಡಲಾಗಿದೆ. ಕೆಎಎಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಒಂದು ಹೆಚ್ಚುವರಿ ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದರೂ ಕ್ರಮ ಕೈಗೊಂಡಿಲ್ಲ. ಈಗಲಾದರೂ ಒಂದು ಹೆಚ್ಚುವರಿ ಅವಕಾಶ ನೀಡುವಂತೆ ಅವರು ಆಗ್ರಹಿಸಿದ್ದಾರೆ.

ಅಮೃತ ಮಹೋತ್ಸವದ ಲಾಂಛನ ಬಿಡುಗಡೆ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ 75ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಸಂಘದ ಅಮೃತ ಮಹೋತ್ಸವದ ಲಾಂಛನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಂಗಳವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, 'ಪತ್ರಿಕೋದ್ಯಮ ಸಂವಿಧಾನದ ನಾಲ್ಕನೇ ಅಂಗ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸುವುದರಲ್ಲಿ ಪತ್ರಕರ್ತರ ಪಾತ್ರ ಮುಖ್ಯವಾಗಿದೆ' ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ವ್ಯಂಗ್ಯಚಿತ್ರ ಕಲಾವಿದ ಗುಜ್ಜಾರಪ್ಪ ಅವರು ರಚಿಸಿದ ಕಲಾಕೃತಿ ಹಾಗೂ ಹಿರಿಯ ಛಾಯಾಗ್ರಾಹಕ ವಿಶ್ವನಾಥ್ ಸುವರ್ಣ ಅವರ 'ಕನ್ನಡ ನಾಡಿನ ಬಣ್ಣದ ಬಾನಾಡಿಗಳು' ಚಿತ್ರಕೃತಿಯನ್ನು ಸ್ಮರಣಿಕೆಯಾಗಿ ನೀಡಲಾಯಿತು.

ಸಂಘದ ಅಧ್ಯಕ್ಷರಾದ ರಮೇಶ್ ಪಾಳ್ಯ, ಉಪಾಧ್ಯಕ್ಷ ದೊಡ್ಡಬೊಮ್ಮಯ್ಯ, ಖಜಾಂಚಿ ಮೋಹನ್ ಕುಮಾರ್, ನಿರ್ದೇಶಕರಾದ ಎಂ.ಎಸ್. ರಾಜೇಂದ್ರ ಕುಮಾರ್, ವಿನೋದ್ ಕುಮಾರ್ ಬಿ. ನಾಯ್ಕ್, ರಮೇಶ್ ಹಿರೇಜಂಬೂರು, ಧ್ಯಾನ್ ಪೂಣಚ್ಚ, ನಯನಾ ಎಸ್., ವನಿತಾ ಎನ್., ಕೃಷ್ಣಕುಮಾರ್ ಪಿ.ಎಸ್., ಹಾಗೂ ಕಾರ್ಯದರ್ಶಿ ಕೆಂಪರಾಜು, ಸಿಬ್ಬಂದಿಗಳಾದ ಹೇಮಂತ್ ಕುಮಾರ್, ಅನಿತಾ ಜೋಯಿಸ್, ಆನಂದ್ ಭಾಗವಹಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Walk-in

KHIVRAJ — We Are Hiring: CLUSTER MANAGER Service; BRANCH IN CHARGE Service, With Diploma Automobile / Mechanical / Electrical Engineering; SENIOR SERVICE ADVISOR; SENIOR TECHNICIAN with Diploma Automobile / Electrical /Mechanical or ITI Diesel Mechanic, Electrical. Send Resume or Walk-In Interview From 06/12/2023 to 25/12/2023 Between 10:00 A.M. - 4 P.M. KHIVRAJ MOTORS No.10/2 Kasturba Road, Bangalore. Contact No: 9632068104 / 9980673755 E-mail ID – careers@khivraj.com. ATTRACTIVE SALARY AND INCENTIVES

COMMUNITY INSTITUTE OF MANAGEMENT STUDIES. Affiliated to Bengaluru City University, Approved by AICTE - New Delhi. #2/1, Natabhairava Shri V Vajramuni Road, 9th Cross, 9th Main, 2nd Block, Jayanagar, Bengaluru - 560011. Website: www.cimsbschool.org Phone: 080 26577851. Invites Applications for ASSOCIATE PROFESSOR FOR MBA / ASSISTANT PROFESSOR FOR MCA. Faculty required for Department of MBA & MCA. MBA/MCA/M.Tech candidates with NET/SLET/Ph.D can apply. Interested candidates may send their detailed CV along with photocopies of Marks Card / Certificates of Work experience etc., to the above address by post or email to cimsbangalore@gmail.com within 7 days from the date of notification. Note: Application should possess AICTE prescribed qualification and experience. SC/ST candidates preferred as per norms. Salary as per norms. Sd/- Secretary

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REQUIRED FOR Jewellery Showroom @Basaveshwara Nagar Sales staff & Designer Male/Female Fresher/ Experienced WhatsApp resume @9019158585

SHARANYATELTRONICS requires SALES, ACCOUNTS, OFFICE EXECUTIVES. Call 9845010634 or email rajendiran@sharanyateltronics.com

WANTED — MANAGER REQUIRED for Owner's Association of a prestigious Multistoried Commercial Building on M.G.Road, Bangalore. Candidate should be with adequate knowledge and experience in Managing and Co-ordinating activities of Building maintenance, Administration, Security, Accounts (Billing/ Collection/ Banking/ Taxes/ Audit), etc. He should have good communication skill in English, Kannada, etc. Total Salary can be about Rs. 4 to 5 Lakhs per annum depending upon the caliber of the candidate. Apply immediately with Bio-Date and mentioning salary expected to email ID: 1991bcoa@gmail.com

WANTED — Required 2 to10 years experienced Civil Site Engineers to work in South India & Meghalaya, 2 to 5 years Experienced Male/ Female Civil Quantity Surveyor to work at Bangalore Office. Send Your Resume to jjcbangalore @ rediffmail.com

HRD & Admin

IMPACT INSTITUTIONS Sahakara Nagar, Bangalore. WANTED SECRETARIAL ASSISTANCE. Reporting to Director, with good knowledge of English and computer based word-processing, drafting and editing skills.... Persons with appropriate experience can apply. Call: 94487 48297 To schedule your interviews. IMP-23415

Teachers/ Professors

REQ IT Trainer info@utltechnologies.com 7483557350, 6362692937

REQUIRED — Wanted Lecturers in Pharmacy. Candidates with M.Pharm / B.Pharm qualifications. May apply to the Valley College of Pharmacy, 21st Main, J.C.Nagar, Kurubarahalli, Bengaluru-560086 Email: kret@rediffmail.com

BEST OF best NCC, PE, Science, Maths, Social Science, Kannada, Hindi, English teachers for CBSE School (nursery, primary& Secondary) DOI 09.12.2023, 11AM. 9449835744, 9535601743

SRI VIDYA MANDIR EDUCATIONAL INSTITUTIONS. 11th Cross, West Park Road, Malleswaram, Bengaluru – 560 003. Tel. No. 080-23449671. REQUIRED QUALIFIED AND EXPERIENCED TEACHERS IN THE FOLLOWING DEPARTMENT FOR THE ACADEMIC YEAR 2024 – 2025

VIDYA MANDIR IND. P.U. COLLEGE	English
HIGH SCHOOL	Hindi, English, Social Science, Physics & Computer Science
HIGHER PRIMARY	Biology & English
LOWER PRIMARY	EVS & Mathematics

Application along with resume to be submitted to the above address by post/in person before 13.12.2023. Principal

OM SHANTIDHAMA VEDA PATHASHALA. Affiliated to MSRVVP, Ministry of Education, Govt. of India, Ujjain. Room No: 03, Sy No: 58 & 67, Kanthalahanapalya, Pipeline Road, Kaggalipura, Bangalore - 560 116. Ph: 08861069640. TEACHERS REQUIRED. 1. Sanskrit + Social - 1 post, Min. age 25 years along with 1 year exp. Qualification: BA (Sanskrit) or Shastri (in tradition method) and knowledge in any of the following Subjects: History, Geography, Political Science, Psychology, Anthropology, Social Studies and Social work. Candidates with Basic knowledge of Yoga and Comp are required. Preference will be given to M.A (Sanskrit) / Acharya / B.Ed. Monthly Honorarium. Rs. 30,000/- (Rupees Thirty Thousand along with food & accommodation). 2. English + Mathematics - 1 post, Min. age 25 years along with 1 year exp. Qualification: B.Sc (Mathematics), PCM Group / B.A (English) along with Mathematics in Graduation. Preference will be given to M.Sc (Mathematics) / B.Ed. Monthly Honorarium. Rs. 25,000/- (Rupees Twenty Five Thousand along with food & accommodation). Interested candidates please apply on or before 21.12.2023 with Resumes to: Email - osdsociety@gmail.com.

Graphic Designers

WANTED GRAPHIC Designer Expireinced in Corel Draw in and around Rajajinagar Contact: 9108458798/ 080 -23384085

WANTED FOR Reputed company Graduates age-30-70, Bangalore only. Earn: 30,000- 50,000. Contact: 9008305194/ 9880441530.

Engg/ Production Technical

WANTED CIVIL Engineers with minimum 5to10 years Experience for Navami. Mail your resume: navamigrous@gmail.com

Multiple Vacancy

ARVIND PROPERTIES. No. 361/C, 1st Floor, 2nd Main Road Nagarabhavi 2nd Stage 7th Block, Bangalore-560072. Mobile: 9998608666 www.arvindproperties.com. REQUIRED TRAINED & EXPERIENCED Telecallers, Office Assistants, Marketing Executives, Receptionists. With good communication skills. Attractive Salary. Send your resume with recent passport size photo to info@arvindproperties.com before 13/12/2023

General

BEST JOBS in best organisations with best Salary. All categories. bengaluru jobs. Quickest ever Placement system. Just Misscall 24/7: 99000-54468

GAUTHAM COLLEGE of Pharmacy Required Qualified librarian for pharmacy college (According to the norms of RGUHS & BEA) in Bhuvaneshwari Nagar, Bangalore– 560032 Send your resume to gauthamcollege@gmail.com, Walk-In interview on 7th & 8th December 2023 between 11:00 am to 04:00 pm. Contact no: 080-23639720/ 080- 23334828

WE ARE an AS 9100 certified Mechanical Engineering company. We are looking for the following MACHINE OPERATORS: (1) Jig Grinding (2) Gear Grinding (3) Internal/ External Grinding. (4) VMC Machine and Machine Shop Supervisor. Qualification: ITI/Diploma. Contact: 9620227324

CAUTION NOTICE: Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers. Advertisement Manager, The Printers (Mysore) Pvt. Ltd. Bengaluru

WANTED SERVICE MECHANIC/ TECHNICIAN. For a Hydraulic Company. Experience of 2- 3 years in a hydraulic company is preferable. Responsibilities: Repair and Rectification of Cylinder/ Jack/ Power Pack/ Pumps/ MHE etc.Walk-in Interview between 10 am to 5 pm. PACKING & DISPATCH ASSISTANT also wanted. Contact: VANDEC 47 RAR Mansion 1st Main Road Chamrajpet Bangalore- 560018. Call: 8217843233. Email: vandec.office@gmail.com

Accounts & Finance

WANTED ACCOUNTS ASSISTANT (Female) with minimum 2 years experience in Tally and having good communication skills in English and local languages for a company at Koramangala. Interested candidates can Contact: 6366171852

PERSONAL

Change of Name

CHANGE OF NAME: I, MOHAMMED AJMAL, Residing at No. 49, Flat No.101, "Alphine Manor Apartment", 1st Floor, Vivani Road, Richards Town, Bangalore-560005, declare that my name is wrongly mentioned in my Son's MOHAMED ALI School Records as MOHAMED AJMAL instead of MOHAMMED AJMAL vide affidavit date 28.11.2023 before Notary S. Jayanna, Bangalore.

I, N.R Raghavendran. S/o Late N Ranganathan, aged about 42years, residing at Sampreet, 1st Cross, Jayanagar, Kolar 563101. Have changed my name to Chandan vide affidavit dated 29.12.2018 before Notary Venkataswamy Kolar. Henceforth I shall be called as Chandan only.

CHANGE OF NAME: I, RAHAMATHUNNISSA W/o. MOHAMMED SAFDER Residing at No. 521, 1st Main Road, Upper Street, Kengeri, Bangalore-560060, have changed my name to RAHMATH UNNISA W/o. Late. Mohamed Safder, vide affidavit dated 02/12/2023, before notary Ravi, Bangalore

CHANGE OF NAME: I, MOHAMMED AJMAL, Residing at No. 49, Flat No.101, "Alphine Manor Apartment", 1st Floor, Vivani Road, Richards Town, Bangalore-560005, declare that my name is wrongly mentioned in my Son's MOHAMED ZAYAN School Records as MOHAMED AJMAL instead of MOHAMMED AJMAL vide affidavit date 28.11.2023 before Notary S. Jayanna, Bangalore.

SANTHA KUMAR P, 15427587N, NK, Residing at- V.Ramapuram, Veerichettypalli, Gudiyattam, Vellore, Tamil Nadu father's name changed from Pichandi to G Picchandi & Mother's name from Dhana Lakshmi to V Dhana Lakshmi, 01/12/2023, Notary K. Moganaraju, Gudiyattam, Vellore

NAGARAJU M. #901, Ambedkar Colony, Attibele-562107, have changed my name to NAGARAJ Vide affidavit dated- 05/12/2023

I, NAVEENRAJ, changed my name-to NAVEEN RAJ NATARAJ dated:01-12-2023. Sworn before notary H.S.Sakalesh Aradhya, Bengaluru

I, SWATHY D. W/o Raghavendran N.R, aged about 39 years, residing at Sampreet, 1st Cross, Jayanagar, Kolar 563101. Have changed my name to Swati vide affidavit dated 12.01.2018 before Notary Venkataswamy Kolar. Henceforth I shall be called as Swati only.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

Machinery & Tools

USED DIE CASTING MACHINES: Buyers of Used Die Casting machines. Name the machine you want. You will get it at competitive price. Email: import@machinetoolsexim.com . WhatsApp: 9590707677

Business to Business

Services

PLASTIC JERRY CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 23.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037887

REAL ESTATE BUYING

Sites

Multiple Locations

ADELIE INTERNATIONAL SCHOOL: A Chain of schoolsbacked by Eduweft group looking to take overmanagement of Preschools, CBSE, CISCE & Residential Schools (Long Lease/ Partnership/ Investment) Looking for multiple locations across Karnataka. Requirement: Excellent Location. Contact: Sumanth Narayan of Eduweft Services Pvt Ltd, Mobile: 9606353036, Email: info@eduweft.com;www.eduweft.com

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ — ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
JOB
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9731810277 | +91 9900428036 | +91 9886213331 | +91 9845114560 | 080-45557163/164

ಕೆಂಪೇಗೌಡ ಬಡಾವಣೆ • 1,246 ಎಕರೆ ಭೂಸ್ವಾಧೀನ ವಿಳಂಬ • ಕಾಮಗಾರಿ ಆಮೆಗತಿ

2024ರ ಒಳಗೆ ಮೂಲಸೌಕರ್ಯ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಗೆ 2024ರ ಡಿಸೆಂಬರ್ ಅಂತ್ಯದೊಳಗೆ ಎಲ್ಲ ಮೂಲಸೌಕರ್ಯ ಒದಗಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಭರವಸೆ ನೀಡಿದರು.

ಬಿಜೆಪಿಯ ಎಸ್. ಸುರೇಶ್ ಕುಮಾರ್ ಪ್ರಶ್ನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರವಾಗಿ ಉತ್ತರಿಸಿದ ಅವರು, '2010ರಲ್ಲಿ (ಬಿಡಿಎ) ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಕಾನೂನು ವ್ಯಾಜ್ಯವೂ ಸೇರಿದಂತೆ ವಿವಿಧ ಕಾರಣಗಳಿಂದಾಗಿ 1,246 ಎಕರೆ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ಇನ್ನೂ ಸಾಧ್ಯವಾಗಿಲ್ಲ. ಆದ್ದರಿಂದ ಕಾಮಗಾರಿ ವಿಳಂಬವಾಗಿದೆ' ಎಂದರು.

'ಬಿಡಿಎ ಕೆಂಪೇಗೌಡರ ಹೆಸರಿಗೆ ಅವಮಾನ ಮಾಡುತ್ತಿದೆ. ಬಡಾವಣೆ ನಿರ್ಮಾಣ ಪೂರ್ಣಗೊಳ್ಳದಿದ್ದರೂ 2017ರಲ್ಲೇ ನಿವೇಶನ ಹಂಚಿಕೆ ಮಾಡಲಾಗಿದೆ. ಖಾಸಗಿ ಬಡಾವಣೆಗಳಿಗಿಂತಲೂ ಹೆಚ್ಚಿನ ದರಕ್ಕೆ ನಿವೇಶನ ಮಾರಾಟವಾಗಿದೆ. ಕುಡಿಯುವ ನೀರು, ವಿದ್ಯುತ್, ಒಳ ಚರಂಡಿ ಸಂಪರ್ಕ ಯಾವ ಸೌಲಭ್ಯವನ್ನೂ ಒದಗಿಸದೆ ನಿವೇಶನ ಮಾಲೀಕರನ್ನು ಹಿಂಸಿಸಲಾಗುತ್ತಿದೆ' ಎಂದು ಸುರೇಶ್ ಕುಮಾರ್ ದೂರಿದರು.

ನಂತರ ಆರಂಭಿಸಿದ ವಿಶ್ವೇಶ್ವರಯ್ಯ ಬಡಾವಣೆಗೆ ಸುಪ್ರೀಂ ಕೋರ್ಟ್ ನಿಗಾ ಇದೆ ಎಂಬ ಕಾರಣಕ್ಕೆ ಎಲ್ಲ ಮೂಲಸೌಕರ್ಯ ಕಲ್ಪಿಸಲಾಗಿದೆ. ಕೆಂಪೇಗೌಡ ಬಡಾವಣೆಯ ನಿವೇಶನ ಮಾಲೀಕರಿಗೆ ಬಿಡಿಎ ಏಕೆ ತಾರತಮ್ಯ ಮಾಡುತ್ತಿದೆ ಎಂದು ಪ್ರಶ್ನಿಸಿದರು.

'ಕೆಂಪೇಗೌಡ ಬಡಾವಣೆಯಲ್ಲಿ 224 ಕಿ.ಮೀ. ರಸ್ತೆ ಆಗಿದೆ. ನಾಲ್ಕು ನೆಲಮಟ್ಟದ ಜಲ ಸಂಗ್ರಹಾಗಾರಗಳು ಮತ್ತು ಎಂಟು ಓವರ್ ಹೆಡ್ ಟ್ಯಾಂಕ್‌ಗಳ ನಿರ್ಮಾಣ ಪೂರ್ಣಗೊಂಡಿದೆ. 2024ರ ಡಿಸೆಂಬರ್ ಅಂತ್ಯದೊಳಗೆ ಎಲ್ಲ ಮೂಲಸೌಕರ್ಯ ಒದಗಿಸಲಾಗುವುದು' ಎಂದು ರಾಮಲಿಂಗಾ ರೆಡ್ಡಿ ಭರವಸೆ ನೀಡಿದರು.

ವಿಧಾನ ಮಂಡಲದಲ್ಲಿ

ನೈಸ್: ಜಮೀನು ವಾಪಸ್‌ಗೆ ಸರ್ವೆ ನಂಬರ್ ಸಮಸ್ಯೆ

ಬೆಳಗಾವಿ: ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನೈಸ್ ಸಂಸ್ಥೆಗೆ ನೀಡಿರುವ 544 ಎಕರೆ ಹೆಚ್ಚುವರಿ ಜಮೀನು ಮರಳಿ ಪಡೆಯಲು ಸರ್ವೆ ನಂಬರ್‌ಗಳ ಹೊಂದಾಣಿಕೆ ಸಮಸ್ಯೆ ಎದುರಾಗಿದೆ ಎಂದು ಸಣ್ಣ ಕೈಗಾರಿಕಾ ಸಚಿವ ಶರಣ ಬಸಪ್ಪ ದರ್ಶನಾಪುರ ಹೇಳಿದರು.

ಮಂಗಳವಾರ ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಂ.ಪಿ. ಮುನಿರಾಜು ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹೆಚ್ಚುವರಿ ಜಮೀನು ಹಿಂದಕ್ಕೆ ಪಡೆಯಲು ಮುಖ್ಯ ಎಂಜಿನಿಯರ್‌ಗೆ ಸೂಚಿಸಲಾಗಿತ್ತು. ನೈಸ್ ಸಂಸ್ಥೆ ನಮೂದಿಸಿದ ಜಮೀನು 559 ಎಕರೆ ಇದ್ದು, ಸರ್ವೆ ನಂಬರ್‌ಗಳು ಹೊಂದಾಣಿಕೆಯಾಗುತ್ತಿಲ್ಲ. ಎಲ್ಲ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಲು ಕ್ರಮಕೈಗೊಳ್ಳಲಾಗಿದೆ. ಜಮೀನು ಮರಳಿ ಪಡೆದ ನಂತರ ಯಾವ ಉದ್ದೇಶಕ್ಕೆ ಬಳಸಬೇಕು ಎನ್ನುವ ಕುರಿತು ನಿರ್ಧರಿಸಲಾಗುವುದು ಎಂದರು.

ಶಿವಮೊಗ್ಗ ಒಳಚರಂಡಿ 3 ತಿಂಗಳಲ್ಲಿ ಪೂರ್ಣ: ₹115 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳ್ಳುತ್ತಿರುವ ಶಿವಮೊಗ್ಗ ನಗರ ಸಮಗ್ರ ಒಳಚರಂಡಿ ಯೋಜನೆಯಲ್ಲಿ ಈಗಾಗಲೇ 254 ಕಿ.ಮೀ ಉದ್ದದ ಚರಂಡಿ ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಉಳಿದ ಎಂಟು ಕಿ.ಮೀ. ಮೂರು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಬಿಜೆಪಿಯ ಡಿ.ಎಸ್.ಅರುಣ್ ಪ್ರಶ್ನೆಗೆ ಉತ್ತರಿಸಿದ ಅವರು, ಕಾಮಗಾರಿ ವಿಳಂಬ ಮಾಡಿದ ಗುತ್ತಿಗೆ ಸಂಸ್ಥೆಗೆ ₹27 ಲಕ್ಷ ದಂಡ ವಿಧಿಸಲಾಗಿದೆ ಎಂದರು.

ಬ್ರ್ಯಾಂಡ್ ಬೆಂಗಳೂರು: ಕಾಂಗ್ರೆಸ್–ಬಿಜೆಪಿ ವಾಕ್ಸಮರ

ವಿಧಾನಸಭೆ: 'ಬ್ರ್ಯಾಂಡ್ ಬೆಂಗಳೂರು' ಕಲ್ಪನೆಯಡಿ ರಾಜ್ಯ ಸರ್ಕಾರ ಆರಂಭಿಸಿರುವ ಯೋಜನೆ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ತೀವ್ರ ವಾಕ್ಸಮರಕ್ಕೆ ಕಾರಣವಾಯಿತು.

ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್ 'ಬ್ರ್ಯಾಂಡ್ ಬೆಂಗಳೂರು' ಯೋಜನೆ ಕುರಿತು ಪ್ರಶ್ನೆ ಕೇಳಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪರವಾಗಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಉತ್ತರ ನೀಡಿದರು.

ಸಚಿವರು ಉತ್ತರ ಆರಂಭಿಸುತ್ತಿದ್ದಂತೆಯೇ ಮಧ್ಯ ಪ್ರವೇಶಿಸಿದ ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಸತೀಶ್ ರೆಡ್ಡಿ, ಎಸ್.ಆರ್. ವಿಶ್ವನಾಥ್ ಮತ್ತಿತರರು, 'ಯಾವ ಕಾರಣಕ್ಕಾಗಿ ಈ ಪ್ರಶ್ನೆ ಕೇಳಿದ್ದೀರಿ? ಪ್ರಚಾರ ಕೊಡಿಸುವುದಕ್ಕಾ' ಎಂದು ಛೇಡಿಸಿದರು.

'ಈ ಸರ್ಕಾರ ಬಂದ ನಂತರ ಬೆಂಗಳೂರಿನಲ್ಲಿ ನಯಾಪೈಸೆ ಕಾಮಗಾರಿ ನಡೆದಿಲ್ಲ. ಲೋಡ್ ಶೆಡ್ಡಿಂಗ್, ರಸ್ತೆಗಳ ಗುಂಡಿ, ಸಂಚಾರ ದಟ್ಟಣೆ ಹೆಚ್ಚಾಗಿದೆ. ಬ್ರ್ಯಾಂಡ್ ಬೆಂಗಳೂರು ಎಂದರೆ ಇದೇನಾ' ಎಂದು ಪ್ರಶ್ನಿಸಿದರು.

'ಜನರು ಸಂಚಾರ ದಟ್ಟಣೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ. ಇದಕ್ಕೆ ಸಲಹೆಗಾರರು ಬೇಕಾ' ಎಂದು ಬಿಜೆಪಿಯ ಮುನಿರತ್ನ ಕೇಳಿದರು.

ಬಿಜೆಪಿ ಸದಸ್ಯರ ಪ್ರಶ್ನೆಗಳಿಂದ ಸಿಟ್ಟಿಗೆದ್ದ ಕಾಂಗ್ರೆಸ್ ಸದಸ್ಯರು ಪ್ರತ್ಯುತ್ತರ ಕೊಡಲಾರಂಭಿಸಿದರು. 'ನಿಮ್ಮ ಕೈಯಲ್ಲಿ ಏನೂ ಆಗಲಿಲ್ಲ. ಈಗ ಕೆಲಸ ಮಾಡುವವರಿಗಾದರೂ ಬಿಡಿ' ಎಂದು ಕಾಂಗ್ರೆಸ್‌ನ ಎಚ್.ಸಿ. ಬಾಲಕೃಷ್ಣ ಬಿಜೆಪಿ ಸದಸ್ಯರನ್ನುದ್ದೇಶಿಸಿ ಹೇಳಿದರು. ವಾಕ್ಸಮರ ಜೋರಾಯಿತು. ಮಧ್ಯ ಪ್ರವೇಶಿಸಿದ ಸ್ಪೀಕರ್ ಯು.ಟಿ. ಖಾದರ್ ಪರಿಸ್ಥಿತಿ ತಿಳಿಗೊಳಿಸಿದರು.

ಕಲಾಪ ವೀಕ್ಷಣೆ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನ ಪರಿಷತ್‌ನ ಪ್ರಶ್ನೋತ್ತರ ವೇಳೆಯ ಕಲಾಪವನ್ನು ಚಿಕ್ಕಬಾಗೇವಾಡಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ವೀಕ್ಷಿಸಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ ಎಚ್.ಜಿ.

ಮೂರು ವರ್ಷದಲ್ಲಿ 882 ಮಂದಿ ಗಡೀಪಾರು

ವಿಧಾನಸಭೆ: ಅಪರಾಧ ಕೃತ್ಯಗಳಲ್ಲಿ ನಿರಂತರವಾಗಿ ಭಾಗಿಯಾಗುತ್ತಿದ್ದ 882 ಜನರನ್ನು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಯ ಅಡಿಯಲ್ಲಿ ಗಡೀಪಾರು ಮಾಡಲಾಗಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.

ಬಿಜೆಪಿಯ ಡಿ. ವೇದವ್ಯಾಸ್ ಕಾಮತ್ ಪ್ರಶ್ನೆಗೆ ಮಂಗಳವಾರ ಲಿಖಿತ ಉತ್ತರ ನೀಡಿರುವ ಅವರು, 'ಸಮಾಜದಲ್ಲಿ ಶಾಂತಿ ಕದಡುವವರು, ಪದೇ ಪದೇ ಕ್ರಿಮಿನಲ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರು, ಜಾತಿ ನಿಂದನೆ, ಮಟ್ಕಾ ದಂಧೆ ಸೇರಿದಂತೆ ಸಮಾಜಘಾತುಕ ಚಟುವಟಿಕೆಗಳಲ್ಲಿ ಭಾಗಿಯಾದವರನ್ನು ಕರ್ನಾಟಕ ಪೊಲೀಸ್ ಕಾಯ್ದೆ–1963ರ 54ರಿಂದ 63ರವರೆಗಿನ ಸೆಕ್ಷನ್‌ಗಳಡಿ ದತ್ತವಾದ ಅಧಿಕಾರ ಬಳಸಿಕೊಂಡು ಗಡೀಪಾರು ಮಾಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಅಪರಾಧ ಹಿನ್ನೆಲೆಯ ವ್ಯಕ್ತಿಗಳ ಗಡೀಪಾರಿನಲ್ಲಿ ಶಿವಮೊಗ್ಗ ಜಿಲ್ಲೆಯು ರಾಜ್ಯದಲ್ಲೇ ಅಗ್ರಸ್ಥಾನದಲ್ಲಿದೆ. ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಿಂದ 85 ಜನರನ್ನು ಗಡೀಪಾರು ಮಾಡಲಾಗಿದೆ. 65 ಜನರ ಗಡೀಪಾರಿನೊಂದಿಗೆ ಬೆಂಗಳೂರು ನಗರ ಎರಡನೇ ಸ್ಥಾನದಲ್ಲಿದೆ. ಮಂಗಳೂರು ನಗರದ ವ್ಯಾಪ್ತಿಯಲ್ಲಿ 63 ಜನರನ್ನು ಗಡೀಪಾರು ಮಾಡಲಾಗಿದೆ. ತಲಾ ಐವರ ಗಡೀಪಾರಿನೊಂದಿಗೆ ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಗಳು ಕೊನೆಯ ಸ್ಥಾನದಲ್ಲಿವೆ.

ಸಿಎಂ–ತೇಜಸ್ವಿ ಸೂರ್ಯ 'ಟ್ವೀಟ್' ಸಮರ

ರಾಜ್ಯ ಸರ್ಕಾರದಿಂದ ಕ್ಯಾಪ್ಟನ್ ಪ್ರಾಂಜಲ್ ಕುಟುಂಬಕ್ಕೆ ₹ 50 ಲಕ್ಷ ಪರಿಹಾರ ಚೆಕ್ ವಿತರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನನ್ನ ಹೇಳಿಕೆ ತಿರುಚಿ ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಟ್ಟ ಸಂಸದ: ಸಿ.ಎಂ ಆರೋಪ
- ನಾನು ಪತ್ರ ಬರೆದ ಬಳಿಕ ಎಚ್ಚೆತ್ತುಕೊಂಡ ಸರ್ಕಾರವು ಪರಿಹಾರ ವಿತರಿಸಿದೆ: ಸಂಸದ ಪ್ರತಿಕ್ರಿಯೆ

ಬೆಂಗಳೂರು: ಜಮ್ಮು-ಕಾಶ್ಮೀರದ ರಜೌರಿಯಲ್ಲಿ ಉಗ್ರರ ಜೊತೆಗಿನ ಹೋರಾಟದಲ್ಲಿ ಹುತಾತ್ಮರಾಗಿದ್ದ ಯೋಧ ಕ್ಯಾಪ್ಟನ್ ಪ್ರಾಂಜಲ್ ಅವರಿಗೆ ಪರಿಹಾರ ಧನ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಂಸದ ತೇಜಸ್ವಿ ಸೂರ್ಯ ನಡುವೆ 'ಟ್ವೀಟ್ ಸಮರ' ನಡೆದಿದೆ.

ಪ್ರಾಂಜಲ್ ಕುಟುಂಬಕ್ಕೆ ರಾಜ್ಯ ಸರ್ಕಾರ ₹ 50 ಲಕ್ಷ ಪರಿಹಾರ ಧನದ ಚೆಕ್ ನೀಡಿರುವುದನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ತೇಜಸ್ವಿ ಸೂರ್ಯ, 'ಹುತಾತ್ಮ ಯೋಧ ಕ್ಯಾ. ಪ್ರಾಂಜಲ್ ಕುಟುಂಬಕ್ಕೆ ಸರ್ಕಾರದ ವತಿಯಿಂದ ಘೋಷಣೆ ಮಾಡಿರುವ ಪರಿಹಾರದ ಕುರಿತಾಗಿ ಪತ್ರಕರ್ತರು ಭಾನುವಾರ ಪ್ರಶ್ನೆ ಕೇಳಿದಾಗ 'ಪ್ರಾಂಜಲ್ ಯಾರು?' ಎಂಬ ಉಡಾಫೆಯ ಮಾತುಗಳನ್ನಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆ ಕುಟುಂಬಕ್ಕೆ ₹ 50 ಲಕ್ಷ ಪರಿಹಾರವನ್ನು ಇಷ್ಟೆಲ್ಲ ಅವಾಂತರಗಳ ನಂತರ ತಡವಾಗಿಯಾದರೂ ಘೋಷಿಸಿರುವುದನ್ನು ನಾನು ಸ್ವಾಗತಿಸುತ್ತೇನೆ' ಎಂದಿದ್ದಾರೆ.

ಇದಕ್ಕೆ ಟ್ವೀಟ್ ಮೂಲಕವೇ ತಿರುಗೇಟು ನೀಡಿರುವ ಮುಖ್ಯಮಂತ್ರಿ, 'ತೇಜಸ್ವಿ ಸೂರ್ಯ ಎಂಬ ಬಿಜೆಪಿ ಸಂಸದ, ತಪ್ಪು ಅರ್ಥ ಬರುವಂತೆ ನನ್ನ ಹೇಳಿಕೆಯನ್ನು ತುಂಡರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟು ವಿಕೃತಿ ಮೆರೆದಿರುವುದು ನನ್ನ ಗಮನಕ್ಕೆ ಬಂತು. ಗದ್ದಲದ ಕಾರಣದಿಂದಾಗಿ ವರದಿಗಾರರ ಪ್ರಶ್ನೆ ಆರಂಭದಲ್ಲಿ ಸರಿಯಾಗಿ ಕೇಳಿರಲಿಲ್ಲ. ಪತ್ರಕರ್ತರ ಪ್ರಶ್ನೆ ಹುತಾತ್ಮರಾದ ವೀರಯೋಧ ಪ್ರಾಂಜಲ್ ಅವರ ಕುರಿತಾಗಿರುವುದು ಎಂದು ಗೊತ್ತಾದ ನಂತರ ರಾಜ್ಯ ಸರ್ಕಾರ ಪರಿಹಾರ ನೀಡಲು ಬದ್ಧವಾಗಿರುವುದನ್ನು ತಿಳಿಸಿದ್ದೇನೆ' ಎಂದಿದ್ದಾರೆ.

'ರಾಜಕೀಯ ದುರುದ್ದೇಶದಿಂದ ವಿಡಿಯೊವನ್ನು ತಿರುಚಿ ಹಂಚಿಕೊಂಡಿರುವ ತೇಜಸ್ವಿ ಸೂರ್ಯ, ಹುತಾತ್ಮ ಪ್ರಾಂಜಲ್ ಮತ್ತು ಅವರ ಕುಟುಂಬ ವರ್ಗಕ್ಕೆ ಮಾತ್ರವಲ್ಲ ಸಮಸ್ತ ಯೋಧ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ. ಈ ಸಂಸದನಲ್ಲಿ ಕಿಂಚಿತ್ತು ಮಾನ- ಮರ್ಯಾದೆ ಏನಾದರೂ ಉಳಿದು ಕೊಂಡಿದ್ದರೆ ತಾನು ಮಾಡಿರುವ ತಪ್ಪನ್ನು ಒಪ್ಪಿಕೊಂಡು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು' ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿಯ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ತೇಜಸ್ವಿ ಸೂರ್ಯ, 'ಯೋಧರೊಬ್ಬರು ತೀರಿಕೊಂಡು 12 ದಿವಸಗಳಾದರೂ ನಿಮ್ಮ ಸರ್ಕಾರದ ಯಾವೊಬ್ಬ ಅಧಿಕಾರಿಯೂ ಸಂಪರ್ಕಿಸದೇ ಇದ್ದಿದ್ದು ಸತ್ಯ. ನಾನು ನಿಮಗೆ ಪತ್ರ ಬರೆದು ಜ್ಞಾಪಿಸುವವರೆಗೂ ಪರಿಹಾರ ನೀಡಲು ತಾವುಗಳು ಮೀನಮೇಷ ಎಣಿಸಿದ್ದು ಕೂಡ ಸತ್ಯ. ಮಾಧ್ಯಮದ ಸ್ನೇಹಿತರು ತಮ್ಮನ್ನು ಪ್ರಶ್ನಿಸಿದಾಗ, ಸರಿಯೋ ತಪ್ಪೋ ನೀವು ಪರಿಹಾರವನ್ನೇ ಘೋಷಿಸಿಲ್ಲ ಎಂದು ಹೇಳಿರುವುದೂ ಸತ್ಯ. ಒತ್ತಡದ ನಂತರವೇ ತಾವು ಪರಿಹಾರ ಘೋಷಿಸಿದ್ದು ಕೂಡ ಸತ್ಯ' ಎಂದಿದ್ದಾರೆ.

ಹುತಾತ್ಮ ಕ್ಯಾ.ಪ್ರಾಂಜಲ್ ಅವರ ಪೋಷಕರನ್ನು ಮಂಗಳವಾರ ಭೇಟಿಯಾದ ಬೆಂಗಳೂರು ಜಿಲ್ಲಾಧಿಕಾರಿ ಕೆ.ಎ. ದಯಾನಂದ ಅವರು ರಾಜ್ಯ ಸರ್ಕಾರದಿಂದ ನೀಡಲಾದ ₹50 ಲಕ್ಷದ ಮೊತ್ತದ ಚೆಕ್ ಅನ್ನು ಹಸ್ತಾಂತರಿಸಿದರು

'ಸಹಕಾರ ಕಾಯ್ದೆಗೆ ಮತ್ತೆ ತಿದ್ದುಪಡಿ'

ವಿಧಾನ ಪರಿಷತ್: ಸಹಕಾರ ಸಂಘಗಳಲ್ಲಿನ ಅವ್ಯವಹಾರ ನಿಯಂತ್ರಣ, ಸಹಕಾರ ಕ್ಷೇತ್ರ ಬಲಪಡಿಸುವುದೂ ಸೇರಿದಂತೆ ಹಲವು ಬಲಾವಣೆ ತರುವ ತಿದ್ದುಪಡಿ ಕಾಯ್ದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಬಿಜೆಪಿಯ ಭಾರತಿ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಅವರು, 1,679 ಸಹಕಾರ ಸಂಘಗಳಲ್ಲಿ ಅವ್ಯಹಾರ ನಡೆದಿರುವುದು ಪತ್ತೆಯಾಗಿದೆ. ಮುಂದೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

'ಯಶಸ್ವಿನಿ ಯೋಜನೆಗೆ ನಿಗದಿಪಡಿಸಿದ ಮಾನದಂಡಗಳನ್ನು ಬದಲಾಯಿಸುವ ಚಿಂತನೆ ಇದೆ' ಎಂದು ಸಿ.ಎನ್.ಮಂಜೇಗೌಡ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ವ್ಯಕ್ತಿ ಮೇಲೆ ಆ್ಯಸಿಡ್ ದಾಳಿ

ನಾಯಿ ಬೊಗಳಿದ ವಿಚಾರಕ್ಕೆ ಕುಟುಂಬಗಳ ನಡುವೆ ಜಗಳ

ಪ್ರಜಾವಾಣಿ ವಾರ್ತೆ

ನರಸಿಂಹರಾಜಪುರ (ಚಿಕ್ಕಮಗಳೂರು): ನಾಯಿ ಬೊಗಳಿದ ವಿಚಾರಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಹಾಳುಕರಗುಂದ ಗ್ರಾಮದಲ್ಲಿ ನೆರೆಹೊರೆಯ ಕುಟುಂಬಗಳ ನಡುವೆ ಆರಂಭಗೊಂಡ ಜಗಳ ತಾರಕಕ್ಕೇರಿ, ನಾಯಿಯ ಒಡೆಯನ ಮೇಲೆ ಆ್ಯಸಿಡ್ ಎರಚಲಾಗಿದೆ.

ಸುಂದರ್ ರಾಜ್ ಎಂಬುವರು ಆ್ಯಸಿಡ್ ದಾಳಿಗೆ ಒಳಗಾದವರು. ಇವರು ನಾಯಿ ಸಾಕಿದ್ದು, ಅದು ಬೊಗಳಿದ ವಿಚಾರಕ್ಕೆ ಸಂಬಂಧಿಸಿದಂತೆ ಪಕ್ಕದ ಮನೆಯ ಜೇಮ್ಸ್ ಹಾಗೂ ಮರಿಯಮ್ಮ ಎಂಬುವರು ಅವರೊಂದಿಗೆ ಜಗಳವಾಡಿದ್ದರು.

'ಮಾತಿಗೆ ಮಾತು ಬೆಳೆದು, ಸುಂದರ್ ರಾಜ್ ನಾಯಿ ಹೆಸರಿನಲ್ಲಿ ತಮ್ಮನ್ನು ನಿಂದಿಸಿದ್ದಾರೆ ಎಂದು ಆರೋಪಿಸಿ ಅವರ ಮೇಲೆ ಜೇಮ್ಸ್ ಆ್ಯಸಿಡ್ ಎರಚಿದ್ದಾರೆ. ಗಂಭೀರವಾಗಿ ಗಾಯಗೊಂಡ ಸುಂದರ್ ರಾಜ್ ಅವರನ್ನು ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆಯ ನಂತರ ಜೇಮ್ಸ್ ಹಾಗೂ ಮರಿಯಮ್ಮ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ನರಸಿಂಹರಾಜಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಕೀಲರ ಮೇಲೆ ಹಲ್ಲೆ: ಉನ್ನತ ಮಟ್ಟದ ಸಭೆಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಕ್ಕಮಗಳೂರಿನ ವಕೀಲ ಎನ್.ಟಿ.ಪ್ರೀತಮ್ ಮೇಲೆ ಪೊಲೀಸರು ನಡೆಸಿರುವ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಈಗಾಗಲೇ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ಸೂಕ್ತ ರೀತಿಯಲ್ಲಿ ತನಿಖೆ ನಡೆಸಲಾಗುವುದು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಈ ಹೇಳಿಕೆಯನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಪ್ರಕರಣದ ತನಿಖೆಯನ್ನು ಡಿಐಜಿ ಶ್ರೇಣಿಯ ಅಧಿಕಾರಿ ತನಿಖೆ ನಡೆಸಬೇಕು ಮತ್ತು ಡಿಜಿಪಿ ಶ್ರೇಣಿಯ ನಿಗಾ ವಹಿಸಬೇಕು' ಎಂದು ನಿರ್ದೇಶಿಸಿತು.

ಚಿಕ್ಕಮಗಳೂರು ವಕೀಲರ ಸಂಘದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಮತ್ತು ಡಿ.ಆರ್. ರವಿಶಂಕರ್, 'ಘಟನೆಯ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ವಕೀಲರ ಸಂಘದ ಪದಾಧಿಕಾರಿಗಳು ಹಾಗೂ ಕೆಲವು ವಕೀಲರ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ. ಪೊಲೀಸರೂ ಪ್ರತಿಭಟನೆ ನಡೆಸಿದ್ದಾರೆ' ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಚಿಕ್ಕಮಗಳೂರು ವಕೀಲರು ನ್ಯಾಯಾಲಯದ ಕಲಾಪದಿಂದ ದೂರ ಉಳಿಯುವುದನ್ನು ಒಪ್ಪಲಾಗದು' ಎಂದು ಹೇಳಿತು. ಇದಕ್ಕೆ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರೂ ಆದ ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ ಮತ್ತು ಕೆ.ಎನ್. ಫಣೀಂದ್ರ ಅವರು, 'ವಕೀಲರು ಕಲಾಪ ಬಹಿಷ್ಕರಿಸುವುದಿಲ್ಲ ಮತ್ತು ಪ್ರತಿಭಟನೆ ಮುಂದುವರಿಸುವುದಿಲ್ಲ' ಎಂದರು. ಈ ಹೇಳಿಕೆಯನ್ನು ದಾಖಲಿಸಿಕೊಂಡ ನ್ಯಾಯಪೀಠ, ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

ಸಭೆಗೆ ನಿರ್ದೇಶನ: 'ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮತ್ತು ವಕೀಲರ ಬೇಡಿಕೆಗಳನ್ನು ಆಲಿಸಲು ಇದೇ 9ರಂದು ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ಸಭೆ ನಡೆಸಬೇಕು. ಇದರಲ್ಲಿ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷರು, ಪರಿಷತ್‌ನ ಮೂವರು ಸದಸ್ಯರು, ಚಿಕ್ಕಮಗಳೂರು ಮತ್ತು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರು, ಹೈಕೋರ್ಟ್‌ನ ಆರು ಜನ ಹಿರಿಯ ವಕೀಲರು ಹಾಗೂ ಗೃಹ ಇಲಾಖೆ ಕಾರ್ಯದರ್ಶಿ ಭಾಗವಹಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಈ ಸಭೆಯಲ್ಲಿ ಹಿರಿಯ ವಕೀಲರಾದ ಉದಯ್ ಹೊಳ್ಳ, ಜಯಕುಮಾರ್ ಎಸ್.ಪಾಟೀಲ್, ವಿ.ಲಕ್ಷ್ಮಿನಾರಾಯಣ, ಕೆ.ಎನ್. ಫಣೀಂದ್ರ, ಡಿ.ಆರ್.ರವಿಶಂಕರ್ ಭಾಗವಹಿಸಲಿದ್ದಾರೆ' ಎಂದು ವಿವೇಕ್ ಸುಬ್ಬಾರೆಡ್ಡಿ ತಿಳಿಸಿದ್ದಾರೆ.

ಪಾಸ್‌ಪೋರ್ಟ್ ನವೀಕರಣಕ್ಕೆ ಕ್ರಿಮಿನಲ್ ಪ್ರಕರಣ ಅಡ್ಡಿ

ಬೆಂಗಳೂರು: 'ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇದ್ದರೆ ಅರ್ಜಿದಾರರ ಪಾಸ್‌ಪೋರ್ಟ್ ನವೀಕರಣಕ್ಕೆ ಅವಕಾಶ ನೀಡಲಾಗದು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಂತೋಷ್ ಬೀಜಾಡಿ ಶ್ರೀನಿವಾಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ನವೀಕರಣಕ್ಕೆ ನಿರಾಕರಿಸಿ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ 2023ರ ಸೆಪ್ಟೆಂಬರ್ 20ರಂದು ನೀಡಿದ್ದ ಹಿಂಬರಹವನ್ನು ಎತ್ತಿಹಿಡಿದಿದೆ.

'ಪಾಸ್‌ಪೋರ್ಟ್ ಕಾಯ್ದೆ–1967ರ ನಿಯಮಗಳಲ್ಲಿ, ಪಾಸ್‌ಪೋರ್ಟ್ ವಿತರಣೆ ಅಥವಾ ನವೀಕರಣಕ್ಕೆ ಬಾಕಿ ಇರುವ ಕ್ರಿಮಿನಲ್ ಪ್ರಕರಣವನ್ನು ಅಲಕ್ಷಿಸಲು ಪ್ರತ್ಯೇಕ ಮಾನದಂಡವಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ಅರ್ಜಿದಾರರು ತಮ್ಮ ವಿರುದ್ಧ ಎಲ್ಲಿ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇದೆಯೋ ಅದೇ ಕೋರ್ಟ್‌ನಲ್ಲಿ ಅಲ್ಪಾವಧಿಗೆ ಪಾಸ್‌ಪೋರ್ಟ್ ಪಡೆಯಲು ಅರ್ಜಿ ಸಲ್ಲಿಸಬಹುದು. ಕೋರ್ಟ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಅರ್ಜಿಯನ್ನು ಪರಿಗಣಿಸಬಹುದು' ಎಂದು ವಿವರಿಸಿದೆ.

ಈ ಹಿಂದೆ ಇದೇ ಹೈಕೋರ್ಟ್‌ನ ಮೂರು ಪ್ರತ್ಯೇಕ ಏಕಸದಸ್ಯ ನ್ಯಾಯಪೀಠಗಳು, 'ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇದ್ದಾಗ ಪಾಸ್‌ಪೋರ್ಟ್ ನವೀಕರಿಸಲು ಅಡ್ಡಿಯಿಲ್ಲ' ಎಂದು ಆದೇಶಿಸಿದ್ದವು.

ನ್ಯಾಯಮೂರ್ತಿಗಳ ನೇಮಕ: ಪಟ್ಟಿಯಿಂದ ಮರೆಯಾದ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈಕೋರ್ಟ್‌ಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ವಿಳಂಬ ಆಗುತ್ತಿದೆ ಎಂಬುದಕ್ಕೆ ಸಂಬಂಧಿಸಿದ ಪ್ರಕರಣವೊಂದು, ವಿಚಾರಣೆಗೆ ಕೈಗೆತ್ತಿಕೊಳ್ಳುವ ಪ್ರಕರಣಗಳ ಪಟ್ಟಿಯಿಂದ ಮರೆಯಾಗಿದ್ದರ ಬಗ್ಗೆ ಸುಪ್ರೀಂ ಕೋರ್ಟ್ ಅಚ್ಚರಿ ವ್ಯಕ್ತಪಡಿಸಿದೆ.

'ನಾನು ಈ ಪ್ರಕರಣವನ್ನು ಪಟ್ಟಿಯಿಂದ ತೆಗೆದಿಲ್ಲ ಅಥವಾ ಪ್ರಕರಣದ ವಿಚಾರಣೆ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಖಂಡಿತವಾಗಿಯೂ ಗೊತ್ತಿದೆ' ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರು ಹೇಳಿದರು.

ಈ ಪ್ರಕರಣದ ವಿಚಾರಣೆ ನಡೆಸಬೇಕಿರುವ ಪೀಠದಲ್ಲಿ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರೂ ಇದ್ದಾರೆ.

ಅರ್ಜಿದಾರರೊಬ್ಬರ ಪರವಾಗಿ ಹಾಜರಾದ ಹಿರಿಯ ವಕೀಲ ಪ್ರಶಾಂತ್ ಭೂಷಣ್, ಈ ಪ್ರಕರಣದ ವಿಚಾರಣೆಗೆ ನ್ಯಾಯಾಲಯವು ದಿನಾಂಕ ನಿಗದಿ ಮಾಡಿದ್ದರೂ ಅದು ಪಟ್ಟಿಯಿಂದ ಮರೆಯಾಗಿದ್ದು ಹೇಗೆ ಎಂಬ ಬಗ್ಗೆ ವರದಿ ಪಡೆಯಬೇಕು ಎಂದು ಮನವಿ ಮಾಡಿದರು.

'ಕೆಲವು ಸಂಗತಿಗಳನ್ನು ಹೇಳದೆ ಇದ್ದರೇ ಒಳ್ಳೆಯದು. ನೋಡೋಣ' ಎಂದು ನ್ಯಾಯಮೂರ್ತಿ ಕೌಲ್ ಪ್ರತಿಕ್ರಿಯಿಸಿದರು. ಎರಡನೆಯ ಅತ್ಯಂತ ಹಿರಿಯ ನ್ಯಾಯಮೂರ್ತಿ ಆಗಿರುವ ಕೌಲ್ ಅವರು ಡಿಸೆಂಬರ್ 25ರಂದು ನಿವೃತ್ತಿಯಾಗಲಿದ್ದಾರೆ.

ಹಿಂದಿನ ವಿಚಾರಣೆಯ ಸಂದರ್ಭದಲ್ಲಿ ಕೋರ್ಟ್, ನ್ಯಾಯಮೂರ್ತಿಗಳ ನೇಮಕ ವಿಚಾರದಲ್ಲಿ ಕೇಂದ್ರ ಸರ್ಕಾರವು 'ಕೆಲವರನ್ನು ಮಾತ್ರ ಆಯ್ಕೆ ಮಾಡುವ ಧೋರಣೆ ಹೊಂದಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿತ್ತು.

'ಮಿಚಾಂಗ್' ಚಂಡಮಾರುತದ ಪ್ರಭಾವವು ಮಂಗಳವಾರ ಬೆಂಗಳೂರಿಗೂ ತಟ್ಟಿದ್ದು, ತುಸು ಚಳಿಯ ವಾತಾವರಣದಲ್ಲಿ ವಿದ್ಯಾರ್ಥಿಗಳು ಕುಶಲೋಪರಿಯಲ್ಲಿ ತೊಡಗಿರುವುದು ಕಂಡುಬಂದಿತು ಪ್ರಜಾವಾಣಿ ಚಿತ್ರ: ರಂಜು ಪಿ.

ನಗರದಲ್ಲಿ ಚಳಿಯ ಕಚಗುಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿಚಾಂಗ್' ಚಂಡಮಾರುತದ ಪರಿಣಾಮ ನಗರದಲ್ಲಿ ಗರಿಷ್ಠ ಉಷ್ಣಾಂಶ ತಗ್ಗಿದೆ.

ಮಂಗಳವಾರ ಮೋಡ ಕವಿದ ವಾತಾವರಣವಿತ್ತು. ಹವಾಮಾನ ಇಲಾಖೆಯ ಪ್ರಕಾರ ಗರಿಷ್ಠ ಉಷ್ಣಾಂಶ 23.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿದರೆ, ಕನಿಷ್ಠ ಉಷ್ಣಾಂಶ 19.4 ಡಿಗ್ರಿ ಸೆಲ್ಸಿಯಸ್ ನಷ್ಟಿತ್ತು. ಮುಂಜಾನೆ ಹಾಗೂ ಸಂಜೆ ಅವಧಿಯಲ್ಲಿ ಉಷ್ಣಾಂಶ ಮತ್ತಷ್ಟು ತಗ್ಗುತ್ತಿರುವ ಪರಿಣಾಮ ಈ ಅವಧಿಯಲ್ಲಿ ಚಳಿ ಹೆಚ್ಚುತ್ತಿದೆ.

ಸಂಜೆ ಅವಧಿಯಲ್ಲಿ ಮೋಡ ಕವಿದ ವಾತಾವರಣ ಇದ್ದರೆ, ಮುಂಜಾನೆ ಅವಧಿಯಲ್ಲಿ ಮಂಜು ಮುಸುಕುತ್ತಿದೆ. ರಾತ್ರಿಯಲ್ಲೂ ತಾಪಮಾನ ಮತ್ತಷ್ಟು ಕಡಿಮೆಯಾಗಿ, ಥಂಡಿ ಅನುಭವವಾಗುತ್ತಿದೆ. ಹೀಗಾಗಿ, ಕೆಲ ದಿನಗಳಿಂದ ನಗರದಲ್ಲಿ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶದಲ್ಲಿ ಏರಿಳಿತವಾಗುತ್ತಿದೆ.

ವಾರದಿಂದ ಗರಿಷ್ಠ ಉಷ್ಣಾಂಶ ಸರಾಸರಿ 27 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಮೋಡ ಕವಿದ ವಾತಾವರಣ ಸಹಿತ ಆಗಾಗ ಸುರಿಯುತ್ತಿರುವ ಜಿಟಿಜಿಟಿ ಮಳೆಯಿಂದಾಗಿ ತಾಪಮಾನ ಕುಸಿಯುತ್ತಿದೆ.

ನಗರದಲ್ಲಿ ಮುಂದಿನ ಒಂದು ವಾರ ಮೋಡ ಕವಿದ ವಾತಾವರಣ ಇರಲಿದ್ದು, ಗರಿಷ್ಠ ಉಷ್ಣಾಂಶ 26 ಡಿಗ್ರಿ ಸೆಲ್ಸಿಯಸ್ ಆಸುಪಾಸು ಹಾಗೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಕೆ.ಆರ್. ಪೇಟೆ: ಸ್ಕ್ಯಾನಿಂಗ್ ಕೇಂದ್ರಕ್ಕೆ ಬೀಗ

ಪ್ರಜಾವಾಣಿ ವಾರ್ತೆ

ಮಂಡ್ಯ: ಭ್ರೂಣಹತ್ಯೆ ಜಾಲ ಪತ್ತೆಯಾದ ಬೆನ್ನಲ್ಲೇ ಜಿಲ್ಲೆಯಲ್ಲಿನ ಸ್ಕ್ಯಾನಿಂಗ್ ಕೇಂದ್ರಗಳ ತಪಾಸಣೆಗೆ ಅಧಿಕಾರಿಗಳು ಮುಂದಾಗಿದ್ದು, ನಿಯಮಪಾಲನೆ ಮಾಡದ ಆರೋಪದ ಮೇಲೆ ಕೆ.ಆರ್. ಪೇಟೆಯಲ್ಲಿನ ಹೊಸಹೊಳಲು ರಸ್ತೆಯಲ್ಲಿರುವ ನಾವಿ ಸ್ಕ್ಯಾನಿಂಗ್ ಕೇಂದ್ರಕ್ಕೆ ಬೀಗ ಜಡಿದಿದ್ದಾರೆ.

ಉಪ ವಿಭಾಗಾಧಿಕಾರಿ ನಂದೀಶ್ ಹಾಗೂ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಅಜಿತ್ ನೇತೃತ್ವದ ತಂಡವು ಮಂಗಳವಾರ ಇಲ್ಲಿನ ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ತಪಾಸಣೆ ನಡೆಸಿತು.

'ತಜ್ಞ ವೈದ್ಯರಿಲ್ಲದೆ ತಪಾಸಣೆ ನಡೆಸಲಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಪರಿಶೀಲನೆ ಕೈಗೊಂಡೆವು. ಆಗ ನಾವಿ ಕೇಂದ್ರದಲ್ಲಿ ಸರಿಯಾಗಿ ದಾಖಲೆಗಳನ್ನು ನಿರ್ವಹಿಸದೆ ನಿರ್ಲಕ್ಷ್ಯ ವಹಿಸಿರುವುದು ಕಂಡುಬಂದಿದ್ದರಿಂದ ಕೇಂದ್ರಕ್ಕೆ ಬೀಗ ಹಾಕಲಾಯಿತು' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸಿ. ಸೋಮಶೇಖರ್ ಅಭಿಮತ: ಜೆಎಸ್‌ಎಸ್ ರಂಗೋತ್ಸವಕ್ಕೆ ಚಾಲನೆ

'ನಾಟಕಗಳಿಂದ ಮಕ್ಕಳಲ್ಲಿ ಸೃಜನಶೀಲತೆ ವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಟಕ ಕಲೆಯಿಂದ ಮಕ್ಕಳಲ್ಲಿ ಸೃಜನಶೀಲತೆ, ಸಂವಹನ ಕಲೆ, ನೆನಪಿನ ಶಕ್ತಿ ಹೆಚ್ಚಾಗುತ್ತದೆ' ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್ ಹೇಳಿದರು.

ಜೆಎಸ್‌ಎಸ್ ಕಲಾಮಂಟಪ, ಜೆಎಸ್‌ಎಸ್ ಮಹಾವಿದ್ಯಾಪೀಠ ಆಯೋಜಿಸಿರುವ ಮೂರು ದಿನಗಳ 'ಜೆಎಸ್‌ಎಸ್ ರಂಗೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರಕೃತಿ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖ. ಇದಕ್ಕೆ ಸಂಬಂಧಿಸಿದ ನಾಟಕಗಳನ್ನು ಮಕ್ಕಳು ನೋಡಿದರೆ ಅವರ ಭಾವನೆಗಳು, ಚಿಂತನೆಗಳು ವಿಸ್ತರಿಸಲಿವೆ. ತುಂಬಿದ ಮತ್ತು ಮಾಗಿದ ತಲೆಗಳಿಗೆ ವಿಚಾರಗಳನ್ನು ತುಂಬುವುದಕ್ಕಿಂತ ಎಳೆಯ ಮನಸುಗಳಲ್ಲಿ ರಾಷ್ಟ್ರೀಯ ಪ್ರಜ್ಞೆ, ಪ್ರಕೃತಿಯ ಪ್ರೇಮ, ಇತಿಹಾಸದ ಅರಿವಿನ ಚಿಲುಮೆಯನ್ನು ಹೊತ್ತಿಸಬೇಕಿದೆ' ಎಂದರು

'ಮಕ್ಕಳಿಗೆ ಕೇವಲ ಔಪಚಾರಿಕ ಶಿಕ್ಷಣ, ತಂತ್ರಜ್ಞಾನ ಮತ್ತು ವಿಜ್ಞಾನದಿಂದ ವ್ಯಕ್ತಿತ್ವವನ್ನು ಅರಳಿಸದೇ, ಸಾಂಸ್ಕೃತಿಕ ಸಾಹಿತ್ಯ, ಕಲೆ ಮತ್ತು ಧರ್ಮದ ಮೂಲಕ ಸಮಗ್ರ ವ್ಯಕ್ತಿತ್ವ ರೂಪಿಸುವಲ್ಲಿ ನಾಟಕಗಳ ಪಾತ್ರ ಮಹತ್ವದಾಗಿದೆ' ಎಂದು ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, 'ನಾಟಕಗಳು ವಿದ್ಯಾರ್ಥಿಗಳಿಗೆ ಇಷ್ಟವಾಗುವ ಒಂದು ಮಾಧ್ಯಮ. ಹಲವಾರು ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿರುವ ಕಲೆ, ಪ್ರತಿಭೆಯನ್ನು ಗುರುತಿಸಲು ನಾಟಕಗಳನ್ನು ಮಾಡಲಾಗುತ್ತಿದೆ. ಪ್ರೌಢಶಾಲೆ ಮತ್ತು ಕಾಲೇಜುಗಳ ಪಠ್ಯದ ಒಂದು ಭಾಗವಾಗಿ ರಂಗ ಶಿಕ್ಷಣವನ್ನು ನೀಡಬೇಕು ಎನ್ನುವ ಮಾತುಗಳು ಹೆಚ್ಚಾಗಿ ಕೇಳಿ ಬರುತ್ತಿವೆ' ಎಂದು ಹೇಳಿದರು.

ನಂಜನಗೂಡು ಜೆಎಸ್‌ಎಸ್ ಪದವಿ ಕಾಲೇಜಿನ ವಿದ್ಯಾರ್ಥಿಗಳು 'ಶೂನ್ಯ' ನಾಟಕವನ್ನು ಪ್ರಸ್ತುತಪಡಿಸಿದರು. ಡಿ. 6ರಂದು ಹುಲ್ಲಹಳ್ಳಿ ಜೆಎಸ್‌ಎಸ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು 'ಚೆನ್ನಭೈರಾದೇವಿ' ನಾಟಕ ಮತ್ತು ಡಿ. 7ರಂದು ಮೈಸೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 'ಕುಹು ಕುಹೂ ಕೋಗಿಲೆ' ನಾಟಕ ಪ್ರಸ್ತುತಪಡಿಸಲಿದ್ದಾರೆ.

ಬೆಂಗಳೂರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಚಂದ್ರಶೇಖರ ಆಚಾರ್ ಇದ್ದರು.

ನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಮಂಗಳವಾರದಿಂದ ಪ್ರಾರಂಭವಾದ 'ಜೆಎಸ್‌ಎಸ್ ರಂಗೋತ್ಸವ'ಕ್ಕೆ (ಎಡದಿಂದ) ಚಂದ್ರಶೇಖರ್ ಆಚಾರ್, ಎಚ್.ಎಲ್. ಪುಷ್ಪ, ಸಿ. ಸೋಮಶೇಖರ್ ಅವರು ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು —ಪ್ರಜಾವಾಣಿ ಚಿತ್ರ



ಜೇನುಸಾಕಣೆಗೂ ಬಂತು ಕೃತಕ ಬುದ್ಧಿಮತ್ತೆ

ಇ.ಎಸ್. ಸುಧೀಂದ್ರ ಪ್ರಸಾದ್

ಕೃಷಿಯತ್ತ ವಾಲುತ್ತಿರುವ ಯುವಸಮುದಾಯಕ್ಕೆ ಹೆಚ್ಚಿನ ಪರಿಶ್ರಮ ಬೇಡದ ಹಾಗೂ ಆಧುನಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಬಹುದಾದ ಜೇನುಸಾಕಣೆ ಉಪಕರಣವೊಂದು ಸಿದ್ಧವಾಗಿದೆ. ಅದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ ಗಮನ ಸೆಳೆಯಿತು. ಮಂಗಳೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ 4ನೇ ವರ್ಷದಲ್ಲಿ ಓದುತ್ತಿರುವ ಆರು ವಿದ್ಯಾರ್ಥಿಗಳು ಇಂಥದ್ದೊಂದು ರೈತಸ್ನೇಹಿಯಾದ ಆಧುನಿಕ ಜೇನುಪೆಟ್ಟಿಗೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಬೇರೊಂದು ವೃತ್ತಿ ಮಾಡುತ್ತಲೇ ಊರಿನ ಜಮೀನಿನಲ್ಲಿರುವ ಜೇನುಪೆಟ್ಟಿಗೆಯನ್ನು ದೂರದಿಂದಲೇ ಅವಲೋಕಿಸಿ, ಅದನ್ನು ನಿರ್ವಹಿಸಬಹುದಾದ ತಂತ್ರಜ್ಞಾನ ಇದಾಗಿದೆ.

ಜೇನುಸಾಕಣೆಯಲ್ಲಿ ನಿತ್ಯವೂ ಪೆಟ್ಟಿಗೆಯತ್ತ ಒಂದು ಸುತ್ತು ಹಾಕಬೇಕಾದ್ದು ಅನಿವಾರ್ಯ. ತುಪ್ಪದ ಇಳುವರಿ ಉತ್ತಮವಾಗಿರಬೇಕೆಂದರೆ ಜೇನುಪರಿವಾರದ ನಿತ್ಯದ ಚಟುವಟಿಕೆ ಮೇಲೆ ನಿಗಾ ಇರಬೇಕಾದ್ದು ಅಷ್ಟೇ ಮುಖ್ಯ. ಅದಕ್ಕಾಗಿಯೇ ಅಗತ್ಯ ಸೆನ್ಸರ್‌ಗಳನ್ನು ಅಭಿವೃದ್ಧಿಪಡಿಸಿರುವ ಈ ವಿದ್ಯಾರ್ಥಿಗಳ ತಂಡ, ಅವುಗಳನ್ನು ಪೆಟ್ಟಿಗೆಯೊಳಗೆ ಅಳವಡಿಸಿದೆ. ಇದಕ್ಕೆ 'ಹೈವ್‌ಲಿಂಕ್' ಎಂಬ ಹೆಸರನ್ನೂ ಇಟ್ಟಿದೆ.

ಈ ತಂತ್ರಜ್ಞಾನದಿಂದ ಪೆಟ್ಟಿಗೆಯೊಳಗಿನ ತಾಪಮಾನದ ಮಾಹಿತಿ, ಆರ್ದ್ರತೆಯ ಪ್ರಮಾಣ, ತುಪ್ಪದ ಉತ್ಪಾದನೆ ಮೇಲೆ ನಿರಂತರ ನಿಗಾ ಇಡುವ ತೂಕ ಮಾಪನ, ಮಳೆಗಾಲದಲ್ಲಿ ಕೃತಕವಾಗಿ ನೀಡಬೇಕಾದ ಆಹಾರದ ಸಮರ್ಪಕ ಬಳಕೆಯ ಮಾಹಿತಿ ಇತ್ಯಾದಿಗಳು ಲಭ್ಯ.

ಇಷ್ಟು ಮಾತ್ರವಲ್ಲದೇ, ಜೇನುನೊಣಗಳ ಕುಟುಂಬದಲ್ಲಿನ ವಿಘಟನೆ, ಯಾವುದೋ ಕಾರಣಕ್ಕೆ ಇಡೀ ಜೇನುಕುಟುಂಬವೇ ಪರಾರಿಯಾಗುವುದು, ಅನ್ಯ ಕೀಟಗಳ ದಾಳಿ ಹಾಗೂ ಜೇನುಹುಳುಗಳ ಅಸಹಜ ಸಾವು, ಜೇನುತುಪ್ಪದ ಇಳುವರಿ ಸಮಯ – ಹೀಗೆ ಇವೆಲ್ಲದರ ಮಾಹಿತಿಯನ್ನು ನೀಡುವ ಸೆನ್ಸರ್‌ಗಳನ್ನು ಈ ಪೆಟ್ಟಿಗೆಯಲ್ಲಿ ಅಳವಡಿಸಲಾಗಿದೆ.

ಮನೆ ಅಥವಾ ತೋಟದ ಆಯಕಟ್ಟಿನ ಸ್ಥಳಗಳಲ್ಲಿ ಪೆಟ್ಟಿಗಳನ್ನು ಇಟ್ಟು, ಅವುಗಳಲ್ಲಿ ಒಂದೊಂದಕ್ಕೂ ಈ ಸಾಧನ ಅಳವಡಿಸಬಹುದು. ಅದರ ಮಾಹಿತಿಯನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡುವ ಅಪ್ಲಿಕೇಷನ್‌ನಲ್ಲಿ ನಮೂದಿಸಬೇಕು.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ 'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ ಪ್ರದರ್ಶನಗೊಂಡ ಸ್ಮಾರ್ಟ್ ಜೇನು ಕೃಷಿಯಲ್ಲಿ ಬಳಸುವ ಮಾದರಿ

ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಅದಾದ ನಂತರ ಪ್ರತಿ ಪೆಟ್ಟಿಗೆಯ ಗ್ರಾಫ್ ಸಹಿತ ಮಾಹಿತಿ ಲಭ್ಯವಾಗುತ್ತದೆ. ಇಲ್ಲಿ ಪೆಟ್ಟಿಗೆಗಳಿಂದ ಲಭ್ಯವಾಗುವ ಮಾಹಿತಿ ಆಧರಿಸಿ ಕೃತಕ ಬುದ್ಧಿಮತ್ತೆಯ ಆಧಾರದ ತಂತ್ರಾಂಶವು ತನ್ನ ವರದಿ ನೀಡುತ್ತದೆ. ಯಾವ ಪೆಟ್ಟಿಗೆಗೆ ಹೆಚ್ಚಿನ ನಿಗಾ ಅಗತ್ಯ, ಯಾವುದರಲ್ಲಿ ಹೆಚ್ಚು ತುಪ್ಪ ಆಗುತ್ತಿದೆ. ಸಮಸ್ಯೆ ಇರುವ ಪೆಟ್ಟಿಗೆಯ ಸ್ಥಳಾಂತರ ಇತ್ಯಾದಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯ ಎಂದೆನ್ನುತ್ತಾರೆ, ತಂಡದ ಅಜ್ವಿನ್ ಡಿಸೋಜಾ.

'ಈ ಸಾಧನವನ್ನು ಇನ್ನಷ್ಟು ಉತ್ತಮಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಲವು ಪ್ರಶಸ್ತಿಗಳನ್ನೂ ನಮ್ಮ ಈ ಪ್ರಯೋಗ ಪಡೆದುಕೊಂಡಿದೆ. ಇದು ಯುವರೈತರನ್ನು ಒಳಗೊಂಡು ಜೇನುಕೃಷಿ ನಡೆಸುವ ಪ್ರತಿಯೊಬ್ಬರಿಗೂ ನೆರವಾಗಲಿದೆ' ಎಂದೆನ್ನುತ್ತಾರೆ, ಅವರು.

ಅಬ್ದುಲ್ ಬಸಿತ್ ಮತ್ತು ದೀಪ್ತಿ ಪಿ., ವಿಯೋಲಾ ರೋಡ್ರಿಗಸ್, ಜಾಯ್ವಿನ್ ಬೆನ್ನಿಸ್, ಕಂಪ್ಯೂಟರ್ ಸೈನ್ಸ್ ವಿಭಾಗದ ಜೋಶುವಾ ಕ್ವಿಂಥಿನೋ ಅಲ್ಬುಕರ್ಕ್ ಈ ಸಂಶೋಧನಾ ತಂಡದ ಇತರ ಸದಸ್ಯರು. ಈ ತಂಡಕ್ಕೆ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಗ್ಲೆನ್ಸನ್ ಟೋನಿ ಸಂಯೋಜಕರಾಗಿದ್ದಾರೆ. ಜತೆಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಜೇನುಸಾಕಣೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಕೆ.ಟಿ. ವಿಜಯಕುಮಾರ್ ಮಾರ್ಗದರ್ಶಕರಾಗಿದ್ದಾರೆ.

ಬ್ಯಾಟರಿಚಾಲಿತ ಗಾಲಿಕುರ್ಚಿ

ಮಂಗಳೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಯುವ ತಂತ್ರಜ್ಞರ ತಂಡವು ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಯಿಂದ ಹಾಸಿಗೆ ಹಿಡಿದವರಿಗೆ ಹಾಸಿಗೆಯಾಗಿ ಬದಲಾಗುವ ಗಾಲಿಕುರ್ಚಿಯನ್ನು ಅಭಿವೃದ್ಧಿಪಡಿಸಿದೆ. ಇದು ಬ್ಯಾಟರಿ ಚಾಲಿತವಾಗಿದ್ದು, ಮತ್ತೊಬ್ಬರನ್ನು ಅವಲಂಬಿಸುವ ಪ್ರಮಾಣವನ್ನು ತಗ್ಗಿಸುತ್ತದೆ. ಜತೆಗೆ ಮುಂಗೈ ಇಲ್ಲದವರಿಗೆ 'ಪ್ರಾಸ್ಥೆಟಿಕ್ ಆರ್ಮ್' ಅಭಿವೃದ್ಧಿಪಡಿಸಿದೆ.



ಬಾಣಂತಿಯರಲ್ಲಿ ಅತಿ ರಕ್ತಸ್ರಾವ ಆಗುವುದನ್ನು ತಿಳಿಸುವ ಸಾಧನವೊಂದು ಸಿದ್ಧವಾಗುತ್ತಿದೆ.

ಬಾಣಂತಿಸ್ರಾವ ಅಪಾಯ ಸೂಚಿಸಬಲ್ಲ ಸಾಧನ

ಕೊಳ್ಳೇಗಾಲ ಶರ್ಮ

ಮೊನ್ನೆ ಸುಪ್ರಸಿದ್ಧ ಲೇಖಕಿಯೊಬ್ಬರು 'ಬಳೆ ಆಕ್ಯುಪಂಕ್ಚರಿನಂತೆ; ಅದನ್ನು ಧರಿಸುವುದರಿಂದ ಆರೋಗ್ಯಕ್ಕೆ ಒಳಿತು' ಎಂದು ಹೇಳಿದ್ದು ಸುದ್ದಿಯಾಗಿತ್ತು. ಗಾಜಿನ ಬಳೆಯೋ, ಚಿನ್ನದ ಬಳೆಯೋ ಎಂಬುದನ್ನು ಅವರು ಸ್ಪಷ್ಟ ಪಡಿಸಿರಲಿಲ್ಲವೆನ್ನಿ. ಬಳೆ ನಿಜವಾಗಿಯೂ ಆರೋಗ್ಯವನ್ನು ಕಾಪಾಡುತ್ತದೆಯೋ ಇಲ್ಲವೋ, ಬಾಣಂತಿಯರ ಆರೋಗ್ಯದ ಮೇಲೆ ಕಣ್ಣಿಡುವ ಬ್ಯಾಂಡೇಜೊಂದನ್ನು ಅಮೆರಿಕೆಯ ವಾಷಿಂಗ್ಟನ್ ವಿಶ್ವವಿದ್ಯಾಲಯದ ಬಯೋಮೆಡಿಕಲ್ ಎಂಜಿನಿಯರಿಂಗ್ ವಿಭಾಗದ ಕ್ರಿಸ್ಟೀನ್ ಎಂ. ಓಬ್ರಿಯೆನ್ ಮತ್ತು ಸಂಗಡಿಗರು ಸಿದ್ಧಪಡಿಸಿದ್ದಾರಂತೆ. ಇದನ್ನು ಧರಿಸಿದರೆ ಬಾಣಂತಿಯರಲ್ಲಿ ಅತಿಸ್ರಾವ ಆಗುವುದನ್ನು ಮುಂದಾಗಿಯೇ ಊಹಿಸಬಹುದು ಎಂದು 'ಬಯೋಮೆಡಿಕಲ್ ಆಪ್ಟಿಕಲ್ ಎಕ್ಸ್‌ಪ್ರೆಸ್' ಪತ್ರಿಕೆ ವರದಿ ಮಾಡಿದೆ.

ಹೆರಿಗೆ ಎನ್ನುವುದು ಹೆಣ್ಣಿಗೆ ಸಿಹಿ ಹಾಗೂ ಸಂಕಟ – ಎರಡನ್ನೂ ತರುತ್ತದಷ್ಟೆ. ಹೊಸ ಜೀವದ ಆಗಮನ ಖುಷಿ ತರುವ ಹಾಗೆಯೇ, ಹೆರಿಗೆಯ ನೋವು, ಅದಕ್ಕೂ ಮುನ್ನ ಹಾಗೂ ಅನಂತರ ಅನುಭವಿಸಬೇಕಾದ ಆರೋಗ್ಯದ ಸಮಸ್ಯೆಗಳು ಸಂಕಟವನ್ನು ತರುವಂಥವು. ಹೆರಿಗೆಯ ನಂತರ ಬಾಣಂತಿಯರು ಅನುಭವಿಸುವ ಸಂಕಟಗಳಲ್ಲಿ ಪ್ರಮುಖವಾದದ್ದು ಅತಿ ರಕ್ತಸ್ರಾವ ಹಾಗೂ ಸೋಂಕು. ಇವುಗಳಲ್ಲಿ ಅತಿ ರಕ್ತಸ್ರಾವ ಜೀವಕ್ಕೆ ಅಪಾಯವನ್ನೊಡ್ಡುವಂಥದ್ದು. ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಏನಿಲ್ಲವೆಂದರೂ 45 ಸಾವಿರದಿಂದ 60 ಸಾವಿರ ಬಾಣಂತಿಯರು ಹೆರಿಗೆಯ ನಂತರ ಸಾವನ್ನಪ್ಪುತ್ತಾರೆ. ಇವರಲ್ಲಿ ಬಹುತೇಕ ಅಂದರೆ ಶೇ 25ರಿಂದ 60ರಷ್ಟು ಮಹಿಳೆಯರು ಸಾಯುವುದಕ್ಕೆ ಹೆರಿಗೆಯ ನಂತರ ಆಗುವ ಅತಿ ರಕ್ತಸ್ರಾವ ಕಾರಣ.

ಹೆರಿಗೆಯ ನಂತರ ಅಲ್ಪ ಸಮಯ ಕಳೆದಮೇಲೆ ರಕ್ತಸ್ರಾವ ತಾನಾಗಿಯೇ ನಿಲ್ಲುತ್ತದೆ. ನಿಲ್ಲಬೇಕು. ಆದರೆ ಕೆಲವರಲ್ಲಿ ಇದು ಆಗದೇ ಹೋಗಬಹುದು. ಹೆರಿಗೆಯ ನಂತರ ಅರ್ಧ ಲೀಟರಿನಷ್ಟು ರಕ್ತಸ್ರಾವ ಆಗುವುದು ಸಾಮಾನ್ಯ. ಇದನ್ನೂ ಮೀರಿದರೆ ಆಗ ಅದನ್ನು ಹೆರಿಗೆಯ ನಂತರದ ಅತಿರಕ್ತಸ್ರಾವ ಅಥವಾ 'ಪೋಸ್ಟ್ ಪಾರ್ಟಲ್ ಹಿಮರೇಜ್' (ಪಿಪಿಎಚ್) ಎಂದು ವೈದ್ಯರು ಗುರುತಿಸುತ್ತಾರೆ. ಸಿಸೇರಿಯನ್ ಶಸ್ತ್ರಕ್ರಿಯೆಗೊಳಗಾದವರಲ್ಲಿ ಒಂದು ಲೀಟರಿಗಿಂತಲೂ ಹೆಚ್ಚು ರಕ್ತ ನಷ್ಟವಾದಾಗ 'ಪಿಪಿಎಚ್' ಎಂದು ಹೇಳಲಾಗುತ್ತದೆ.

ಬಾಣಂತಿಯರಲ್ಲಿ ರಕ್ತಸ್ರಾವ ಯಾವಾಗ ಬೇಕಿದ್ದರೂ ಅತಿಯಾಗಬಹುದು. ಹೆರಿಗೆಯ ನಂತರ ಒಂದೇ ದಿನದೊಳಗೆ ರಕ್ತ ಅತಿಯಾಗಿ ನಷ್ಟವಾಗಬಹುದು. ಇದು ಆಸ್ಪತ್ರೆಯಲ್ಲಿ ಇರುವಾಗಲೇ ತಿಳಿಯುವುದರಿಂದ, ಅದಕ್ಕೆ ತಕ್ಕ ಚಿಕಿತ್ಸೆ ನೀಡಬಹುದು. ಆದರೆ ಕೆಲವರಲ್ಲಿ ಆರೇಳು ವಾರದವರೆಗೂ ರಕ್ತಸ್ರಾವ ಆಗುತ್ತಲೇ ಇರಬಹುದು. ಇದು ಸ್ವಲ್ಪ ಸಮಸ್ಯೆಯ ವಿಷಯ. ಹೆರಿಗೆಯಾಗಿ ಮನೆಗೆ ಮರಳಿದ ನಂತರ ಈ ರಕ್ತಸ್ರಾವ ಆಗುತ್ತದೆ. ಒಮ್ಮೆಲೇ ಇದು ಆಗದಿರುವುದರಿಂದ ಯಾವಾಗ ಅಪಾಯ ಬಂದೆರಗುತ್ತದೆ ಎಂದು ಊಹಿಸುವುದೂ ಕಷ್ಟ. ಬಾಣಂತಿಯರ ಸಾವಿಗೆ ಇದುವೇ ಕಾರಣ.

ಹೇಗೇ ಇರಲಿ, ಅತಿ ರಕ್ತಸ್ರಾವ ತಾಯಿಯ ಆರೋಗ್ಯಕ್ಕೆ ಹಾನಿಕರವೇ. ರಕ್ತಸ್ರಾವ ಅತಿಯಾಗಬಹುದು ಎಂಬುದನ್ನು ಊಹಿಸುವುದು ಸಾಧ್ಯವಾದರೆ, ಅಥವಾ ಅಗುವ ರಕ್ತಸ್ರಾವವನ್ನು ತಗ್ಗಿಸುವುದು ಸಾಧ್ಯವಾದರೆ ಹುಟ್ಟಿದ ಮಕ್ಕಳು ಅನಾಥರಾಗುವುದನ್ನು ತಡೆಯಬಹುದು. ತಂತ್ರಜ್ಞಾನ ಇದಕ್ಕೆ ನೆರವಾಗಬಹುದು. ಅಂತಹ ತಂತ್ರಜ್ಞಾನದಲ್ಲಿ ಒಬ್ರಿಯೆನ್ ತಂಡ ಸಿದ್ಧಪಡಿಸಿರುವ ಈ ಸಾಧನವೂ ಒಂದು.

ಪಿಪಿಎಚ್ ಸಂಕಟವನ್ನು ಕಡಿಮೆ ಮಾಡಲು ಹಲವು ಉಪಾಯಗಳಿವೆ. ರಕ್ತಸ್ರಾವ ಏಕೆ ಹೆಚ್ಚಾಗಿದೆ ಎನ್ನುವುದನ್ನು ಅವಲಂಬಿಸಿ ಈ ಚಿಕಿತ್ಸೆಗಳು ಇರುತ್ತವೆ. ಉದಾಹರಣೆಗೆ, ಗರ್ಭಕೋಶಕ್ಕೆ ರಕ್ತವನ್ನು ಪೂರೈಸುವ ನಾಳ ಒಡೆದಿರಬಹುದು. ಗರ್ಭದ್ವಾರ ಹೆರಿಗೆಯ ವೇಳೆ ಹರಿದು ರಕ್ತಸ್ರಾವ ಆಗುತ್ತಿರಬಹುದು. ಶಿಶುವಿಗೆ ಆಹಾರ ಪೂರೈಸುವ ಹೊಕ್ಕಳ ಬಳ್ಳಿಯ ಸ್ಥಾನ, ಹಾಗೂ ಅದು ಹರಿದು ಬೀಳುವ ಸಮಯ, ಹರಿಯುವ ರೀತಿಯೂ ರಕ್ತಸ್ರಾವವವನ್ನು ಹೆಚ್ಚಿಸಬಹುದು.

ಕಾರಣಗಳೇನು ಎಂಬುದಕ್ಕೆ ತಕ್ಕಂತೆ ಪರಿಹಾರಗಳೂ ಇರುತ್ತವೆ. ಗರ್ಭಾಶಯದ ಗೋಡೆಯ ಒತ್ತಡ ಹೆಚ್ಚಾಗಿ ರಕ್ತಸ್ರಾವ ಆಗುವುದುಂಟು. ಅಂತಹ ಸಂದರ್ಭಗಳಲ್ಲಿ ಗರ್ಭಕೋಶದೊಳಗೆ ಬಲೂನನ್ನು ಇಟ್ಟು, ಗಾಳಿ ತುಂಬಿ, ಗರ್ಭಕೋಶದ ಗೋಡೆ ಜರಿಯದಂತೆ ಮಾಡುವ ಉಪಾಯವಿದೆ. ರಕ್ತಸ್ರಾವಕ್ಕೆ ಕಾರಣವಾದ ಹಾರ್ಮೋನುಗಳನ್ನು ನಿಯಂತ್ರಿಸಲು ಬೇರೆ ಔಷಧಗಳನ್ನೂ, ಹಾರ್ಮೋನನ್ನೂ ನೀಡುವುದುಂಟು. ಶಸ್ತ್ರಕ್ರಿಯೆಯನ್ನೂ ಮಾಡುವುದುಂಟು. ಎರಡು ವರ್ಷಗಳ ಹಿಂದೆ ಗರ್ಭಕೋಶದೊಳಗೆ ನಿರ್ವಾತವನ್ನು ಉಂಟು ಮಾಡುವ ಜಾಡಾ ಎನ್ನುವ ಸಾಧನವೊಂದನ್ನು ಯಶಸ್ವಿಯಾಗಿ ಬಳಸಲಾಗಿತ್ತು. ರೋಗಿಗಳಲ್ಲಿ ಬಳಸಲು ಅದಕ್ಕೆ ಅಮೆರಿಕೆಯ ಆಹಾರ ಮತ್ತು ಔಷಧ ನಿಕಾಯ (ಎಫ್‌ಡಿಎ) ಅನುಮತಿಯೂ ದೊರೆತಿತ್ತು. 'ಭಾರತದಲ್ಲಿ ಬಕ್ರಿ ಬಲೂನು ಎನ್ನುವ ಬಲೂನು ವ್ಯವಸ್ಥೆಯೇ ಸದ್ಯಕ್ಕೆ ಇರುವ ಉಪಾಯ' ಎನ್ನುತ್ತಾರೆ, ಬೆಂಗಳೂರಿನ ಪ್ರಸೂತಿತಜ್ಞೆ ಡಾ. ಶಾಂತಲ.

ಆದರೂ ತಕ್ಷಣ ಕಾಣದ ರಕ್ತಸ್ರಾವ ಅನಂತರ ಹೆಚ್ಚುವ ಸಾಧ್ಯತೆಗಳಿವೆ. ಹೀಗಾದಾಗ ಆಸ್ಪತ್ರೆಯಿಂದ ಮನೆಗೆ ಮರಳಿದ ಬಾಣಂತಿ ಇದ್ದಕ್ಕಿದ್ದ ಹಾಗೆ ಅಸ್ವಸ್ಥವಾಗಬಹುದು. ರಕ್ತಹೀನಳಾಗಬಹುದು. ಈ ಸಾಧ್ಯತೆಗಳನ್ನು ಮುಂದಾಗಿಯೇ ಗುರುತಿಸಲು ಈಗ ತಕ್ಕ ಸಾಧನಗಳಿಲ್ಲ. ಮನೆಯಲ್ಲಿ ಎಷ್ಟು ಪ್ಯಾಡುಗಳನ್ನು ಬಳಸಿದೆವು ಎಂದೋ, ಆಸ್ಪತ್ರೆಯಲ್ಲಿ ರಕ್ತದೊತ್ತಡ, ಹೃದಯದ ಬಡಿತ ಮೊದಲಾದವನ್ನು ಅಗಾಗ್ಗೆ ಪರಿಶೀಲಿಸಿ ತೀರ್ಮಾನಿಸಬೇಕಾಗುತ್ತದೆ. ರಕ್ತಸ್ರಾವದ ಪ್ರಮಾಣವನ್ನು ತಿಳಿಸುವ ಸಾಧನವಿದ್ದರೆ ಹೇಗೆ ಎಂಬ ಐಡಿಯಾವೇ ಒಬ್ರಿಯೆನ್ ತಂಡದ ಸಾಧನೆಗೆ ಮೂಲ.

ಮುಂಗೈ ಮೇಲೆ ಧರಿಸುವ ಈ ಸಾಧನ, ಲೇಸರು ಬೆಳಕನ್ನು ಚೆಲ್ಲಿ ರಕ್ತನಾಳದಲ್ಲಿ ರಕ್ತದ ಹರಿವು ಹೇಗಿದೆ ಎಂಬುದನ್ನೂ, ರಕ್ತದ ಒತ್ತಡವನ್ನೂ ಗಮನಿಸುತ್ತದೆ. ಅದರಲ್ಲಾಗುತ್ತಿರುವ ಏರುಪೇರಿಗೂ ರಕ್ತಸ್ರಾವಕ್ಕೂ ಸಂಬಂಧವಿರುವುದರಿಂದ, ಜೊತೆಗಿರುವ ಇಲೆಕ್ಟ್ರಾನಿಕ್ ಸಾಧನ ಅದನ್ನು ಗುರುತಿಸಿ, ತಿಳಿಸಬಲ್ಲುದು. ಈ ಸಾಧನವನ್ನು ಸದ್ಯಕ್ಕೆ ಕೃತಕ ರಕ್ತನಾಳದಲ್ಲಿ ಹಾಲಿನಂತಹ ದ್ರವವನ್ನು ವಿವಿಧ ಒತ್ತಡದಲ್ಲಿ ಹರಿಸಿ ಪರೀಕ್ಷಿಸಲಾಗಿದೆ. ತದನಂತರ ಹಂದಿಗಳಲ್ಲಿ ಕೃತಕವಾಗಿ ರಕ್ತಸ್ರಾವವನ್ನು ಉಂಟುಮಾಡಿ, ಪರೀಕ್ಷಿಸಲಾಗಿದೆ. ರಕ್ತನಾಳದಲ್ಲಿ ಆಗುವ ಒತ್ತಡ ಹಾಗೂ ರಕ್ತದ ಹರಿವಿನ ಪ್ರಮಾಣವನ್ನೇ ಗುರುತಿಸಿ, ರಕ್ತಸ್ರಾವ ಎಷ್ಟಾಗುತ್ತದೆಂದು ಇದು ಊಹಿಸಬಲ್ಲುದು. ಮುಂಗೈಯಲ್ಲಿ ಧರಿಸುವ ಸ್ಮಾರ್ಟ್ ವಾಚುಗಳು ಸದ್ಯಕ್ಕೆ ಹೃದಯದ ಬಡಿತ ಹಾಗೂ ರಕ್ತದ ಆಕ್ಸಿಜನ್ ಪ್ರಮಾಣವನ್ನಷ್ಟೆ ಅಳೆಯುತ್ತವೆ. ರಕ್ತದ ಹರಿವು ಹಾಗೂ ಒತ್ತಡದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಅದಾಗುತ್ತಿರುವಂತೆಯೇ ಪತ್ತೆ ಮಾಡಿ ಸೂಚಿಸುವ ಈ ಸಾಧನ ಬಾಣಂತಿಯರ ಆರೋಗ್ಯದ ಮೇಲೆ ಕಣ್ಗಾವಲಿಡಲು ಅನುಕೂಲಿ. ಬಾಣಂತಿಯರಿಗೆ ಚಿನ್ನದ ಬಳೆ ತೊಡಿಸುವವೋ ಇಲ್ಲವೋ, ಈ ಸಾಧನವನ್ನು ತೊಡಿಸುವ ದಿನಗಳು ಶೀಘ್ರದಲ್ಲಿಯೇ ಬರಬಹುದು. 'ನಮ್ಮ ಸ್ಟಾರ್ಟಪ್ ಆರ್ಮರ್ ಮೆಡಿಕಲ್ ಈ ಸಾಧನವನ್ನು ಇನ್ನೊಂದೆರಡು ವರ್ಷಗಳಲ್ಲಿ ಮಾರಾಟ ಮಾಡಲಿದೆ' ಎನ್ನುತ್ತಾರೆ, ಕ್ರಿಸ್ಟೀನ್ ಓಬ್ರಿಯೆನ್. 'ಕೇವಲ ಬಾಣಂತಿಯರಿಗಷ್ಟೆ ಅಲ್ಲ. ಹೃದಯ ರೋಗಿಗಳಿಗೂ, ರಕ್ತದೊತ್ತಡ ಅತಿ ಹೆಚ್ಚಿರುವವರಿಗೂ ಇದು ಆರೋಗ್ಯದ ಮೇಲೆ ಕಣ್ಣಿಡಲು ನೆರವಾಗುತ್ತದೆ' ಎನ್ನುವುದು ಅವರ ವಿಶ್ವಾಸ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

1) ಬಿಟ್ಟ ಸ್ಥಳ ತುಂಬಿ

ಅ) ನರ ಅಂಗಾಂಶದ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕವನ್ನು ....ಎನ್ನುವರು

ಉತ್ತರ:– ನ್ಯೂರಾನ್

ಆ) ನ್ಯೂರಾನ್‌ನಲ್ಲಿ ಕೋಶ ಕೇಂದ್ರವನ್ನು ಹೊಂದಿರುವ ....ಇದೆ.

ಉತ್ತರ:– ಕೋಶಕಾಯ ಅಥವಾ ಸೈಟಾನ್

ಇ) ನರಕೋಶದಲ್ಲಿ ಕೋಶಕಾಯದಿಂದ ಹೊರಚಾಚಿರುವ ಚಿಕ್ಕ ರಚನೆಗಳಿಗೆ .... ಎನ್ನುವರು

ಉತ್ತರ:– ಡೆಂಡ್ರೈಟ್‌ಗಳು

ಈ) ನರಕೋಶದಲ್ಲಿ ನೀಳವಾದ ಶಾಖೆಗೆ .... ಎನ್ನುವರು

ಉತ್ತರ:– ಆಕ್ಸಾನ್

ಇ) ಅಕ್ಸಾನ್ ತನ್ನ ತುದಿಯಲ್ಲಿ ಹೊಂದಿರುವ ಶಾಖೆಗಳಿಗೆ .... ಎನ್ನುವರು

ಉತ್ತರ:– ಟೀಲೋಡೆಂಡ್ರೈಟ್

ಉ) ಅಕ್ಸಾನ್ ಸುತ್ತ ಇರುವ ಕೊಬ್ಬಿನ ಪದರಕ್ಕೆ .... ಹೊದಿಕೆ ಎನ್ನುವರು

ಉತ್ತರ:– ಮಯೋಲಿವ್

ಕೆಳಗಿನ ಹೇಳಿಕೆಗಳಿಗೆ ಉತ್ತರಿಸಿ

1) ನರವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– ನರಕೋಶ (neuron)ವೊಂದರ ಡೆಂಡ್ರೈಟ್ (dendrite)ಗಳ ತುದಿಯಲ್ಲಿ ಸಂಗ್ರಹಿತವಾದ ಮಾಹಿತಿಯು ಒಂದು ರಾಸಾಯನಿಕ ಕ್ರಿಯೆಯನ್ನು ಉಂಟುಮಾಡುತ್ತದೆ. ಇದು ಒಂದು ವಿದ್ಯುತ್ ಆವೇಗವನ್ನು ಸೃಷ್ಟಿಸುತ್ತದೆ. ಈ ಆವೇಗವು ಡೆಂಡ್ರೈಟ್‌ಗಳಿಂದ ಕೋಶಕಾಯಕ್ಕೆ ನಂತರ ಆಕ್ಸಾನ್‌ನ ಉದ್ದಕ್ಕೂ ಅದರ ತುದಿಯವರೆಗೆ ಚಲಿಸುತ್ತದೆ. ಆಕ್ಸಾನ್‌ನ ತುದಿಯಲ್ಲಿ ವಿದ್ಯುತ್ ಆ ವೇಗವು ಕೆಲವು ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಈ ರಾಸಾಯನಿಕಗಳು ಸಂಸರ್ಗವನ್ನು (synapse) ದಾಟುತ್ತವೆ ಮತ್ತು ಮುಂದಿನ ನರಕೋಶದ ಡೆಂಡ್ರೈಟ್‌ಗಳಲ್ಲಿ ಇದೇ ರೀತಿಯ ವಿದ್ಯುತ್ ಆವೇಗವನ್ನು ಪ್ರಾರಂಭಿಸುತ್ತವೆ. ಇದು ನರಾವೇಗಗಳು (nervous impulses) ದೇಹದಲ್ಲಿ ಹೇಗೆ ಸಂಚರಿಸುತ್ತವೆ ಎಂಬುದರ ಸಾಮಾನ್ಯ ನಕ್ಷೆಯಾಗಿದೆ. ಇದೇ ರೀತಿಯ ಸಂಸರ್ಗ ಅಂತಿಮವಾಗಿ ನರಕೋಶಗಳಿಂದ ಸ್ನಾಯುಕೋಶಗಳು ಅಥವಾ ಗ್ರಂಥಿಗಳಂತಹ ಇತರ ಜೀವಕೋಶಗಳಿಗೆ ಇಂತಹ ನರಾವೇಗಗಳನ್ನು ವಿತರಿಸಲು ಅನುವು ಮಾಡಿಕೊಡುತ್ತದೆ. ನರ ಕೋಶದ ರಚನೆ, ನರಸ್ನಾಯುಕ ಸಂಗಮ ಬಿಂದು (Neuromuscular Junction)





ಆದ್ದರಿಂದ ನರ ಅಂಗಾಂಶವು ನರಕೋಶ ಅಥವಾ ನ್ಯೂರಾನ್‌ಗಳಿಂದಾದ ಒಂದು ವ್ಯವಸ್ಥಿತ ಜಾಲದಿಂದ ಮಾಡಲ್ಪಟ್ಟಿದೆ ಈ ವ್ಯವಸ್ಥೆ ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಮಾಹಿತಿಯನ್ನು ವಿದ್ಯುತ್ ಆವೇಗಗಳ ಮೂಲಕ ಸಾಗಿಸುವ ವೈಶಿಷ್ಟ್ಯತೆಯನ್ನು ಪಡೆದಿದೆ

2) ಪರಾವರ್ತಿತ ಕ್ರಿಯೆಗಳಲ್ಲಿ ಏನಾಗುತ್ತದೆ?

ಉತ್ತರ:– 'ಪರಾವರ್ತನೆ'(reflex) ಎಂಬುದು ಪರಿಸರದಲ್ಲಿ ಉಂಟಾಗುವ ಯಾವುದೋ ಘಟನೆಗೆ ಪ್ರತಿಯಾಗಿ ವ್ಯಕ್ತವಾಗುವ ಹಠಾತ್ ಪ್ರತಿಕ್ರಿಯೆಯಾಗಿದೆ ಉದಾ. ಮಾನವನೊಬ್ಬ 'ವೇಗವಾಗಿ ಬರುತ್ತಿದ್ದ ಬಸ್ಸಿನ ಮಾರ್ಗದಿಂದ ತನಗರಿವಿಲ್ಲದೆ ಹೊರ ಜಿಗಿಯುತ್ತಾನೆ' ಅಥವಾ 'ಬೆಂಕಿಯ ಜ್ವಾಲೆಯಿಂದ ತನ್ನ ಕೈಯನ್ನು ತನಗರಿವಿಲ್ಲದೆ ಹಿಂತೆಗೆದುಕೊಳ್ಳುತ್ತಾನೆ'

ನಮ್ಮ ದೇಹದಲ್ಲಿನ ಆಲೋಚನಾ ಅಂಗಾಂಶವು ಸಂಕೀರ್ಣವಾಗಿ ಜೋಡಣೆಗೊಂಡ ನರಕೋಶಗಳ ದಟ್ಟವಾದ ಜಾಲಗಳನ್ನು ಹೊಂದಿದೆ.. ತಲೆಬುರುಡೆಯ ಒಳಗೆ ಮುಂಭಾಗದ ತುದಿಯಲ್ಲಿ ಕುಳಿತುಕೊಂಡಿರುವ ಇದು ದೇಹದ ಎಲ್ಲಾ ಭಾಗಗಳಿಂದ ಸಂಕೇತಗಳನ್ನು ಸ್ವೀಕರಿಸುತ್ತದೆ ಮತ್ತು ಅವುಗಳಿಗೆ ಪ್ರತಿಕ್ರಿಯಿಸುವ ಮೊದಲು ಅವುಗಳ ಬಗ್ಗೆ ಆಲೋಚಿಸುತ್ತದೆ. ಈ ಸಂಕೇತಗಳನ್ನು ಸ್ವೀಕರಿಸಬೇಕಾದರೆ, ತಲೆಬುರುಡೆಯಲ್ಲಿನ ಮಿದುಳಿನ ಆಲೋಚಿಸುವ ಭಾಗವು ದೇಹದ ವಿವಿಧ ಭಾಗಗಳಿಂದ ಬರುವ ನರಗಳಿಗೆ ನಿಸ್ಸಂಶಯವಾಗಿ ಸಂಪರ್ಕ ಹೊಂದಿರಲೇಬೇಕಾಗುತ್ತದೆ. ಅದೇ ರೀತಿ ಮಿದುಳಿನ ಈ ಭಾಗವು ಸ್ನಾಯುಗಳಿಗೆ ಚಲಿಸಲು ಸೂಚಿಸಬೇಕಾದರೆ, ನರಗಳು ಈ ಸಂಕೇತಗಳನ್ನು ದೇಹದ ವಿಭಿನ್ನ ಭಾಗಗಳಿಗೆ ಪುನಃ ಹಿಂದಿರುಗಿ ಒಯ್ಯಬೇಕಾಗುತ್ತದೆ. ಒಂದು ವೇಳೆ ನಾವು ಬಿಸಿ ವಸ್ತುವನ್ನು ಮುಟ್ಟಿದಾಗ ಶಾಖದ ಸಂವೇದನೆಯ ಬಗ್ಗೆ ಯೋಚಿಸುವುದಕ್ಕೆ ಬದಲಾಗಿ, ಒಂದು ವೇಳೆ ಸ್ನಾಯುಗಳನ್ನು ಸರಳ ರೀತಿಯಲ್ಲಿ ಚಲಿಸುವಂತೆ ಮಾಡುವ ನರಗಳಿಗೆ ಶಾಖವನ್ನು ಗುರುತಿಸುವ ನರಗಳನ್ನು ಸಂಪರ್ಕಿಸಿದರೆ, ಒಳಹರಿವು ಅಥವಾ ಸಂಕೇತಗಳನ್ನು ಗುರುತಿಸುವ ಪ್ರಕ್ರಿಯೆ ಮತ್ತು ಹೊರಹರಿವು ಪ್ರಕ್ರಿಯೆಯ ಮೂಲಕ ಅದಕ್ಕೆ ಪ್ರತಿಕ್ರಿಯಿಸುವುದನ್ನು ಬಹುಶಃ ತ್ವರಿತವಾಗಿ ಪೂರ್ಣಗೊಳಿಸಬಹುದು. ಇಂತಹ ಸಂಪರ್ಕವನ್ನು ಸಾಮಾನ್ಯವಾಗಿ 'ಪರಾವರ್ತಿತ ಚಾಪ' (reflex arc) ಎಂದು ಕರೆಯುತ್ತಾರೆ.

ಜ್ಞಾನವಾಹಿ ನರ ಮತ್ತು ಕ್ರಿಯಾವಾಹಿ ನರಗಳ ಮಧ್ಯೆ ಪರಾವರ್ತಿತ ಚಾಪದ ಸಂಪರ್ಕಗಳನ್ನು ಅವು ಮೊದಲಬಾರಿಗೆ ಸಂಗಮಿಸುವ ಬಿಂದುಗಳಲ್ಲಿ ಇರುತ್ತದೆ. ದೇಹದ ಎಲ್ಲಾ ಭಾಗಗಳಿಂದ ನರಗಳು ಮಿದುಳಿಗೆ ಹೋಗುವ ಮಾರ್ಗದಲ್ಲಿ ಗುಂಪುಗಳ ರೂಪದಲ್ಲಿ ಜೊತೆಯಾಗುತ್ತವೆ. ಮಾಹಿತಿ ಒಳಹರಿವು ಮಿದುಳನ್ನು ತಲುಪಲು ಹೋಗುತ್ತಿದ್ದರೂ ಸಹ ಪರಾವರ್ತಿತ ಚಾಪಗಳು ಮಿದುಳುಬಳ್ಳಿಯಲ್ಲಿ (spinal cord) ತಾನೇತಾನಾಗಿ ಉಂಟಾಗುತ್ತವೆ. ಮಿದುಳಿನ ಆಲೋಚನಾ ಪ್ರಕ್ರಿಯೆಯು ಸಾಕಷ್ಟು ವೇಗವಾಗಿಲ್ಲದಿರುವುದರಿಂದ ಪ್ರಾಣಿಗಳಲ್ಲಿ ಪರಾವರ್ತಿತ ಚಾಪಗಳು ಸಹಜವಾಗಿ ವಿಕಸನಗೊಂಡಿರುವುದನ್ನು ನೋಡುತ್ತೇವೆ. ವಾಸ್ತವವಾಗಿ ಅನೇಕ ಪ್ರಾಣಿಗಳು ಆಲೋಚನೆಗೆ ಅಗತ್ಯವಾದ ನರಕೋಶಗಳ ಸಂಕೀರ್ಣ ಜಾಲವನ್ನು ಹೊಂದಿಲ್ಲ ಅಥವಾ ಅತ್ಯಲ್ಪ ಪ್ರಮಾಣದಲ್ಲಿ ಹೊಂದಿವೆ. ಆದ್ದರಿಂದ, ನಿಜವಾದ ಆಲೋಚನಾ ಪ್ರಕ್ರಿಯೆಗಳ ಅನುಪಸ್ಥಿತಿಯಲ್ಲಿ ಪರಾವರ್ತಿತ ಚಾಪಗಳು ಕಾರ್ಯನಿರ್ವಹಿಸಿ ಪರಿಸ್ಥಿತಿಯನ್ನು ತಿಳಿಗೊಳಿಸುತ್ತವೆ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC MATHEMATICS

DETERMINANTS

Applications of Determinants

a) To find the Area of the triangle:

Area of the triangle whose vertices are – $A(x_1, y_1), B(x_2, y_2), C(x_3, y_3)$

$$=\frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix}$$

$$=\frac{1}{2}(x_1y_2 - x_2y_1 + x_2y_3 - x_3y_2 + x_3y_1 - x_1y_3)$$

b) The three points $A(x_1, y_1), B(x_2, y_2), C(x_3, y_3)$ are collinear if and only if the area of the triangle is zero.

That is iff $\frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix} = 0$

Problems:-

1. Using determinants, find the area of the triangle whose vertices are

$(1, 4), (2, -3), (-5, -3)$

Soln:- Area of the triangle = absolute value of

$$\frac{1}{2}\begin{vmatrix} 1 & 4 & 1 \\ 2 & -3 & 1 \\ -5 & -3 & 1 \end{vmatrix}$$

$$=\frac{1}{2}|1(-3+3)-4(2+5)+1(-6-15)|$$

$$=\frac{1}{2}|1(0)-4(7)+1(-21)|$$

$$=\frac{1}{2}|0-28-21|=\frac{1}{2}|-49|=\frac{49}{2}\text{ sq.units}$$

2. Using determinants, find the area of the triangle whose vertices are -

$(1, -1), (2, 4), (-3, 5)$

and also find whether the points are collinear.

Soln:- Area of the triangle = absolute value of

$$\frac{1}{2}\begin{vmatrix} 1 & -1 & 1 \\ 2 & 4 & 1 \\ -3 & 5 & 1 \end{vmatrix}$$

$$=\frac{1}{2}|1(4-5)+1(2+3)+1(10+12)|$$

$$=\frac{1}{2}|-1+5+22|=\frac{1}{2}|26|$$

$= 13$ sq.units

Since the area of the triangle is not equal to zero, the three given points are not collinear.

3. Find the value of x, if the area of the triangle is 35 sq.units with vertices

$(x, 4), (2, -6), (5, 4)$

Soln:– Absolute value of $\frac{1}{2}\begin{vmatrix} x & 4 & 1 \\ 2 & -6 & 1 \\ 5 & 4 & 1 \end{vmatrix} = 35$

$$R_1 - R_3 \rightarrow \frac{1}{2}\begin{vmatrix} x-5 & 0 & 0 \\ 2 & -6 & 1 \\ 5 & 4 & 1 \end{vmatrix} = 35$$

$\Rightarrow 70 = |(x-5)(-6-4)|$

$= 10|(x-5)|$

$\Rightarrow |(x-5)| = \frac{70}{10} = 7$

$\Rightarrow x-5 = 7 \text{ (or) } -7$

$\therefore x = 12, -2$

4. A Δle has its three sides equal to a, b & c. If the coordinates of its vertices are $A(x_1, y_1)$, $B(x_2, y_2)$ and $C(x_3, y_3)$, show that $\begin{vmatrix} x_1 & y_1 & 2 \\ x_2 & y_2 & 2 \\ x_3 & y_3 & 2 \end{vmatrix}^2 = (a+b+c)(b+c-a)(c+a-b)(a+b-c)$.

Soln:– Let Δ be the area of the triangle ABC.

$$\therefore \Delta = \frac{1}{2}\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix} \text{ ....(1)}$$

$$\text{L.H.S.} = \begin{vmatrix} x_1 & y_1 & 2 \\ x_2 & y_2 & 2 \\ x_3 & y_3 & 2 \end{vmatrix}^2 = \left(2\begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix}\right)^2$$

$= (2(2\Delta))^2 = 16\Delta^2$ [By (1)]

R.H.S $= (a+b+c)(b+c-a)(c+a-b)(a+b-c)$

$= [2s(a+b+c-2a)(a+b+c-2b)(a+b+c-2c)]$

(Using $2s = a+b+c$)

$= 2s(2s-2a)(2s-2b)(2s-2c)$

$= 16s(s-a)(s-b)(s-c)$

$= 16\left(\sqrt{s(s-a)(s-b)(s-c)}\right)^2$

$= 16\Delta^2$ (By Area formula)

$\therefore$ L.H.S = R.H.S.

Applications of simultaneous linear equations

1. The sum of three numbers is 6. If we multiply the third number by 2 and add the first number to the result, we get 7. By adding second and third numbers to three times the first number, we get 12. Using matrices find the numbers.

Soln:- Let the three numbers be x, y and z respectively, then,

$x + y + z = 6.$

Also, $x + 2z = 7$[given] and,

$3x + y + z = 12$

Thus, we obtain the following system of simultaneous linear equations:

$$x + y + z = 6$$
$$x + 0y + 2z = 7$$
$$3x + y + z = 12$$

The above system of equations can be written in matrix form as

ಹೆಸ್ಕಾಂ ನಿವೃತ್ತ ನೌಕರನ ಬಳಿ ನೋಟಿನ ಕಂತೆ

ಪ್ರಜಾವಾಣಿ ವಾರ್ತೆ



ಬಸವರಾಜ ಮಳಿಮಠ

ಹಾವೇರಿ: ರಾಣೆಬೆನ್ನೂರಿನ ಈಶ್ವರ ನಗರದ ನಿವಾಸಿ, ಹೆಸ್ಕಾಂ ನಿವೃತ್ತ ನೌಕರ ಬಸವರಾಜ ಮಳಿಮಠ ಅವರ ಮನೆಯಲ್ಲಿ ಕಂತೆ ಕಂತೆ ನೋಟು ಧಾರವಾಡ ಲೋಕಾಯುಕ್ತ ಪೊಲೀಸರ ದಾಳಿ ವೇಳೆ ಪತ್ತೆಯಾಗಿದೆ.

ರಾಣೆಬೆನ್ನೂರಿನ ಮನೆಯಲ್ಲಿ ₹ 97 ಲಕ್ಷ ನಗದು, ಬ್ಯಾಂಕ್ ಅಕೌಂಟ್‌ನಲ್ಲಿ ₹30 ಲಕ್ಷ ಸೇರಿ ₹1.27 ಕೋಟಿ ನಗದು ಪತ್ತೆಯಾಗಿದೆ. 317 ಗ್ರಾಂ ಚಿನ್ನಾಭರಣ, 26 ಕೆಜಿ ಬೆಳ್ಳಿ ಹಾಗೂ ಇನ್ಸುರೆನ್ಸ್ ಪಾಲಿಸಿಗಳಿಗೆ ಸಂಬಂಧಿಸಿದ ಕೆಲ ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ರಾಣೆಬೆನ್ನೂರು ಮತ್ತು ದಾವಣಗೆರೆಯಲ್ಲಿ 3 ಭವ್ಯ ಮನೆಗಳು, ರಾಣೆಬೆನ್ನೂರಿನ ಸುವರ್ಣ ಪಾರ್ಕ್ ಬಳಿ 3 ಖಾಲಿ ನಿವೇಶನ, ಚಿದಂಬರ ನಗರದಲ್ಲಿ ವಾಣಿಜ್ಯ ಕಟ್ಟಡ ಇರುವುದು ಪತ್ತೆಯಾಗಿದೆ. 'ಹೆಸ್ಕಾಂನಲ್ಲಿ ಸ್ಟೋರ್ ಕೀಪರ್ ಆಗಿದ್ದಾಗ ಟ್ರಾನ್ಸ್‌ಫಾರ್ಮರ್ ವಿತರಣೆಯಲ್ಲಿ ಭಾರಿ ಅವ್ಯವಹಾರ ನಡೆಸಿದ ಆರೋಪವಿತ್ತು. ಕಿರಿಯ ಎಂಜಿನಿಯರ್ ಆಗಿ ಬಡ್ತಿ ಹೊಂದಿದ್ದ ಅವರು ಮೇ ತಿಂಗಳಲ್ಲಿ ನಿವೃತ್ತರಾಗಿದ್ದರು.

ಲೋಕಾಯುಕ್ತ ದಾಳಿ ವೇಳೆ ₹8.41 ಕೋಟಿ ಮೌಲ್ಯದ ಆಸ್ತಿ ಪತ್ತೆ

ಕೋಟ್ಯಧೀಶ ಪ್ರಾಧ್ಯಾಪಕ

ಪ್ರಜಾವಾಣಿ ವಾರ್ತೆ

ಮಹದೇವ ಸ್ವಾಮಿ

ಮೈಸೂರು: ಜಿಲ್ಲೆಯ ನಂಜನಗೂಡಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಮಹದೇವಸ್ವಾಮಿ ಅವರು ಕುಟುಂಬದವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಹೊಂದಿದ್ದು, ನಗರ ಪ್ರದೇಶದ 12 ಕಡೆ ಉದ್ಯಮ ವಿಸ್ತರಿಸಿರುವುದು ಲೋಕಾಯುಕ್ತ ಪೊಲೀಸರನ್ನು ಹುಬ್ಬೇರಿಸುವಂತೆ ಮಾಡಿದೆ.

ಮಹದೇವಸ್ವಾಮಿ ಅವರು ಮೈಸೂರಿನ ಜೆ.ಪಿ. ನಗರದ ಮಹದೇವ ಪುರದಲ್ಲಿ ಇರುವ ಗುರುಕುಲ ಬಡಾವಣೆಯ ಮನೆಯಲ್ಲಿ ವಾಸವಿದ್ದಾರೆ. ಅವರ ಬಳಿ ₹6.08 ಕೋಟಿ ಮೌಲ್ಯದ ಸ್ಥಿರಾಸ್ತಿ ಹಾಗೂ ₹2.33 ಮೌಲ್ಯದ ಚರಾಸ್ತಿ ಪತ್ತೆಯಾಗಿದೆ. ಪತ್ನಿ, ಕುಟುಂಬದವರ ಹೆಸರಿನಲ್ಲಿ ಐದು ಕಡೆ ಸ್ಟೀಲ್ ಉತ್ಪನ್ನಗಳ ಅಂಗಡಿ ನಡೆಸುತ್ತಿದ್ದಾರೆ. 'ಎಂ.ಎಸ್. ಇನ್ಫ್ರಾಸ್ಟ್ರಕ್ಚರ್' ಹೆಸರಿನಲ್ಲಿ ನಂಜನಗೂಡಿನ ಹುಲ್ಲಹಳ್ಳಿ ರಸ್ತೆ, ಮೈಸೂರಿನ ವಿಜಯನಗರ, ಜೆ.ಪಿ. ನಗರ, ಕೆ.ಆರ್. ನಗರದಲ್ಲಿ ಹಾರ್ಡ್‌ವೇರ್ ಅಂಗಡಿ ನಡೆಸುತ್ತಿದ್ದು, ಮನೆ ನಿರ್ಮಾಣಕ್ಕೆ ಬೇಕಾಗುವ ಸ್ಟೀಲ್ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಜೆ.ಪಿ. ನಗರದಲ್ಲಿ ಬಟ್ಟೆ ಅಂಗಡಿಯನ್ನೂ ತೆರೆದಿದ್ದಾರೆ.

'ಗುರುಕುಲ' ಹೆಸರಿನಲ್ಲಿ ಟ್ರಸ್ಟ್ ಮೂಲಕ ಜೆ.ಪಿ. ನಗರದಲ್ಲಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಶಿಕ್ಷಣ ನೀಡುವ ಗುರುಕುಲ ಅಕಾಡೆಮಿಯನ್ನೂ ನಡೆಸುತ್ತಿದ್ದಾರೆ. ಟ್ರಸ್ಟ್‌ನಲ್ಲಿ ಅವರ ಪತ್ನಿ, ಅಣ್ಣ, ತಮ್ಮಂದಿರಿದ್ದಾರೆ 'ಇದ್ದಾರೆ. ವ್ಯವಹಾರಗಳನ್ನು ಮಹದೇವಸ್ವಾಮಿ ಅವರೇ ನೋಡಿಕೊಳ್ಳುತ್ತಿದ್ದರು ಎನ್ನಲಾಗಿದೆ.

2014ರಲ್ಲಿ ಗುರುಕುಲ ಬಡಾವಣೆಯಲ್ಲಿ ಶ್ರೀಮಹದೇಶ್ವರ ಸ್ವಾಮಿ ಇನ್ಫ್ರಾಟೆಕ್ ಆ್ಯಂಡ್ ಹೌಸಿಂಗ್ ಡೆವಲಪರ್ಸ್ ಹೆಸರಿನಲ್ಲಿ ಕಟ್ಟಡ ನಿರ್ಮಾಣ ಹಾಗೂ ವಾಸ್ತುಶಿಲ್ಪ ವಿನ್ಯಾಸದ ಸಂಸ್ಥೆ ನಡೆಸುತ್ತಿದ್ದಾರೆ. ಜತೆಗೆ ರಿಯಲ್ ಎಸ್ಟೇಟ್ ವ್ಯವಹಾರವನ್ನೂ ನಡೆಸುತ್ತಿದ್ದರು ಎನ್ನಲಾಗಿದೆ. ಶ್ರೀರಂಗಪಟ್ಟಣದ ಅರಕೆರೆ ಗ್ರಾಮದ ಮನೆ ಮೇಲೂ ದಾಳಿ ನಡೆದಿದೆ. ದಾಳಿ ವೇಳೆ ಫಾರ್ಚುನರ್, ಹುಂಡೈ ವೆರ್ನಾ, ಹುಂಡೈ ಐ 10 ಕಾರು, ಆರು ಶಾಲಾ ಬಸ್, ಬಜಾಜ್ ಬೈಕ್ ವಾಹನಗಳು ಪತ್ತೆಯಾಗಿವೆ. 'ನಂಜನಗೂಡು ಕಾಲೇಜಿನಲ್ಲಿ 6 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಪ್ರಾಧ್ಯಾಪಕರ ವರ್ಗಾವಣೆಯಲ್ಲೂ ತೊಡಗಿಸಿಕೊಂಡಿದ್ದಾರೆ. ಕೋಟ್ಯಂತರ ಮೊತ್ತದ ಆಸ್ತಿ ಹೊರತಾಗಿಯೂ ಅವರ ಕುಟುಂಬದ ಆಪ್ತರು ಬಿಪಿಎಲ್ ಕಾರ್ಡ್ ಹೊಂದಿರುವಂತೆ ನೋಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿರುವ ಶ್ರೀಮಹದೇಶ್ವರ ಸ್ವಾಮಿ ಇನ್ಫ್ರಾಟೆಕ್ ಆ್ಯಂಡ್ ಹೌಸಿಂಗ್ ಡೆವಲಪರ್ಸ್ ಸಂಸ್ಥೆಯ ಕಟ್ಟಡ

ನಗದು, ಬಂಗಾರ, ಬೆಳ್ಳಿ ಪತ್ತೆ

ಕಂಪ್ಲಿ: ಗಂಗಾವತಿ ತಾಲ್ಲೂಕು ಆನೆಗುಂದಿ ಉಪ ವಲಯ ಅರಣ್ಯಾಧಿಕಾರಿ ಬಿ. ಮಾರುತಿ ಅವರ ಇಲ್ಲಿಯ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿ ವೇಳೆ ₹2.50ಲಕ್ಷ ನಗದು, 250 ಗ್ರಾಂ ಬಂಗಾರದ ಆಭರಣ, 1.50 ಕೆ.ಜಿ. ಬೆಳ್ಳಿ ಆಭರಣ ಪತ್ತೆಯಾಗಿದೆ.

ಬಳ್ಳಾರಿ ಲೋಕಾಯುಕ್ತ ಎಸ್.ಪಿ. ಶಶಿಧರ ಅವರು, 'ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಆರೋಪ ಹಿನ್ನೆಲೆಯಲ್ಲಿ ದಾಳಿ ನಡೆದಿದೆ. ಈ ವೇಳೆ ಕಂಪ್ಲಿ, ಸಿರುಗುಪ್ಪ ಸೇರಿ ವಿವಿಧೆಡೆ 15 ಎಕರೆ ಜಮೀನು, ಆರು ನಿವೇಶನಗಳ ದಾಖಲೆಗಳು, ಇನ್ನೋವಾ ಕಾರು ಪತ್ತೆಯಾಗಿದೆ' ಎಂದು ವಿವರಿಸಿದರು.

ಎಂಜಿನಿಯರ್ ಶರಣಪ್ಪ ಅಮಾನತು: ಇಲ್ಲಿನ ಪುರಸಭೆಯ ಪರಿಸರ ಎಂಜಿನಿಯರ್ ಶರಣಪ್ಪ ಅವರ ವಿರುದ್ಧದ ಭ್ರಷ್ಟಾಚಾರ ಆರೋಪ ಹಿನ್ನೆಲೆಯಲ್ಲಿ ಕೊಪ್ಪಳದ ಲೋಕಾಯುಕ್ತ ಪಿ.ಐ. ರಾಜೇಶ್ ನೇತೃತ್ವದಲ್ಲಿ ಪೊಲೀಸರು ಪುರಸಭೆ ಕಚೇರಿಗೆ ಭೇಟಿ ನೀಡಿದ್ದು, ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದರು.

ಶರಣಪ್ಪ ಹಿಂದೆ ಯಾದಗಿರಿ ನಗರಸಭೆ ಪೌರಾಯುಕ್ತರಾಗಿದ್ದಾಗ, ನಗರಸಭೆ ವ್ಯಾಪ್ತಿಯ ಸರ್ವೆ ನಂ. 391/1,2 ಸರ್ಕಾರಿ ಆಸ್ತಿಗೆ ಸಂಬಂಧಿಸಿ ನಕಲಿ ಖಾತೆ ಹಾಗೂ ಮ್ಯುಟೇಷನ್ ಸೃಷ್ಟಿಸಿ ಖಾಸಗಿಯವರಿಗೆ ಮಾರಿರುವುದು ತನಿಖೆಯಿಂದ ದೃಢಪಟ್ಟಿದ್ದು, ಪೌರಾಡಳಿತ ನಿರ್ದೇಶನಾಲಯವು ಅಮಾನತು ಮಾಡಿ ಆದೇಶಿಸಿದೆ. 'ಶರಣಪ್ಪ ಅವರನ್ನು ಸದ್ಯ ಮಾತೃ ಪುರಸಭೆಗೆ ಲೀನ್ ವರ್ಗಾವಣೆ ಮಾಡಲಾಗಿದೆ' ಎಂದು ಪುರಸಭೆ ಮುಖ್ಯಾಧಿಕಾರಿ ಕೆ. ದುರುಗಣ್ಣ ಅವರು ತಿಳಿಸಿದರು.

ಭೂವಿಜ್ಞಾನಿ ಬಳಿ ಆರು ನಿವೇಶನ!

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯ ಗಣಿ ಹಾಗೂ ಭೂ ವಿಜ್ಞಾನ ಇಲಾಖೆಯ ಹಿರಿಯ ವಿಜ್ಞಾನಿ ಚಂದ್ರಶೇಖರ್ ಹಿರೇಮನಿ ಅವರ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು.

ಚಂದ್ರಶೇಖರ್ ಹಿರೇಮನಿ ಬಳ್ಳಾರಿಯ ಶ್ರೀರಾಮ ನಗರದಲ್ಲಿ ಎರಡು ನಿವೇಶನ, ಹಗರಿಬೊಮ್ಮನಹಳ್ಳಿಯಲ್ಲಿ ಎರಡು ನಿವೇಶನ, ಕೊಪ್ಪಳದಲ್ಲಿ ಒಂದು ನಿವೇಶನ ಸೇರಿದಂತೆ ಆರು ನಿವೇಶನ ಹೊಂದಿದ್ದಾರೆ ಎಂದು ಲೋಕಾಯುಕ್ತ ಎಸ್.ಪಿ. ಶಶಿಧರ್ ಹೇಳಿದರು.

'₹1.47 ಲಕ್ಷ ನಗದು, 110 ಗ್ರಾಂ ಚಿನ್ನ, 347 ಗ್ರಾಂ ಬೆಳ್ಳಿ ಆಭರಣ, ಒಂದು ಕಾರು, ಒಂದು ಬೈಕ್ ಪತ್ತೆಯಾಗಿದೆ. ಇನ್ನೊಂದು ಕಾರು ಇರುವ ಮಾಹಿತಿ ಇದೆ. ಅಲ್ಲದೆ, ಜಮೀನು ಹೊಂದಿರುವ ಬಗ್ಗೆ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ' ಎಂದರು.

ದಾಳಿಯಲ್ಲಿ ಚಿತ್ರದುರ್ಗದ ಲೋಕಾಯುಕ್ತ ಡಿಎಸ್‌ಪಿ ಮೃತ್ಯುಂಜಯ, ಬಳ್ಳಾರಿ ಲೋಕಾಯುಕ್ತ ಪಿಐ ಸಂಗಮೇಶ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ರೈತ ಮುಖಂಡರ ನಡುವೆ ಗಲಾಟೆ: ದೂರು-ಪ್ರತಿದೂರು

ಪ್ರಜಾವಾಣಿ ವಾರ್ತೆ

ಮಂಡ್ಯ: ರಾಜ್ಯ ರೈತ ಸಂಘದ ಎರಡು ಬಣಗಳ ಮುಖಂಡರ ನಡುವೆ ಮಂಗಳವಾರ ಗಲಾಟೆ ನಡೆದಿದ್ದು, ದೂರು, ಪ್ರತಿದೂರು ದಾಖಲಾಗಿದೆ.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹಾಗೂ ಮತ್ತೊಂದು ಬಣದ ಅಧ್ಯಕ್ಷ ಇಂಗಲಕುಪ್ಪೆ ಕೃಷ್ಣಮುಖಾಮುಖಿಯಾದ ಸಂದರ್ಭ ಪರಸ್ಪರ ವಾಗ್ವಾದ, ನಿಂದನೆ ನಡೆದು, ಪ್ರತಿಭಟನೆಗೆ ತಿರುಗಿತು.

'ನಾಗೇಂದ್ರ ಅವರ ಮೇಲೆ ಕೃಷ್ಣ ಮತ್ತು ಅವರ ಬೆಂಬಲಿಗರು ಹಲ್ಲೆ ನಡೆಸಿ, ಕಾರು ಹತ್ತಿಸಲು ಪ್ರಯತ್ನ ಮಾಡಿದ್ದಾರೆ. ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿ ನಾಗೇಂದ್ರ ಬೆಂಬಲಿಗರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ನಾಗೇಂದ್ರ, 'ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲು ಬಂದಿದ್ದೆವು. ಎದುರಾದ ಕೃಷ್ಣ, 'ಬೇಕಂತಲೇ ದೂರು ನೀಡುತ್ತೀಯ. ನಿನ್ನನ್ನು ಸುಮ್ಮನೆ ಬಿಡುವುದಿಲ್ಲ' ಎಂದು ನಿಂದಿಸಿ ಹಲ್ಲೆಗೆ ಯತ್ನಿಸಿದ್ದು, ಕಾರಿನಿಂದ ಗುದ್ದಿಸಿ ಕೊಲೆಗೆ ಪ್ರಯತ್ನಿಸಿದ್ದಾರೆ' ಎಂದು ದೂರಿದರು.

'ರೈತ ಸಂಘದ ಹೆಸರಿನಲ್ಲಿ ಕೃಷ್ಣ ಅಕ್ರಮಗಳಲ್ಲಿ ತೊಡಗಿದ್ದಾರೆ. ಕಾರಿಗೆ ಅಕ್ರಮವಾಗಿ ನಾಮಫಲಕ ಹಾಗೂ ಹಸಿರು ದೀಪ ಹಾಕಿಕೊಂಡಿದ್ದು, ಕಾರನ್ನು ವಶಕ್ಕೆ ಪಡೆಯಬೇಕು' ಎಂದು ಒತ್ತಾಯಿಸಿದರು.

ಘಟನೆ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಕೃಷ್ಣ, 'ರಸ್ತೆ ದುರಸ್ತಿ ಸಂಬಂಧ ಜಿಲ್ಲಾಧಿಕಾರಿಗೆ ಮನವಿ ನೀಡಲು ಹೋಗಿದ್ದಾಗ ನಾಗೇಂದ್ರ ಮತ್ತವರ ಬೆಂಬಲಿಗರು ಬೆದರಿಕೆ ಒಡ್ಡಿದರು. ನಂತರ ಕಾರು ತಡೆದು ಹಲ್ಲೆಗೆ ಯತ್ನಿಸಿದರು. ಘಟನೆ ವಿಡಿಯೊ ಮಾಡುತ್ತಿದ್ದ ಬೆಂಬಲಿಗರ ಮೇಲೂ ಹಲ್ಲೆ ನಡೆಸಿದ್ದಾರೆ' ಎಂದು ದೂರಿದರು.

ಪ್ರಕರಣ ಸಂಬಂಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಕುಬೇರರಿಗೆ 'ಲೋಕಾ' ಬಿಸಿ

ಒಂದನೇ ಪುಟದಿಂದ

ದಾಳಿಯ ವೇಳೆ ಕಂತೆ ಕಂತೆ ನಗದು, ಚಿನ್ನಾಭರಣ, ಬೆಲೆ ಬಾಳುವ ಪುರಾತನ ವಸ್ತುಗಳು, ವಜ್ರಾಭರಣ, ಬೆಳ್ಳಿ ಸಾಮಗ್ರಿ, ಆಸ್ತಿ ಖರೀದಿ ಪತ್ರಗಳು ಪತ್ತೆಯಾಗಿವೆ. ಬೇರೆ ಬೇರೆ ಸ್ಥಳಗಳಲ್ಲಿರುವ ನಿವೇಶನಗಳು, ನಿರ್ಮಾಣ ಹಂತದ ಕಟ್ಟಡ, ತಮ್ಮ ಹಾಗೂ ಸಂಬಂಧಿಕರ ಹೆಸರಿನಲ್ಲಿರುವ ಬಹುಮಹಡಿ ಕಟ್ಟಡಗಳ ದಾಖಲೆಗಳು ಪರಿಶೀಲನೆ ವೇಳೆ ಲೋಕಾಯುಕ್ತ ಪೊಲೀಸರಿಗೆ ಪತ್ತೆಯಾಗಿವೆ.

ವಜ್ರಾಭರಣ, ಅಪಾರ ನಗದು ಪತ್ತೆ: ಬೆಸ್ಕಾಂ ಜಯನಗರ ಉಪ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ಎಚ್.ಡಿ. ಚನ್ನಕೇಶವ ಅವರಿಗೆ ಸಂಬಂಧಿಸಿದ ಜಕ್ಕೂರಿನ ಮನೆ ಸೇರಿದಂತೆ ಏಳು ಸ್ಥಳಗಳಲ್ಲಿ ಪೊಲೀಸರು ಶೋಧ ನಡೆಸಿದರು. ಶೋಧದ ವೇಳೆ ₹11.46 ಕೋಟಿ ಮೌಲ್ಯದ ಸ್ಥಿರಾಸ್ತಿ, ₹1.44 ಕೋಟಿ ನಗದು, 3 ಕೆಜಿ ಚಿನ್ನ, 28 ಕೆಜಿ ಬೆಳ್ಳಿ, ₹25 ಲಕ್ಷ ಮೌಲ್ಯದ ವಜ್ರಾಭರಣ, ₹5 ಲಕ್ಷ ಮೌಲ್ಯದ ಪುರಾತನ ವಸ್ತುಗಳು ದೊರೆತಿವೆ.

ಮೈಸೂರು ಜಿಲ್ಲೆ ನಂಜನಗೂಡಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಧ್ಯಾಪಕ ಮಹದೇವಸ್ವಾಮಿ ಅವರಿಗೆ ಸೇರಿದ 12 ಸ್ಥಳಗಳಿಂದ ₹6.08 ಕೋಟಿ ಮೊತ್ತದ ಸ್ಥಿರಾಸ್ತಿ ದಾಖಲೆ ಪತ್ರಗಳು ದೊರೆತಿವೆ. ₹2.33 ಕೋಟಿ ಮೌಲ್ಯದ ನಗದು, ಚಿನ್ನಾಭರಣಗಳು ದೊರೆತಿವೆ.

ಪ್ರತ್ಯೇಕ ತಂಡಗಳಾಗಿ ಏಕಕಾಲದಲ್ಲಿ ದಾಳಿ ನಡೆದಿದೆ. ಕೆಲವು ತಂಡಗಳು ಅಧಿಕಾರಿಗಳ ಮನೆಯ ಮೇಲೆ ದಾಳಿ ನಡೆಸಿದರೆ, ಅದೇ ಸಮಯಕ್ಕೆ ಸರಿಯಾಗಿ ಅವರ ಸಂಬಂಧಿಕರ ಮನೆಯಲ್ಲೂ ಇನ್ನೊಂದು ತಂಡ ಪರಿಶೀಲನೆ ನಡೆಸಿತು. ಆರೋಪಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ.

ದಾಳಿಗೆ ಒಳಗಾದವರು	ಒಟ್ಟು ಆಸ್ತಿ ಮೌಲ್ಯ
ಎಚ್.ಎಸ್.ಕೃಷ್ಣಮೂರ್ತಿ, ಕೆಎಂಎಫ್ ಮುಖ್ಯ ಕಾರ್ಯನಿರ್ವಾಹಕ (ಕಾರ್ಯದರ್ಶಿ), ಕಣಿಮಿಣಿ	₹4.09 ಕೋಟಿ
ಟಿ.ಎನ್. ಸುಧಾಕರ್ ರೆಡ್ಡಿ, ಬೆಸ್ಕಾಂ ವಿಚಕ್ಷಣಾ ದಳದ ಉಪ ವ್ಯವಸ್ಥಾಪಕ ನಿರ್ದೇಶಕ	₹5.73 ಕೋಟಿ
ಬಸವರಾಜ, ಹೆಸ್ಕಾಂ ನಿವೃತ್ತ ಕಿರಿಯ ಎಂಜಿನಿಯರ್	₹4.05 ಕೋಟಿ
ಮಹದೇವಸ್ವಾಮಿ, ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ	₹8.41 ಕೋಟಿ
ತಿಮ್ಮರಾಜಪ್ಪ, ವಿಜಯಪುರ ಜಿಲ್ಲೆಯ ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್	₹9 ಕೋಟಿ
ಎನ್. ಮುನೇಗೌಡ, ರಾಮನಗರ ಜಿಲ್ಲೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕ	₹5 ಕೋಟಿ
ಎಚ್.ಡಿ.ನಾರಾಯಣಸ್ವಾಮಿ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ	₹8.90 ಕೋಟಿ
ಎಸ್. ಸುನೀಲ್‌ಕುಮಾರ್, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯದ ಸಹಾಯಕ ಲೆಕ್ಕಾಧಿಕಾರಿ (ಗುತ್ತಿಗೆ)	₹1.25 ಕೋಟಿ
ಬಿ. ಮಾರುತಿ, ಗಂಗಾವತಿ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ	₹21.39 ಲಕ್ಷ
ಚಂದ್ರಶೇಖರ್ ಹಿರೇಮನಿ, ಬಳ್ಳಾರಿ ಹಿರಿಯ ಭೂ ವಿಜ್ಞಾನಿ	₹10.72 ಲಕ್ಷ
ಎಸ್. ಶರಣಪ್ಪ, ಯಾದಗಿರಿ ನಗರಸಭೆ ಆಯುಕ್ತ	₹2.05 ಕೋಟಿ
ಡಾ. ಕೆ. ಪ್ರಭುಲಿಂಗ, ಯಾದಗಿರಿ ಜಿಲ್ಲಾ ಆರೋಗ್ಯಾಧಿಕಾರಿ	₹1.49 ಕೋಟಿ

'ಜಾತಿ ಕಾರಣಕ್ಕೆ ಪ್ರವೇಶ ನಿರಾಕರಣೆ'

ಚಿತ್ರದುರ್ಗ: 'ನನ್ನದು ಪರಿಶಿಷ್ಟ ಜಾತಿ ಎಂಬುದು ಖಚಿತವಾಗಿದ್ದರಿಂದ ನಾಗಪುರದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹೆಡಗೇವಾರ್ ವಸ್ತುಸಂಗ್ರಹಾಲಯದ ಪ್ರವೇಶ ನಿರಾಕರಿಸಲಾಗಿದೆ' ಎಂದು ಮಾಜಿ ಸಚಿವ ಗೂಳಿಹಟ್ಟಿ ಡಿ.ಶೇಖರ್ ಆರೋಪಿಸಿದ್ದಾರೆ.

'ಇದಕ್ಕೆ ಕಾರಣ ಏನು ಎಂಬುದನ್ನು ಸ್ಪಷ್ಟಪಡಿಸಬಲ್ಲಿರಾ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಪ್ರಶ್ನಿಸಿದ್ದಾರೆ. ಇತ್ತೀಚೆಗೆ ನಾಗಪುರದ ಕಚೇರಿಗೆ ಭೇಟಿ ನೀಡಿದಾಗ ಕಹಿ ಅನುಭವವಾಗಿದೆ ಎಂದು ಆಡಿಯೊ ರೂಪದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ಹಂಚಿಕೊಂಡಿದ್ದಾರೆ.

'ರಾಜಕೀಯ ಪಕ್ಷದ ಮುಲಾಜಿಗೆ ಒಳಗಾಗಿ ಬಹಿರಂಗವಾಗಿ ಅಭಿಪ್ರಾಯ ಹಂಚಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ, ಅನೇಕ ಮುಖಂಡರ ಬಳಿ ಖಾಸಗಿಯಾಗಿ ಪ್ರಸ್ತಾಪ ಮಾಡಿದ್ದೆ. ಯಾರೊಬ್ಬರೂ ಸರಿಯಾಗಿ ಸ್ಪಂದಿಸದ ಕಾರಣಕ್ಕೆ ಈಗ ಬಹಿರಂಗಪಡಿಸಿದ್ದೇನೆ. ನನ್ನ ಹೇಳಿಕೆಗೆ ಬದ್ಧವಾಗಿದ್ದೇನೆ. ಇದು ನನ್ನ ಕಹಿ ಅನುಭವ' ಎಂದು ಗೂಳಿಹಟ್ಟಿ ಶೇಖರ್ 'ಪ್ರಜಾವಾಣಿ'ಗೆ ತಿಳಿಸಿದರು.

ಪರಿಚಿತರಿಂದಲೇ ಯೋಗೇಶ್ವರ್ ಬಾವನ ಕೊಲೆ?

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಬಾವ ಮಹದೇವಯ್ಯ ಅವರನ್ನು ಪರಿಚಿತರೇ ಕೊಲೆಗೈದಿರುವ ಅನುಮಾನಗಳು ದಟ್ಟವಾಗುತ್ತಿವೆ.

ಮಹದೇವಯ್ಯ ಅವರ ಪರಿಚಿತರೇ ಸುಪಾರಿ ಪಡೆದು ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ. ಪೊಲೀಸರು ಮಂಗಳವಾರ ಮಹದೇವಯ್ಯ ಅವರ ಕುಟುಂಬದ ಸದಸ್ಯರ ವಿಚಾರಣೆ ನಡೆಸಿದ್ದಾರೆ. 'ಕೆಲವು ಮಹತ್ವದ ಸುಳಿವು ಲಭಿಸಿವೆ. ನಾಳೆ ಒಳಗಾಗಿ ಹಂತಕರ ಪತ್ತೆಯಾಗುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಅಪಹರಣದ ವೇಳೆ ಮಹದೇವಯ್ಯ ಪ್ರತಿರೋಧ ವ್ಯಕ್ತಪಡಿಸಿಲ್ಲ ಎಂಬುದು ಅಪಹರಣ ಸ್ಥಳ ಗಮನಿಸಿದಾಗ ಗೊತ್ತಾಗಿದೆ. ಮೇಲಾಗಿ ಮನೆಯ ಕಪಾಟಿನಲ್ಲಿದ್ದ ಕೆಲವು ಮಹತ್ವದ ದಾಖಲೆ ಪತ್ರ ಮತ್ತು ನಗದು ಮಾತ್ರ ಕಾಣೆಯಾಗಿವೆ. ಪರಿಚಿತರ ಕೃತ್ಯ ಇರಬಹುದು ಎಂಬ ಗುಮಾನಿ ಪೊಲೀಸರಿಗೆ ಇದೆ. ಈ ಎಲ್ಲಾ ಆಯಾಮಗಳಿಂದಲೂ ಪ್ರಕರಣದ ತನಿಖೆ ನಡೆಯುತ್ತಿದೆ. ಹಂತಕರ ಪತ್ತೆಗಾಗಿ ಮತ್ತೆ ಎರಡು ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 06 ದಿನಾಂಕ: 05/12/2023

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು / ಮಾಡಲು / ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @ 17.00 ಗಂಟೆ
KSRTC/2023-24/IND0054	ಅಲ್ಯೂಮಿನಿಯಂ ಪಾಪ್ ರಿವೆಟ್ಸ್‌ಗಳ ಖರೀದಿ	0.14	05/01/2024
KSRTC/2023-24/IND0055	ಡಿಸಾಲ್ವ್ಡ್ ಅಸಿಟಲೀನ್ ಗ್ಯಾಸ್ ಖರೀದಿ	0.50	05/01/2024
KSRTC/2023-24/IND0056	ಕಂಪ್ರೆಸ್ಡ್ ಆಕ್ಸಿಜೆನ್ ಗ್ಯಾಸ್, ಕಾರ್ಬನ್ ಡೈ ಆಕ್ಸೈಡ್ & ಕಮರ್ಶಿಯಲ್ ಆರ್ಗಾನ್‌ಗಳ ಗ್ಯಾಸ್ ಖರೀದಿ	0.30	05/01/2024
KSRTC/2023-24/IND0057	ಎನ್ವಲಪ್ಸ್ ಮತ್ತು ಕ್ಯೂರಿಂಗ್ ಬ್ಯಾಗ್ಸ್‌ಗಳ ಖರೀದಿ	0.80	05/01/2024
KSRTC/2023-24/IND0058	ರಬ್ಬರ್ ಗ್ಲೇಜಿಂಗ್ ವಿತ್ ಇನ್ಸರ್ಟ್ಸ್ (ಇಪಿಡಿಎಂ ರಬ್ಬರ್) ಖರೀದಿ	1.25	05/01/2024
KSRTC/2023-24/IND0059	**ಟರ್ನ್‌ಕೀ ಆಧಾರದ ಮೇಲೆ ಯು ಪಿ ಎಸ್ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ	1.40	05/01/2024
KSRTC/2023-24/IND0060	**ಟರ್ನ್‌ಕೀ ಆಧಾರದ ಮೇಲೆ 24 ವೋಲ್ಟ್ 1.5 ಕೆ ವಿ ಎ ಇನ್ವರ್ಟರ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ	0.12	05/01/2024
**GOK order no DPAR/113/EGM/2020 Dated:9/10/2023 ರ ಪ್ರಕಾರ ಪೂರ್ವ ಅರ್ಹತೆ ಹೊಂದಿರುವ ಸರಬರಾಜುದಾರರು ಮಾತ್ರ ಭಾಗವಹಿಸಲು ಅರ್ಹರಾಗಿರುತ್ತಾರೆ.			
ಅಲ್ಪಾವಧಿ ಟೆಂಡರ್			
KSRTC/2023-24/ SE0536	ಮಂಗಳೂರು, ಪುತ್ತೂರು, ರಾಮನಗರ ಮತ್ತು ಚಾಮರಾಜನಗರ ವಿಭಾಗಗಳ ಘಟಕಗಳಿಗೆ ಹೆವಿ ಪ್ಯಾಸೆಂಜರ್ ವೆಹಿಕಲ್ ಡ್ರೈವರ್‌ಗಳನ್ನು ಒದಗಿಸುವ ಏಜೆನ್ಸಿಯನ್ನು ತೊಡಗಿಸುವ ಬಗ್ಗೆ	28.00	18/12/2023
KSRTC/2023-24/IND0049	ಎಂ.ಎಸ್. ಆಂಗ್ಯಲ್ಸ್ ಮತ್ತು ಫ್ಲಾಟ್ಸ್‌ಗಳ ಖರೀದಿ	0.49	18/12/2023
KSRTC/2023-24/IND0053	ಸಿಂಥೆಟಿಕ್ ಉಲ್ಲನ್ ಬ್ಲಾಂಕೆಟ್ ಮತ್ತು ಲಿನೆನ್ ಕ್ಲಾತ್‌ಗಳ ಖರೀದಿ	0.65	18/12/2023
ತಿದ್ದುಪಡಿ : ನೋಟೀಫಿಕೇಶಸ್ ಸಂಖ್ಯೆ 04 ದಿ:06/09/2023- KSRTC/2023-24/IND0040 – ಎಂ.ಎಸ್. ಆಂಗ್ಯಲ್ಸ್ ಮತ್ತು ಫ್ಲಾಟ್ಸ್‌ಗಳ ಖರೀದಿಯ ಟೆಂಡರ್‌ಗಳನ್ನು ತಾಂತ್ರಿಕ ಕಾರಣದಿಂದಾಗಿ ರದ್ದುಗೊಳಿಸಲಾಗಿದೆ.			

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ:– ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080–22230960/22234115 ಕರೆಮಾಡಿ/ Support@eprochelpdesk.com ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ.

ಸಹಿ/–,
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ವಾಪ್ರ/ಎಲ್‌ಸಿ/2415/2023–24

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501
ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:09:2023–24 ದಿನಾಂಕ:30–11–2023

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–1ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರಸ್ವಚ್ಛ ಭಾರತ್ (ಎಸ್.ಬಿ 2) ಅನುದಾನದಲ್ಲಿ ಅನುಮೋದನೆಯಾಗಿರುವ **ರೂ.32.54 ಲಕ್ಷಗಳ 2 ಕಾಮಗಾರಿಗಳನ್ನು** ಅನುಷ್ಠಾನಗೊಳಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಏಕಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://kppp.karnataka.gov.in** ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. **"ಟೆಂಡರ್‌ದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲಾತಿಯುನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪಲೋಡ್ ಮಾಡತಕ್ಕದ್ದು"** ವಿವರ **ಈ ಕೆಳಕಂಡಂತೆ ಇರುತ್ತದೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಭೆಯ ಅಂತರ್‌ಜಾಲ **www.chitradurgacity.mrc.gov.in** ನಲ್ಲಿಪಡೆಯಬಹುದಾಗಿದೆ. **ಜಿ.ಎಸ್.ಟಿ. ಮೊತ್ತ** ಪ್ರತ್ಯೇಕವಾಗಿ ಪಾವತಿಸಲಾಗುವುದು. (2 ಇಂಡೆಂಟ್‌ಗಳನ್ನು ಪ್ರತ್ಯೇಕವಾಗಿ ಪ್ರಚುರಪಡಿಸಲಾಗುವುದು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **16.27** ಲಕ್ಷಗಳು) **ಅಲ್ಪಾವಧಿ ಟೆಂಡರ್:–** (1) ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 11–12–2023ರ 5.00 ಗಂಟೆ ಸಂಜೆವರೆಗೆ (2) ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 12–12–2023 ರ 5.30 ಗಂಟೆಗೆ (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ

DIPR/CTA/KSMCA/ 378/2023-24
ಸಹಿ/–ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು – 560 052.
ಸಂಖ್ಯೆ: ಕಾಪಾಅ/ಶಿವಿ/ಟೆಂಡರ್/11/2023–24 ದಿನಾಂಕ: 06.12.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಶಿವಾಜಿನಗರ ವಿಭಾಗ), ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಬೃ.ಬೆಂ.ಮ.ಪಾಲಿಕೆ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
1.	ವಾರ್ಡ್ ಸಂಖ್ಯೆ–62ರ ಚಿನ್ನಪ್ಪ ಗಾರ್ಡನ್ ಲಿಂಕ್ ರಸ್ತೆ, 1ನೇ ಮುಖ್ಯರಸ್ತೆ, ಚರ್ಚ್ ರಸ್ತೆ, ಎಂಎಂ ರಸ್ತೆ, ಮುದ್ದಮ್ಮ ಗಾರ್ಡನ್ 3ನೇ ಅಡ್ಡರಸ್ತೆ, ಚಿನ್ನಪ್ಪ ಗಾರ್ಡನ್ 2ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಹಾಗೂ ವಾರ್ಡ್ ಸಂಖ್ಯೆ–63ರ ಮಡಿ ಮಸೀದಿ, ಚಿಕ್ಕ ಬಜಾರ್, ಪಾಯಪ್ಪ ಗಾರ್ಡನ್, ಹಳೆ ಸಿಮೆಂಟರಿ ರೋಡ್, ಮಿಲ್ಕ್‌ಮ್ಯಾನ್ ರಸ್ತೆ, ಜಯಮಹಲ್ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮಾಡುವುದು. (ಪ್ಯಾಕೇಜ್ ಸಂ.01)	1000.00	10,00,000.00 (1,00,000.00 ಎನ್‌ಇಎಫ್‌ಟಿ ಉಳಿದ 9,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)
2.	ವಾರ್ಡ್ ಸಂಖ್ಯೆ–110ರ ಕಬ್ಬನ್‌ಪೇಟೆ, ಬನ್ನಪ್ಪ ಪಾರ್ಕ್, ಟಸ್ಕರ್ ಟೌನ್, ಯೂನಿಯನ್ ಬೀದಿ, ಲೇಡಿ ಕರ್ಜನ್ ರಸ್ತೆ, ಹೆಚ್‌ಎಎಲ್ ರಸ್ತೆ, ಸಫೀನಾ ಪ್ಲಾಜಾ ರಸ್ತೆ, ಕಮರ್ಷಿಯಲ್ ಬೀದಿ ಅಡ್ಡರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮಾಡುವುದು. (ಪ್ಯಾಕೇಜ್ ಸಂ.02)	1000.00	10,00,000.00 (1,00,000.00 ಎನ್‌ಇಎಫ್‌ಟಿ ಉಳಿದ 9,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)
3.	ವಾರ್ಡ್ ಸಂಖ್ಯೆ–93ರ ಶ್ರೀಕಾಂತರ್ ಬಡಾವಣೆ, ಚಕ್ರವರ್ತಿ ಅಯ್ಯಂಗಾರ್ ಬಡಾವಣೆ, ಶ್ರೀ ಪುರಂ ವಸಂತನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಹಾಗೂ ವಾರ್ಡ್ ಸಂಖ್ಯೆ–90ರ ಗುಪ್ತಾ ಬಡಾವಣೆ, ಕಾರ್ ಬೀದಿ, ಸದಾಶಿವ ಮುದಲಿಯಾರ್ ರಸ್ತೆ, ಜಮಿಯಾ ಮಸೀದಿ ರಸ್ತೆ, ಹನುಮಯ್ಯ ರೆಡ್ಡಿ ರಸ್ತೆ, ಸುಬ್ಬಯ್ಯ ರೆಡ್ಡಿ ರಸ್ತೆ, ಆರ್‌ಕೆ ಮಠ ರಸ್ತೆ, ಬಜಾರ್ ಬೀದಿ, ಭೋವಿ ಕಾಲೋನಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮಾಡುವುದು. (ಪ್ಯಾಕೇಜ್ ಸಂ.03)	900.00	9,00,000.00 (1,00,000.00 ಎನ್‌ಇಎಫ್‌ಟಿ ಉಳಿದ 8,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)
4.	ಭಾರತಿನಗರದ ವಾರ್ಡ್ ಸಂಖ್ಯೆ–91ರ ಎಲ್, ನಂ 3ನೇ ಬೀದಿ, ಲಬ್ಬಾಯ್ ಮಸೀದಿ ಬೀದಿ ಅಡ್ಡರಸ್ತೆಗಳು, ಮಾರ್ವಾಡಿ ಬಜಾರ್ ರಸ್ತೆ, ತೋಡ್ ಲೇನ್, ಓ. ನಂ 2ನೇ ಬೀದಿ, ನಾಲೆ ರಸ್ತೆ, ಇ. ನಂ 2ನೇ ಬೀದಿ, ತಿಮ್ಮಯ್ಯ ರಸ್ತೆ ಅಡ್ಡರಸ್ತೆಗಳು, ಸಭಾಪತಿ ಲೇನ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಹಾಗೂ ಶಿವಾಜಿನಗರದ ವಾರ್ಡ್ ಸಂಖ್ಯೆ–92ರ ಮೀಯರ್ ಒಬೇದುಲ್ಲಾ ರಸ್ತೆ, ನೆಹರುಪುರಂ, ಕೂಕ್ಸ್ ರಸ್ತೆ ಎ ಬೀದಿ, ನಾಲೆ ರಸ್ತೆ, ಚೌಡಿ ಗಲ್ಲಿ ಅಡ್ಡರಸ್ತೆಗಳು, ಸುಲ್ತಾನ್‌ನಗರ, ಹೊಸ ಮಾರುಕಟ್ಟೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮಾಡುವುದು. (ಪ್ಯಾಕೇಜ್ ಸಂ.04)	1100.00	11,00,000.00 (1,00,000.00 ಎನ್‌ಇಎಫ್‌ಟಿ ಉಳಿದ 10,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಹೊಸ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ **11.12.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **10.01.2024**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು–52 ಇಲ್ಲಿ ದಿನಾಂಕ **08.01.2024**ರ ಮಧ್ಯಾಹ್ನ **12.00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಶಿವಾಜಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇಲ್ಲಿ ದಿನಾಂಕ **12.01.2024**ರ ಸಂಜೆ **4:30** ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸ ದಿನದಂದು ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು

ತಿದ್ದುಪಡಿ

ಉಲ್ಲೇಖ: ಕಾಪಾಅ(ಶಿವಾಜಿನಗರ)ಎಇ/ಇ–ಟೆಂಡ್/08/2023–24 ದಿನಾಂಕ: 17.11.2023

ಉಲ್ಲೇಖದಲ್ಲಿ ಸೂಚಿಸಿರುವ ಟೆಂಡರ್ ಅಧಿಸೂಚನೆಯನ್ನು ಉದ್ದೇಶಿತ ಗುತ್ತಿಗೆದಾರರು ಗಮನಿಸತಕ್ಕದ್ದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸರ್ವರ್ ಸಮಸ್ಯೆಗಳಿಂದಾಗಿ ಈ ಕೆಳಗಿನ ಬದಲಾವಣೆಗಳನ್ನು ದಯವಿಟ್ಟು ಗಮನಿಸುವುದು. **ಮುಖ್ಯ ಅಭಿಯಂತರರು (ಪೂರ್ವ) ಅವರ ಸೂಚನೆಯಂತೆ ತಾಂತ್ರಿಕ ಕಾರಣದಿಂದಾಗಿ ಟೆಂಡರನ್ನು ರದ್ದುಗೊಳಿಸಲಾಗಿದೆ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬಿಬಿಎಂಪಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಜ್ಞಾನ ಸಂಗಮ, ಬೆಳಗಾವಿ–590018, ಕರ್ನಾಟಕ, ಭಾರತ
Ref.VTU/BGM/SAP/CW4/T-636/2022-2023/4643 Date :05/12/2023

ಅಲ್ಪಾವಧಿ ಟೆಂಡರ ಪ್ರಕಟಣೆ–2ನೇ ಕರೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ ಇ–ಟೆಂಡರ (ದ್ವಿ ಲಕೋಟೆ ಪದ್ದತಿ) ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು: "Tender for Supply of IoT Project Board to Dept of CSE P.G.Centers of Belagavi, Kalaburgi, Talkal and Muddenahalli" .ಟೆಂಡರಿಗಿಟ್ಟ ಮೊತ್ತ:19,76,940/–ಮುಂಗಡ ಠೇವಣಿ (ಇ.ಎಂ.ಡಿ):49,500/– ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 12/12/2023 ರಂದು 2.30 ರ ವರೆಗೆ ಕುಲಸಚಿವರ ಕಛೇರಿ, ವಿ.ತಾ.ವಿ. ಬೆಳಗಾವಿ. ಟೆಂಡರ ತೆರೆಯುವ ದಿನಾಂಕ:13/12/2023 –ರಂದು 4.00 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.

DIPR/BGM/RO-NO-702/KSMCA/2023-24

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಯೋಜನಾ ಕಛೇರಿ, 1ನೇ ಮಹಡಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ.
ಸಂಖ್ಯೆ:ಕ.ಗೃ.ಮಂ/ಸಕಾಅ/ಜಿಯೋಕ/ಚಿಪುರ/2023-24/118 ದಿನಾಂಕ: 16-11-2023

ಸಾರ್ವಜನಿಕ ಪ್ರಕಟಣೆ

ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಕರ್ನಾಟಕ ಗೃಹ ಮಂಡಳಿ ಹಳೆ ವಸತಿ ಬಡಾವಣೆ ಮನೆ ಸಂಖ್ಯೆ: 12 ಎಲ್.ಐ.ಜಿ ಇದರ ಹಂಚಿಕೆದಾರರಾದ ಶ್ರೀ ವೆಂಕಟರಾಮನ್ನ ಇವರು ದಿನಾಂಕ: 09.03.1994 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಮನೆಯನ್ನು ಮೃತ ಹಂಚಿಕೆದಾರರ ಮಗನಾದ ಶ್ರೀ **ರಾಮನಾಥನ್. ಜಿ ಇವರ ಹೆಸರಿಗೆ ಮನೆ ಸಂಖ್ಯೆ: 12 ಎಲ್.ಐ.ಜಿ, ಬಾಗೇಪಲ್ಲಿ ಕರ್ನಾಟಕ ಗೃಹ ಮಂಡಳಿ ಹಳೆ ವಸತಿ ಬಡಾವಣೆ ಇದನ್ನು ವರ್ಗಾವಣೆ ಮಾಡಲು ಅರ್ಜಿದಾರರು ಕೋರಿರುತ್ತಾರೆ.** ಅದರಂತೆ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ **ದಿನಾಂಕದಿಂದ 15 ದಿನಗಳೊಳಗೆ** ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಅರ್ಜಿಯನ್ನು **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಚಿಕ್ಕಬಳ್ಳಾಪುರ. 1ನೇ ಮಹಡಿ, ಕೊಠಡಿ ಸಂಖ್ಯೆ.ಎಫ್.ಬಿ–9, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ–562101** ಇಲ್ಲಿ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ವಾರಸುದಾರರಾದ ಶ್ರೀ **ರಾಮನಾಥನ್.ಜಿ** ರವರ ಹೆಸರಿಗೆ ವರ್ಗಾವಣೆ ಮಾಡಲಾಗುವುದು. ನಂತರ ಬರುವ ಯಾವುದೇ ತಕರಾರು/ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರು,
ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಚಿಕ್ಕಬಳ್ಳಾಪುರ.
DIPR/CP/AAPL/RO2413/23-24

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನಾ ವಿಭಾಗ, ಕಡೂರು
ದೂರವಾಣಿ: 0826–7221776 CIN: U40109 KA 2002 SGC 030425
ಸಂ: ಕಾನಿಇಂ(ವಿ)/ಲೆಅ/ಸಲೆಅ/ಹಿಸ(ಸಿ)/ಕ–31/2023–24/9550–53 ದಿನಾಂಕ: 17.11.2023

ಅಂತಿಮ ನೋಟೀಸ್

ವಿಷಯ:– ಶ್ರೀ ಎಂ.ಮಹೇಶಕುಮಾರ, ಸಹಾಯಕ ಮಾರ್ಗದಾಳು, ಮತ್ತಿಘಟ್ಟ ಶಾಖೆ ರವರ ಅನಧಿಕೃತ ಗೈರು ಹಾಜರಿ ಬಗ್ಗೆ.

ಶ್ರೀ ಎಂ.ಮಹೇಶ್ ಕುಮಾರ್, ಸಹಾಯಕ ಮಾರ್ಗದಾಳು, ಮತ್ತಿಘಟ್ಟ ಶಾಖೆ, ಮೆಸ್ಕಾಂ, ಆದ ನಿಮಗೆ ತಿಳಿಸುವುದೇನೆಂದರೆ ನೀವು ದಿನಾಂಕ: 16.08.2020 ರಿಂದ ಇಲ್ಲಿಯವರೆಗೆ ಕಂಪನಿಯ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ಈ ಕಛೇರಿಯಿಂದ ಪತ್ರ ಸಂಖ್ಯೆ: 8927–29/03.11.2023 ರಲ್ಲಿ ಅಂತಿಮ ನೋಟಿಸ್ ಜಾರಿ ಮಾಡಲಾಗಿತ್ತು ಆದರೂ ಸಹ ಕೆಲಸಕ್ಕೆ ಹಾಜರಾಗಿರುವುದಿಲ್ಲ.

ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸಮಂಜಸವಾದ ಕಾರಣದೊಂದಿಗೆ ಈ ನೋಟಿಸ್ ಪ್ರಕಟವಾದ 15 ದಿನಗಳೊಳಗೆ ಈ ಕೆಳಕಂಡ ಸಹಿದಾರರ ಮುಂದೆ ಸಮಕ್ಷಮ ಹಾಜರಾಗತಕ್ಕದ್ದು ತಪ್ಪಿದಲ್ಲಿ ಕ.ವಿ.ಪ್ರ.ನಿ.ನಿ., ಮಂಡಳಿಯ ನೌಕರರ (ವಶಿನಿ ಮತ್ತು ಮ) ನಿಬಂಧನೆಗಳು 1987 ರ ನಿಯಮಾವಳಿ 10 ಮತ್ತು 10 (ಎ)ರ ಅಡಿಯಲ್ಲಿ ದತ್ತ ಅಧಿಕಾರವನ್ನು ಚಲಾಯಿಸಿ ಬಿಇಎಸ್‌ಆರ್ ಸೇವಾ ನಿಯಮಾವಳಿ(2) ರಂತೆ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ಯಾವುದೇ ಪರಿಹಾರ ನೀಡದೆ ಕಂಪನಿಯ ಸೇವೆಯಿಂದ ವಜಾಗೊಳಿಸಲಾಗುವುದು ಎಂಬುದಾಗಿ ತಿಳಿಯುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮ.ವಿ.ಸ.ಕಂ., ಕಡೂರು ವಿಭಾಗ

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ **1912**ಕ್ಕೆ ಕರೆ ಮಾಡಿ

ಆಯುಷ್ ಇಲಾಖೆ
ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ
ಧನ್ವಂತರಿ ರಸ್ತೆ, ಬೆಂಗಳೂರು–560009.
ದೂರವಾಣಿ: 080–22872848/22341261, Email: principalgamc9@gmail.com
ಅಧಿಸೂಚನೆ ಸಂಖ್ಯೆ: ಜಸಆಯುಆ/19/ಸರಬ/2023–24, ದಿನಾಂಕ: 05–12–2023

ಇ–ಟೆಂಡರ್ ಅಧಿಸೂಚನೆ

ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಬೆಂಗಳೂರು, ಇಲ್ಲಿನ ಒಳರೋಗಿಗಳು ಮತ್ತು ಹೊರರೋಗಿಗಳಿಗೆ ವಿತರಿಸಲು ಅವಶ್ಯಕವಾಗಿ ಬೇಕಾಗಿರುವ ಆಯುರ್ವೇದ ಔಷಧಿಗಳನ್ನು ಖರೀದಿಸುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸಲು ಇ–ಟೆಂಡರ್

ಇ–ಟೆಂಡರ್ ಅಧಿಸೂಚನೆ : (1) ಇ–ಟೆಂಡರ್ ಅಧಿಸೂಚನೆ ದಿನಾಂಕ : 05–12–2023. (2) ಟೆಂಡರ್ ದಾಖಲೆಗಳು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 05–12–2023 ರಿಂದ 16–12–2023 ರವರೆಗೆ ಸಂಜೆ 4.30 ಗಂಟೆಯವರೆಗೆ (3) ಅಪ್‌ಲೋಡ್ ಆದ ಇ–ಟೆಂಡರ್‌ಗಳನ್ನು ತೆರೆಯುವ ದಿನಾಂಕ : 18–12–2023 ಸಂಜೆ 4.00 ಗಂಟೆಗೆ. (4) ಟೆಂಡರ್ ದಾಖಲೆ ತೆರೆಯುವ ಸ್ಥಳ : ಪ್ರಾಚಾರ್ಯರ ಕೊಠಡಿ, ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, ಬೆಂಗಳೂರು

ಇ–ಟೆಂಡರ್–ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ದಿನಾಂಕ: 05–12–2023 ರ ಬೆಳಿಗ್ಗೆ 11.00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು/ಸಹಾಯಕ ಆಡಳಿತಾಧಿಕಾರಿಗಳು,
ಇ– ಟೆಂಡರ್ ಸಮಿತಿ,
ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ
ವಾ.ಸಾ.ಸಂ.ಇ/ವಾಪ್ರ/2402/ಆಕಾರ್/2023–24

ಸಂಕ್ಷಿಪ್ತ ಸುದ್ದಿ

ವಿಶೇಷ ಮಕ್ಕಳಿಗೆ ಶೇ 15 ಅನುದಾನ

ವಿಧಾನ ಪರಿಷತ್: ಶ್ರವಣ, ದೃಷ್ಟಿ ದೋಷ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವ ಮಕ್ಕಳ ವಸತಿ ಶಾಲೆಗಳಿಗೆ ನಿಯಮದಂತೆ ತಮ್ಮ ಕ್ಷೇತ್ರಾಭಿವೃದ್ಧಿ ನಿಧಿಯ ಶೇ 15ರಷ್ಟು ವಿನಿಯೋಗಿಸಲು ಎಲ್ಲ ಸದಸ್ಯರು ಸಮ್ಮತಿಸಿದರು.

ಹಂಸಧ್ವನಿ ಮಕ್ಕಳ ವಸತಿ ಶಾಲೆಯನ್ನು ಪ್ರಾರಂಭಿಸುವಂತೆ ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ ಅವರ ಗಮನ ಸೆಳೆಯುವ ಸೂಚನೆ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಗೋವಿಂದರಾಜು ಅವರು 'ವಿಶೇಷ ಮಕ್ಕಳ ಶಾಲೆ, ಸೌಕರ್ಯ ಹಾಗೂ ಅಭಿವೃದ್ಧಿಗೆ ಶಾಸಕರ ಅನುದಾನದಲ್ಲಿ ಶೇ 15ರಷ್ಟು ಬಳಸಲು ನಿಯಮಗಳಲ್ಲೇ ಅವಕಾಶವಿದೆ. ಈ ಅನುದಾನವನ್ನು ಕಡ್ಡಾಯವಾಗಿ ನೀಡುತ್ತೇವೆ. ಸರ್ಕಾರ ಸೂಕ್ತವಾಗಿ ಬಳಸಿಕೊಳ್ಳಬೇಕು. ಈಗ ಪ್ರತಿ ಮಕ್ಕಳಿಗೆ ನೀಡುತ್ತಿರುವ ₹1,400 ಅನುದಾನವನ್ನು ಕನಿಷ್ಠ ₹4ಸಾವಿರಕ್ಕೆ ಹೆಚ್ಚಿಸಬೇಕು' ಎಂದರು.

ಬಿಜೆಪಿಯ ಎನ್.ರವಿಕುಮಾರ್, ಇಂತಹ ಮಕ್ಕಳ ಕಲ್ಯಾಣಕ್ಕಾಗಿಯೇ ಒಂದು ಪ್ರತ್ಯೇಕ ನಿರ್ದೇಶನಾಲಯ ತೆರೆಯಬೇಕು ಎಂದರೆ, ಬಿಜೆಪಿಯ ವೈ.ಎಂ.ಸತೀಶ್, 'ವಿಶೇಷ ಮಗುವಿನ ತಂದೆಯಾಗಿ ಮಕ್ಕಳ ನೋವು ಬಲ್ಲೆ. ಸರ್ಕಾರ ಜಾಗ ನೀಡಿದರೆ ಬಳ್ಳಾರಿಯಲ್ಲಿ ವಸತಿ ಶಾಲೆಗೆ ಉಚಿತವಾಗಿ ಕಟ್ಟಡ ಕಟ್ಟಿಸಿಕೊಡುವೆ' ಎಂದರು.

ಹಂಸಧ್ವನಿ ಶಾಲೆಯನ್ನು ವಸತಿ ಶಾಲೆಯಾಗಿ ಪರಿವರ್ತಿಸಲಾಗಿದೆ. ₹1.36 ಕೋಟಿಗೆ ಅನುಮೋದನೆ ನೀಡಲಾಗಿದೆ. ವಸತಿಶಾಲೆಗೆ ಅಗತ್ಯವಾದ ಹುದ್ದೆಗಳಿಗೆ ಮಂಜೂರಾತಿ ದೊರೆಯದೆ ವಿಳಂಬವಾಗಿದೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಪ್ರತಿಕ್ರಿಯಿಸಿದರು.

'ಸಿಎಲ್–7 ಪರವಾನಗಿ ನಿಯಮ ತಿದ್ದುಪಡಿ'

ವಿಧಾನಸಭೆ: ಲಾಡ್ಜ್‌ಗಳಲ್ಲಿ ಮದ್ಯದಂಗಡಿ (ಸಿಎಲ್–7) ಪರವಾನಗಿ ನೀಡುವುದಕ್ಕೆ ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತಂದು, ಲೋಪಗಳನ್ನು ಸರಿಪಡಿಸಲಾಗುವುದು ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ತಿಳಿಸಿದರು.

ಕಾಂಗ್ರೆಸ್‌ನ ಎಸ್.ಎನ್. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 'ಸಿಎಲ್–7 ಪರವಾನಗಿ ನೀಡಲು ಕಟ್ಟಡದ ವಿನ್ಯಾಸ ಹೇಗಿರಬೇಕು? ವಾಹನ ನಿಲುಗಡೆ ಸ್ಥಳ, ಕೊಠಡಿಗಳ ವಿಸ್ತೀರ್ಣದ ಕುರಿತು ನಿಯಮಗಳಲ್ಲಿ ಸ್ಪಷ್ಟತೆ ಇಲ್ಲ. ತಿದ್ದುಪಡಿ ತರುವ ಮೂಲಕ ಈ ವಿಷಯಗಳಲ್ಲಿ ಸ್ಪಷ್ಟತೆ ನೀಡಲಾಗುವುದು' ಎಂದರು.

ನಾರಾಯಣಸ್ವಾಮಿ ಅವರು, 'ಕೋಲಾರ ಜಿಲ್ಲೆಯಲ್ಲಿ ಸಿಎಲ್–7 ಪರವಾನಗಿಗಳನ್ನು ನೀಡುವುದರಲ್ಲಿ ಭಾರಿ ಅಕ್ರಮ ನಡೆದಿದೆ. ಶೇಕಡ 80 ರಷ್ಟು ಪರವಾನಗಿಗಳಲ್ಲಿ ನಿಯಮ ಉಲ್ಲಂಘನೆ ನಡೆದಿದೆ' ಎಂದರು.

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಸಾವಿರಾರು ಸಿಎಲ್–7 ಪರವಾನಗಿಗಳನ್ನು ಅಕ್ರಮವಾಗಿ ನೀಡಲಾಗಿದೆ' ಎಂದು ಕಾಂಗ್ರೆಸ್‌ನ ಬೇಳೂರು ಗೋಪಾಲಕೃಷ್ಣ ಸೇರಿದಂತೆ ಹಲವರು ಆರೋಪಿಸಿದರು.

ಇದರಿಂದ ಸಿಟ್ಟಿಗೆದ್ದ, ಹಿಂದಿನ ಅಬಕಾರಿ ಸಚಿವ, ಬಿಜೆಪಿಯ ಕೆ. ಗೋಪಾಲಯ್ಯ, 'ತಪ್ಪು ನಡೆದಿದ್ದರೆ ಕ್ರಮ ಜರುಗಿಸಿ' ಎಂದು ಸವಾಲು ಹಾಕಿದರು.

ಬರ ಕುರಿತ ಚರ್ಚೆ ವೇಳೆ ಸರ್ಕಾರದ ಮೇಲೆ ವಾಗ್ದಾಳಿ ನಡೆಸಿದ ಆರ್‌.ಅಶೋಕ

'ರೈತರಿಗೆ ಪೈಸೆ ನೀಡದ ಕಟುಕ ಸರ್ಕಾರ'

ಪ್ರಜಾವಾಣಿ ವಾರ್ತೆ

ಆರ್‌. ಅಶೋಕ

ವಿಧಾನಸಭೆ: 'ಈ ಸರ್ಕಾರ ಕಟುಕ ಹೃದಯದ್ದಾಗಿದ್ದು, ಬರ ಪರಿಹಾರಕ್ಕಾಗಿ ಏನೂ ಮಾಡಿಲ್ಲ. ಈವರೆಗೂ ಒಂದು ನಯಾ ಪೈಸೆ ರೈತರ ಖಾತೆಗೆ ಹಾಕಿಲ್ಲ. ಆಡಳಿತ ಪಕ್ಷಕ್ಕೆ ತಾಯಿ ಹೃದಯ ಇರಬೇಕು. ಸಂಕಷ್ಟಕ್ಕೆ ತಕ್ಷಣಕ್ಕೆ ಧಾವಿಸಿ ಬರುವ ಬದಲು ಕೈಚೆಲ್ಲಿ ಕುಳಿತಿದೆ'.

ಈ ರೀತಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವರು ವಿರೋಧಪಕ್ಷದ ನಾಯಕ ಆರ್.ಅಶೋಕ. ಮಂಗಳವಾರ ಬರ ವಿಷಯದ ಕುರಿತು ಚರ್ಚೆಯನ್ನು ಆರಂಭಿಸಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರನ್ನು ಕಾಲೆಳೆದರಲ್ಲದೇ, ಇಂಧನ ಇಲಾಖೆಯ ವೈಫಲ್ಯವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

'ಬರ ಮತ್ತು ಪ್ರವಾಹದ ಸಂದರ್ಭದಲ್ಲಿ ನಮ್ಮ ಸರ್ಕಾರ ಇದ್ದಾಗ, ಕೇಂದ್ರದ ನೆರವಿಗೂ ಕಾಯದೇ ರೈತರಿಗೆ ಎರಡು ಪಟ್ಟು ಪರಿಹಾರ, ಪ್ರವಾಹದಲ್ಲಿ ಮನೆಗಳು ಕೊಚ್ಚಿ ಹೋದಾಗ ಎನ್‌ಡಿಆರ್‌ಎಫ್ ನಿಯಮಕ್ಕಿಂತೂ ಹೆಚ್ಚು ಮೊತ್ತವನ್ನು ಮನೆಗಳ ನಿರ್ಮಾಣಕ್ಕೆ ನೀಡಿದೆವು. 14 ಬಾರಿ ಬಜೆಟ್ ಮಂಡಿಸಿರುವುದಾಗಿ ಹೇಳಿಕೊಳ್ಳುವ ನೀವು ಒಂದು ಪೈಸೆ ಬಿಡುಗಡೆ ಮಾಡದೇ ಏಕೆ ನಿರ್ಲಕ್ಷಿಸಿದ್ದೀರಿ' ಎಂದು ಖಾರವಾಗಿ ಪ್ರಶ್ನಿಸಿದರು.

'ಉಪ್ಪು, ಇದ್ದಿಲು ಪೂರೈಕೆಗೂ ಹಣವಿಲ್ಲವೇ?'

'ಗ್ರಾಮಾಂತರ ಪ್ರದೇಶದಲ್ಲಿ ಟ್ರಾನ್ಸ್‌ಫಾರ್ಮರ್ ಹಾಕಿಸಿಕೊಳ್ಳಲು ರೈತರು ಉಪ್ಪು, ಇದ್ದಿಲು ಕೊಡುವುದರ ಜತೆ ಟ್ರಾನ್ಸ್‌ಫಾರ್ಮರ್ ಸಾಗಿಸಲು ವಾಹನಕ್ಕೂ ಹಣ ಕೊಡಬೇಕು. ಇದಲ್ಲದೇ ಪ್ರತಿ ರೈತರಿಂದ ₹25 ಸಾವಿರ ಲಂಚ ಕೇಳುತ್ತಾರೆ. ನಿಮ್ಮ ಸರ್ಕಾರಕ್ಕೆ ಉಪ್ಪು ಮತ್ತು ಇದ್ದಿಲು ಪೂರೈಕೆ ಮಾಡಲು ಹಣವಿಲ್ಲವೆ' ಎಂದು ಅಶೋಕ ಕುಟುಕಿದರು.

'ಅಂತಹ ಪ್ರಕರಣ ಇದ್ದರೆ ತಿಳಿಸಿ ಕ್ರಮ ಕೈಗೊಳ್ಳುತ್ತೇನೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದಾಗ, 'ನನ್ನ ಜತೆ ಗ್ರಾಮಾಂತರ ಪ್ರದೇಶಕ್ಕೆ ಬನ್ನಿ, ಎಲ್ಲವನ್ನೂ ತೋರಿಸುತ್ತೇನೆ' ಎಂದು ತಿರುಗೇಟು ನೀಡಿದರು.

4 ಲಕ್ಷ ಕೃಷಿ ಪಂಪ್‌ಸೆಟ್ ಸಕ್ರಮಕ್ಕೆ ಕ್ರಮ

ಕೆ.ಜೆ.ಜಾರ್ಜ್

'ರಾಜ್ಯದಲ್ಲಿರುವ 4 ಲಕ್ಷ ಅಕ್ರಮ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಭರವಸೆ ನೀಡಿದರು.

'ರಾಜ್ಯದಲ್ಲಿ ಈಗ ವಿದ್ಯುತ್‌ಗೆ ಕೊರತೆ ಇಲ್ಲ. ಇತರ ರಾಜ್ಯಗಳಿಂದ ಖರೀದಿಸುತ್ತಿದ್ದೇವೆ. ಬಿಜೆಪಿ ಅವಧಿಯಲ್ಲಿ ಹೆಚ್ಚು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದ್ದರೆ ಈ ಸಮಸ್ಯೆ ಉಂಟಾಗುತ್ತಿರಲಿಲ್ಲ. ಆಗ ಬೇಡಿಕೆ ಕಡಿಮೆ ಇತ್ತು, ಈ ಬೇಡಿಕೆ ಹೆಚ್ಚಾಗಿದೆ' ಎಂದರು.

'ರಾತ್ರಿ ವೇಳೆ ಪಂಪ್‌ಸೆಟ್ ಚಾಲೂ ಮಾಡಲು ಹೋಗಿ ಕರಡಿಯಿಂದ ದಾಳಿಗೊಳಗಾದ ರೈತ ಕುಟುಂಬಕ್ಕೆ ಇಂಧನ ಇಲಾಖೆಯಿಂದ ಪರಿಹಾರ ನೀಡುತ್ತೇವೆ' ಎಂದು ಹೇಳಿದ ಜಾರ್ಜ್, ಮುಂದೆ ಈ ರೀತಿ ಆದರೆ ಪರಿಹಾರ ನೀಡುವುದಿಲ್ಲ' ಎಂದರು.

'ರಾತ್ರಿ ವೇಳೆ ಪಂಪ್ ಸೆಟ್ ಚಾಲೂ ಮಾಡಲು ಹೋದಾಗ, ಕರಡಿ, ಚಿರತೆಯಿಂದ ದಾಳಿ ಒಳಗಾದರೆ ಪರಿಹಾರ ಕೊಡಬೇಕು' ಎಂದು ಅಶೋಕ ಅವರು ಒತ್ತಾಯಿಸಿದರು.

ಬಿಜೆಪಿ ಆರಗ ಜ್ಞಾನೇಂದ್ರ ಮಾತನಾಡಿ, 'ಟ್ರಾನ್ಸ್‌ಫಾರ್ಮರ್‌ಗಳನ್ನು ಕೇರಳದಿಂದ ತರಿಸಲಾಗುತ್ತಿದೆ. ರಾಜ್ಯ ಸರ್ಕಾರದ್ದೇ ಕವಿಕಾ ಸಂಸ್ಥೆಯಿಂದ ಏಕೆ ಖರೀದಿಸುತ್ತಿಲ್ಲ' ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಾರ್ಜ್, 'ಕವಿಕಾದಿಂದಲೂ ಖರೀದಿಸುತ್ತಿದ್ದು, ಹೆಚ್ಚಿನ ಬೇಡಿಕೆ ಇರುವುದರಿಂದ ಕೇರಳದ ಸರ್ಕಾರ ಸಂಸ್ಥೆಯಿಂದಲೇ ಖರೀದಿಸಲಾಗುತ್ತಿದೆ. ಹಿಂದೆಯೂ ಖರೀದಿಸಲಾಗಿತ್ತು' ಎಂದರು.

ಅಶೋಕ ವಾದ ಸರಣಿ:

- ರಾಜ್ಯವನ್ನು 50 ಕ್ಕೂ ಹೆಚ್ಚು ವರ್ಷ ಆಡಳಿತ ಮಾಡಿದ ನೀವು ಬರದಿಂದ ಗುಳೇ ಹೋಗುವುದನ್ನು ತಡೆಯಲು ಶಾಶ್ವತ ಪರಿಹಾರದ ಬಗ್ಗೆ ಏಕೆ ಯೋಚಿಸಲಿಲ್ಲ. ನಾವು ಆಡಳಿತ ಮಾಡಿರುವುದು ಕೇವಲ 9 ವರ್ಷ ಮಾತ್ರ. ಗುಳೇ ಹೋಗುವುದು ಇನ್ನೂ ನಿಂತಿಲ್ಲ. ಗೋವಾ ಬೀಚ್ ಬಳಿ ಹೋದರೆ ಗುಳೆ ಹೋದ ಕನ್ನಡಿಗರ ದುಸ್ಥಿತಿ ಕಾಣಬಹುದು.
- ರಾಜ್ಯದಲ್ಲಿ ವಿದ್ಯುತ್ ಕಡಿತ ನಿತ್ಯದ ವಿದ್ಯಮಾನವಾಗಿದೆ. ನಿರ್ವಹಣೆಗಾಗಿ ವಿದ್ಯುತ್ ಕಡಿತ ಮಾಡಲಾಗಿದೆ ಎಂದು ಇಂಧನ ಸಚಿವರು ಹೇಳುತ್ತಾರೆ. ಆದರೆ, ಎಷ್ಟು ದಿನ ವಿದ್ಯುತ್ ನಿರ್ವಹಣೆ ಮಾಡುತ್ತೀರಿ?
- ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಜನ ಸಾಮಾನ್ಯರು, ರೈತರು ಹೈರಾಣಾಗಿದ್ದಾರೆ. ಕೃಷಿಗೆ ಮೊದಲಿಗೆ 4 ರಿಂದ 5 ಗಂಟೆ ವಿದ್ಯುತ್ ಕೊಡುತ್ತೇವೆ ಎಂದಿರಿ. ಈಗ 7 ಗಂಟೆ ಕೊಡುತ್ತೇವೆ ಎಂದು ಹೇಳುತ್ತಾ, ರಾತ್ರಿ ವೇಳೆ ವಿದ್ಯುತ್ ಕೊಡುತ್ತಿದ್ದೀರಿ. ಇದರಿಂದ ಹಾವು ಮತ್ತು ಕರಡಿಗಳಿಂದ ರೈತರು ಕಚ್ಚಿಸಿಕೊಳ್ಳುವಂತಾಗಿದೆ. ವಿದ್ಯುತ್ ಸಂಪರ್ಕದ ಕೊರತೆಯಿಂದ ಸಿಂಗಲ್ ಫೇಸ್ ಆಗಿ ಮೋಟಾರ್‌ಗಳು ಸುಟ್ಟು ಹೋಗುತ್ತಿವೆ.
- ಬರ ನಿರ್ವಹಣೆಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಆದರೆ, ತೆಲಂಗಾಣದ ಪತ್ರಿಕೆಗಳಲ್ಲಿ ₹7 ಕೋಟಿಯಷ್ಟು ಖರ್ಚು ಮಾಡಿ ಕರ್ನಾಟಕ ಸರ್ಕಾರದ ಜಾಹೀರಾತು ಪ್ರಕಟಿಸಿದ್ದೀರಿ. ಬೊಕ್ಕಸದ ಹಣ ಖರ್ಚು ಮಾಡುವ ಅಗತ್ಯವಿತ್ತೇ?

'ಅಲ್ಪಸಂಖ್ಯಾತರಿಗೆ ರಕ್ಷಣೆ ಹೇಳಿಕೆ: ತಪ್ಪೇನಿದೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಅಲ್ಪಸಂಖ್ಯಾತರೂ ಸೇರಿದಂತೆ ಎಲ್ಲರಿಗೂ ರಕ್ಷಣೆ ನೀಡುವುದಾಗಿ ಹೇಳಿದ್ದೇನೆ. ಅದರಲ್ಲಿ ತಪ್ಪೇನಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಮಂಗಳವಾರ ಇಲ್ಲಿನ ಸುವರ್ಣಸೌಧದಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಸ್ಲಿಂ ಸಮುದಾಯಕ್ಕೆ ಬಜೆಟ್‌ನಲ್ಲಿ ಅನುದಾನ ನೀಡುವುದಾಗಿ ಹೇಳಿದ್ದೇನೆ. ಅಷ್ಟನ್ನು ಹೊರತು ಬೇರೇನೂ ಮಾತನಾಡಿಲ್ಲ. ಎರಡು ಪತ್ರಿಕೆಗಳಲ್ಲಿ ಮಾತ್ರ ಸರಿಯಾದ ವರದಿ ಬಂದಿದೆ' ಎಂದರು.

ಸೋಮವಾರ ಹುಬ್ಬಳ್ಳಿಯಲ್ಲಿ ನಡೆದ ದಕ್ಷಿಣ ಭಾರತದ ಮುಸ್ಲಿಂ ಧರ್ಮ ಗುರುಗಳ ಸಮಾವೇಶದಲ್ಲಿ ಮಾತನಾಡಿದ್ದ ಸಿದ್ದರಾಮಯ್ಯ, 'ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದಾಗ ಅಲ್ಪಸಂಖ್ಯಾತರಿಗೆ ನೀಡುತ್ತಿದ್ದ ಅನುದಾನವನ್ನು ಹಿಂದಿನ ಸರ್ಕಾರ ಕಡಿತ ಮಾಡಿತ್ತು. ಮುಂದಿನ ದಿನಗಳಲ್ಲಿ ಅನುದಾನ ಹೆಚ್ಚಿಸುತ್ತೇನೆ. ₹10 ಸಾವಿರ ಕೋಟಿವರೆಗೆ ಅನುದಾನ ನೀಡಲು ಸಿದ್ಧ' ಎಂದಿದ್ದರು. ಈ ಬಗ್ಗೆ ಮಂಗಳವಾರ ಬೆಳಿಗ್ಗೆಯೇ ಪ್ರತಿಕ್ರಿಯಿಸಿದ್ದ ಬಿಜೆಪಿ ನಾಯಕರು, 'ಸಿದ್ದರಾಮಯ್ಯ ಮುಸ್ಲಿಮರ ತುಷ್ಟೀಕರಣಕ್ಕೆ ಮುಂದಾಗಿದ್ದಾರೆ' ಎಂದು ಹರಿಹಾಯ್ದಿದ್ದರು.

ಮುಸ್ಲಿಮರ ಓಲೈಕೆ ಬಿಡಿ: ಅಶೋಕ

ಸಿದ್ದರಾಮಯ್ಯನವರು ಮುಸ್ಲಿಮರ ಓಲೈಕೆ ಮಾಡುವುದು ಸರಿಯಲ್ಲ. ಅವರು ಹಿಂದುಗಳನ್ನು ಎರಡನೇ ದರ್ಜೆ ಪ್ರಜೆಗಳ ರೀತಿ ನೋಡುತ್ತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

'ಎಲ್ಲರಿಗೂ ಸಮಾನತೆ ಇರಬೇಕು. ಸಿದ್ದರಾಮಯ್ಯ ಆಡಿದ ಮಾತು ದೇಶ ಮತ್ತು ರಾಜ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಹಿಂದೆ ಟಿಪ್ಪುವಿನ ಮೇಲೆ ಅತಿಯಾದ ಪ್ರೀತಿ ತೋರಿಸಿ ಏನಾಯಿತು' ಎಂದು ಕೇಳಿದರು. ಟಿಪ್ಪು ಜಯಂತಿ, ಶಾದಿ ಭಾಗ್ಯದಂತಹ ಕಾರ್ಯಕ್ರಮಗಳನ್ನು ಜಾರಿ ಮಾಡಿದರೂ ಚುನಾವಣೆಯಲ್ಲಿ ಸೋತರು. ಈಗ ಮತ್ತೆ ಅಧಿಕಾರಕ್ಕೆ ಬಂದ ಬಳಿಕ, ಮುಸ್ಲಿಮರ ಮತಕ್ಕಾಗಿ ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ ಎಂದು ದೂರಿದರು.

'ಅಲ್ಪಸಂಖ್ಯಾತರ ತುಷ್ಟೀಕರಣದ ಮೂಲಕ ಇತರ ಎಲ್ಲ ಸಮುದಾಯಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾರಿ ಮಾಡಲು ಹೊರಟಿದ್ದಾರೆ. ಎಲ್ಲರಿಗೂ ನ್ಯಾಯ ಕೊಡುವ ಕರ್ತವ್ಯ ಮರೆತಿದ್ದಾರೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ

ಸಿದ್ದರಾಮಯ್ಯ ದೊಡ್ಡ ಕೋಮುವಾದಿ. ಅಲ್ಪಸಂಖ್ಯಾತರು, ಬಹುಸಂಖ್ಯಾತರು ಅನ್ನುವುದು ಬಿಡಬೇಕು. ಭ್ರಷ್ಟಾಚಾರ ನಿರ್ಮೂಲನೆ ಮಾಡಿ, ಜನಪರ ಆಡಳಿತ ನೀಡಿದರೇ ಎಲ್ಲಾ ಸಮುದಾಯಗಳಿಗೂ ಸಲ್ಲಬೇಕಾದುದು ಸಿಗಲಿದೆ

ಸಿ.ಎನ್. ಅಶ್ವಥ್ ನಾರಾಯಣ್, ಬಿಜೆಪಿ ಶಾಸಕ

ಸುದ್ದಿ 2 ನಿಮಿಷ

ಜತೆಗಿದ್ದವರೇ ಬೆನ್ನಿಗೆ ಚೂರಿ ಹಾಕಿದರು: ಹರಿಪ್ರಸಾದ್

ವಿಧಾನ ಪರಿಷತ್: 'ರಾಜಕಾರಣದಲ್ಲಿ ಸುದೀರ್ಘ ಅವಧಿ ಕೆಲಸ ಮಾಡಿರುವ ನಾನು ಹಲವು ವಿರೋಧ ಪಕ್ಷಗಳನ್ನು ಸೈದ್ಧಾಂತಿಕವಾಗಿ ಎದುರಿಸಿದ್ದೇನೆ. ಆದರೆ, ಜತೆಗೆ ಇದ್ದವರೇ ಬೆನ್ನಿಗೆ ಚೂರಿ ಹಾಕಿದ ನೋವು ಮರೆಯಲು ಸಾಧ್ಯವಾಗಿಲ್ಲ' ಎಂದು ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಹೇಳಿದರು.

'ಹಿಂದಿನ ಬಜೆಟ್ ಅಧಿವೇಶನದಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದೆ. ಪಕ್ಷದ ಕಾರ್ಯನಿಮಿತ್ತ ಕೊನೆಯ ದಿನ ಸದನಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಹಾಗಾಗಿ, ಇಂದು ಕೃತಜ್ಞತೆ ಸಲ್ಲಿಸಲು ಅವಕಾಶ ನೀಡಬೇಕು' ಎಂದು ಸಭಾಪತಿ ಅವರ ವಿಶೇಷ ಅನುಮತಿ ಪಡೆದು ಅವರು ಮಾತನಾಡಿದರು.

'ರಾಜಕಾರಣ ನಿಂತ ನೀರಲ್ಲ. ಸೋಲು, ಗೆಲುವು, ಅವಕಾಶ, ಅಧಿಕಾರ ಸಹಜ. ನಾವು ನಂಬಿದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಕೆಲಸ ಮಾಡಬೇಕು ಅಷ್ಟೇ. ಸೈದ್ಧಾಂತಿಕವಾಗಿ ಕಟು ಮಾತುಗಳನ್ನು ಆಡಿದರೂ, ಎಂದೂ ವಿರೋಧ ಪಕ್ಷಗಳಿಂದ ಬೆದರಿಕೆ ಎದುರಿಸಲಿಲ್ಲ. ಐಟಿ, ಇಡಿ ದಾಳಿಗೆ ಒಳಗಾಗಿಲ್ಲ. ನೋವಾಗಿದ್ದರೆ ಅದು ಜತೆಗಿದ್ದವರು ಬೆನ್ನಿಗೆ ಹಾಕಿದ ಚೂರಿಯಿಂದ ಮಾತ್ರ' ಎಂದು ಪುನರುಚ್ಚರಿಸಿದರು.

'ಚಿಕ್ಕಮಗಳೂರಿನ ಶಾಸಕರೊಬ್ಬರನ್ನು ನಿರಂತರವಾಗಿ ಟೀಕಿಸಿದ್ದೇನೆ. ಅವರೂ ಅದನ್ನು ಸೈದ್ಧಾಂತಿಕವಾಗಿ ತೆಗೆದುಕೊಂಡಿದ್ದರು. ಅವರ ಜತೆಗಿದ್ದವರೇ ಅವರ ಸೋಲಿಗೆ ಮ್ಯಾಚ್‌ಫಿಕ್ಸಿಂಗ್ ಮಾಡಿದರು. ರಾಜಕಾರಣದಲ್ಲಿ ಅದೆಲ್ಲ ಸಹಜ. ಸೋಲುಗಳನ್ನೂ ಕ್ರೀಡಾಮನೋಭಾವದಿಂದ ತೆಗೆದುಕೊಳ್ಳಬೇಕು' ಎಂದು ಹೇಳಿದರು.



ಸ್ಪೀಕರ್ ಜತೆ ಜಟಾಪಟಿ: ಬಸವರಾಜ ರಾಯರಡ್ಡಿ ಸಭಾತ್ಯಾಗ

ವಿಧಾನಸಭೆ: ಪ್ರಶ್ನೋತ್ತರ ಕಲಾಪದಲ್ಲಿ ನಿಯಮಾವಳಿ ಪಾಲಿಸುವ ವಿಚಾರದಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್ ಅವರೊಂದಿಗೆ ಜಟಾಪಟಿ ನಡೆಸಿದ ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಸಿಟ್ಟಿನಿಂದ ಸದನದಿಂದಲೇ ಹೊರ ನಡೆದರು.

'ಬ್ರ್ಯಾಂಡ್ ಬೆಂಗಳೂರು' ಯೋಜನೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಎನ್.ಎ. ಹ್ಯಾರಿಸ್ ಅವರ ಪ್ರಶ್ನೆಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರವಾಗಿ ಉತ್ತರ ನೀಡುತ್ತಿದ್ದರು. ಮಧ್ಯ ಪ್ರವೇಶಿಸಿದ ರಾಯರಡ್ಡಿ, ಪ್ರಶ್ನೋತ್ತರ ಕಲಾಪ ಒಂದು ಗಂಟೆಯ ಅವಧಿಯನ್ನು ಮೀರಿ ನಡೆಯುತ್ತಿರುವುದನ್ನು ಆಕ್ಷೇಪಿಸಿದರು. 'ಇದೇನು ಪ್ರಶ್ನೋತ್ತರ ಗಂಟೆಯೊ? ಪ್ರಶ್ನೋತ್ತರ ಗಂಟೆಗಳೊ? ಸದನದ ನಿಯಮಗಳಿಗೆ ಬೆಲೆ ಇಲ್ಲವೆ' ಎಂದು ರಾಯರಡ್ಡಿ ಕೇಳಿದರು. 'ನೀವು ಕುಳಿತುಕೊಳ್ಳಿ. ಸಚಿವರು ಉತ್ತರ ಕೊಡುತ್ತಾರೆ' ಎಂದು ಸಭಾಧ್ಯಕ್ಷರು ಸೂಚಿಸಿದರು.

'ಸ್ಪೀಕರ್ ಅವರೇ ನೀವು ಸರಿಯಾಗಿ ನಿಯಮ ಪಾಲಿಸಬೇಕು. ನಿಯಮದ ಪ್ರಕಾರವೇ ಕಲಾಪ ನಡೆಸಬೇಕು' ಎಂದು ರಾಯರಡ್ಡಿ ಏರಿದ ಧ್ವನಿಯಲ್ಲಿ ಹೇಳಿದರು. 'ಅದು ನನಗೆ ಗೊತ್ತಿದೆ. ನಿಯಮದ ಪ್ರಕಾರವೇ ಸದನದ ಕಲಾಪ ನಡೆಸುತ್ತಿದ್ದೇನೆ. ನೀವು ಮಾತನಾಡದೇ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇನೆ. ದಯವಿಟ್ಟು ಅದನ್ನು ಪಾಲಿಸಿ' ಎಂದು ಖಾದರ್ ಗದರಿದರು.

'ನಾನು ಹೊರಟು ಹೋಗುತ್ತೇನೆ' ಎಂದು ರಾಯರಡ್ಡಿ ಹೊರಟರು. ಪಕ್ಕದಲ್ಲೇ ಇದ್ದ ಕಾಂಗ್ರೆಸ್‌ನ ಕೆಲವು ಸದಸ್ಯರು ತಡೆಯಲು ಮುಂದಾದರು. ಅವರೆಲ್ಲರಿಗೂ ಜೋರಾಗಿ ಬೈಯ್ಯುತ್ತಲೇ ರಾಯರಡ್ಡಿ ಸಭಾತ್ಯಾಗ ಮಾಡಿದರು.

ದಳ ಸದಸ್ಯರ ಮೇಲೆ ತೋಳೇರಿಸಿದ ಶಿವಲಿಂಗೇಗೌಡ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಕೊಬ್ಬರಿ ಬೆಲೆ ಕುಸಿತದ ವಿಷಯ ಪ್ರಸ್ತಾಪಿಸಲು ಅಡ್ಡಿಪಡಿಸಿದ ಎಚ್‌.ಡಿ. ರೇವಣ್ಣ ಅವರಿಗೆ ಏಕವಚನದಲ್ಲಿ ಬೈದ ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ, ಅದನ್ನು ಆಕ್ಷೇಪಿಸಿದ ಜೆಡಿಎಸ್ ಶಾಸಕರ ಮೇಲೆ ತೋಳೇರಿಸಿ ಹೋದ ಘಟನೆಗೆ ಸದನವು ಮಂಗಳವಾರ ಸಾಕ್ಷಿಯಾಯಿತು.

ಕೊಬ್ಬರಿ ಬೆಲೆ ಕುಸಿತದ ಈ ವಿಷಯ ಪ್ರಸ್ತಾಪಿಸಲು ಅನುಮತಿ ಕೋರಿ ಶಿವಲಿಂಗೇಗೌಡರು ಸಭಾಧ್ಯಕ್ಷರಿಗೆ ಸೋಮವಾರವೇ ಸಲ್ಲಿಸಿದ್ದ ಕೋರಿಕೆ, ಮಂಗಳವಾರದ ಪಟ್ಟಿಯಲ್ಲಿತ್ತು. ಪ್ರಶ್ನೋತ್ತರ ಕಲಾಪ ಮುಗಿಯುವ ಕೆಲವು ನಿಮಿಷಗಳ ಮೊದಲು ಕೋರಿಕೆ ಸಲ್ಲಿಸಿದ್ದ ರೇವಣ್ಣ, ತಮಗೇ ಮೊದಲು ವಿಷಯ ಪ್ರಸ್ತಾಪಿಸಲು ಅವಕಾಶ ನೀಡುವಂತೆ ಪಟ್ಟು ಹಿಡಿದರು.

ಸ್ಪೀಕರ್ ಶಿವಲಿಂಗೇಗೌಡರ ಹೆಸರು ಕರೆದರು. ಅವರು ನಿಲ್ಲುವಷ್ಟರಲ್ಲೇ ರೇವಣ್ಣ ಮಾತು ಆರಂಭಿಸಿದರು. 'ನಿಯಮದ ಪ್ರಕಾರ ಶಿವಲಿಂಗೇ ಗೌಡರೇ ಮಾತನಾಡಬೇಕು' ಎಂದು ಸಭಾಧ್ಯಕ್ಷರು ಸೂಚಿಸಿದರು. ಸಿಟ್ಟಿಗೆದ್ದ ರೇವಣ್ಣ ಜೆಡಿಎಸ್ ಸದಸ್ಯರೊಂದಿಗೆ ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು.

ರೇವಣ್ಣ ಅವರ ನಡೆಯನ್ನು ಕಂಡು ಕೆಂಡಾಮಂಡಲರಾದ ಶಿವಲಿಂಗೇಗೌಡ, 'ನೀಚ ರಾಜಕಾರಣ ಮಾಡ್ತೀಯ. ಮಾನ ಮರ್ಯಾದೆ ಇದೆಯಾ ನಿಮಗೆ? ನಿಮ್ಮ ಪಕ್ಷ ಬಿಟ್ಟು ಇಲ್ಲಿ ಬಂದೆ ಎಂಬ ಕಾರಣಕ್ಕೆ ಇಷ್ಟು ನೀಚ ರಾಜಕಾರಣ ಮಾಡ್ತೀರಾ? ಹಾಸನ ಜಿಲ್ಲೆ, ಕೊಬ್ಬರಿ ಬೆಳೆಗಾರರನ್ನು ನಿಮಗೆ ಗುತ್ತಿಗೆಗೆ ಕೊಟ್ಟಿದ್ದಾರಾ' ಎಂದು ಏಕವಚನದಲ್ಲೇ ಹರಿಹಾಯ್ದರು.

ಗದ್ದಲ ಜೋರಾಗುತ್ತಿದ್ದಂತೆ ಸಭಾಧ್ಯಕ್ಷರು ಕಲಾಪ ಮುಂದೂಡಿದರು. ಬಳಿಕ ಜೆಡಿಎಸ್‌ನ ಎ. ಮಂಜು ಮತ್ತು ಎಚ್‌.ಸಿ. ಬಾಲಕೃಷ್ಣ ಅವರು ಶಿವಲಿಂಗೇಗೌಡರ ಬಳಿ ವಾಗ್ವಾದ ಮುಂದುವರಿಸಿದ್ದರು. ಸಿಟ್ಟಿಗೆದ್ದ ಶಿವಲಿಂಗೇಗೌಡ ತೋಳೇರಿಸಿ ಮುನ್ನುಗ್ಗಿದರು. ಕಾಂಗ್ರೆಸ್ ಸದಸ್ಯರು ಎಲ್ಲರನ್ನೂ ಸಮಾಧಾನಪಡಿಸಿದರು.

ಜೆಡಿಎಸ್‌ನವರನ್ನು ತಮ್ಮ ಕೊಠಡಿಗೆ ಕರೆಯಿಸಿ ಮಾತನಾಡಿದ ಯು.ಟಿ. ಖಾದರ್, ಅವರಿಗೆ ಮೊದಲು ಮಾತನಾಡಲು ಅವಕಾಶ ಕಲ್ಪಿಸುವುದಾಗಿ ಹೇಳಿದರು. ಹೀಗಾಗಿ, ದಳದ ಸದಸ್ಯರು ಧರಣಿ ಕೈಬಿಟ್ಟರು.

ಬಿಜೆಪಿ, ಜೆಡಿಎಸ್ ಸಭಾತ್ಯಾಗ

ವಿಧಾನ ಪರಿಷತ್: ಸರ್ಕಾರಿ ನೌಕರರ ವೇತನ ಪರಿಷ್ಕರಿಸಲು ರಚಿಸಿರುವ 7ನೇ ವೇತನ ಆಯೋಗದ ವರದಿಯನ್ನು ಪಡೆದು ಜಾರಿಗೊಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಸಭಾನಾಯಕ ಎನ್.ಎಸ್. ಬೋಸರಾಜು ನೀಡಿದ ಉತ್ತರ ತೃಪ್ತಿಕರವಾಗಿಲ್ಲ. ಮುಖ್ಯಮಂತ್ರಿಯೇ ಸದನಕ್ಕೆ ಬಂದು ಉತ್ತರ ನೀಡಬೇಕು ಎಂದು ಪಟ್ಟು ಹಿಡಿದು ಬಿಜೆಪಿ, ಜೆಡಿಎಸ್ ಸದಸ್ಯರು ಸಭಾತ್ಯಾಗ ನಡೆಸಿದರು.

ನಿಯಮ 330ರಡಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ, 'ಆಯೋಗದ ವರದಿ ಸಿದ್ಧವಾಗಿದ್ದರೂ, ವಿನಾ ಕಾರಣ ಆಯೋಗದ ಅವಧಿ ವಿಸ್ತರಿಸಲಾಗಿದೆ. ಸರ್ಕಾರದಲ್ಲಿ ದುಡ್ಡಿಲ್ಲ. ವೇತನ ಪರಿಷ್ಕರಿಸಲು ಮನಸ್ಸಿಲ್ಲ' ಎಂದು ದೂರಿದರು. ಅವರ ಮಾತುಗಳಿಗೆ ಬಿಜೆಪಿ, ಜೆಡಿಎಸ್ ಸದಸ್ಯರು ದನಿಗೂಡಿಸಿದರು.

ಧರಣಿ ಬೆಳಗಾವಿಯ ಸುವರ್ಣ ವಿಧಾನಸೌಧದ ವಿಧಾನ ಪರಿಷತ್ ಪ್ರಶ್ನೋತ್ತರ ವೇಳೆ ಸಭಾಧ್ಯಕ್ಷರ ಪೀಠದ ಎದುರು ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಸರ್ಕಾರಿ ಗೌರವದ ನಡುವೆ ಅಂತ್ಯಕ್ರಿಯೆ; ಮಡುಗಟ್ಟಿದ ದುಃಖ

ಅರ್ಜುನನಿಗೆ ಭಾರ ಮನದ ವಿದಾಯ

ಪ್ರಜಾವಾಣಿ ವಾರ್ತೆ

ಹಾಸನ: ಕಾರ್ಯಾಚರಣೆ ವೇಳೆ ಕಾಡಾನೆ ದಾಳಿಯಿಂದ ಮೃತಪಟ್ಟ ಅರ್ಜುನನಿಗೆ, ಆಕ್ರೋಶ, ದುಃಖ, ಕಣ್ಣೀರಿನ ನಡುವೆ ಮಂಗಳವಾರ ಮಧ್ಯಾಹ್ನ ಸಕಲೇಶಪುರ ತಾಲ್ಲೂಕಿನ ದಬ್ಬಳಿಕಟ್ಟೆ ಅರಣ್ಯದ ನೆಡುತೋಪಿನಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನಡೆಯಿತು.

ಮೈಸೂರು ರಾಜಮನೆತನದ ಪುರೋಹಿತ ಪ್ರಹ್ಲಾದ್ ಅವರು ಬಂದು, ಅರ್ಜುನನ ಕಳೇಬರಕ್ಕೆ ಸಂಪ್ರದಾಯದಂತೆ ಪೂಜೆ ಸಲ್ಲಿಸಿದರು. ಮಾವುತ ವಿನು ಅಂತಿಮ ವಿಧಿ ವಿಧಾನ ನೆರವೇರಿಸಿದರು.

ಮುಚ್ಚಿದ ಪೆಂಡಾಲ್‌ನಲ್ಲಿ ದಂತ ತೆಗೆದು, ಮರಣೋತ್ತರ ಪರೀಕ್ಷೆ ಬಳಿಕ ಅಂತ್ಯಕ್ರಿಯೆ ನಡೆಸಲಾಯಿತು.

ಜಿಲ್ಲಾಧಿಕಾರಿ ಸಿ.ಸತ್ಯಭಾಮಾ, ಎಸ್ಪಿ ಮೊಹಮ್ಮದ್ ಸುಜೀತಾ, ಮೈಸೂರು ಎಡಿಸಿ ಆರ್.ಲೋಕನಾಥ್, ಚಾಮರಾಜೇಂದ್ರ ಒಡೆಯರ್ ಮೊಮ್ಮಗಳು ಶ್ರುತಿ ಕೀರ್ತಿದೇವ್ ಗೌರವ ಸಲ್ಲಿಸಿದರು. ಕೊಡಗಿನ ಕಿರೆಕೊಡ್ಲಿಮಠದ ಸದಾಶಿವ ಸ್ವಾಮೀಜಿ ಹಾಗೂ ಕಲ್ಲಮಠದ ಮಹಾಂತ ಸ್ವಾಮೀಜಿ ಆರತಿ ಬೆಳಗಿದರು. ಕುಶಾಲುತೋಪು ಗೌರವ ಸಲ್ಲಿಸಲಾಯಿತು.

ಮೈಸೂರಿನಿಂದ ಬಂದಿದ್ದ ನೂರಾರು ಜನರು ಅರ್ಜುನನಿಗೆ ಅಂತಿಮ ನಮನ ಸಲ್ಲಿಸಿದರು. 'ನಮ್ಮ ಜಿಲ್ಲೆಯ ಆಸ್ತಿಯಾದ ಅರ್ಜುನನ ಕಳೇಬರವನ್ನು ಮೈಸೂರಿಗೆ ಕಳುಹಿಸಿಕೊಡಿ' ಎಂದು ಒತ್ತಾಯಿಸಿದರು. ಜನರನ್ನು ಚದುರಿಸಲು ಪೊಲೀಸರು ಲಾಠಿ ಬೀಸಿದರು. ಯಡೇಹಳ್ಳಿ ಮಂಜುನಾಥ ನೇತೃತ್ವದಲ್ಲೂ ಪ್ರತಿಭಟನೆ ನಡೆಯಿತು.

ಸಕಲೇಶಪುರ ತಾಲ್ಲೂಕು ಯಸಳೂರು ಸಮೀಪದ ದಬ್ಬಳಿಕಟ್ಟೆ ಅರಣ್ಯದಲ್ಲಿ ಮಂಗಳವಾರ ಅರ್ಜುನನ ಕಳೇಬರಕ್ಕೆ ಮೈಸೂರು ರಾಜಮನೆತನದ ಪುರೋಹಿತ ಪ್ರಹ್ಲಾದ್ ಪೂಜೆ ನೆರವೇರಿಸಿದರು –ಪ್ರಜಾವಾಣಿ ಚಿತ್ರ/ ಜಾನೇಕೆರೆ ಆರ್‌. ಪರಮೇಶ್

'ಅರ್ಜುನನ ಕಾಲಿಗೆ ಗುಂಡೇಟು ತಗುಲಿತ್ತು'

'ಅರಣ್ಯ ಸಿಬ್ಬಂದಿ ಹಾರಿಸಿದ ಗುಂಡು ಅರ್ಜುನನ ಕಾಲಿಗೆ ತಗುಲಿತ್ತು' ಎಂದು, ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ವ್ಯಕ್ತಿಯೊಬ್ಬರ ಹೇಳಿಕೆಯುಳ್ಳ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

'ಅರಿವಳಿಕೆ ತಗುಲಿದ್ದ 'ಪ್ರಶಾಂತ್' ಆನೆ ಚೇತರಿಸಿಕೊಳ್ಳುವಷ್ಟರಲ್ಲಿ ಅರ್ಜುನ –ಕಾಡಾನೆ ಮಧ್ಯೆ ಕಾಳಗ ತೀವ್ರವಾಗಿತ್ತು. ಅದನ್ನು ತಡೆಯಲು ಹಾರಿಸಿದ ಗುಂಡು ಅರ್ಜುನನಿಗೆ ತಗುಲಿತ್ತು' ಎಂದು ತಿಳಿಸಿದ್ದಾರೆ. 'ಮಾವುತ ವಿನು ಕೂಡಾ ಬಿದ್ದು, ಆಸ್ಪತ್ರೆಗೆ ಸೇರಿದ್ದರು. ಮಾವುತ ಇಲ್ಲದೇ ಕಾಳಗ ನಡೆಸಿದ್ದರಿಂದ ಅರ್ಜುನನೂ ನೆಲಕ್ಕೆ ಬಿದ್ದಿತ್ತು. ಆಗ ಕಾಡಾನೆ ತಿವಿದು ಕೊಂದಿತು' ಎಂದಿದ್ದಾರೆ. ಮಾವುತ ವಿನು, 'ನಾನು ಅರ್ಜುನನ ಜೊತೆಗೇ ಇದ್ದಿದ್ದರೆ, ಸಾಯುತ್ತಿರಲಿಲ್ಲ' ಎಂದು ದುಃಖ ತೋಡಿಕೊಳ್ಳುತ್ತಿದ್ದರು.

ಗುಂಡೇಟಿನ ಗುರುತು ಪತ್ತೆಯಾಗಿಲ್ಲ: 'ಬಾಹ್ಯ ಮರಣೋತ್ತರ ಪರೀಕ್ಷೆಯಲ್ಲಿ ಗುಂಡೇಟಿನ ಗುರುತು ಪತ್ತೆಯಾಗಿಲ್ಲ. ಪಕ್ಕೆಯ ಭಾಗಕ್ಕೆ ಬಲವಾದ ಪೆಟ್ಟು ಬಿದ್ದು ಅರ್ಜುನ ಮೃತಪಟ್ಟಿದ್ದಾನೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ಹೇಳಿದರು.

'ಕಾರ್ಯಾಚರಣೆ ವೇಳೆ ಲೋಪವಾಗಿಲ್ಲ. ಅರಿವಳಿಕೆ ಮದ್ದು ಮಿಸ್ ಫೈರ್ ಕುರಿತು ಬಗ್ಗೆ, ಇಂಜೆಕ್ಷನ್ ಬಳಕೆ ಬಗ್ಗೆ ತನಿಖೆ ನಡೆಯಲಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದೇವೆ' ಎಂದು ಹೇಳಿದರು.

'ಅರ್ಜುನ ಸ್ಮಾರಕ'

ಬೆಳಗಾವಿ: ಆನೆ ಅರ್ಜುನನ ಸ್ಮಾರಕವನ್ನು ಮೈಸೂರು ಹಾಗೂ ಹಾಸನ ಜಿಲ್ಲೆಯಲ್ಲಿ ನಿರ್ಮಿಸುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಅರ್ಜುನನು ಕ್ಯಾಪ್ಟನ್, ಸೀನಿಯರ್ ಹಾಗೂ ಬಲಭೀಮ ಎಂದೆಲ್ಲ ಹೆಸರು ಪಡೆದಿದ್ದ. ಅರ್ಜುನ ಮತ್ತು ನಾಡಿನ ಜನರ ನಡುವೆ ಭಾವನಾತ್ಮಕ ಸಂಬಂಧವಿತ್ತು. ಈ ಕಾರಣದಿಂದಾಗಿ, ಅರ್ಜುನನ ನೆನಪು ಸದಾ ಉಳಿಯುವಂತೆ ಮಾಡಲು ಸ್ಮಾರಕ ನಿರ್ಮಿಸುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾವುತ ವಿನು ರೋದನ

'ನನ್ನ ಆನೆಯನ್ನು ಬದುಕಿಸಿ ಕೊಡಿ. ನನ್ನೊಂದಿಗೆ ಕಳಿಸಿ. ಎಂಥ ರಾಜನ್ನ ಮಿಸ್ ಮಾಡಿಕೊಂಡೆ' ಎಂದು ಅರ್ಜುನನ ಕಳೇಬರ ತಬ್ಬಿಕೊಂಡು ಮಾವುತ ವಿನು ರೋದಿಸುತ್ತಿದ್ದ ದೃಶ್ಯಗಳು ಮನ ಕಲಕುವಂತಿದ್ದವು.

ಅರ್ಜುನನ ಸೊಂಡಿಲು ತಬ್ಬಿಕೊಂಡು, 'ಆನೆ ಬದುಕಿಸಿಕೊಡಿ. ಇಲ್ಲವೇ ನನ್ನ, ಕುಟುಂಬವನ್ನು ಅರ್ಜುನನ ಜೊತೆ ಮಣ್ಣು ಮಾಡಿ. ಅರ್ಜುನ ಸತ್ತಿಲ್ಲ ಎಂದು ನನ್ನ ಹೆಂಡತಿ, ಮಕ್ಕಳಿಗೆ ಹೇಳಿದ್ದೇನೆ' ಎಂದು ರೋದಿಸಿದರು. ಈ ವೇಳೆ ಅರಣ್ಯಾಧಿಕಾರಿ ಶಿಲ್ಪಾ ಅವರ ಕಣ್ಣಾಲಿಗಳೂ ತೇವಗೊಂಡಿದ್ದವು.

ಅಶ್ಲೀಲ ಚಿತ್ರ ಪ್ರದರ್ಶಿಸಿ ವಿಚಾರಣೆಗೆ ಅಡ್ಡಿ: ಎಫ್‌ಐಆರ್

ಹೈಕೋರ್ಟ್ ವಿಡಿಯೊ ಕಾನ್ಫರೆನ್ಸ್: ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಭದ್ರತೆಯ ಕಾರಣದಿಂದ ಬೆಂಗಳೂರು, ಧಾರವಾಡ ಮತ್ತು ಕಲಬುರ್ಗಿ ಹೈಕೋರ್ಟ್ ಪೀಠಗಳ ವಿಡಿಯೊ ಕಾನ್ಫರೆನ್ಸ್ ಸೇವೆಯನ್ನು ಸದ್ಯಕ್ಕೆ ಅಮಾನತು ಮಾಡಲಾಗಿದೆ' ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್ ಕುಮಾರ್ ತಿಳಿಸಿದ್ದಾರೆ.

ಹೈಕೋರ್ಟ್ ಪ್ರಧಾನ ಪೀಠದಲ್ಲಿನ ಕೆಲವು ನ್ಯಾಯಪೀಠಗಳ ಕಲಾಪದಲ್ಲಿ ಸೋಮವಾರ ವಿಡಿಯೊ ಸ್ಟ್ರೀಮಿಂಗ್ ಖಾತೆಗೆ ಧಕ್ಕೆ ಉಂಟಾದ ಹಿನ್ನೆಲೆಯಲ್ಲಿ ಬೆಂಗಳೂರು, ಧಾರವಾಡ ಮತ್ತು ಕಲಬುರ್ಗಿ ಪೀಠಗಳಲ್ಲಿನ ಲೈವ್ ಸ್ಟ್ರೀಮಿಂಗ್ ಮತ್ತು ವಿಡಿಯೊ ಕಾನ್ಫರೆನ್ಸ್ ಅನ್ನು ನಿರ್ಬಂಧಿಸಲಾಗಿದೆ.

ಈ ಸಂಬಂಧ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರು ಮಂಗಳವಾರ ಬೆಳಗ್ಗೆ ಮುಕ್ತ ನ್ಯಾಯಾಲಯದ ಕಲಾಪದಲ್ಲಿ ಈ ವಿಷಯವನ್ನು ಮೌಖಿಕವಾಗಿ ಪ್ರಸ್ತಾಪಿಸಿ, 'ಇದೊಂದು ಅನಿರ್ಬಂಧಿತ ಪರಿಸ್ಥಿತಿಯಾಗಿದ್ದು ಸಹಕರಿಸಬೇಕು. ವ್ಯವಸ್ಥೆಯ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದರು.

ಎಫ್‌ಐಆರ್ ದಾಖಲು: ಬೆಂಗಳೂರಿನ ಪ್ರಧಾನ ಪೀಠದ ಹೈಕೋರ್ಟ್ ಹಾಲ್ ಸಂಖ್ಯೆ 6,12,18,23,24,26 ಮತ್ತು ಇತರೆ ಹಾಲ್‌ಗಳಲ್ಲಿ ಸೋಮವಾರ (ಡಿ.4) ವಿಡಿಯೊ ಕಾನ್ಫರೆನ್ಸ್ ಕಲಾಪ ನಡೆಯುತ್ತಿದ್ದಾಗ ಬೆಳಗಿನ 10 ಗಂಟೆಯಿಂದ 2 ಗಂಟೆಯ ಮಧ್ಯದಲ್ಲಿ ಲಿಂಕ್ ಮೂಲಕ ಭಾಗವಹಿಸಿದ್ದ ಅಪರಿಚಿತರು ಅಶ್ಲೀಲ ಚಿತ್ರಗಳನ್ನು ಪ್ರದರ್ಶಿಸಿ ವಿಚಾರಣೆಗೆ ಅಡ್ಡಿಪಡಿಸಿರುತ್ತಾರೆ' ಎಂದು ಆರೋಪಿಸಿ ಹೈಕೋರ್ಟ್ ಕಂಪ್ಯೂಟರ್ ವಿಭಾಗದ ರಿಜಿಸ್ಟ್ರಾರ್ ಎನ್.ಸುರೇಶ್ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ ಸಿಇಎನ್ ಠಾಣೆಯ ಬೆಂಗಳೂರು ಕೇಂದ್ರ ವಿಭಾಗದ ಠಾಣಾಧಿಕಾರಿ ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 67 ಮತ್ತು 67 ಎ ಅಡಿಯಲ್ಲಿ ಅಪರಾಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾಲೇಜು ಕಟ್ಟಡದಿಂದ ಬಿದ್ದ ವಿದ್ಯಾರ್ಥಿನಿಯರು

ಒಬ್ಬರ ಸಾವು: ಇನ್ನೊಬ್ಬರ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನಗರದ ಎರಡು ಕಾಲೇಜುಗಳಲ್ಲಿ ಮಂಗಳವಾರ ನಡೆದ ಪ್ರತ್ಯೇಕ ಘಟನೆಗಳಲ್ಲಿ ವಿದ್ಯಾರ್ಥಿನಿಯರಿಬ್ಬರು ಕಾಲೇಜು ಕಟ್ಟಡದದಿಂದ ಬಿದ್ದಿದ್ದು ಒಬ್ಬರು ಸಾವಿಗೀಡಾಗಿದ್ದಾರೆ. ಇನ್ನೊಬ್ಬರ ಸ್ಥಿತಿ ಗಂಭೀರವಾಗಿದೆ.

ಇಲ್ಲಿನ ಆದಿಚುಂಚನಗಿರಿ ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ಜಿ.ಓ.ಮೇಘಶ್ರೀ (17) ಕಾಲೇಜಿನ ಮೂರನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾರೆ. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಜನ್ನಾಪುರದ ಮೇಘಶ್ರೀ, ಹಾಸ್ಟೆಲ್‌ನಲ್ಲಿ ನೆಲೆಸಿದ್ದರು. ಮಂಗಳವಾರ ಕಿರುಪರೀಕ್ಷೆ ಬರೆದಿದ್ದ ಆಕೆ, ಶೌಚಾಲಯಕ್ಕೆ ಹೋಗುವುದಾಗಿ ಹೇಳಿ ಪರೀಕ್ಷಾ ಕೊಠಡಿಯಿಂದ ಹೊರಬಂದಿದ್ದರು ಎನ್ನಲಾಗಿದೆ.

'ಮಗಳ ಸಾವು ಶಂಕಾಸ್ಪದವಾಗಿದೆ. ಕಾಲೇಜಿಗೆ ಹೆಸರು ಬರಲು ಹೆಚ್ಚು ಅಂಕ ಗಳಿಸುವಂತೆ ಶಿಕ್ಷಕರು, ಹಾಸ್ಟೆಲ್ ಸಿಬ್ಬಂದಿ ಒತ್ತಡ ಹೇರಿ, ಮಾನಸಿಕವಾಗಿ ಹಿಂಸೆ ನೀಡಿದ್ದರಿಂದ ಮೃತಪಟ್ಟಿದ್ದಾಳೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಮೇಘಶ್ರೀ ಪಾಲಕರು ದೊಡ್ಡಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮತ್ತೊಂದು ಘಟನೆಯಲ್ಲಿ ಇಲ್ಲಿನ ಪ್ರೇರಣಾ ಶಿಕ್ಷಣ ಸಂಸ್ಥೆಯ (ಪೆಸಿಟ್) ಬಿಎಸ್‌ಸಿ ಪದವಿ ಮೊದಲ ವರ್ಷದ ವಿದ್ಯಾರ್ಥಿನಿ ರಚನಾ (18) ಕಾಲೇಜು ಕಟ್ಟಡದ ಎರಡನೇ ಮಹಡಿಯಿಂದ ಬಿದ್ದಿದ್ದಾರೆ. ತಲೆಗೆ ತೀವ್ರ ಗಾಯವಾಗಿದ್ದು, ಸ್ಥಿತಿ ಗಂಭೀರವಾಗಿದೆ. ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

'ರಚನಾ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದ ಶಿಕ್ಷಕರೊಬ್ಬರ ಪುತ್ರಿ. ಹಾಸ್ಟೆಲ್‌ನಲ್ಲಿ ನೆಲೆಸಿದ್ದರು. ಬೆಳಿಗ್ಗೆ ತರಗತಿಗೆ ಹಾಜರಾಗಿದ್ದರು. ನಂತರದ ತರಗತಿ ಆರಂಭಕ್ಕೆ 5 ನಿಮಿಷ ಮುನ್ನದ ಬಿಡುವಿನಲ್ಲಿ ಘಟನೆ ನಡೆದಿದೆ' ಎಂದು ತುಂಗಾನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮಿಜೋರಾಂ: ಇಂದು ರಾಜ್ಯಪಾಲರನ್ನು ಭೇಟಿ ಮಾಡಲಿರುವ ಲಾಲ್ದುಹೋಮಾ

8ರಂದು ಝೆಡ್‌ಪಿಎಂ ಪದಗ್ರಹಣ

ಪ್ರಜಾವಾಣಿ ವಾರ್ತೆ

ಗುವಾಹಟಿ: ಲಾಲ್ದುಹೋಮಾ ನೇತೃತ್ವದ ಮಿಜೋರಾಂನ ಝೋರಂ ಪೀಪಲ್ಸ್ ಮೂವ್‌ಮೆಂಟ್ (ಝೆಡ್‌ಪಿಎಂ) ಸರ್ಕಾರವು ಡಿಸೆಂಬರ್ 8ರಂದು ರಾಜ್ಯದ ರಾಜಧಾನಿ ಐಜ್ವಾಲ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಲಿದೆ.

ರಾಜ್ಯಪಾಲ ಹರಿಬಾಬು ಕಂಭಂಪತಿ ಅವರನ್ನು ಲಾಲ್ದುಹೋಮಾ ಅವರು ಬುಧವಾರ ರಾಜಭವನದಲ್ಲಿ ಭೇಟಿಯಾಗಿ, ಸರ್ಕಾರ ರಚಿಸಲು ಹಕ್ಕು ಮಂಡಿಸುವ ನಿರೀಕ್ಷೆ ಇದೆ. ಅದಕ್ಕೂ ಮೊದಲು ಝೆಡ್‌ಪಿಎಂನ ಶಾಸಕರು ಸಭೆ ಸೇರಿ ತಮ್ಮ ಶಾಸಕಾಂಗ ಪಕ್ಷದ ನಾಯಕನನ್ನು ಆರಿಸಲಿದ್ದಾರೆ.

40 ಸದಸ್ಯಬಲದ ಮಿಜೋರಾಂ ವಿಧಾನಸಭೆ ಚುನಾವಣೆಯಲ್ಲಿ ಝೆಡ್‌ಪಿಎಂ 27 ಸ್ಥಾನಗಳನ್ನು ಗೆದ್ದುಕೊಂಡಿದೆ. 1987ರಲ್ಲಿ ಮಿಜೋರಾಂಗೆ ರಾಜ್ಯದ ಸ್ಥಾನಮಾನ ದೊರೆತ ಬಳಿಕ ಇದೇ ಮೊದಲ ಬಾರಿಗೆ ಎಂಎನ್‌ಎಫ್, ಕಾಂಗ್ರೆಸ್ಸೇತರ ವ್ಯಕ್ತಿಯೊಬ್ಬರು ಮುಖ್ಯಮಂತ್ರಿ ಆಗುತ್ತಿದ್ದಾರೆ.

ಮುಖ್ಯಮಂತ್ರಿ ಝೋರಮ್‌ತಂಗಾ ನೇತೃತ್ವದ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಈ ಚುನಾವಣೆಯಲ್ಲಿ 10 ಸ್ಥಾನಗಳಿಗೆ ಕುಸಿದಿದೆ. ಬಿಜೆಪಿ ಈ ಬಾರಿ 2 ಸ್ಥಾನಗಳನ್ನು ಗೆದ್ದಿದೆ. 5 ಅವಧಿಗೆ ರಾಜ್ಯದಲ್ಲಿ ಆಡಳಿತ ನಡೆಸಿದ್ದ ಕಾಂಗ್ರೆಸ್ ಕೇವಲ ಒಂದು ಸ್ಥಾನ ಗೆದ್ದಿದೆ.

ಝೋರಮ್‌ತಂಗಾ ರಾಜೀನಾಮೆ: ಮಿಜೋರಾಂ ಸಿ.ಎಂ ಝೋರಮ್‌ತಂಗಾ (79) ಅವರು ಸೋಲಿಗೆ ನೈತಿಕ ಹೊಣೆ ಹೊತ್ತು ಎಂಎನ್‌ಎಫ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಪಕ್ಷವು ಸೋಮವಾರ ಸಭೆ ನಡೆಸಿತ್ತು. ಸೋಲಿನ ಕಾರಣಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಬಳಿಕ ಅವರು ರಾಜೀನಾಮೆ ನೀಡಿದ್ದಾರೆ.

ಇವಿಎಂ ವಿಶ್ವಾಸಾರ್ಹತೆ ಪ್ರಶ್ನಿಸಿದ ಸಿಂಗ್

ಭೋಪಾಲ್ (ಪಿಟಿಐ): ರಾಜ್ಯಸಭಾ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ದಿಗ್ವಿಜಯ್ ಸಿಂಗ್ ಅವರು ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ್ದಾರೆ. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಕಾಂಗ್ರೆಸ್ ಪಕ್ಷವು ಸೋಲು ಕಂಡ ನಂತರದಲ್ಲಿ ಅವರು ಈ ಪ್ರಶ್ನೆ ಎತ್ತಿದ್ದಾರೆ. ತೆಲಂಗಾಣದಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದಿದೆ.

ಚಿಪ್ ಇರುವ ಯಾವುದೇ ಯಂತ್ರದಲ್ಲಿನ ದಾಖಲೆಗಳನ್ನು ಬದಲಾಯಿಸಲು ಸಾಧ್ಯವಿದೆ ಎಂದು ಸಿಂಗ್ ಹೇಳಿದ್ದಾರೆ. 2003ರಿಂದಲೂ ತಾವು ಇವಿಎಂ ವಿರೋಧಿಸುತ್ತಿರುವುದಾಗಿ ಹೇಳಿದ್ದಾರೆ.

‘ಭಾರತದ ಪ್ರಜಾತಂತ್ರವನ್ನು ವೃತ್ತಿಪರ ಹ್ಯಾಕರ್‌ಗಳು ನಿಯಂತ್ರಿಸಲು ನಾವು ಅವಕಾಶ ಮಾಡಿಕೊಡಬಹುದೇ? ಎಲ್ಲ ರಾಜಕೀಯ ಪಕ್ಷಗಳು ಈ ಮೂಲಭೂತ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು. ಗೌರವಾನ್ವಿತ ಚುನಾವಣಾ ಆಯೋಗ ಮತ್ತು ಸುಪ್ರೀಂ ಕೋರ್ಟ್, ನೀವು ನಮ್ಮ ಭಾರತೀಯ ಪ್ರಜಾತಂತ್ರವನ್ನು ದಯವಿಟ್ಟು ರಕ್ಷಿಸುವಿರಾ?’ ಎಂದು ಸಿಂಗ್ ಅವರು ‘ಎಕ್ಸ್’ ವೇದಿಕೆಯಲ್ಲಿ ಬರೆದಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಲ್ಲ: ಚೌಹಾಣ್

ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಗಳವಾರ ಭೋಪಾಲ್‌ನಲ್ಲಿ ನೆಹರೂ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಾಲಕಿಗೆ ಸಿಹಿ ತಿನ್ನಿಸಿದರು —ಪಿಟಿಐ ಚಿತ್ರ

ಭೋಪಾಲ್ (ಪಿಟಿಐ): ‘ಈ ಮೊದಲೂ ನಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿರಲಿಲ್ಲ. ಈಗಲೂ ಆಗಿಲ್ಲ’– ಹೀಗೆಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಗಳವಾರ ಹೇಳಿದ್ದಾರೆ.

‘ಎಕ್ಸ್’ ಜಾಲತಾಣದಲ್ಲಿ ವಿಡಿಯೊ ಸಂದೇಶ ಹರಿಬಿಟ್ಟಿರುವ ಅವರು, ‘ಬಿಜೆಪಿ ವಹಿಸುವ ಕೆಲಸವನ್ನು ಪಕ್ಷದ ಕಾರ್ಯಕರ್ತನಾಗಿ ನಾನು ಶ್ರದ್ಧೆಯಿಂದ, ನನ್ನ ಸಾಮರ್ಥ್ಯಕ್ಕೆ ತಕ್ಕಂತೆ, ಪ್ರಾಮಾಣಿಕತೆಯಿಂದ ನಿರ್ವಹಿಸಿದ್ದೇನೆ. ಬಿಜೆಪಿ ಕಾರ್ಯಕರ್ತನಾಗಿರುವುದು ನನ್ನ ಅದೃಷ್ಟ’ ಎಂದಿದ್ದಾರೆ.

‘ನರೇಂದ್ರ ಮೋದಿ ಅವರು ನಮ್ಮ ನಾಯಕರಾಗಿರುವುದು ನಮ್ಮ ಅದೃಷ್ಟ. ಅವರ ಜೊತೆ ಕೆಲಸ ಮಾಡಲು ನನಗೆ ಅವಕಾಶ ದೊರಕಿದೆ. ಭವ್ಯವಾದ, ಸಮೃದ್ಧ ಮತ್ತು ಶಕ್ತಿಶಾಲಿ ಭಾರತವು ಮೋದಿ ಅವರ ನಾಯಕತ್ವದಲ್ಲಿ ನಿರ್ಮಾಣಗೊಳ್ಳುತ್ತಿದೆ. ಮೋದಿ ನಮ್ಮ ನಾಯಕರು. ಅವರ ಜೊತೆ ಕೆಲಸ ಮಾಡಲು ನಾವು ಯಾವಾಗಲೂ ಹೆಮ್ಮೆ ಪಡುತ್ತೇವೆ ಮತ್ತು ಹರ್ಷಿಸುತ್ತೇವೆ’ ಎಂದಿದ್ದಾರೆ.

ಶಿವರಾಜ್ ಸಿಂಗ್ ಚೌಹಾಣ್ ಅವರು ಮಧ್ಯಪ್ರದೇಶದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿ ಆಗಿದ್ದರು.

ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ ಬಳಿಕ, ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಕುರಿತು ಊಹಾಪೋಹಗಳು ಹರಿದಾಡುತ್ತಿವೆ. ಹಿರಿಯ ನಾಯಕರಾದ ಜ್ಯೋತಿರಾದಿತ್ಯ ಸಿಂಧಿಯಾ, ಕೈಲಾಶ್ ವಿಜಯವರ್ಗೀಯ, ನರೇಂದ್ರ ಸಿಂಗ್ ತೋಮರ್, ಪ್ರಲ್ಹಾದ್ ಪಟೇಲ್ ಇತರರು ಮುಖ್ಯಮಂತ್ರಿ ಸ್ಥಾನದ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಬಿಜೆಪಿಯ ಉನ್ನತ ನಾಯಕತ್ವವು ಶೀಘ್ರದಲ್ಲೇ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢದ ಮುಖ್ಯಮಂತ್ರಿಗಳ ಆಯ್ಕೆ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ ಎನ್ನಲಾಗಿದೆ.

ತೆಲಂಗಾಣ: ರೇವಂತ್ ರೆಡ್ಡಿ ಮುಖ್ಯಮಂತ್ರಿ, ನಾಳೆ ಪ್ರಮಾಣ

ಒಂದನೇ ಪುಟದಿಂದ...

ಭಟ್ಟಿ ವಿಕ್ರಮಾರ್ಕ ಮತ್ತು ಎನ್. ಉತ್ತಮ್ ಕುಮಾರ್ ರೆಡ್ಡಿ ಅವರೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿದ್ದರು. ವೀಕ್ಷಕರು ಸಲ್ಲಿಸಿದ ವರದಿ ಪರಿಶೀಲಿಸಿ, ಹಿರಿಯ ನಾಯಕರ ಜತೆ ಚರ್ಚಿಸಿದ ಬಳಿಕ ರೇವಂತ್ ರೆಡ್ಡಿ ಅವರನ್ನು ತೆಲಂಗಾಣ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ನೇಮಿಸಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿರ್ಧರಿಸಿದರು.

‘ಖರ್ಗೆ, ತೆಲಂಗಾಣದ ತಾಯಿ ಸೋನಿಯಾಮ್ಮ, ಎಂದಿಗೂ ಸ್ಫೂರ್ತಿದಾಯಕ ನಾಯಕರಾಗಿರುವ ರಾಹುಲ್ ಗಾಂಧಿ ಅವರಲ್ಲದೆ ಪ್ರಿಯಾಂಕಾ ಗಾಂಧಿ ವಾದ್ರಾ, ಕೆ.ಸಿ. ವೇಣುಗೋಪಾಲ್, ಡಿ.ಕೆ. ಶಿವಕುಮಾರ್, ಮಾಣಿಕ್‌ರಾವ್ ಠಾಕ್ರೆ ಅವರಿಗೆ ಅಲ್ಲದೆ ಪಕ್ಷದ ಕಾರ್ಯಕರ್ತರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ’ ಎಂದು ರೇವಂತ್ ಹೇಳಿದ್ದಾರೆ.

64 ಶಾಸಕರ ಪೈಕಿ 50 ಮಂದಿ ರೇವಂತ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡಲು ಒಲವು ಸೂಚಿಸಿದ್ದಾರೆ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಕೆ.ಜೆ. ಜಾರ್ಜ್, ಅಜಯ್‌ಕುಮಾರ್ ಮತ್ತು ದೀಪಾ ದಾಸ್‌ಮುನ್ಷಿ ಅವರನ್ನು ಒಳಗೊಂಡ ವೀಕ್ಷಕರ ತಂಡವು ವರದಿಯಲ್ಲಿ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಹೆಸರು ಅಂತಿಮಗೊಳಿಸುವ ಮೊದಲು ಖರ್ಗೆ ಅವರು ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, ಶಿವಕುಮಾರ್ ಮತ್ತು ರಾಜ್ಯದ ಉಸ್ತುವಾರಿ ಮಾಣಿಕ್‌ರಾವ್ ಅವರ ಜತೆ ಚರ್ಚೆ ನಡೆಸಿದರು.

ನಂತರದಲ್ಲಿ ವೇಣುಗೋಪಾಲ್ ಅವರು ಶಿವಕುಮಾರ್ ಅವರೊಂದಿಗೆ ವಿಕ್ರಮಾರ್ಕ, ಉತ್ತಮ್‌ಕುಮಾರ್ ಮತ್ತು ಮಾಣಿಕ್‌ರಾವ್ ಅವರ ಜತೆ ಮಾತುಕತೆ ನಡೆಸಿ ಸರ್ಕಾರದಲ್ಲಿ ಮುಂದೆ ಅವರು ವಹಿಸಬೇಕಾದ ಪಾತ್ರದ ಕುರಿತು ವಿವರಿಸಿದರು ಎನ್ನಲಾಗಿದೆ.

ಸಂಪುಟ ರಚನೆಗೆ ಅಂತಿಮ ಸ್ಪರ್ಶ ನೀಡಲು ರೇವಂತ್ ಅವರು ದೆಹಲಿಗೆ ಭೇಟಿ ನೀಡುವ ಸಾಧ್ಯತೆ ಇದೆ.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ನಿರ್ಧಾರ ಪ್ರಕಟಿಸಿದ ವೇಣುಗೋಪಾಲ್ ಅವರು, ‘ತೆಲಂಗಾಣದಲ್ಲಿ ಇತರ ನಾಯಕರ ಜತೆಗೂಡಿ ವ್ಯಾಪಕವಾಗಿ ಪ್ರಚಾರ ಕೈಗೊಂಡ ಕ್ರಿಯಾಶೀಲ ನಾಯಕ ರೇವಂತ್ ಅವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕರಾಗಿ ಖರ್ಗೆ ಅವರು ಆಯ್ಕೆ ಮಾಡಿದ್ದಾರೆ’ ಎಂದರು.

ರೇವಂತ್ ನೇತೃತ್ವದ ಸರ್ಕಾರವು ಪಕ್ಷ ಭರವಸೆ ನೀಡಿದ ಎಲ್ಲಾ ಗ್ಯಾರಂಟಿಗಳನ್ನು ಕಾರ್ಯಗತಗೊಳಿಸಲಿದೆ ಎಂದು ಹೇಳಿದರು.

ಉಪಮುಖ್ಯಮಂತ್ರಿ ಬಗ್ಗೆ ಕೇಳಿದ ಪ್ರಶ್ನೆಗೆ, ‘ನಾವು ಎಲ್ಲಾ ಹಿರಿಯ ನಾಯಕರನ್ನು ಗುರುತಿಸುತ್ತೇವೆ. ಇದು ಏಕ ವ್ಯಕ್ತಿ ಪ್ರದರ್ಶನವಲ್ಲ. ಈ ಸರ್ಕಾರ ತಂಡವಾಗಿ ಕೆಲಸ ಮಾಡಲಿದೆ’ ಎಂದು ಪ್ರತಿಕ್ರಿಯಿಸಿದರು.

ಈವರೆಗೆ ಸಿಎಲ್‌ಪಿ ನಾಯಕರಾಗಿದ್ದ, ದಲಿತ ನಾಯಕ ವಿಕ್ರಮಾರ್ಕ ಅವರು ಈಗ ಉಪ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಅವಿಭಜಿತ ಆಂಧ್ರಪ್ರದೇಶದ ಉಪಮುಖ್ಯಮಂತ್ರಿಯಾಗಿದ್ದ ಮತ್ತು ಈಗ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಕಾಯಂ ಆಹ್ವಾನಿತರಾಗಿರುವ ದಾಮೋದರ್ ರಾಜಾ ನರಸಿಂಹ ಅವರೂ ಈ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

ರೇವಂತ್ ಅವರೊಂದಿಗೆ ಪ್ರಮಾಣ ವಚನ ಸ್ವೀಕರಿಸುವವರ ಹೆಸರನ್ನು ಅಂತಿಮಗೊಳಿಸುವಲ್ಲಿ ನಾಯಕತ್ವ ಈಗ ಮಗ್ನವಾಗಿದೆ.

ಈ ಮೊದಲು ಸೋನಿಯಾ ಗಾಂಧಿ ಅವರ ಜನ್ಮದಿನವಾದ ಡಿ. 9ರಂದು ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ರೇವಂತ್ ಹೇಳಿದ್ದರು. ರಾಹುಲ್ ಅವರು ಶುಕ್ರವಾರದಿಂದ 7 ದಿನಗಳವರೆಗೆ ಆಗ್ನೇಯ ಏಷ್ಯಾಕ್ಕೆ ಪ್ರವಾಸ ಕೈಗೊಂಡಿರುವುದರಿಂದ ಗುರುವಾರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎನ್ನಲಾಗಿದೆ.

ಜಿಲ್ಲಾ ಪಂಚಾಯಿತಿಯಿಂದ ಸಿ.ಎಂ ಗಾದಿವರೆಗೆ...

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ರೇವಂತ್ ರೆಡ್ಡಿ ಅವರು ತೆಲಂಗಾಣ ರಾಜ್ಯದ ಎರಡನೆಯ ಮುಖ್ಯಮಂತ್ರಿ ಆಗಲಿದ್ದಾರೆ. 54 ವರ್ಷ ವಯಸ್ಸಿನ ರೆಡ್ಡಿ ಅವರು ರಾಜಕಾರಣದಲ್ಲಿ ಸಾಗಿಬಂದಿರುವ ಹಾದಿಯು ಸುದೀರ್ಘವಾಗಿದೆ.

2006ರಲ್ಲಿ ರೆಡ್ಡಿ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾದರು. 2007ರಲ್ಲಿ ವಿಧಾನ ಪರಿಷತ್ ಸದಸ್ಯ ಕೂಡ ಆದರು. ಮೆಹಬೂಬ್ ನಗರದವರಾದ ರೆಡ್ಡಿ ಅವರು ನಂತರದಲ್ಲಿ ಟಿಡಿಪಿ ಸೇರಿದರು. ಆಗ ಅವಿಭಜಿತವಾಗಿದ್ದ ಆಂಧ್ರಪ್ರದೇಶದ ವಿಧಾನಸಭೆಗೆ ಕೊಡಂಗಲ್ ಕ್ಷೇತ್ರದಿಂದ 2009ರಲ್ಲಿ ಆಯ್ಕೆಯಾದರು. 2014ರಲ್ಲಿ ಟಿಡಿಪಿಯಿಂದಲೇ ತೆಲಂಗಾಣ ವಿಧಾನಸಭೆಗೆ ಆಯ್ಕೆಯಾಗಿದ್ದರು. ರೆಡ್ಡಿ ಅವರು ವಿದ್ಯಾರ್ಥಿಯಾಗಿದ್ದಾಗ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾಗಿದ್ದರು ಕೂಡ.

ಆರ್‌ಎಸ್‌ಎಸ್‌ನ ಮುಖವಾಣಿ ‘ಜಾಗೃತಿ’ ಪತ್ರಿಕೆಗೆ ಹೈದರಾಬಾದ್‌ನಲ್ಲಿ ಕೆಲವು ಕಾಲ ಕೆಲಸ ಮಾಡಿದ್ದರು. ರೆಡ್ಡಿ ಅವರು ಆರ್‌ಎಸ್‌ಎಸ್ ಜೊತೆ ಹೊಂದಿದ್ದ ಈ ನಂಟನ್ನು ಎಐಎಂಐಎಂ ಪಕ್ಷದ ನಾಯಕ ಅಸಾದುದ್ದೀನ್ ಓವೈಸಿ ಅವರು ಚುನಾವಣೆ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದರು.

ಮುಸ್ಲಿಮರ ಮತಗಳು ಕಾಂಗ್ರೆಸ್ಸಿಗೆ ಸಿಗಬಾರದು ಎಂಬ ಉದ್ದೇಶದಿಂದ ಓವೈಸಿ ಅವರು, ‘ರೇವಂತ್ ರೆಡ್ಡಿ ಆರ್‌ಎಸ್‌ಎಸ್ ಏಜೆಂಟ್’ ಎಂದು ಕರೆದಿದ್ದರು. ಆದರೆ ರೆಡ್ಡಿ ಅವರು ತಾವು ಹಿಂದೆ ಆರ್‌ಎಸ್‌ಎಸ್ ಜೊತೆ ಹೊಂದಿದ್ದ ನಂಟನ್ನು ಯಾವತ್ತೂ ಮರೆಮಾಚುವ ಯತ್ನ ನಡೆಸಲಿಲ್ಲ. ವರ್ಷಗಳು ಕಳೆದಂತೆಲ್ಲ ತಾವು ಆರ್‌ಎಸ್‌ಎಸ್ ಸಿದ್ಧಾಂತವನ್ನು ವಿರೋಧಿಸಲು ತೊಡಗಿದ್ದಾಗಿ, ಧರ್ಮನಿರಪೇಕ್ಷ ಸಂಘಟನೆಗಳ ಕಡೆ ಮುಖ ಮಾಡಿದ್ದಾಗಿ ಹೇಳಿಕೊಂಡಿದ್ದಾರೆ.

2015ರಲ್ಲಿ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ, ಶಾಸಕರೊಬ್ಬರಿಗೆ ಮತಕ್ಕಾಗಿ ಲಂಚ ನೀಡುತ್ತಿದ್ದಾಗ ತೆಲಂಗಾಣ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದರು. ರೆಡ್ಡಿ ಅವರನ್ನು ಜೈಲಿಗೆ ಕಳುಹಿಸಲಾಗಿತ್ತು. ಜಾಮೀನು ಪಡೆದು ಹೊರಬಂದ ನಂತರದಲ್ಲಿ, ರೆಡ್ಡಿ ಅವರು ಮೀಸೆ ತಿರುವಿ ಕೆಸಿಆರ್ ಅವರಿಗೆ ಸವಾಲೆಸೆದಿದ್ದರು. ಈ ಹಗರಣ ನಡೆದ ಎಂಟು ವರ್ಷಗಳ ನಂತರ ರೆಡ್ಡಿ ಅವರು ಕೆಸಿಆರ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ್ದಾರೆ.

2017ರಲ್ಲಿ ಕಾಂಗ್ರೆಸ್ ಸೇರಿದ ರೆಡ್ಡಿ, 2021ರಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಆಗ ಅವರಿಗೆ ಪಕ್ಷದ ಹಿರಿಯರಿಂದ ವಿರೋಧ ಎದುರಾಗಿತ್ತು.

ರಾಜಸ್ಥಾನ: ರಾಷ್ಟ್ರೀಯ ರಜಪೂತ ಕರ್ಣಿ ಸೇನಾ ಮುಖ್ಯಸ್ಥ ಹತ್ಯೆ

ಪ್ರಜಾವಾಣಿ ವಾರ್ತೆ

ಜೈಪುರ: ರಾಷ್ಟ್ರೀಯ ರಜಪೂತ ಕರ್ಣಿ ಸೇನಾ ಮುಖ್ಯಸ್ಥ ಸುಖದೇವ್ ಸಿಂಗ್ ಗೊಗಾಮೆಡಿ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಮಂಗಳವಾರ ಶ್ಯಾಮ ನಗರ ಪ್ರದೇಶದಲ್ಲಿ ಹತ್ಯೆ ಮಾಡಿದ್ದಾರೆ.

‘ಸುಖದೇವ್ ಅವರ ಮನೆಗೆ ಮೂವರು ಅಪರಿಚಿತರು ನುಗ್ಗಿ ಗುಂಡಿನ ದಾಳಿ ನಡೆಸಿದ್ದಾರೆ. ದಾಳಿಯಲ್ಲಿ ಸುಖದೇವ್ ಅವರ ಅಂಗರಕ್ಷಕ ಹಾಗೂ ಮತ್ತೊಬ್ಬ ವ್ಯಕ್ತಿಗೆ ಗಾಯವಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಕೆನಡಾ ಮೂಲದ ಪಾತಕಿ ಗೋಲ್ಡಿ ಬ್ರಾರ್ ಗುಂಪಿನ ಸದಸ್ಯ ರೋಹಿತ್ ಗೋದಾರ ಕಪುರಿಸ್ರ್ ಎಂಬಾತ ಹತ್ಯೆಯ ಹೊಣೆ ಹೊತ್ತುಕೊಂಡಿದ್ದಾನೆ.

ರಜಪೂತರ ಘನತೆ, ಸಂಸ್ಕೃತಿ ಹಾಗೂ ಸಂಪ್ರದಾಯವನ್ನು ಕಾಪಾಡಲು 2006ರಲ್ಲಿ ಕರ್ಣಿ ಸೇನಾವನ್ನು ಲೋಕೇಂದ್ರ ಸಿಂಗ್ ಕಲ್ವಿ ಎಂಬವರು ಸ್ಥಾಪಿಸಿದರು. ಸುಖದೇವ್ ಅವರು ಈ ಸಂಘಟನೆಯ ಭಾಗವಾಗಿದ್ದರು.

‘ಇಂಡಿಯಾ’ ಸಭೆ 17ಕ್ಕೆ ಮುಂದೂಡಿಕೆ

ಸಮಾಲೋಚನೆ ನಡೆಸದೆ ಸಭೆ ಕರೆದು ಪೇಚಿಗೆ ಸಿಲುಕಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಇಂಡಿಯಾ’ ಮೈತ್ರಿಕೂಟದ ಸಭೆಯು ಇದೇ 17ರಂದು ನಡೆಯಲಿದೆ ಎಂದು ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರು ಪಟ್ನಾದಲ್ಲಿ ಹೇಳಿದ್ದಾರೆ.

ಸುದ್ದಿಗಾರರು ಈ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು ಈ ತಿಂಗಳ 6ರ ಸಭೆಯಲ್ಲಿ ಹಲವು ನಾಯಕರು ಪಾಲ್ಗೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದ ಕಾರಣ ಸಭೆಯನ್ನು 17ಕ್ಕೆ ಮರುನಿಗದಿಗೊಳಿಸಲಾಗಿದೆ ಎಂದಿದ್ದಾರೆ.

ಈ ಮೊದಲು ಏಕಪಕ್ಷೀಯವಾಗಿ ಸಭೆ ಕರೆದು ಪೇಚಿಗೆ ಸಿಲುಕಿದ ಕಾಂಗ್ರೆಸ್, ಪ್ರಮುಖ ವಿರೋಧ ಪಕ್ಷಗಳ ನಾಯಕರು ಈ ತಿಂಗಳ ಮೂರನೆಯ ವಾರದಲ್ಲಿ ದೆಹಲಿಯಲ್ಲಿ ‘ತಮಗೆ ಅನುಕೂಲಕರವಾದ ಸಮಯದಲ್ಲಿ’ ಸಭೆ ಸೇರಲಿದ್ದಾರೆ ಎಂದು ಹೇಳಿತ್ತು.

ಬುಧವಾರ ಇದೇ 6ರಂದು ನಡೆಯಲಿರುವುದು ಸಂಸತ್ತಿನ ಸದನಗಳ ನಾಯಕರ ಸಭೆ ಎಂದು ಕಾಂಗ್ರೆಸ್ ಹೇಳಿದೆ. ಬುಧವಾರದ ಸಭೆಗೆ ಬರಲು ತಮಗೆ ಆಗದು ಎಂದು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಮತ್ತು ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರು ಸೋಮವಾರ ಹೇಳಿದ್ದರು.

ತಮಿಳುನಾಡಿನಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ತಾವು ರಾಜ್ಯದಲ್ಲಿ ಇರಬೇಕಾಗುತ್ತದೆ, ಸಭೆಗೆ ಬರಲು ಸಾಧ್ಯವಿಲ್ಲ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಹೇಳಿದ್ದು ಕೂಡ ‘ಇಂಡಿಯಾ’ ಗುಂಪಿನ ಸಭೆಯ ದಿನಾಂಕ ಬದಲಾಯಿಸಲು ಒಂದು ಕಾರಣ ಎಂದು ಮೂಲಗಳು ವಿವರಿಸಿವೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸಭೆಗೆ ಬರುವುದನ್ನು ಅನಾರೋಗ್ಯದ ಕಾರಣದಿಂದಾಗಿ ಖಚಿತಪಡಿಸಿರಲಿಲ್ಲ. ಸ್ಟಾಲಿನ್ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಸಭೆಯ ದಿನಾಂಕವನ್ನು ಬದಲು ಮಾಡಬೇಕು ಎಂದು ಕೋರಿದ್ದರು.

‘ಮೈತ್ರಿಕೂಟದ ಸಂಸದೀಯ ಪಕ್ಷದ ನಾಯಕರ ಸಭೆಯು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಇದೇ 6ರಂದು ನಡೆಯಲಿದೆ’ ಎಂದು ಎಐಸಿಸಿ ಅಧ್ಯಕ್ಷ ಕಚೇರಿಯ ಸಂಯೋಜಕ ಗುರ್ದೀಪ್ ಸಿಂಗ್ ಸಪ್ಪಲ್ ‘ಎಕ್ಸ್’ ವೇದಿಕೆಯಲ್ಲಿ ಬರೆದಿದ್ದಾರೆ. ಅದಾದ ನಂತರ, ಪಕ್ಷದ ಅಧ್ಯಕ್ಷರು ಹಾಗೂ ಮೈತ್ರಿಕೂಟದ ಮುಖ್ಯಸ್ಥರ ಸಭೆಯು 17ರಂದು ನಡೆಯಲಿದೆ.

ಚರ್ಚಿಸದೇ ನಿರ್ಧಾರ: ಆಕ್ಷೇಪ

ಐದು ರಾಜ್ಯಗಳ ಚುನಾವಣೆ ಹತ್ತಿರವಾಗುತ್ತಿದ್ದಾಗ ಮೂರು ತಿಂಗಳು ಸುಮ್ಮನೆ ಇದ್ದು, ಇದ್ದಕ್ಕಿದ್ದಂತೆ ಡಿಸೆಂಬರ್ 6ಕ್ಕೆ ಸಭೆ ಕರೆಯುತ್ತಿರುವುದಾಗಿ ಹೇಳಿದ ಕಾಂಗ್ರೆಸ್ಸಿನ ಕ್ರಮಕ್ಕೆ ಆಕ್ಷೇಪ ವ್ಯಕ್ತವಾಗಿತ್ತು.

‘ಇದು ಮೈತ್ರಿ ರಾಜಕಾರಣ ಮಾಡುವ ಬಗೆ ಅಲ್ಲ. ಸಭೆ ಕರೆಯುವ ಮೊದಲು ಸರಿಯಾಗಿ ಸಮಾಲೋಚನೆ ನಡೆಸಬೇಕಿತ್ತು’ ಎಂದು ಕಾಂಗ್ರೆಸ್ಸಿನ ಹಿರಿಯ ನಾಯಕರೊಬ್ಬರು ‘ಪ್ರಜಾವಾಣಿ’ ಜೊತೆ ಅನಿಸಿಕೆ ಹಂಚಿಕೊಂಡರು. ಆದರೆ ಕಾಂಗ್ರೆಸ್ ಪಕ್ಷವು ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. ಸಭೆಯು ಅನೌಪಚಾರಿಕವಾಗಿರುತ್ತದೆ, ಎಲ್ಲ ನಾಯಕರಿಗೂ ಸಭೆಗೆ ಬರಲು ಸಾಧ್ಯವಾಗದೆ ಇರಬಹುದು ಎಂಬುದು ಮೊದಲೇ ಗೊತ್ತಿತ್ತು ಎಂದು ಪಕ್ಷ ಹೇಳಿದೆ.

ಸಭೆಯ ಬಗ್ಗೆ ತಮಗೆ ಮೊದಲೇ ಮಾಹಿತಿ ಇರಲಿಲ್ಲ. ಮಾಹಿತಿ ಇದ್ದಿದ್ದರೆ ಉತ್ತರ ಬಂಗಾಳದಲ್ಲಿ ಸಭೆಯೊಂದನ್ನು ತಾವು ನಿಗದಿ ಮಾಡುತ್ತಿರಲಿಲ್ಲ ಎಂದು ಮಮತಾ ಅವರು ಸೋಮವಾರ ಹೇಳಿದ್ದರು.

ಪಕ್ಷದ ಸಂಸದೀಯ ಮಂಡಳಿಯ ನಿರ್ಧಾರ ಅಂತಿಮ: ಅರುಣ್ ಸಿಂಗ್

ಜೈಪುರ (ಪಿಟಿಐ): ‘ಮುಖ್ಯಮಂತ್ರಿ ಆಯ್ಕೆ ಕುರಿತು ಪಕ್ಷದ ಸಂಸದೀಯ ಮಂಡಳಿಯು ಯಾವ ನಿರ್ಧಾರ ತೆಗೆದುಕೊಳ್ಳುತ್ತದೆಯೋ ಅದಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ’ ಎಂದು ರಾಜಸ್ಥಾನ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಅವರು ರಾಜಸ್ಥಾನ ಬಿಜೆಪಿ ಅಧ್ಯಕ್ಷ ಸಿ.ಪಿ. ಜೋಶಿ ಅವರ ನಿವಾಸಕ್ಕೆ ತೆರಳಿ ಅವರನ್ನು ಭೇಟಿಯಾದರು. ಬಳಿಕ ಅವರಿಬ್ಬರೂ ಮತ್ತು ಕೆಲ ಶಾಸಕರು ಬಿಜೆಪಿ ಕಚೇರಿಗೆ ತೆರಳಿದರು.

ಇದೇ ವೇಳೆ, ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರನ್ನು ಹೊಸದಾಗಿ ಆಯ್ಕೆ ಆಗಿರುವ ಶಾಸಕರು ಭೇಟಿ ಆಗುತ್ತಿದ್ದಾರೆ. ಸೋಮವಾರದಿಂದ ಈಚೆಗೆ ಸುಮಾರು 50 ಶಾಸಕರು ರಾಜೇ ಅವರನ್ನು ಭೇಟಿಯಾಗಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧೆಯಲ್ಲಿರುವ ಪ್ರಮುಖರಲ್ಲಿ ರಾಜೇ ಕೂಡಾ ಒಬ್ಬರು. ಹೀಗಾಗಿ ಇದು ಬಲಪ್ರದರ್ಶನದಂತೆಯೇ ಕಾಣುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಕೆಲ ಶಾಸಕರು ಈ ಭೇಟಿಯನ್ನು ಸೌಜನ್ಯದ ಭೇಟಿ ಎಂದು ಕರೆದಿದ್ದಾರೆ. ಜೊತೆಗೆ, ರಾಜೇ ಅವರೇ ಸಿ.ಎಂ ಸ್ಥಾನಕ್ಕೆ ಸೂಕ್ತ ಅಭ್ಯರ್ಥಿ ಎಂಬ ಸುಳಿವನ್ನೂ ನೀಡಿದ್ದಾರೆ.

‘ಮೋದಿ ಮತ್ತು ವಸುಂಧರಾ ರಾಜೇ ಅವರ ಉತ್ತಮ ಕೆಲಸಗಳಿಂದಾಗಿಯೇ ರಾಜಸ್ಥಾನದಲ್ಲಿ ಬಿಜೆಪಿಯು ಅಧಿಕಾರಕ್ಕೆ ಮರಳಿದ್ದು’ ಎಂದು ನಾಸಿರಾಬಾದ್ ಶಾಸಕ ರಾಮ್‌ಸ್ವರೂಪ್ ಲಂಬಾ ಅವರು ಹೇಳುತ್ತಾರೆ.

ಮೊದಲ ಮಹಿಳೆ

ಸಿಯಾಚಿನ್‌ನಲ್ಲಿ ನಿಯೋಜನೆಗೊಂಡಿರುವ ಭಾರತೀಯ ಸೇನೆಯ ಮೊದಲ ಮಹಿಳಾ ವೈದ್ಯಕೀಯ ಅಧಿಕಾರಿ ಕ್ಯಾಪ್ಟನ್ ಗೀತಿಕಾ ಕೌಲ್ ಅವರು ಇತರ ಯೋಧರೊಡನೆ ವಿಜಯದ ಸಂಕೇತ ಪ್ರದರ್ಶಿಸಿದರು —ಪಿಟಿಐ ಚಿತ್ರ

ಯುಕೊ ಬ್ಯಾಂಕ್ ಗ್ರಾಹಕರ ಖಾತೆಗಳಿಗೆ ₹820 ಕೋಟಿ ಜಮೆ: ಸಿಬಿಐ ಎಫ್‌ಐಆರ್

ಕೋಲ್ಕತ್ತ, ಮಂಗಳೂರು ನಗರಗಳ 13 ಸ್ಥಳಗಳಲ್ಲಿ ಶೋಧ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ಯುಕೊ ಬ್ಯಾಂಕ್‌ನ 41 ಸಾವಿರಕ್ಕೂ ಅಧಿಕ ಗ್ರಾಹಕರ ಖಾತೆಗಳಿಗೆ ₹820 ಕೋಟಿಯಷ್ಟು ಜಮೆ ಆಗಿದ್ದು, ಈ ಸಂಬಂಧ ಸಿಬಿಐ ಎಫ್‌ಐಆರ್ ದಾಖಲಿಸಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಈ ಕುರಿತು ಯುಕೊ ಬ್ಯಾಂಕ್, ಸಂಶಯಾಸ್ಪದ ಐಎಂಪಿಎಸ್ ವ್ಯವಹಾರಗಳಿಗೆ ಸಂಬಂಧಿಸಿ ತನ್ನೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಎಂಜಿನಿಯರ್ ಹಾಗೂ ಇತರ ಕೆಲ ಅಪರಿಚಿತರ ವಿರುದ್ಧ ದೂರು ನೀಡಿದೆ. ಈ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಹಣದ ವ್ಯವಹಾರಕ್ಕೆ ಸಂಬಂಧಿಸಿ ಕೋಲ್ಕತ್ತ, ಮಂಗಳೂರು ಸೇರಿದಂತೆ ವಿವಿಧ ನಗರಗಳ 13 ಸ್ಥಳಗಳಲ್ಲಿ ಅಧಿಕಾರಿಗಳು ಕೈಗೊಂಡಿದ್ದ ಶೋಧ ಮಂಗಳವಾರ ಮುಗಿದಿದೆ.

ನವೆಂಬರ್ 10ರಿಂದ 13 ರ ನಡುವೆ ಈ ಬೃಹತ್ ಮೊತ್ತ ಜಮೆ ಆಗಿದೆ. ಆದರೆ, ಸಂಬಂಧಿಸಿದ ಖಾತೆಗಳಲ್ಲಿ ಯಾವುದೇ ಹಣ ಕಡಿತವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಹಕರ ಖಾತೆಗಳಿಗೆ 8.53 ಲಕ್ಷ ಐಎಂಪಿಎಸ್ ವಹಿವಾಟುಗಳ ಮೂಲಕ ಹಣ ಜಮೆ ಮಾಡಲಾಗಿದೆ. ನ.10ರಿಂದ 13 ರ ನಡುವಿನ ಅವಧಿಯಲ್ಲಿ ಖಾಸಗಿ ಬ್ಯಾಂಕುಗಳಲ್ಲಿನ 14 ಸಾವಿರ ಗ್ರಾಹಕರ ಖಾತೆಗಳ ಮೂಲಕ ಈ ಹಣ ವರ್ಗಾವಣೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಕಂಪ್ಯೂಟರ್‌ಗಳು, ಇ–ಮೇಲ್ ಆರ್ಕೈವ್, ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಐ ವಕ್ತಾರ ತಿಳಿಸಿದ್ದಾರೆ.

21 ಸಾವಿರ ನಕಲಿ ಜಿಎಸ್‌ಟಿ ನೋಂದಣಿ

ನವದೆಹಲಿ (ಪಿಟಿಐ): ಜಿಎಸ್‌ಟಿ ಅಧಿಕಾರಿಗಳು 21,791 ನಕಲಿ ಜಿಎಸ್‌ಟಿ ನೋಂದಣಿಗಳನ್ನು ಪತ್ತೆ ಮಾಡಿದ್ದಾರೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಗೆ ತಿಳಿಸಿದ್ದಾರೆ. ಎರಡು ತಿಂಗಳು ನಡೆದ ವಿಶೇಷ ಅಭಿಯಾನದ ಅವಧಿಯಲ್ಲಿ ₹24 ಸಾವಿರ ಕೋಟಿಗೂ ಹೆಚ್ಚಿನ ತೆರಿಗೆ ವಂಚನೆಯನ್ನು ಪತ್ತೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ನಕಲಿ ಜಿಎಸ್‌ಟಿ ನೋಂದಣಿಗಳನ್ನು ಪತ್ತೆ ಮಾಡಲು ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿಯ (ಸಿಬಿಐಸಿ) ಅಧಿಕಾರಿಗಳು ವಿಶೇಷ ಅಭಿಯಾನವನ್ನು ಮೇ 16ರಿಂದ ಜುಲೈ 15ರವರೆಗೆ ನಡೆಸಿದ್ದಾರೆ.

ಇ–ವಾಣಿಜ್ಯ ಸಂಸ್ಥೆಗಳಿಗೆ ಜಿಎಸ್‌ಟಿ ನೋಂದಣಿಗೆ ಸರಳೀಕೃತ ಪ್ರಕ್ರಿಯೆಯೊಂದನ್ನು ಈಗಾಗಲೇ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ ಎಂದು ನಿರ್ಮಲಾ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ. ಇದರ ಅಡಿಯಲ್ಲಿ, ಇ–ವಾಣಿಜ್ಯ ಸಂಸ್ಥೆಗಳು ನೋಂದಣಿಗೆ ಅರ್ಜಿ ಸಲ್ಲಿಸಿದಾಗ, ಅರ್ಜಿ ಸಲ್ಲಿಕೆಯಾದ ರಾಜ್ಯದಲ್ಲಿ ಆ ಸಂಸ್ಥೆಯು ಭೌತಿಕವಾಗಿ ಅಸ್ತಿತ್ವ ಹೊಂದಿಲ್ಲದಿದ್ದರೆ, ತನ್ನ ಭೌತಿಕ ಅಸ್ತಿತ್ವ ಇರುವ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ವಿಳಾಸ ನೀಡಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯಕ್ಕೆ ‘ವಿಶೇಷ ನೆರವು’

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಗಳ ಬಂಡವಾಳ ವೆಚ್ಚಕ್ಕೆ ಉತ್ತೇಜನ ನೀಡಲು ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ನೆರವು 2023–24 ಯೋಜನೆಯಡಿ ಕರ್ನಾಟಕಕ್ಕೆ ₹4,174 ಕೋಟಿ ನೀಡಲು ಒಪ್ಪಿಗೆ ಸೂಚಿಸಲಾಗಿದೆ ಎಂದು ಕೇಂದ್ರ ಹಣಕಾಸು ರಾಜ್ಯ ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಮಂಗಳವಾರ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ‘15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಕೇಂದ್ರ ತೆರಿಗೆ ಹಾಗೂ ಸುಂಕಗಳ ಅನುಪಾತದ ಆಧಾರದಲ್ಲಿ ರಾಜ್ಯಗಳಿಗೆ ಈ ವರ್ಷ ₹1 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ. ಹೆಚ್ಚುವರಿಯಾಗಿ ₹30 ಸಾವಿರ ಕೋಟಿಯನ್ನು ಕೆಲವು ನಾಗರಿಕ ಕೇಂದ್ರಿತ ಯೋಜನೆಗಳಿಗಾಗಿ ಮೀಸಲಿಡಲಾಗಿದೆ. ನೋಡಲ್ ಸಚಿವಾಲಯಗಳ ಶಿಫಾರಸಿನ ಆಧಾರದಲ್ಲಿ ವಿಶೇಷ ನೆರವನ್ನು (ಸಾಲ) ಬಿಡುಗಡೆ ಮಾಡಲಾಗುತ್ತದೆ’ ಎಂದು ತಿಳಿಸಿದ್ದಾರೆ.

ಈ ಯೋಜನೆಯಡಿ ಕರ್ನಾಟಕಕ್ಕೆ 2022–23ರಲ್ಲಿ ₹3,339 ಕೋಟಿ ಬಿಡುಗಡೆ ಮಾಡಲಾಗಿತ್ತು. ₹3,241 ಕೋಟಿ ಬಳಕೆ ಮಾಡಿರುವ ಕುರಿತು ರಾಜ್ಯ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತ್ತು ಎಂದು ಅವರು ಹೇಳಿದ್ದಾರೆ.

ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಹಣಕಾಸಿನ ನೆರವು ನೀಡುವ ಈ ಯೋಜನೆಯನ್ನು ಹಣಕಾಸು ಸಚಿವಾಲಯವು 2020–21ರಲ್ಲಿ ಆರಂಭಿಸಿತು. ಕೋವಿಡ್–19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ರಾಜ್ಯಗಳ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಉದ್ದೇಶದಿಂದ ಈ ಉಪಕ್ರಮಕ್ಕೆ ಚಾಲನೆ ನೀಡಲಾಗಿತ್ತು.

‘ಇ.ಡಿ. ಕ್ರಮದಿಂದ ಸರ್ಕಾರಿ ಬ್ಯಾಂಕ್‌ಗಳಿಗೆ ₹15 ಸಾವಿರ ಕೋಟಿ’

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆ ತಡೆ ಕಾನೂನಿನ ಅಡಿಯಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ₹15,186 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಇದರಲ್ಲಿ ₹15,183 ಕೋಟಿಯನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಮರಳಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.

ಸಾಲ ಮರುಪಾವತಿ ಮಾಡದೆ ಇರುವವರ ವಿರುದ್ಧ ಕಾನೂನಿನ ಅಡಿಯಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರ ಪರಿಣಾಮವಾಗಿ ಹಣವು ಭಾರಿ ಪ್ರಮಾಣದಲ್ಲಿ ಬ್ಯಾಂಕ್‌ಗಳಿಗೆ ಮರಳುತ್ತಿದೆ ಎಂದು ನಿರ್ಮಲಾ ಅವರು ಪೂರಕ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ.

ದೇಶಭ್ರಷ್ಟ ಆರ್ಥಿಕ ಅಪರಾಧಿಗಳ ಕಾಯ್ದೆ 2018ರ ಅಡಿಯಲ್ಲಿ ₹692.89 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿವಾದ ಸೃಷ್ಟಿಸಿದ ಡಿಎಂಕೆ ಸಂಸದ ಡಿ.ಎನ್‌.ವಿ. ಸೆಂಥಿಲ್ ಕುಮಾರ್ ಹೇಳಿಕೆ

‘ಉತ್ತರ ಭಾರತ: ಗೋಮೂತ್ರ ರಾಜ್ಯಗಳು’

ನವದೆಹಲಿ (ಪಿಟಿಐ): ಹಿಂದಿ ಭಾಷಿಕ ಪ್ರದೇಶಗಳನ್ನು ‘ಗೋಮೂತ್ರ ರಾಜ್ಯಗಳು’ ಎಂದು ಲೋಕಸಭೆಯಲ್ಲಿ ಕರೆಯುವ ಮೂಲಕ ಡಿಎಂಕೆ ಸಂಸದ ಡಿ.ಎನ್‌.ವಿ. ಸೆಂಥಿಲ್ ಕುಮಾರ್ ಅವರು ವಿವಾದಕ್ಕೆ ಕಿಡಿ ಹೊತ್ತಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಎರಡು ಮಸೂದೆಗಳ ಕುರಿತು ಚರ್ಚೆ ನಡೆಯುತ್ತಿದ್ದ ವೇಳೆ ಸೆಂಥಿಲ್ ಕುಮಾರ್ ಅವರು, ‘ಹಿಂದಿ ಭಾಷಿಕ ಪ್ರದೇಶದಲ್ಲಿ ಮಾತ್ರ ಗೆಲ್ಲುವ ಶಕ್ತಿ ಬಿಜೆಪಿಗೆ ಇದೆ ಎಂದು ದೇಶದ ಜನರು ಅರಿತುಕೊಳ್ಳಬೇಕು. ನಾವು ಆ ಪ್ರದೇಶವನ್ನು ಗೋಮೂತ್ರ ರಾಜ್ಯಗಳು ಎಂದು ಕರೆಯುತ್ತೇವೆ’ ಎಂದರು.

‘ತಮಿಳುನಾಡು, ಕರ್ನಾಟಕ, ತೆಲಂಗಾಣ, ಕೇರಳ, ಆಂಧ್ರಪ್ರದೇಶದ ಚುನಾವಣಾ ಫಲಿತಾಂಶ ಗಮನಿಸಿದ್ದೀರಲ್ಲವೇ. ನಿಮಗೆ (ಬಿಜೆಪಿ) ದಕ್ಷಿಣ ಭಾರತಕ್ಕೆ ಬರಲು ಸಾಧ್ಯವಿಲ್ಲ. ನಾವೇ ಬಲಿಷ್ಠರು’ ಎಂದರು.

ಮಾತನ್ನು ಮುಂದುವರೆಸಿದ ಅವರು, ‘ದಕ್ಷಿಣ ಭಾರತವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ನಿಮಗೆ ತಿಳಿದಿದೆ. ಹಿಂಬಾಗಿಲ ಮೂಲಕ ನಿಯಂತ್ರಣ ಸಾಧಿಸಲು ದಕ್ಷಿಣ ರಾಜ್ಯಗಳನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾರ್ಪಾಡು ಮಾಡುವ ಆಯ್ಕೆ ನಿಮ್ಮ ಮುಂದಿದ್ದರೆ ಅದರಲ್ಲಿ ನಮಗೆ ಆಶ್ಚರ್ಯವಿಲ್ಲ’ ಎಂದರು.

> **ಡಿಎಂಕೆಯ ದುರಾಡಳಿತದಿಂದ ಚೆನ್ನೈ ಮುಳುಗುತ್ತಿದೆ. ಸಂಸತ್ತಿನಲ್ಲಿ ಅವರ ಚರ್ಚೆಗಳಿಗೂ ಅದೇ ಗತಿಯಾಗುತ್ತಿದೆ. ಡಿಎಂಕೆಯ ಈ ಅಸೂಕ್ಷ್ಮ ಹೇಳಿಕೆಯನ್ನು ಬಿಜೆಪಿ ಖಂಡಿಸುತ್ತದೆ**
>
> **ಕೆ. ಅಣ್ಣಾಮಲೈ**
> ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ

ಬಿಜೆಪಿ ತಿರುಗೇಟು: ಡಿಎಂಕೆ ಹೇಳಿಕೆಯನ್ನು ಖಂಡಿಸಿರುವ ಬಿಜೆಪಿ, ‘ಇಂಡಿಯಾ’ ಮೈತ್ರಿಕೂಟದ ಸದಸ್ಯ ಪಕ್ಷದ ಸಂಸದರೊಬ್ಬರು ಉತ್ತರ ಭಾರತವನ್ನು ಹೀಯಾಳಿಸಿ ಹೇಳಿಕೆ ನೀಡಿದ್ದಾರೆ. ಇದಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಮ್ಮತಿ ಇದೆಯೇ ಎಂದು ಪ್ರಶ್ನಿಸಿದೆ.

ತಮಿಳುನಾಡು ಬಿಜೆಪಿ ಘಟಕದ ಮುಖ್ಯಸ್ಥ ಕೆ. ಅಣ್ಣಾಮಲೈ ಅವರು ಈ ಹೇಳಿಕೆ ವಿರೋಧಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ‘ಉತ್ತರ ಭಾರತೀಯರನ್ನು ಪಾನಿಪೂರಿ ಮಾರಾಟಗಾರರು, ಶೌಚಾಲಯ ನಿರ್ಮಿಸುವವರು ಎಂದು ಕರೆದ ಡಿಎಂಕೆ, ಈಗ ಗೋಮೂತ್ರದ ಉದಾಹರಣೆ ಮೂಲಕ ಅವರನ್ನು ಅವಮಾನಿಸಿದೆ’ ಎಂದಿದ್ದಾರೆ.

‘ದೇಶದ ಹೃದಯಭಾಗದ ಭಾರತೀಯರನ್ನು ಡಿಎಂಕೆ ಅವಮಾನಿಸಿದ್ದನ್ನು ರಾಹುಲ್ ಗಾಂಧಿ ಒಪ್ಪಿಕೊಳ್ಳುತ್ತಾರಾ? ಭಾರತೀಯರನ್ನು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಇನ್ನೆಷ್ಟು ಕಾಲ ಅವಮಾನಿಸುತ್ತವೆ?’ ಎಂದು ಕರ್ನಾಟಕದ ಬಿಜೆಪಿ ನಾಯಕ ಸಿ.ಟಿ. ರವಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು’ ಎಂದು ಡಿಎಂಕೆ ನಾಯಕ, ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರು ಹೇಳಿಕೆ ನೀಡಿದ್ದರು. ಈ ಹೇಳಿಕೆಗೆ ಪಕ್ಷದ ಇತರ ಸದಸ್ಯರೂ ಧ್ವನಿಗೂಡಿಸಿದ್ದರು. ಈಚೆಗೆ ನಡೆದ ಐದು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯು ಕಾಂಗ್ರೆಸ್ ವಿರುದ್ಧ ಈ ಹೇಳಿಕೆಯನ್ನು ಅಸ್ತ್ರವನ್ನಾಗಿ ಬಳಸಿಕೊಂಡಿತ್ತು. ಅದಾದ ಬೆನ್ನಲ್ಲೇ ಡಿಎಂಕೆ ಮತ್ತೊಂದು ವಿವಾದ ಹುಟ್ಟುಹಾಕಿದೆ.

ಐದು ವರ್ಷದಲ್ಲಿ 400 ಸಫಾಯಿ ಕರ್ಮಚಾರಿಗಳ ಸಾವು

ನವದೆಹಲಿ (ಪಿಟಿಐ): 2018ರಿಂದ 2023ರ ಒಳಗೆ ದೇಶದಲ್ಲಿ ಸೆಪ್ಟಿಕ್ ಟ್ಯಾಂಕ್‌ಗಳು ಮತ್ತು ಒಳಚರಂಡಿಗಳನ್ನು ಸ್ವಚ್ಛಗೊಳಿಸುವ ವೇಳೆ 400ಕ್ಕೂ ಹೆಚ್ಚು ಸಫಾಯಿ ಕರ್ಮಚಾರಿಗಳು ಮೃತಪಟ್ಟಿದ್ದಾರೆ ಎಂದು ಸಂಸತ್ತಿಗೆ ಮಂಗಳವಾರ ಲಿಖಿತ ರೂಪದ ಉತ್ತರದ ಮೂಲಕ ತಿಳಿಸಲಾಯಿತು.

ಮ್ಯಾನ್‌ಹೋಲ್‌ಗೆ ಇಳಿದು ಸ್ವಚ್ಛಗೊಳಿಸುವ ವ್ಯವಸ್ಥೆ ಕುರಿತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸದಸ್ಯೆ ಅನುರೂಪ ಪೊದ್ದಾರ್ ಅವರು ಕೇಳಿದ ಪ್ರಶ್ನೆಗೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಖಾತೆ ಸಚಿವ ರಾಮದಾಸ್ ಅಠಾವಳೆ ಅವರು ಉತ್ತರ ನೀಡಿದರು.

ಸಚಿವರು ನೀಡಿದ ದತ್ತಾಂಶದ ಪ್ರಕಾರ, 2018ರಲ್ಲಿ ಸೆಪ್ಟಿಕ್ ಟ್ಯಾಂಕ್‌ಗಳನ್ನು ಮತ್ತು ಒಳಚರಂಡಿಗಳನ್ನು ಸ್ವಚ್ಛಗೊಳಿಸುವ ವೇಳೆ 76 ಮಂದಿ ಮೃತಪಟ್ಟಿದ್ದಾರೆ. 2019ರಲ್ಲಿ 133 ಮಂದಿ, 2020ರಲ್ಲಿ 35, 2021ರಲ್ಲಿ 66, 2022ರಲ್ಲಿ 84 ಮತ್ತು 2023ರಲ್ಲಿ 49 ಮಂದಿ ಮೃತಪಟ್ಟಿದ್ದಾರೆ.

ಸುಭಾಷಿತ
ಆತ್ಮಗೌರವದಿಂದ ಬದುಕುವುದನ್ನು ಕಲಿಯಿರಿ.
-ಬಿ.ಆರ್.ಅಂಬೇಡ್ಕರ್

ಕೆಪಿಎಸ್‌ಸಿ: ಕಾರ್ಯಕ್ಷಮತೆ ಹೆಚ್ಚಲಿ ಕಾಯಕಲ್ಪಕ್ಕೆ ಆದ್ಯತೆ ಸಿಗಲಿ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ವಿಳಂಬ ಧೋರಣೆಗೆ ಪೂರ್ಣವಿರಾಮ ಬೀಳುವಂತೆ ಕಾಣುತ್ತಿಲ್ಲ. ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಹುದ್ದೆ ಸೇರಿದಂತೆ ಎಲ್ಲ ಬಗೆಯ ನೇಮಕಾತಿಗಳ ವಿಷಯದಲ್ಲೂ ಆಯೋಗದ್ದು ಆಮೆನಡಿಗೆ. ಯಾವ ಕೆಲಸವೂ ಕಾಲಮಿತಿಯಲ್ಲಿ ಆಗುವುದಿಲ್ಲ. ಯಾವಾಗಲೋ ಅಧಿಸೂಚನೆ ಹೊರಡಿಸುವುದು, ಇನ್ಯಾವಾಗಲೋ ಪರೀಕ್ಷೆ ನಡೆಸುವುದು, ಪರೀಕ್ಷೆ ನಡೆದು ವರ್ಷಗಳೇ ಕಳೆದರೂ ಆಯ್ಕೆಪಟ್ಟಿ ಪ್ರಕಟಣೆಗೆ ವಿಳಂಬ ಮಾಡುವುದು ಮಾಮೂಲಿ ಎಂಬಂತಾಗಿಬಿಟ್ಟಿದೆ. ಸ್ವಜನಪಕ್ಷಪಾತ, ಭ್ರಷ್ಟಾಚಾರದ ಆರೋಪಗಳಿಂದ ಮುಕ್ತವಾಗುವುದಕ್ಕೂ ಅದಕ್ಕೆ ಸಾಧ್ಯವಾಗಿಲ್ಲ. ಆಯೋಗದ ಇಂತಹ ಅಸಮರ್ಪಕ ಕಾರ್ಯಶೈಲಿ ಬಗ್ಗೆ ವ್ಯಾಪಕ ಟೀಕೆಗಳು ಕೇಳಿಬಂದಿದ್ದರಿಂದ, ಕೆಲವು ನೇಮಕಾತಿ ಪರೀಕ್ಷೆಗಳನ್ನು ನಡೆಸುವ ಹೊಣೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ವಹಿಸಲಾಗಿದೆ. ಆದರೆ ಅದು ನಡೆಸಿದ ಪ್ರಕ್ರಿಯೆಗಳು ಕೂಡ ಆರೋಪ ಮುಕ್ತವಾಗಿಲ್ಲ. ಇದರಿಂದಾಗಿ ರಾಜ್ಯದ ಯುವಕ-ಯುವತಿಯರು ಸರ್ಕಾರಿ ಹುದ್ದೆಗಳ ನೇಮಕಾತಿಯ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. ಯುವಜನರಲ್ಲಿನ ಇಂತಹ ಭಾವನೆಯನ್ನು ತುರ್ತಾಗಿ ಹೋಗಲಾಡಿಸುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಜವಾಬ್ದಾರಿಯುತ ಸರ್ಕಾರದ ಆದ್ಯ ಕರ್ತವ್ಯ.

ಆಯೋಗದ ಕೆಲಸವನ್ನು ಚುರುಕುಗೊಳಿಸುವ ಕಾರ್ಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು

ಆಯೋಗವು 2017ನೇ ಸಾಲಿನ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಐದು ವರ್ಷ ತೆಗೆದುಕೊಂಡಿತು. ನೇಮಕಾತಿ ಪ್ರಕ್ರಿಯೆಗೆ ಸಮಯದ ಮಿತಿ ಇಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಅಲ್ಲದೆ, ನೇಮಕಾತಿ ಪ್ರಕ್ರಿಯೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು ಎಂಬ ಬದ್ಧತೆಯೂ ಕಾಣುವುದಿಲ್ಲ. ಇದರಿಂದ, ನಿರುದ್ಯೋಗಿಗಳ ಬಗ್ಗೆ ಆಯೋಗಕ್ಕೆ ಕಾಳಜಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಹುದ್ದೆಗೆ ಈ 13 ವರ್ಷಗಳಲ್ಲಿ ನಾಲ್ಕು ಬಾರಿ ಮಾತ್ರ ನೇಮಕಾತಿ ಪ್ರಕ್ರಿಯೆ ನಡೆದಿರುವುದು ಆಯೋಗದ ಕಾರ್ಯವೈಖರಿಗೆ ಕನ್ನಡಿ ಹಿಡಿಯುತ್ತದೆ. ಇದರಿಂದ ಬೇಸತ್ತ ಅಭ್ಯರ್ಥಿಗಳು ಪ್ರತಿಭಟನೆಯ ದಾರಿಯನ್ನೂ ಹಿಡಿದಿದ್ದಾರೆ. ಹಲವು ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಿ ವರ್ಷಗಳೇ ಕಳೆದಿದ್ದರೂ ಅಂತಿಮ ಆಯ್ಕೆ-ಪಟ್ಟಿಯನ್ನೇ ಬಿಡುಗಡೆ ಮಾಡಿಲ್ಲ ಎಂದು ದೂರಿ ಆಯೋಗದ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದಾರೆ. ಮನವಿ, ಅಹವಾಲುಗಳನ್ನು ಕೊಟ್ಟು ಒತ್ತಾಯಿಸಿದ್ದಾರೆ. ಇದ್ಯಾವುದೂ ಆಯೋಗಕ್ಕೆ ನಾಟುತ್ತಿಲ್ಲ. ಶಾಸನಬದ್ಧ ಸಂಸ್ಥೆಯಾಗಿರುವ ಆಯೋಗವು ಶಾಸನಬದ್ಧವಾಗಿ ನಡೆದುಕೊಳ್ಳುವ ರೀತಿ ಇದಲ್ಲ.

ಕೆಪಿಎಸ್‌ಸಿಗೆ ಕಾಯಕಲ್ಪ ನೀಡುವುದಕ್ಕಾಗಿಯೇ 2013ರಲ್ಲಿ ರಾಜ್ಯ ಸರ್ಕಾರವು ಪಿ.ಸಿ.ಹೋಟಾ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರತಿವರ್ಷವೂ ನಡೆಸುವಂತೆ ಶಿಫಾರಸು ಮಾಡಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಹೋಟಾ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡಿದ್ದರು. ಆದರೆ ಹತ್ತು ವರ್ಷವಾದರೂ ಈ ಶಿಫಾರಸುಗಳು ಅನುಷ್ಠಾನಕ್ಕೆ ಬಂದಿಲ್ಲ. ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಗಳು ನಿಗದಿತ ಸಮಯದಲ್ಲಿ ನಡೆಯುತ್ತವೆ. ಪರೀಕ್ಷೆ, ಸಂದರ್ಶನದ ವೇಳಾಪಟ್ಟಿ ಮೊದಲೇ ನಿಗದಿಯಾಗಿರುತ್ತದೆ. ಆಯ್ಕೆಪಟ್ಟಿಯೂ ಸರಿಯಾದ ಸಮಯಕ್ಕೆ ಹೊರಬರುತ್ತದೆ. ಕರ್ನಾಟಕ ಲೋಕಸೇವಾ ಆಯೋಗವೂ ಅದೇ ರೀತಿ ನಡೆದುಕೊಳ್ಳಬೇಕು ಎಂದು ನಿರೀಕ್ಷಿಸುವುದು ತಪ್ಪಲ್ಲ. ಕೆಪಿಎಸ್‌ಸಿ ಕಾಯಕಲ್ಪಕ್ಕೆ ಈ ಹಿಂದೆ ಹಲವು ಕ್ರಮಗಳನ್ನು ಕೈಗೊಂಡಿದ್ದ ಸಿದ್ದರಾಮಯ್ಯ ಅವರೇ ಈಗ ಮುಖ್ಯಮಂತ್ರಿಯಾಗಿದ್ದಾರೆ. ಈ ಬಗ್ಗೆ ಅವರು ಗಂಭೀರ ಚಿಂತನೆ ನಡೆಸಿ, ಆಯೋಗದ ಕೆಲಸವನ್ನು ಚುರುಕುಗೊಳಿಸುವ ಕಾರ್ಯಕ್ಕೆ ಮುಂದಾಗಬೇಕಿದೆ. 2020ರ ನಂತರ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ನೇಮಕಾತಿಗೆ ಅಧಿಸೂಚನೆಯನ್ನೇ ಹೊರಡಿಸದಿರುವುದರಿಂದ ಈ ತಕ್ಷಣವೇ ಅಧಿಸೂಚನೆ ಹೊರಡಿಸಬೇಕು ಮತ್ತು ಅಭ್ಯರ್ಥಿಗಳಿಗೆ ವಯೋಮಿತಿಯ ಸಡಿಲಿಕೆಯನ್ನೂ ನೀಡಬೇಕು. ಈ ಗುಂಪಿನ 465 ಹುದ್ದೆಗಳು ಖಾಲಿ ಇವೆ ಎಂಬ ವರದಿ ಇದೆ. ಎಲ್ಲ ಹುದ್ದೆಗಳಿಗೂ ಏಕಕಾಲಕ್ಕೆ ನೇಮಕಾತಿ ಆಗಬೇಕು. ಖಾಲಿ ಇರುವ ಎಲ್ಲ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಭರವಸೆ ನೀಡಿತ್ತು. ಈ ಭರವಸೆ ಹುಸಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಕೂಡ ಸಿದ್ದರಾಮಯ್ಯ ಅವರ ಮೇಲಿದೆ.

ದಿನದ ಟ್ವೀಟ್

ಉನ್ನತ ಮಟ್ಟಕ್ಕೇರಲಿ

ಕ್ವಕ್‌ಕ್ವಾರೆಲಿ ಸೈಮಂಡ್ಸ್ (ಕ್ಯುಎಸ್) ರ‍್ಯಾಂಕಿಂಗ್ ಸಂಸ್ಥೆಯ 2023ನೇ ಸಾಲಿನ ಜಾಗತಿಕ ಸುಸ್ಥಿರ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೊದಲ 200ರ ಒಳಗೆ ಭಾರತದ ಒಂದು ವಿಶ್ವವಿದ್ಯಾಲಯವೂ ಸ್ಥಾನ ಪಡೆಯದಿರುವುದು ಕಳವಳಕಾರಿ ಸಂಗತಿಯಲ್ಲವೇ? ದೆಹಲಿ ವಿಶ್ವವಿದ್ಯಾಲಯವು ಜಾಗತಿಕವಾಗಿ 220 ಮತ್ತು ಏಷ್ಯಾದಲ್ಲಿ 30ನೇ ಸ್ಥಾನದಲ್ಲಿ ಇರುವುದೇ ಉತ್ತಮ ಸಾಧನೆ ಎಂಬಂತಾಗಿದೆ. ಐಐಟಿ ಬಾಂಬೆ 303 ಹಾಗೂ ಐಐಟಿ ಮದ್ರಾಸ್ 344ನೇ ರ‍್ಯಾಂಕ್ ಪಡೆದಿವೆ.

ಮನೀಷ್ ಛಿಬ್ಬರ್, ಪತ್ರಕರ್ತ

ಕಿಡಿನುಡಿ

ಜಾತಿ ತಾರತಮ್ಯಕ್ಕೆ ಭಯಾನಕ ನಿದರ್ಶನ. ಎಸ್‌ಸಿ, ಎಸ್‌ಟಿ, ಒಬಿಸಿಗೆ ಸೇರಿದ 13,626 ವಿದ್ಯಾರ್ಥಿಗಳು ಕೇಂದ್ರೀಯ ವಿಶ್ವವಿದ್ಯಾಲಯ, ಐಐಟಿ ಮತ್ತು ಐಐಎಂಗಳನ್ನು ಬಿಟ್ಟು ಹೊರಬಂದಿದ್ದಾರೆ ಎಂದು ಸಂಸತ್ತಿಗೆ ತಿಳಿಸಲಾಗಿದೆ. ಜಾತೀಯತೆಗೆ ಸಂಬಂಧಿಸಿದ ನಿದರ್ಶನಗಳು ಹೆಚ್ಚುತ್ತಿರುವುದು ಸಹ ಆತ್ಮಹತ್ಯೆ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗಿದೆ ಎಂಬ ವರದಿಗಳಿವೆ. ಇಂತಹ ಬೆಳವಣಿಗೆಗಳನ್ನು ಒಪ್ಪಲಾಗದು.

ಸೀತಾರಾಂ ಯಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 6-12-1998

• ಸಂಪುಟ ವಿಸ್ತರಣೆ: ಜಸ್ವಂತ್, ಮಹಾಜನ್‌ಗೆ ಅವಕಾಶ

ನವದೆಹಲಿ, ಡಿ. 5– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಸರ್ಕಾರವನ್ನು ಬಲವಾಗಿ ಸಮರ್ಥಿಸಿಕೊಳ್ಳುವ ಜಸ್ವಂತ್ ಸಿಂಗ್, ಪ್ರಮೋದ್ ಮಹಾಜನ್ ಮತ್ತು ಜಗಮೋಹನ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ, ಎಂಟೂವರೆ ತಿಂಗಳ ತಮ್ಮ ಸಂಪುಟವನ್ನು ಪ್ರಥಮ ಬಾರಿಗೆ ವಿಸ್ತರಿಸಿದರು.

ರಾಷ್ಟ್ರಪತಿ ಭವನದ ಅಶೋಕ ಹಾಲ್‌ನಲ್ಲಿ ಸಂಜೆ ಆರು ಗಂಟೆಗೆ ನಡೆದ ಪ್ರಮಾಣವಚನ ಸಮಾರಂಭದಲ್ಲಿ ಈ ಮೂವರು ಸಂಪುಟ ದರ್ಜೆಯ ಸಚಿವರಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು. ರಾಷ್ಟ್ರಪತಿ ಕೆ.ಆರ್. ನಾರಾಯಣನ್ ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.

• ಕಾಂಗ್ರೆಸ್ ಸೇರಲು ದೇಶಪಾಂಡೆ ಮತ್ತಿತರರ ಸನ್ನಾಹ

ಬೆಂಗಳೂರು, ಡಿ. 5– ರಾಜ್ಯ ಜನತಾದಳದ ಭಿನ್ನಮತೀಯ ನಾಯಕರು ಹಾಗೂ ಜನತಾದಳ ಬಿಟ್ಟು ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಸೇರಿ ಅತಂತ್ರ ಸ್ಥಿತಿಯಲ್ಲಿರುವ ಧುರೀಣರು ಕಾಂಗ್ರೆಸ್‌ನ 'ಅಭಯ ಹಸ್ತ'ಕ್ಕಾಗಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಮನೆ ಬಾಗಿಲು ತಟ್ಟುತ್ತಿರುವುದು ರಾಜ್ಯ ರಾಜಕೀಯಕ್ಕೆ ಹೊಸ ತಿರುವು ನೀಡಿದೆ.

ಉತ್ತರ ಭಾರತದ ನಾಲ್ಕು ರಾಜ್ಯಗಳ ಚುನಾವಣೆ ಪೈಕಿ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಜಯಭೇರಿ ಸಾಧಿಸಿದ್ದು ಹಾಗೂ ಅಧಿಕಾರ ಕಳೆದುಕೊಂಡ ಬಿಜೆಪಿಗೆ ಮುಖಭಂಗ ಆಗಿರುವುದು ಒಂದೆಡೆಯಾದರೆ, ಜನತಾದಳ ಹೆಚ್ಚು ಕಡಿಮೆ ಉತ್ತರ ಭಾರತದಲ್ಲಿ ಅಸ್ತಿತ್ವ ಕಳೆದುಕೊಂಡಂತಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 6-12-1973

• ಇಬ್ಬರ ಹೊರತು ಕರ್ನಾಟಕದ ಎಲ್ಲ ಸಚಿವರ ರಾಜೀನಾಮೆ

ಬೆಂಗಳೂರು, ಡಿ. 5– ಮಂತ್ರಿಮಂಡಲದ ಪುನರ್‌ರಚನೆಗೆ ಅವಕಾಶ ಮಾಡಿಕೊಡಲು, ಕರ್ನಾಟಕ ಸಚಿವ ಸಂಪುಟದ ಇಬ್ಬರನ್ನು ಬಿಟ್ಟು ಉಳಿದ ಎಲ್ಲ ಮಂತ್ರಿಗಳು ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಇಂದು ರಾತ್ರಿ ಸಾಮೂಹಿಕವಾಗಿ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದರು.

ಪೌರಾಡಳಿತ ಮಂತ್ರಿ ಬಸವಲಿಂಗಪ್ಪ ಅವರ ಮೈಸೂರು ಭಾಷಣದ ಹಿನ್ನೆಲೆಯಲ್ಲಿ ಮಂತ್ರಿ ಮಂಡಲದ ಸದಸ್ಯರಲ್ಲಿ ಕೆಲವು ದಿನಗಳಿಂದ ಮೂಡಿ, ಬೆಳೆಯತೊಡಗಿದ ಅತೃಪ್ತಿಯು ಈ ರೀತಿ ಅನಿರೀಕ್ಷಿತ ಪ್ರಮಾಣದಲ್ಲಿ ಪ್ರಕಟವಾಯಿತು.

ದೆಹಲಿಯಲ್ಲಿರುವ ಬಸವಲಿಂಗಪ್ಪ ಮತ್ತು ಸಚಿವ ಸಂಪುಟದ ಸಭೆಯಲ್ಲಿ ಹಾಜರಿಲ್ಲದ ಎ.ಆರ್.ಬದರಿನಾರಾಯಣ ಅವರು ರಾಜೀನಾಮೆ ಸಲ್ಲಿಸಿಲ್ಲ.

• ಚಳವಳಿ ನಿಲ್ಲಿಸಿ: ಅರಸು ಮನವಿ

ಬೆಂಗಳೂರು, ಡಿ. 5 – ಸಚಿವ ಬಸವಲಿಂಗಪ್ಪ ವಿರುದ್ಧದ ಚಳವಳಿಯಿಂದ ಯಾವ ವರ್ಗಕ್ಕೂ ಪ್ರಯೋಜನವಾಗದು; ಆದುದರಿಂದ ವಿದ್ಯಾರ್ಥಿಗಳು ಚಳವಳಿ ನಿಲ್ಲಿಸಬೇಕು ಎಂದು ಮುಖ್ಯಮಂತ್ರಿ ದೇವರಾಜ ಅರಸು ಮನವಿ ಮಾಡಿಕೊಂಡಿದ್ದಾರೆ.

ಗ್ಯಾರಂಟಿಗಳಾಗಲೀ ಜಾತಿ ಗಣತಿಯ ವಿಚಾರವಾಗಲೀ ಮತದಾರರಲ್ಲಿ ಉತ್ಸಾಹ ಚಿಮ್ಮಿಸಿಲ್ಲ

ಉತ್ತರ ಕಂಡುಕೊಳ್ಳುವುದೇ ಕಾಂಗ್ರೆಸ್?

ವಿಶ್ಲೇಷಣೆ

ಬಿ.ಎಸ್. ಅರುಣ್

ಉತ್ತರ ಭಾರತದ ಮೂರು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶದಲ್ಲಿ ಕಾಂಗ್ರೆಸ್ಸಿಗೆ ಪಾಠಗಳಿವೆ. ಫಲಿತಾಂಶದ ನಂತರ ಕಾಂಗ್ರೆಸ್ಸಿನ ನೈತಿಕ ಸ್ಥೈರ್ಯಕ್ಕೆ ಬಲವಾದ ಪೆಟ್ಟು ಬಿದ್ದಂತಿದೆ. ಇನ್ನು ಆರೇ ತಿಂಗಳಲ್ಲಿ ಇದಕ್ಕೂ ದೊಡ್ಡದಾದ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕಿರುವ ಕಾರಣ ಪಕ್ಷವು ಈಗ ಬಿದ್ದಿರುವ ಏಟಿನಿಂದ ತಕ್ಷಣವೇ ಚೇತರಿಸಿಕೊಳ್ಳಬೇಕಿದೆ. 2018ರಲ್ಲಿ ಕಾಂಗ್ರೆಸ್ ಪಕ್ಷವು ಈ ಮೂರು (ರಾಜಸ್ಥಾನ, ಛತ್ತೀಸಗಢ ಮತ್ತು ಮಧ್ಯಪ್ರದೇಶ) ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿತ್ತು. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಿದ್ದರೂ, ಶಾಸಕರ ಪಕ್ಷಾಂತರದ ಕಾರಣದಿಂದಾಗಿ ನಂತರ ಅಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಯಿತು.

ಮೂರೂ ರಾಜ್ಯಗಳಲ್ಲಿ (ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢ) ಪಕ್ಷ ಸೋಲುತ್ತದೆ ಎಂದು ಕಾಂಗ್ರೆಸ್ಸಿನಲ್ಲಿ ಬಹುಶಃ ಯಾರೂ ಊಹಿಸಿರಲಿಕ್ಕಿಲ್ಲ. ಪಕ್ಷವು ಅದೆಷ್ಟರಮಟ್ಟಿಗೆ ಅತಿಯಾದ ವಿಶ್ವಾಸದಲ್ಲಿತ್ತು ಎಂದರೆ, ಒಂದು ವರ್ಷದ ಹಿಂದೆಯೇ ಪಕ್ಷದ ನಾಯಕರು ತಾವು ಕನಿಷ್ಠ ಎರಡು ರಾಜ್ಯಗಳಲ್ಲಿ ಸುಲಭವಾಗಿ ಗೆಲುವು ಸಾಧಿಸುವುದಾಗಿ ಹೇಳಿಕೊಳ್ಳುತ್ತಿದ್ದರು. ತೆಲಂಗಾಣದಲ್ಲಿ ಬಿಆರ್‌ಎಸ್‌ನಿಂದ ಅಧಿಕಾರವನ್ನು ಕಾಂಗ್ರೆಸ್ ಕಿತ್ತುಕೊಂಡಿದೆಯಾದರೂ, ಅದು ಸಮಾಧಾನಕರ ಬಹುಮಾನದಂತೆ ಕಾಣುತ್ತಿದೆ. ಈಶಾನ್ಯದ ಮಿಜೋರಾಂನಲ್ಲಿ ಪಕ್ಷವು ದಯನೀಯವಾಗಿ ಸೋತಿದೆ.

ಉತ್ತರದಲ್ಲಿ ಆಗಿರುವ ಸೋಲಿನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇರುವ ಒಂದೇ ಒಂದು ಪೂರಕ ಅಂಶದ ಮೇಲೆ ಗಮನಹರಿಸೋಣ. 2018ರಲ್ಲಿ ಪಡೆದಿದ್ದ ಮತಗಳ ಪ್ರಮಾಣವನ್ನು ಪಕ್ಷವು ಈ ಬಾರಿ ಹಿಡಿದುಕೊಳ್ಳುವಲ್ಲಿ ಬಹುತೇಕ ಯಶಸ್ವಿಯಾಗಿದೆ. ರಾಜಸ್ಥಾನದಲ್ಲಿ ಈ ಬಾರಿ ಶೇ 39.7ರಷ್ಟು ಮತಗಳನ್ನು ಕಾಂಗ್ರೆಸ್ ಪಡೆದಿದೆ, ಕಳೆದ ಬಾರಿ ಇದು ಶೇ 39.3ರಷ್ಟು ಆಗಿತ್ತು (ಬಿಜೆಪಿಯು ತನ್ನ ಮತ ಗಳಿಕೆ ಪ್ರಮಾಣ ಶೇ 38.8ರಷ್ಟು ಇದ್ದಿದ್ದನ್ನು ಶೇ 42ಕ್ಕೆ ಹೆಚ್ಚಿಸಿಕೊಂಡಿದೆ). ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಈ ಬಾರಿ ಶೇ 40.4ರಷ್ಟು ಮತಗಳನ್ನು ಪಡೆದಿದೆ; ಹಿಂದಿನ ಬಾರಿ ಶೇ 40.9ರಷ್ಟು ಇತ್ತು (ಇಲ್ಲಿ ಬಿಜೆಪಿ ಮತ ಗಳಿಕೆ ಪ್ರಮಾಣ ಶೇ 41ರಷ್ಟು ಇದ್ದಿದ್ದನ್ನು ಶೇ 48.4ಕ್ಕೆ ಹೆಚ್ಚಿಸಿಕೊಂಡಿದೆ). ಛತ್ತೀಸಗಢದಲ್ಲಿ ಕಾಂಗ್ರೆಸ್ ಈ ಬಾರಿ ಶೇ 41.9ರಷ್ಟು ಮತ ಪಡೆದಿದೆ, ಕಳೆದ ಬಾರಿ ಇದು ಶೇ 43ರಷ್ಟು ಆಗಿತ್ತು (ಬಿಜೆಪಿ ಇಲ್ಲಿ ಮತ ಗಳಿಕೆ ಪ್ರಮಾಣ ಶೇ 33ರಷ್ಟು ಇದ್ದಿದ್ದನ್ನು ಶೇ 46.2ಕ್ಕೆ ಹೆಚ್ಚಿಸಿಕೊಂಡಿದೆ).

ಎರಡೂ ಪಕ್ಷಗಳು ಪಡೆದಿರುವ ಮತಗಳ ಸಂಖ್ಯೆಯ ನಡುವಿನ ವ್ಯತ್ಯಾಸವು ಬಹಳ ಗಾಢವಾಗಿ ಕಾಣಿಸುತ್ತಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ 1,56,66,731 ಮತಗಳನ್ನು ಪಡೆದಿದೆ, ಬಿಜೆಪಿ 1,65,23,568 ಮತಗಳನ್ನು ತನ್ನದಾಗಿಸಿಕೊಂಡಿದೆ. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ 1,75,64,353 ಮತಗಳನ್ನು, ಬಿಜೆಪಿಯು 2,11,13,278 ಮತಗಳನ್ನು ಪಡೆದಿವೆ. ಛತ್ತೀಸಗಢದಲ್ಲಿ ಕಾಂಗ್ರೆಸ್ಸಿಗೆ 66,02,586 ಮತಗಳು ಹಾಗೂ ಬಿಜೆಪಿಗೆ 72,34,968 ಮತಗಳು ದೊರೆತಿವೆ. ಮೂರು ರಾಜ್ಯಗಳಲ್ಲಿ ಎರಡು ಪಕ್ಷಗಳು ಪಡೆದ ಮತಗಳ ಸಂಖ್ಯೆಯನ್ನು ಒಗ್ಗೂಡಿಸಿ ನೋಡಿದಾಗ, ವ್ಯತ್ಯಾಸವು ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ. ಕಾಂಗ್ರೆಸ್ ಒಟ್ಟು 3,97,33,670 ಮತಗಳನ್ನು ಹಾಗೂ ಬಿಜೆಪಿ ಒಟ್ಟು 4,48,71,814 ಮತಗಳನ್ನು ಪಡೆದಿವೆ. ಅಂದರೆ, ಒಗ್ಗೂಡಿಸಿ ನೋಡಿದಾಗ ಎರಡು ಪಕ್ಷಗಳು ಪಡೆದಿರುವ ಒಟ್ಟು ಮತಗಳ ನಡುವಿನ ವ್ಯತ್ಯಾಸವು 50 ಲಕ್ಷಕ್ಕೂ ಹೆಚ್ಚಿದೆ. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಘೋಷಿಸಿದ ಬಿಜೆಪಿಯು ಮೂರೂ ರಾಜ್ಯಗಳಲ್ಲಿ ಈ ಸಮುದಾಯಗಳು ಹೆಚ್ಚಿರುವ ಪ್ರದೇಶಗಳಲ್ಲಿ ತೋರಿರುವ ಸಾಧನೆಯು 2018ಕ್ಕೆ ಹೋಲಿಸಿದರೆ ಎದ್ದು ಕಾಣುವಂತಿದೆ. ಮಹಿಳೆಯರು ಹಾಗೂ ಅಭಿವೃದ್ಧಿ ಯೋಜನೆಗಳ ಮೇಲೆ ನೀಡಿದ ಗಮನವು ಬಿಜೆಪಿಯು ಎಲ್ಲ ವರ್ಗಗಳಿಂದ ಬೆಂಬಲ ಪಡೆಯಲು ನೆರವಾಗಿದೆ.

ಈಗ ಬಿಜೆಪಿಯ ಶಕ್ತಿ ಏನೆಂಬುದು ಎಲ್ಲರಿಗೂ ಗೊತ್ತಾಗಿದೆ. ಅದು ಹೀಗಿದೆ: ಪ್ರಧಾನಿ ನರೇಂದ್ರ ಮೋದಿ ಅವರ ಚರಿಷ್ಮಾ ಮತ್ತು 'ಕೆಲಸ ಮಾಡುವವರು' ಎಂಬ ಹೆಗ್ಗಳಿಕೆ; ಗೃಹ ಸಚಿವ ಅಮಿತ್ ಶಾ ಅವರ ಪರಿಣಾಮಕಾರಿ ಚುನಾವಣಾ ಕಾರ್ಯತಂತ್ರ. ಬಿಜೆಪಿಯು ಮೋದಿ ಅವರ ಹೆಸರಿನಲ್ಲಿ ಮತ ಯಾಚಿಸಿದ್ದ ಕಾರಣ, ಈ ವಿಜಯವು ಮೋದಿ ಅವರ ನಾಯಕತ್ವಕ್ಕೆ ಮತ್ತೊಮ್ಮೆ ಅನುಮೋದನೆ ನೀಡಿದಂತಿದೆ. ಭ್ರಷ್ಟಾಚಾರದ ಆರೋಪ (ಅದಾನಿ) ಹಾಗೂ ಮೋದಿ ಅವರ ವಿರುದ್ಧ ವೈಯಕ್ತಿಕ ಮಟ್ಟದಲ್ಲಿ ನಡೆಸಿದ 'ಅಪಶಕುನ'ದ ದೂಷಣೆಯು ಕೆಲಸಕ್ಕೆ ಬಂದಿಲ್ಲ. ಬದಲಿಗೆ, ಇವು ಕಾಂಗ್ರೆಸ್ ವಿರುದ್ಧ ತಿರುಗುಬಾಣವಾಗಿ ಪರಿವರ್ತನೆ ಕಂಡಿವೆ. ತಳಹಂತದ ಕಾರ್ಯಕರ್ತರ ಜೊತೆ ಸಂಪರ್ಕ ಇಟ್ಟುಕೊಂಡು, ಕೆಳಮಟ್ಟದಲ್ಲಿ ಏನಾಗುತ್ತಿದೆ ಎಂಬುದನ್ನು ಬಿಜೆಪಿ ಗಮನಿಸುತ್ತಿರುತ್ತದೆ. ಅದು ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಹಿಂದೇಟು ಹಾಕುವುದಿಲ್ಲ. ಆರಂಭದಲ್ಲಿ ಶಿವರಾಜ್ ಸಿಂಗ್ ಚೌಹಾಣ್, ವಸುಂಧರಾ ರಾಜೇ, ರಮಣ್ ಸಿಂಗ್ ಅವರನ್ನು ಪಕ್ಕಕ್ಕೆ ಸರಿಸಿದ್ದರೂ ನಂತರದಲ್ಲಿ ಅವರನ್ನು ಪ್ರಧಾನ ನೆಲೆಗೆ ಕರೆತಂದ ಕಾರ್ಯತಂತ್ರ ಯಶಸ್ಸು ಕಂಡಿರುವುದನ್ನು ಈಗ ಯಾರು ಬೇಕಿದ್ದರೂ ಗಮನಿಸಬಹುದು.

ಆದರೆ ಇದಕ್ಕೆ ವಿರುದ್ಧವಾಗಿ, ಕಾಂಗ್ರೆಸ್ ಅನುಸರಿಸಿದ ಯಾವುದೇ ಕಾರ್ಯತಂತ್ರವು ಮತದಾರರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಪಕ್ಷವು ಘೋಷಿಸಿದ ಗ್ಯಾರಂಟಿಗಳಾಗಲೀ ರಾಹುಲ್ ಗಾಂಧಿ ಅವರೇ ಪ್ರಸ್ತಾಪಿಸಿದ ಜಾತಿ ಗಣತಿಯ ವಿಚಾರವಾಗಲೀ ಮತದಾರರಲ್ಲಿ ಉತ್ಸಾಹ ಚಿಮ್ಮಿಸುವ ಕೆಲಸ ಮಾಡಲಿಲ್ಲ. ಜಾತಿ ಗಣತಿಯು ಉತ್ತರ ಭಾರತದ ರಾಜ್ಯಗಳಲ್ಲಿಯೇ ಹೆಚ್ಚು ಪರಿಣಾಮ ಉಂಟುಮಾಡಿಲ್ಲ ಎಂಬುದು ಕಾಂಗ್ರೆಸ್ಸಿಗೆ ಕಳವಳ ಮೂಡಿಸುವ ಸಂಗತಿ. ಏಕೆಂದರೆ ಈ ಮೂರು ರಾಜ್ಯಗಳಲ್ಲಿ ಒಬಿಸಿ ಸಮುದಾಯದ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇದೆ. ಇಲ್ಲಿ ಇನ್ನೊಂದು ವಿಷಯವೂ ಇದೆ. ಒಬಿಸಿ ಜನಸಂಖ್ಯೆ ಹೆಚ್ಚಿರುವ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ಸಿನ ಇಬ್ಬರು ಪ್ರಮುಖ ನಾಯಕರು (ಕಮಲ್‌ನಾಥ್ ಮತ್ತು ದಿಗ್ವಿಜಯ್ ಸಿಂಗ್) ಮುಂದುವರಿದ ಜಾತಿಗಳಿಗೆ ಸೇರಿದವರು. ಜಾತಿ ಗಣತಿಯ ಮಿತಿಗಳು ಕೂಡ ಇಲ್ಲಿ ಗೊತ್ತಾಗಿವೆ. ನಾಥ್ ಮತ್ತು ಸಿಂಗ್ ಮೃದು ಹಿಂದುತ್ವದ ಧೋರಣೆ ಹೊಂದಿದ್ದರೂ, ಮತದಾರರು ಅದನ್ನು ನಂಬಲಿಲ್ಲ.

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ನಾಯಕತ್ವದಲ್ಲಿ ದೊಡ್ಡ ಬದಲಾವಣೆ ಬೇಕಿದೆ. ಹೈಕಮಾಂಡ್ ಅಥವಾ ನಾಥ್-ಸಿಂಗ್ ಜೋಡಿಯು ಎರಡನೇ ಹಂತದ ನಾಯಕರನ್ನು ಬೆಳೆಸುವ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಜ್ಯೋತಿರಾದಿತ್ಯ ಸಿಂಧಿಯಾ ಪಕ್ಷದಲ್ಲಿ ಇಲ್ಲ. ಹೀಗಾಗಿ, ಎರಡನೆಯ ತಲೆಮಾರಿನ ನಾಯಕತ್ವದ ವಿಚಾರದಲ್ಲಿ ಪಕ್ಷದಲ್ಲಿ ನಿರ್ವಾತ ಸ್ಥಿತಿ ಇದೆ. ಮಧ್ಯಪ್ರದೇಶವು ಗುಜರಾತ್ ಮಾದರಿಯಲ್ಲಿ ಬಿಜೆಪಿಯ ಪಾಲಿಗೆ ಭದ್ರಕೋಟೆಯಂತೆ ಆಗುತ್ತಿರುವ ಕಾರಣ, ನಾಯಕರನ್ನು ಅರಸಲು ಕಾಂಗ್ರೆಸ್ ದೀರ್ಘ ಕಾಲ ತೆಗೆದುಕೊಳ್ಳಬೇಕಾಗಬಹುದು.

ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಭ್ರಷ್ಟಾಚಾರದಂತಹ ಸಮಸ್ಯೆಗಳು ಮಾತ್ರವಲ್ಲದೆ, ನಾಯಕರಲ್ಲಿನ ಒಳಜಗಳಗಳು ಪಕ್ಷಕ್ಕೆ ಸಮಸ್ಯೆ ತಂದಿತ್ತವು. ರಾಜಸ್ಥಾನದಲ್ಲಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ನಡುವಿನ ಸಂಘರ್ಷವನ್ನು ಶಮನ ಮಾಡಲು ಪಕ್ಷಕ್ಕೆ ಆಗಲಿಲ್ಲ. ಈ ಚುನಾವಣೆಗಳ ನಂತರ, ದಕ್ಷಿಣ ಭಾರತವು ಬಿಜೆಪಿ ಮುಕ್ತವಾಗಿರುವಂತೆಯೇ, ಉತ್ತರ ಭಾರತವು ಕಾಂಗ್ರೆಸ್ಸಿನಿಂದ ಬಹುತೇಕ ಮುಕ್ತವಾಗಿದೆ. ಸಣ್ಣ ರಾಜ್ಯ ಹಿಮಾಚಲ ಪ್ರದೇಶ, ಮಧ್ಯಮ ಗಾತ್ರದ ತೆಲಂಗಾಣ ಮತ್ತು ದೊಡ್ಡ ರಾಜ್ಯವಾಗಿರುವ ಕರ್ನಾಟಕವನ್ನು ಹೊರತುಪಡಿಸಿದರೆ ಪಕ್ಷವು ತನ್ನದೇ ಬಲದಲ್ಲಿ ಇನ್ನೆಲ್ಲಿಯೂ ಸರ್ಕಾರವನ್ನು ಮುನ್ನಡೆಸುತ್ತಿಲ್ಲ, ಎರಡು ರಾಜ್ಯಗಳಲ್ಲಿ ಮೈತ್ರಿಕೂಟದ ಭಾಗವಾಗಿ ಸರ್ಕಾರದಲ್ಲಿಯೂ ಪಾಲು ಹೊಂದಿದೆ. ಆದರೆ ಬಿಜೆಪಿಯು 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸರ್ಕಾರವನ್ನು ಮುನ್ನಡೆಸುತ್ತಿದೆ ಅಥವಾ ಸರ್ಕಾರದ ಭಾಗವಾಗಿದೆ.

ಹಾಗಾದರೆ, ಕಾಂಗ್ರೆಸ್ಸಿನ ಭವಿಷ್ಯ ಏನು? ಅದು ಯಾವ ರೀತಿಯಲ್ಲಿ ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು? ನೀತಿಗಳು, ನಾಯಕತ್ವ (ಕೇಂದ್ರದಲ್ಲಿ ಮತ್ತು ಕೆಲವು ರಾಜ್ಯಗಳ ಮಟ್ಟದಲ್ಲಿ), ಚುನಾವಣಾ ತಂತ್ರಗಾರಿಕೆ, ಸಂಘಟನೆ ವಿಚಾರವಾಗಿ ಪಕ್ಷದ ಕಾರ್ಯತಂತ್ರ ಏನಿರಬೇಕು? ಪಕ್ಷದ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮೂಡಿಸಬೇಕಾದ ಸವಾಲು ಕೂಡ ಇದೆ. ಈ ಪ್ರಶ್ನೆಗಳಿಗೆ ಪಕ್ಷವು ಉತ್ತರ ಕಂಡುಕೊಳ್ಳಬೇಕಿದೆ. ಲೋಕಸಭಾ ಚುನಾವಣೆಯು ಹತ್ತಿರವಾಗುತ್ತಿರುವ ಕಾರಣ ಉತ್ತರವನ್ನು ಬಹಳ ಬೇಗ ಕಂಡುಕೊಳ್ಳಬೇಕಿದೆ.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ

ಎಸ್ ಬಿಗ್ ಬಾಸ್...

• ಮಣ್ಣೆ ರಾಜು

'ಇದು ಬಿಗ್ ಬಾಸ್... ಟೀಮ್ ಕ್ಯಾಪ್ಟನ್ ಕಮಲೇಂದ್ರ, ನಿಮಗೆ ಚಂಡಮಾರುತ ಹೊಡೆತದ ಅನುಭವ ಆಗಿದೆಯೇ? ಚಂಡಮಾರುತ ನಿಭಾಯಿಸುವ ನಿಮ್ಮ ಸಾಮರ್ಥ್ಯ ಪರೀಕ್ಷಿಸಲು ಬಿಗ್ ಬಾಸ್ ಇಚ್ಛಿಸುತ್ತಾರೆ'.

'ತಕ್ಕಮಟ್ಟಿನ ಅನುಭವವಾಗಿದೆ ಬಿಗ್ ಬಾಸ್, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿದರೆ ಚಂಡಮಾರುತವನ್ನು ನಿಯಂತ್ರಿಸಬಹುದು. ಚಂಡಮಾರುತದಿಂದ ಭಾರಿ ಮಳೆಯಾಗಿ ತಮಿಳುನಾಡಿನಲ್ಲಿ ಪ್ರವಾಹ ಬಂದಿದೆ. ಕಾವೇರಿ ನದಿಗೆ 'ಘರ್ ವಾಪ್ಸಿ' ಶಕ್ತಿ ಇದ್ದಿದ್ದರೆ ಪ್ರವಾಹದ ನೀರನ್ನು ಕರ್ನಾಟಕಕ್ಕೆ ವಾಪಸ್ ಹರಿಸಿಕೊಂಡು ಕೆಆರ್‌ಎಸ್ ತುಂಬಿಸಿ ತಮಿಳುನಾಡನ್ನು ಕಾಪಾಡಲು ಸಾಧ್ಯವಿತ್ತು...'

'ಕಮಲೇಂದ್ರ, ಮುಂದೆ ಎದುರಾಗುವ ಪಾರ್ಲಿಮೆಂಟ್ ಚಂಡಮಾರುತ ನಿರ್ವಹಿಸಲು ಬಿಗ್ ಬಾಸ್ ನಿಮಗೆ 'ಘರ್ ವಾಪ್ಸಿ' ಟಾಸ್ಕ್ ನೀಡುತ್ತಿದ್ದಾರೆ. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಶಿಕ್ಷಣ ಇಲಾಖೆಯ 'ಮರಳಿ ಬಾ ಶಾಲೆಗೆ' ಕಾರ್ಯಕ್ರಮದಂತೆ, ಪಕ್ಷ ಬಿಟ್ಟುಹೋಗಿರುವ ನಾಯಕರನ್ನು ವಾಪಸ್ ಕರೆತರಲು 'ಮರಳಿ ಬಾ ಮನೆಗೆ' ಎಂಬ ಚಟುವಟಿಕೆಯನ್ನು ಬಿಗ್ ಬಾಸ್ ನಿಮಗೆ ನೀಡುತ್ತಿದ್ದಾರೆ'.

'ಆಗಲಿ ಬಿಗ್ ಬಾಸ್, ಮುನಿಸಿಕೊಂಡು ಮನೆ ಬಿಟ್ಟವರ ಮನವೊಲಿಸಿ ಕರೆತರುವ ಪ್ರಯತ್ನ ಮಾಡುತ್ತೇನೆ. ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಅಂತ ಅವರು ಬಯಸುತ್ತಾರೆ ಬಿಗ್ ಬಾಸ್...'

'ವಾಪಸ್ ಬಂದವರಿಗೆ ಸ್ಥಾನದ ಗ್ಯಾರಂಟಿ ನೀಡುವುದಿಲ್ಲ, ಆದರೆ ಅವರ ಮಾನಕ್ಕೆ ಧಕ್ಕೆಯಾಗದಂತೆ ಬಿಗ್ ಬಾಸ್ ನೋಡಿಕೊಳ್ಳುತ್ತಾರೆ'.

'ಓಕೆ ಬಿಗ್ ಬಾಸ್. ಆದರೆ, ಮನೆಯೊಳಗಿರುವ ಅಸಮಾಧಾನಿತರನ್ನು ನಿಭಾಯಿಸುವುದೇ ಸಮಸ್ಯೆಯಾಗಿದೆ. ಕೆಂಡಾಮಂಡಲವಾಗಿರುವ ಅವರು ನಮ್ಮ ನಾಯಕರ ವಿರುದ್ಧವೇ ಕೆಂಡಕಾರುತ್ತಿದ್ದಾರೆ. ಈ ಕೆಂಡಮಾರುತಕ್ಕೆ ತಾವು ಕಡಿವಾಣ ಹಾಕಬೇಕು ಬಿಗ್ ಬಾಸ್'.

'ಕಮಲೇಂದ್ರ, ನೀವು ಬಿಗ್ ಬಾಸ್ ಆದೇಶವನ್ನು ಮಾತ್ರ ಪಾಲಿಸಬೇಕು, ಬಿಗ್ ಬಾಸ್‌ಗೇ ಆದೇಶ ಮಾಡುವಂತಿಲ್ಲ...'

'ಸ... ಸರಿ ಬಿಗ್ ಬಾಸ್...'

ಸಂಗತ

ಪ್ರಶಸ್ತಿ, ಪ್ರೇರಣೆ ಮತ್ತು ಸಾಹಿತ್ಯ

ಸಾಹಿತ್ಯ ಸ್ಪರ್ಧೆ, ಬಹುಮಾನ, ಪ್ರಶಸ್ತಿಗಳ ಜನಪ್ರಿಯತೆಯು ಆಧುನಿಕ ಮಾರುಕಟ್ಟೆಯ ವ್ಯಕ್ತಿವಾದಿ ಕೊಡುಗೆಯಾಗಿದೆ

• ಅರುಣ್ ಜೋಳದಕೂಡ್ಲಿಗಿ

ಕನ್ನಡದಲ್ಲಿ ಕಾಲಕಾಲಕ್ಕೆ ಒಂದಿಡೀ ಕಾಲಘಟ್ಟವನ್ನು ಪ್ರಭಾವಿಸಿದ 'ವಿದ್ಯಮಾನ' ಅಥವಾ ಬರೆಯುವ ಎಲ್ಲರೊಳಗೆ ಒಂದು ಪ್ರಧಾನ ಎಳೆಯಾಗಿ ಹಾದುಹೋದ ಸಂಗತಿಗಳನ್ನು ಆಧರಿಸಿ ಒಂದು ಸಾಹಿತ್ಯದ ಘಟ್ಟವನ್ನು ಹೆಸರಿಸಿದ್ದೇವೆ. ಹೀಗೆ ಅವುಗಳನ್ನು ನವ್ಯ, ನವೋದಯ, ಪ್ರಗತಿಶೀಲ, ದಲಿತ, ಬಂಡಾಯ ಎಂದೆಲ್ಲ ಗುರುತಿಸಿದ್ದೇವೆ. ಕನ್ನಡ ಸಾಹಿತ್ಯದ ಹಿಂದಿನ ಒಂದೆರಡು ದಶಕಗಳಲ್ಲಿ ಬರಹಗಾರರ ಮೇಲೆ ಪ್ರಭಾವ ಬೀರಿರುವ ಅಂಶಗಳನ್ನು ಪರಿಶೀಲಿಸಿದರೆ, ಮುನ್ನೆಲೆಗೆ ಬರುವುದು ಸಾಹಿತ್ಯ 'ಸ್ಪರ್ಧೆ', 'ಬಹುಮಾನ' ಮತ್ತು 'ಪ್ರಶಸ್ತಿ'ಗಳೆಂಬ ಪ್ರೋತ್ಸಾಹದ ಹೆಸರಿನ ಆಮಿಷಗಳು.

ಇದನ್ನು ವಿವರವಾಗಿ ಪರಿಶೀಲಿಸೋಣ. ಒಂದೆರಡು ದಶಕಗಳಿಂದ ಬರಹ ವಲಯವನ್ನು ಪ್ರವೇಶಿಸ ಬಯಸುವ ಬಹುತೇಕರಿಗೆ ಕತೆ, ಕವಿತೆ, ಕಾದಂಬರಿ ಸ್ಪರ್ಧೆಗಳು, ಬಹುಮಾನಗಳು, ಪ್ರಶಸ್ತಿಗಳು ಒಂದು ಗುರುತನ್ನು ಕೊಟ್ಟು ಬರಹ ಲೋಕದ ಒಳಕ್ಕೆ ಕರೆದುಕೊಳ್ಳುತ್ತಿವೆ. ಹೀಗೆ ಸ್ಪರ್ಧೆ, ಬಹುಮಾನ, ಪ್ರಶಸ್ತಿಗಳ ಕೈಹಿಡಿದು ಸಾಹಿತ್ಯಲೋಕವನ್ನು ಪ್ರವೇಶಿಸುವ ಬರಹಗಾರರಲ್ಲಿ ಅನೇಕರು ಮತ್ತದೇ ಸ್ಪರ್ಧೆ, ಪ್ರಶಸ್ತಿಗಾಗಿ ಬರೆಯಲು ತೊಡಗುತ್ತಾರೆ. ಬರೆಯುವ ಹೊಸ ತಲೆಮಾರಿಗೆ 'ಯಾಕಾಗಿ ಬರೆಯುತ್ತಿದ್ದೀರಿ?' ಎಂದರೆ, ತಕ್ಷಣಕ್ಕೆ 'ಪ್ರಶಸ್ತಿಗಾಗಿ' ಎಂದೇ ಉತ್ತರಿಸಬಹುದು ಅಥವಾ ಬೇರೆ ಉತ್ತರ ಕೊಡಬಹುದು. ಈ ಅರ್ಥದಲ್ಲಿ ಸಾಹಿತ್ಯ ಸ್ಪರ್ಧೆ, ಬಹುಮಾನ, ಪ್ರಶಸ್ತಿಗಳ ಜನಪ್ರಿಯತೆಯು ಆಧುನಿಕ ಮಾರುಕಟ್ಟೆಯ ವ್ಯಕ್ತಿವಾದಿ ಕೊಡುಗೆಯಾಗಿದೆ.

ಬರಹವನ್ನು ಉತ್ತೇಜಿಸಲು ಬಹುಮಾನವನ್ನೋ ಪ್ರಶಸ್ತಿಯನ್ನೋ ಕೊಡುವುದು ತಪ್ಪಲ್ಲ. ಆರಂಭದ ಬರಹಗಾರರಿಗೆ ಪ್ರೋತ್ಸಾಹದ ನೆಲೆಯಲ್ಲಿ ಸರಿ. ಆದರೆ ಒಮ್ಮೆ ಪ್ರಶಸ್ತಿ ಪಡೆದವರಿಗೆ ಪ್ರಶಸ್ತಿಗಳನ್ನು ಹೊರತುಪಡಿಸಿ ಬರೆಯುವ ಅಭ್ಯಾಸವೇ ಇಲ್ಲದಂತೆ ಆಗುತ್ತಿರುವುದು ದುರಂತ. ಪ್ರಶಸ್ತಿ ಪಡೆಯುವುದಕ್ಕೆ ಮಾತ್ರವಲ್ಲ, ಪ್ರಶಸ್ತಿಗಳನ್ನು ಕೊಡಲು ಸಹ ವಿವಿಧ ಖಾಸಗಿ ಸಂಸ್ಥೆಗಳು ಮತ್ತು ಸರ್ಕಾರ ನೂಕುನುಗ್ಗಲು ನಡೆಸಿವೆ. ಇದೊಂದು ಅಚ್ಚರಿಯ ಸಂಗತಿ.

ಶಾಲಾ ಶಿಕ್ಷಣದಲ್ಲಿ ಒಂದು ತರಗತಿ ಪಾಸಾದವರು ಮುಂದಿನ ತರಗತಿಗೆ ಹೋಗುತ್ತಾರೆ. ಅಕಸ್ಮಾತ್ ಹಿಂದಿನ ತರಗತಿಯಲ್ಲಿ ಪಾಸಾಗದಿದ್ದವರು ಮಾತ್ರ ಮತ್ತದೇ ತರಗತಿಯ ಪರೀಕ್ಷೆ ಬರೆಯುತ್ತಾರೆ. ಆದರೆ ಸಾಹಿತ್ಯ ಸ್ಪರ್ಧೆಯಲ್ಲಿ ಹಾಗಲ್ಲ. ಒಂದು ಸ್ಪರ್ಧೆಯಲ್ಲಿ ಗೆದ್ದವರು ಮತ್ತದೇ ಸ್ಪರ್ಧೆಗೆ ಸ್ಪರ್ಧಿಸುತ್ತಲೇ ಇರುತ್ತಾರೆ. ಒಂದು ಕಥನ ಮಾದರಿಯನ್ನೇ ಹುಟ್ಟುಹಾಕಿದವರಲ್ಲಿಯೂ ಇಂತಹ ನಡೆ ಕಂಡುಬರುತ್ತಿರುವುದು ಆತಂಕದ ಸಂಗತಿಯಾಗಿದೆ. ಅಂದರೆ, ಹೆಚ್ಚು ಮೊತ್ತದ ಬಹುಮಾನ ಹೊಂದಿರುವ ಸ್ಪರ್ಧೆಗಳು ಬರೆಯುವವರನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತಿವೆಯೇನೋ ಅಂದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ.

ಸ್ಪರ್ಧೆ, ಪ್ರಶಸ್ತಿಗಳು ಹೆಚ್ಚಾದಂತೆ ಇವು ಒಂದು ಬಗೆಯ ಬರಹದ ಮಾದರಿಗಳನ್ನು ಹುಟ್ಟುಹಾಕುತ್ತವೆ. ಹೇಗೆ ಮತ್ತು ಯಾವ ವಿಷಯ ಬರೆದರೆ ಸ್ಪರ್ಧೆ ಗೆಲ್ಲಬಹುದು, ಪ್ರಶಸ್ತಿ ಪಡೆಯಬಹುದು ಎಂಬ 'ತರಬೇತಿ' ಆದಾಗ ಈ ಮಾದರಿಯ ಕೃತಕ, ಅಪ್ರಾಮಾಣಿಕ ಬರಹಗಳು ಸೃಷ್ಟಿಯಾಗುತ್ತವೆ. ಅಂತೆಯೇ ಬರಹದ ಜತೆ ಅನ್ಯ ಪ್ರಭಾವಗಳನ್ನು ಬಳಸಿ ಹೇಗೆ ಪ್ರಶಸ್ತಿಗಳನ್ನು ಪಡೆದುಕೊಳ್ಳಬಹುದು ಮತ್ತು ಸ್ಪರ್ಧೆಗಳಲ್ಲಿ ಗೆಲ್ಲಬಹುದು ಎನ್ನುವುದರಲ್ಲಿ ಬರಹಗಾರರು ಕಾರ್ಯ-ಪ್ರವೃತ್ತರಾಗುತ್ತಾರೆ. ಇದಕ್ಕಾಗಿ ಕೆಟ್ಟದಾದ ಲಾಬಿಗಳಲ್ಲಿ ತೊಡಗುತ್ತಾರೆ. ಗುಂಪುಗಾರಿಕೆ ಶುರುವಾಗುತ್ತದೆ. ಆತ್ಮಸಾಕ್ಷಿಯನ್ನು ಕೊಂದುಕೊಂಡು, ಸಾಹಿತ್ಯದ ಮೂಲ ಬೇರು ಎಂದು ಗುರುತಿಸಬಹುದಾದ ಸೂಕ್ಷ್ಮ ಮನೋಭಾವ ಮರೆಯಾಗಿ, ಲಜ್ಜೆಗೆಟ್ಟ ನಡತೆಗಳನ್ನು ರೂಢಿಸಿಕೊಳ್ಳುತ್ತಾರೆ. ನಿಧಾನಕ್ಕೆ ಕೃತಕ ನಡಾವಳಿಗಳು, ಉಬ್ಬು ಮಾತುಗಳು, ಹೊಗಳಿಕೆ, ಓಲೈಕೆ ರೂಢಿಯಾಗಿ ಅವು ಸಹಜವಾಗುತ್ತವೆ. ಇದೀಗ ಕನ್ನಡದಲ್ಲಿ ಕೆಲವು ಅಪವಾದಗಳನ್ನು ಹೊರತುಪಡಿಸಿ ಹಿರಿಯರು ಕಿರಿಯರೆನ್ನದೆ ಅನೇಕರು ಇಂತಹ ರೂಢಿಯ ಭಾಗವಾಗಿದ್ದಾರೆ.



ಆಧುನಿಕತೆಯ ಉಪ ಉತ್ಪನ್ನವೆಂದರೆ ಮನುಷ್ಯರನ್ನು 'ವ್ಯಕ್ತಿವಾದಿ'ಗಳನ್ನಾಗಿಸುವುದು. ಇದು ಭ್ರಷ್ಟಾಚಾರ, ಅನೈತಿಕತೆ, ಮೂಲಭೂತವಾದ, ಸರ್ವಾಧಿಕಾರ, ಮನುಷ್ಯವಿರೋಧಿ ನಡೆಗಳನ್ನು ವಿರೋಧಿಸದ, ಈ ಎಲ್ಲವನ್ನೂ ಮೌನವಾಗಿಯೇ ಒಪ್ಪಿಕೊಂಡ ಒಂದು ಗುಣ. ಆಧುನಿಕ ಮಾರುಕಟ್ಟೆಯು ವ್ಯಕ್ತಿಗಳನ್ನು ಬಿಡಿಬಿಡಿ ಘಟಕಗಳನ್ನಾಗಿಸುತ್ತದೆ. ವ್ಯಕ್ತಿ ವ್ಯಕ್ತಿಗಳ ನಡುವೆ ಸ್ಪರ್ಧೆಯನ್ನು ಹುಟ್ಟುಹಾಕುತ್ತದೆ. ವ್ಯಕ್ತಿಗಳ ನಡುವಿನ ಅಂತರವನ್ನು ಹೆಚ್ಚಿಸಿ, ಜನರೆಲ್ಲಾ ಒಟ್ಟಾಗದಂತೆ, ಒಂದು ದೊಡ್ಡ ಶಕ್ತಿಯಾಗದಂತೆ ತಡೆಯುತ್ತದೆ. ಆಳದಲ್ಲಿ ಈ ಸಾಹಿತ್ಯ ಸ್ಪರ್ಧೆಗಳು, ಪ್ರಶಸ್ತಿಗಳು ಹೀಗೆ ಬರೆಯುವವರನ್ನು 'ವ್ಯಕ್ತಿವಾದಿ'ಗಳನ್ನಾಗಿ ತರಬೇತುಗೊಳಿಸುತ್ತವೆ. ಹಾಗಾಗಿ, ಬರೆಯುವವರಲ್ಲಿ ವ್ಯವಸ್ಥೆಯ ಬಗೆಗೆ ಸಿಟ್ಟು, ಆಕ್ರೋಶ ಇಲ್ಲದಂತಾಗಿ, ವ್ಯವಸ್ಥೆಯನ್ನು ಓಲೈಸುವ ಅಥವಾ ವ್ಯವಸ್ಥೆಯ ಬಗೆಗೆ ಮೌನ ತಾಳುವ ಸಿನಿಕರಾಗಿ ಅವರು ಬದಲಾಗುತ್ತಾರೆ. ಬೇರೆಯವರ ಸಾಹಿತ್ಯ ಅಥವಾ ಬರಹದ ಬಗ್ಗೆ ಪ್ರಾಮಾಣಿಕ ವಿಮರ್ಶೆ ಇಲ್ಲದೆ ಹೊಗಳುಭಟ್ಟರಾಗುತ್ತಾರೆ. ಇದರ ಭಾಗವಾಗಿಯೇ ದೇಶವ್ಯಾಪಿ ಲಿಟರರಿ ಫೆಸ್ಟ್‌ಗಳು ತಲೆ ಎತ್ತುತ್ತಿವೆ. ಇದು ನಾನು ಗ್ರಹಿಸಿದಂತೆ ಕನ್ನಡ ಸಾಹಿತ್ಯ ವಲಯದ ಸದ್ಯದ ಚಹರೆಯಾಗಿದೆ. ಹಾಗಾಗಿಯೇ ಕನ್ನಡ ಸಾಹಿತ್ಯ ವಲಯವು ಒಂದು ವಾಗ್ವಾದವನ್ನು ಹುಟ್ಟುಹಾಕುವ ಚರ್ಚೆ, ಸಂವಾದಗಳು ನಡೆಯದೆ ಬರಡಾಗಿದೆ. ವಿಮರ್ಶೆ ಪಾತಾಳಕ್ಕಿಳಿದಿದೆ. ಈ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಕಾಲಘಟ್ಟವನ್ನು 'ಪ್ರಶಸ್ತಿ ಸಾಹಿತ್ಯ'ದ ಓಲೈಕೆ ಕಾಲಘಟ್ಟ ಎಂದು ಕರೆಯಬಹುದೇನೊ?!

ಲೇಖಕ: ಸಹಾಯಕ ಪ್ರಾಧ್ಯಾಪಕ, ಡಾ. ಅಂಬೇಡ್ಕರ್ ಕಲಾ- ವಾಣಿಜ್ಯ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರ, ಕಲಬುರಗಿ

ವಾಚಕರ ವಾಣಿ

ಅರಣ್ಯ ಇಲಾಖೆಗೆ ಕಪ್ಪುಚುಕ್ಕೆ

ದಸರಾ ಅಂಬಾರಿ ಹೊರುತ್ತಿದ್ದ ಬಲಾಢ್ಯ ಆನೆ ಅರ್ಜುನನು ಕಾಡಾನೆಯೊಂದಿಗೆ ಸೆಣಸಾಡಿ ಮಹಾಭಾರತದ ಅಭಿಮನ್ಯುವಿನಂತೆ ವೀರೋಚಿತ ಮತ್ತು ದಾರುಣ ಸಾವನ್ನಪ್ಪಿದ ಸುದ್ದಿಯನ್ನು ಕೇಳಿ ಆಕ್ರೋಶಭರಿತನಾಗಿದ್ದೇನೆ. ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ದಸರಾ ಆನೆಗಳನ್ನು ಬಳಸುವುದು ಹೊಸದೇನಲ್ಲ. ಕಾಡಾನೆಗಳನ್ನು ಹಿಡಿದು ಪಳಗಿಸುವ ಕೆಲಸಕ್ಕೆ ಎಂಟೆದೆ ಬೇಕು. ಅದರಲ್ಲಿ ನೇರವಾಗಿ ತೊಡಗುವ ಸಿಬ್ಬಂದಿಯ ಧೈರ್ಯವನ್ನು ಗೌರವಿಸುತ್ತೇನೆ. ಆದರೆ, ಅರಣ್ಯ ಇಲಾಖೆಯು ವಯೋವೃದ್ಧ ಅರ್ಜುನನ ಬಳಕೆಯನ್ನು ಹಗುರವಾಗಿ ಪರಿಗಣಿಸಬಾರದಾಗಿತ್ತು.

ಕಾರ್ಯಾಚರಣೆಯ ವೇಳೆ ನಡೆದಿರಬಹುದಾದ ಲೋಪದಿಂದ ಅರ್ಜುನನು ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಬಿದ್ದಿದ್ದು ನಿಜವಾಗಿದ್ದರೆ, ಅನುಮತಿ ನೀಡಿದ ಮತ್ತು ತಪ್ಪೆಸಗಿದ ಎಲ್ಲರೂ ಶಿಕ್ಷಾರ್ಹರಾಗುವುದರಲ್ಲಿ ಸಂಶಯವಿಲ್ಲ. ಅಧಿಕಾರಿಗಳು ಕೊಡುತ್ತಿರುವ ಪತ್ರಿಕಾ ಹೇಳಿಕೆಗಳು ಕ್ಷುಲ್ಲಕ ಸಬೂಬಿನಂತೆ ಕೇಳಿಸುತ್ತಿವೆ ಮತ್ತು ಅರ್ಜುನನನ್ನು ಅಪಮಾನಿಸುವಂತಿವೆ. ದಸರಾ ಆನೆಗಳು ನಾಡಿನ ವನ್ಯ ಸಂಪತ್ತಿನ ಮುಕುಟಮಣಿಗಳು. ಹಿಂದಿನ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಕಾಡಾನೆ ದಾಳಿಗೆ ಸಿಲುಕಿ, ಭವಿಷ್ಯದ ಅಂಬಾರಿ ಆನೆಯೆಂದೇ ಬಿಂಬಿತವಾಗಿದ್ದ ಗೋಪಾಲಸ್ವಾಮಿ ಸಾವಿಗೀಡಾಗಿದ್ದು, ಈಗ, ಅಂಬಾರಿ ಹೊತ್ತು ಹೆಸರಾಗಿದ್ದ ಅನುಭವಿ ಅರ್ಜುನನ ಸಾವು ಅರಣ್ಯ ಇಲಾಖೆಯ ಕ್ಷಮತೆಯ ಮೇಲೆ ಅಳಿಸಲಾಗದ ಕಪ್ಪುಚುಕ್ಕೆಯನ್ನಿಟ್ಟಿವೆ.

ಶ್ರೀಕಂಠ, ಬೆಂಗಳೂರು

ಅರ್ಜುನನ ಮಾತು...

ಹುಲಿಯುಗುರಿನ
ವಿಚಾರವಾಗಿ
ವನ್ಯಜೀವಿ
ಸಂರಕ್ಷಣಾಧಿಕಾರಿಗಳು
ತೋರಿದ ಕಾಳಜಿಯ
ಒಂದಂಶವನ್ನು
ನನ್ನ ವಿಚಾರವಾಗಿಯೂ
ತೋರಿದ್ದರೆ ನಾನು
ಬದುಕಿರುತ್ತಿದ್ದೆ!

ಪಿ.ಜೆ.ರಾಘವೇಂದ್ರ, ಮೈಸೂರು

ನಮ್ಮೊಳಗಿನ ಹೂಳನ್ನು ತೊಳೆಯುವ ಕಾಯಕ

ಶಿರಸಿ ಬಳಿಯ 'ಕಾನ್ಮನೆ ನಿಸರ್ಗ ಜ್ಞಾನ ಕೇಂದ್ರ'ದಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಡಿಸೆಂಬರ್ 2ರಂದು ಒಂದಿಡೀ ಗಂಟೆ ಕೂತು ಶಿವಾನಂದ ಕಳವೆಯವರ ಉಪನ್ಯಾಸವನ್ನು ಆಲಿಸಿದ್ದು (ಪ್ರ.ವಾ., ಡಿ. 3) ವರದಿಯಾಗಿದೆ. ಸಚಿವರೊಂದಿಗೆ ಸ್ಥಳೀಯ ಶಾಸಕರು, ಅರಣ್ಯಾಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಹಿರಿಯ ಎಂಜಿನಿಯರ್‌ಗಳೂ ನಾಡಿನ ಜಲಸಂರಕ್ಷಣೆಯ ಪಾಠವನ್ನು ಕೇಳಿದ್ದು ಒಂದು ಅಪರೂಪದ, ಮಾದರಿಯ ಘಟನೆಯೇ ಸರಿ. 'ಕೆರೆಯ ಪುನರುತ್ಥಾನಕ್ಕೆ ಮಂಜೂರಾದ ಹಣದಲ್ಲಿ ಶೇಕಡ 10ರಷ್ಟು ಮೊತ್ತ ಮಾತ್ರ ಹೂಳು ತೆಗೆಯಲು ವಿನಿಯೋಗವಾಗಿ ಉಳಿದೆಲ್ಲ ಮೊತ್ತ ಸುತ್ತಲಿನ ಸೌಂದರ್ಯವರ್ಧನೆಗೆ ವಿನಿಯೋಗವಾಗುತ್ತದೆ' ಎಂದು ಕಳವೆಯವರು ಹೇಳಿದ್ದನ್ನು ಇವರೆಲ್ಲ ಸಾವಧಾನ ಕೂತು ಕೇಳಿಸಿಕೊಂಡರಲ್ಲ, ಅದು ಮಹತ್ವದ್ದು.

ಸರ್ಕಾರದ ಆಡಳಿತವೈಖರಿ ಕುರಿತಂತೆ ಶ್ರೀಸಾಮಾನ್ಯನ ದೃಷ್ಟಿಕೋನ ಏನಿದೆ ಎಂಬುದನ್ನು ತಿಳಿದುಕೊಳ್ಳುವ ಸಂಯಮ ಈಚಿನ ವರ್ಷಗಳಲ್ಲಿ ಆಳುವ ಪ್ರಭುಗಳಿಗೆ ಇದ್ದಿದ್ದೇ ವಿರಳ. ಅದರಲ್ಲೂ ನಾಡಿನಾದ್ಯಂತ ಓಡಾಡುತ್ತ ಕೆರೆ, ನದಿ, ಅರಣ್ಯಗಳ ಸ್ಥಿತಿ, ದುಃಸ್ಥಿತಿಯ ಅಧ್ಯಯನ ಮಾಡಿರುವ ಕಳವೆಯರ ವಾಸ್ತವ ಕಥನಗಳನ್ನು ಕೂತು ಕೇಳುವಷ್ಟು ಸಂಯಮವನ್ನು ಅಧಿಕಾರಿಶಾಹಿ ತೋರಿದ್ದು ಇತರ ಇಲಾಖೆಗಳಿಗೂ ಸಚಿವರುಗಳಿಗೂ ಅನುಕರಣೀಯ ಪಾಠವಾಗಬೇಕು.

ನಾಗೇಶ ಹೆಗಡೆ, ಕೆಂಗೇರಿ

ಹೀಯಾಳಿಕೆ ಸರಿಯಲ್ಲ

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಉತ್ತರದ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ನಂತರ ಪಕ್ಷದ ಕಾರ್ಯಕರ್ತರು ಸಾಮಾಜಿಕ ಜಾಲತಾಣಗಳಲ್ಲಿ, ಕರ್ನಾಟಕದ ಜನ ಬಿಟ್ಟಿ ಭಾಗ್ಯಗಳಿಗೆ ತಮ್ಮನ್ನು ಮಾರಿಕೊಂಡರು, ಉತ್ತರದ ಜನ ದೇಶದ ಹಿತಕ್ಕಾಗಿ ಮತ ನೀಡಿದರು ಎಂದೆಲ್ಲ ಅವಮಾನ ಮಾಡುವುದು ಪ್ರಾರಂಭವಾಗಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರ ಉತ್ತರದ ರಾಜ್ಯಗಳಲ್ಲಿ ಏನು ಮಾಡಿದೆ ಹಾಗೂ ಕರ್ನಾಟಕದಲ್ಲಿ ಏನು ಮಾಡಿದೆ ಎನ್ನುವ ಕುರಿತು ತುಲನೆ ನಡೆಯಲಿ. ಆಗ ಕರ್ನಾಟಕದ ಜನ ಏಕೆ ಬಿಜೆಪಿಯನ್ನು ತಿರಸ್ಕರಿಸಿದರು ಎನ್ನುವುದು ತಿಳಿಯುತ್ತದೆ.

ಕೇಂದ್ರ ಸರ್ಕಾರದ ವತಿಯಿಂದ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳೆಲ್ಲ ಉತ್ತರ ಭಾರತದಲ್ಲೇ ಹೆಚ್ಚು ಜಾರಿಯಾಗಿವೆ. ಇದನ್ನೆಲ್ಲ ಪರಿಗಣಿಸದೆ, 'ಭಾಗ್ಯ'ಗಳನ್ನು ಗುರಿಯಾಗಿಸಿ ರಾಜ್ಯದ ಜನರನ್ನು ಹೀಯಾಳಿಸುವುದು ಸರಿಯಲ್ಲ.

ದೇವಿದಾಸ ಪ್ರಭು, ಭಟ್ಕಳ

ಸರಳ ಸತ್ಯ ಮರೆತರೇಕೊ?

ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರ ಪತ್ನಿ ಭವಾನಿ ರೇವಣ್ಣ ಅವರು ಪ್ರಯಾಣಿಸುತ್ತಿದ್ದ ಕಾರಿಗೆ ಯುವಕನೊಬ್ಬನ ಬೈಕ್ ಡಿಕ್ಕಿ ಆದ ಪ್ರಕರಣದಲ್ಲಿ, ಭವಾನಿ ಅವರು ಆ ಯುವಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವರು 'ಸಾಯೋಕೆ ನನ್ನ ಕಾರೇ ಬೇಕಿತ್ತಾ? ಬಸ್ಸಿಗೆ ಸಿಕ್ಕಿ ಸಾಯಿ' ಎಂದು ಆವೇಶದಿಂದ ಹೇಳುವುದರ ಜೊತೆಗೆ, ಒಂದೂವರೆ ಕೋಟಿ ರೂಪಾಯಿಯ ಈ ಕಾರಿನ ರಿಪೇರಿಗೆ ಐವತ್ತು ಲಕ್ಷ ಖರ್ಚಾಗುತ್ತದೆ ಎಂದೆಲ್ಲ ಕೂಗಾಡಿದ್ದಾರೆ. ಎಷ್ಟೇ ಹಣ ನೀಡಿದರೂ ಪ್ರಾಣ ಹಿಂದಿರುಗದು. ಆದರೆ ಹಣದಿಂದ ಕಾರಿನ ರಿಪೇರಿ ಆಗುತ್ತದೆ ಎಂಬ ಸರಳ ಸತ್ಯವನ್ನು ಅವರು ಮರೆತರೇಕೊ? ಅದೂ ಅಲ್ಲದೆ ಕಾರಿನ ರಿಪೇರಿಗೆ ವಿಮಾ ಹಣ ಬಂದೇ ಬರುತ್ತದೆ. ಈ ಪ್ರಕರಣದ ಕುರಿತು ರೇವಣ್ಣ ಮತ್ತು ಮಗ ಸೂರಜ್ ಕ್ಷಮೆ ಕೇಳಿದ್ದಾರೆ. ಬೇಕಾದರೆ ಭವಾನಿ ಅವರಿಂದ ಕ್ಷಮೆ ಕೇಳಿಸುತ್ತೇನೆ ಎಂದು ರೇವಣ್ಣ ಹೇಳಿದ್ದಾರೆ. ಬೇಕಾದರೆ ಎಂದರೆ ಏನರ್ಥ?

ರಸ್ತೆಯಲ್ಲಿ ಅಪಘಾತ ಆದ ಸಂದರ್ಭದಲ್ಲಿ ಗಾಯಾಳುಗಳನ್ನು ತಮ್ಮದೇ ವಾಹನದಲ್ಲಿ ಆಸ್ಪತ್ರೆಗೆ ದಾಖಲಿಸಿದ ಶಾಸಕರು, ಮಂತ್ರಿಗಳನ್ನು ಈ ದೇಶ ಕಂಡಿದೆ. ಅಂತಹವರ ನಡುವೆ ಇಂತಹ ದುರ್ವರ್ತನೆ ತೋರುವವರು ಇದ್ದಾರೆಂದರೆ ಅದು ನಾಚಿಕೆಗೇಡು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪರಿಶಿಷ್ಟರ ಮೇಲೆ ದೌರ್ಜನ್ಯ
ರಾಜ್ಯದ ಸ್ಥಿತಿ ಶೋಚನೀಯ



ದೇಶದಾದ್ಯಂತ ಪರಿಶಿಷ್ಟ ಜಾತಿಗಳ ಜನರ ಮೇಲೆ ಎಸಗಲಾಗುತ್ತಿರುವ ದೌರ್ಜನ್ಯ ಮತ್ತು ಅಪರಾಧಗಳ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. ಕರ್ನಾಟಕವೂ ಇದಕ್ಕೆ ಹೊರತಲ್ಲ. ಆದರೆ ಪ್ರಕರಣಗಳನ್ನು ವಿಲೇವಾರಿ ಮಾಡಿ, ಶಿಕ್ಷೆ ನೀಡುವುದರಲ್ಲಿ ಕರ್ನಾಟಕವು ಬೇರೆಲ್ಲಾ ರಾಜ್ಯಗಳಿಗಿಂತ ತೀರಾ ಹಿಂದೆ ಬಿದ್ದಿದೆ. ರಾಜ್ಯದಲ್ಲಿ ಇಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತಿರುವ ಪ್ರಮಾಣವು 2018–2022ರ ಮಧ್ಯೆ ಕಳವಳಕಾರಿ ಮಟ್ಟಕ್ಕೆ ಕುಸಿದಿದೆ



• ಜಯಸಿಂಹ ಆರ್., ಸುಕೃತ ಎಸ್.

ರಾಜ್ಯದ ವಿವಿಧ ನ್ಯಾಯಾಲಯಗಳು ಪರಿಶಿಷ್ಟ ಜಾತಿಗಳ ಜನರ ಮೇಲೆ ದೌರ್ಜನ್ಯ ನಡೆದ 1,124 ಪ್ರಕರಣಗಳನ್ನು 2022ರಲ್ಲಿ ವಿಲೇವಾರಿ ಮಾಡಿವೆ. ಆದರೆ, ಇವುಗಳಲ್ಲಿ ಶಿಕ್ಷೆಯಾಗಿದ್ದು 15 ಪ್ರಕರಣಗಳಲ್ಲಿ ಮಾತ್ರ. ವಿಲೇವಾರಿಯಾದ ಒಟ್ಟು ಪ್ರಕರಣಗಳಿಗೆ ಹೋಲಿಸಿದರೆ, ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 1.3ರಷ್ಟು. ಪರಿಶಿಷ್ಟ ಜಾತಿಯ ಜನರ ಮೇಲೆ ಅತಿಹೆಚ್ಚು ಪ್ರಕರಣಗಳು ದಾಖಲಾದ ರಾಜ್ಯಗಳಲ್ಲಿ, ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಅತ್ಯಂತ ಕಡಿಮೆ ಇರುವುದು ರಾಜ್ಯದಲ್ಲೇ.

ರಾಜ್ಯದಲ್ಲಿ ಈ ಮೊದಲು ಸ್ಥಿತಿ ಇಷ್ಟು ಕಳವಳಕಾರಿಯಾಗಿ ಇರಲಿಲ್ಲ. 2018ರಲ್ಲಿ ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 7.4ರಷ್ಟಿತ್ತು. ಆನಂತರದ ವರ್ಷಗಳಲ್ಲಿ ಈ ಪ್ರಮಾಣ ಕುಸಿಯುತ್ತಲೇ ಬಂದಿದೆ. 2021ರಲ್ಲಿ ಆ ಪ್ರಮಾಣ ಶೇ 1.6ಕ್ಕೆ ಕುಸಿದಿತ್ತು. ಈಗ ಅದು ಇನ್ನಷ್ಟು ಕುಸಿದಿದೆ. ಈ ಸಮುದಾಯಗಳ ಜನರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ವರ್ಷಾನುವರ್ಷ ಏರಿಕೆಯಾಗುತ್ತಿರುವುದರ ಜತೆಯಲ್ಲೇ, ಶಿಕ್ಷೆಯಾಗುವ ಪ್ರಕರಣಗಳ ಪ್ರಮಾಣ ಕುಸಿಯುತ್ತಿರುವುದು ಕಳವಳಕಾರಿ.

ಈ ಜಾತಿ ಸಮುದಾಯಗಳ ಜನರ ಮೇಲೆ ದೌರ್ಜನ್ಯ ನಡೆದ ಸಂಬಂಧ 2022ರಲ್ಲಿ ಪೊಲೀಸರು ಒಟ್ಟು 1,977 ಪ್ರಕರಣಗಳನ್ನು ದಾಖಲಿಸಿದ್ದರು. 2022ಕ್ಕೂ ಹಿಂದಿನ ವರ್ಷಗಳಿಂದ ಉಳಿದಿದ್ದ 632 ಪ್ರಕರಣಗಳು ಸೇರಿ, 2022ರಲ್ಲಿ ಒಟ್ಟು 2,609 ಪ್ರಕರಣಗಳು ರಾಜ್ಯದ ಪೊಲೀಸರ ಮುಂದಿದ್ದವು. ಇವುಗಳಲ್ಲಿ ಸುಳ್ಳು ಆರೋಪಗಳು ಎಂದು ಪೊಲೀಸರು 225 ಪ್ರಕರಣಗಳನ್ನು ವಜಾ ಮಾಡಿದ್ದಾರೆ. ಜತೆಗೆ ಪರಿಶಿಷ್ಟ ಜಾತಿಗಳ ಜನರ ಮೇಲೆ ದೌರ್ಜನ್ಯ ನಿಜ ಎಂದು ಗೊತ್ತಿದ್ದೂ, ಸಾಕ್ಷ್ಯ ಇಲ್ಲದೇ ಇರುವ ಕಾರಣಕ್ಕೆ 2 ಪ್ರಕರಣಗಳನ್ನು ವಜಾ ಮಾಡಿದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊಗೆ (ಎನ್‌ಸಿಆರ್‌ಬಿ) ರಾಜ್ಯದ ಪೊಲೀಸರು ತಾವು ನೀಡಿರುವ ಮಾಹಿತಿಯಲ್ಲಿ ಇದನ್ನೇ ಉಲ್ಲೇಖಿಸಿದ್ದಾರೆ.

ಇವುಗಳ ಹೊರತಾಗಿ 1,636 ಪ್ರಕರಣಗಳಲ್ಲಿ ಪೊಲೀಸರು ಸಾಕ್ಷ್ಯಗಳ ಆಧಾರದಲ್ಲಿ ನ್ಯಾಯಾಲಯಗಳಿಗೆ ಆರೋಪಪಟ್ಟಿ ಸಲ್ಲಿಸಿದ್ದಾರೆ. ಸುಳ್ಳು ಮತ್ತು ಸಾಕ್ಷ್ಯ ಇಲ್ಲದ ಪ್ರಕರಣಗಳು ಪೊಲೀಸರ ತನಿಖಾ ಹಂತದಲ್ಲೇ ವಜಾ ಆಗಿವೆ. ಆದರೆ, ಸಾಕ್ಷ್ಯ ಇದೆ ಎಂದು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ ಪ್ರಕರಣಗಳಲ್ಲೇ ಹೆಚ್ಚಿನವು ಖುಲಾಸೆ ಆಗಿವೆ. 2022ರಲ್ಲಿ ರಾಜ್ಯದ ಎಲ್ಲಾ ನ್ಯಾಯಾಲಯಗಳು ಒಟ್ಟು 1,122 ಪ್ರಕರಣಗಳನ್ನು ವಿಲೇವಾರಿ ಮಾಡಿವೆ. ಇವುಗಳಲ್ಲಿ 1,096 ಪ್ರಕರಣಗಳು ಖುಲಾಸೆಯಾಗಿವೆ. ಈ ಪ್ರಕರಣಗಳು ಏಕೆ ಖುಲಾಸೆಯಾಗಿವೆ ಎಂಬುದರ ವಿವರವು ಎನ್‌ಸಿಆರ್‌ಬಿ ದತ್ತಾಂಶದಲ್ಲಿ ಇಲ್ಲ.

ರಾಜ್ಯದಲ್ಲಿ ಖುಲಾಸೆ ಪ್ರಮಾಣ ಶೇ 97.3ರಷ್ಟು



ದೌರ್ಜನ್ಯದ ಪ್ರಕರಣಗಳ ಏರಿಕೆ

- ದೇಶದಾದ್ಯಂತ ಪರಿಶಿಷ್ಟ ಜಾತಿಗಳ ಜನರ ಮೇಲೆ ಎಸಗಲಾದ ದೌರ್ಜನ್ಯ ಮತ್ತು ಅಪರಾಧ ಕೃತ್ಯಗಳು ಏರಿಕೆಯಾಗಿವೆ. 2020ರಲ್ಲಿ ಇಂತಹ 50,291 ಪ್ರಕರಣಗಳು ದಾಖಲಾಗಿದ್ದರೆ, 2021ರಲ್ಲಿ 50,900 ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಇದು 57,582ಕ್ಕೆ ಏರಿಕೆಯಾಗಿದೆ
- 2022ರಲ್ಲಿ ಉತ್ತರ ಪ್ರದೇಶದಲ್ಲಿ 15,368 ಪ್ರಕರಣಗಳು ದಾಖಲಾಗಿವೆ. ಇಂತಹ ಅತಿಹೆಚ್ಚು ಪ್ರಕರಣ ದಾಖಲಾಗಿದ್ದು ಈ ರಾಜ್ಯದಲ್ಲೇ
- ರಾಜಸ್ಥಾನದಲ್ಲಿ 8,752 ಪ್ರಕರಣಗಳು ದಾಖಲಾಗಿದ್ದು, ಎರಡನೇ ಸ್ಥಾನದಲ್ಲಿದೆ
- ಮಧ್ಯಪ್ರದೇಶದಲ್ಲಿ 7,733 ಪ್ರಕರಣಗಳು ದಾಖಲಾಗಿದ್ದು, ಮೂರನೇ ಸ್ಥಾನದಲ್ಲಿದೆ
- 2020ರಲ್ಲಿ ರಾಜ್ಯದ ಎಲ್ಲೆಡೆ ಇಂತಹ 1,398 ಪ್ರಕರಣಗಳು ದಾಖಲಾಗಿದ್ದರೆ, 2021ರಲ್ಲಿ 1,673 ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಇದು 1,977ಕ್ಕೆ ಏರಿಕೆಯಾಗಿದೆ

ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಳ

ಪರಿಶಿಷ್ಟ ಜಾತಿಗಳ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದೆ. 2021ರಲ್ಲಿ ಈ ಸಮುದಾಯಗಳ ಮಹಿಳೆಯರ ಮೇಲೆ ನಡೆದ ದೌರ್ಜನ್ಯದ ಒಟ್ಟು ಪ್ರಕರಣಗಳು 7,168. ಇದು 2022ರಲ್ಲಿ 7,756ಕ್ಕೆ ಏರಿಕೆಯಾಗಿದೆ. ಪರಿಶಿಷ್ಟ ಜಾತಿಗಳ ಮಹಿಳೆಯರ ಮೇಲಿನ ಹೆಚ್ಚಿನ ದೌರ್ಜನ್ಯ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ದಾಖಲಾಗಿವೆ. ಈ ರಾಜ್ಯದಲ್ಲಿ ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಮಹಿಳೆಯರ ಸಂಖ್ಯೆ 821. ಎರಡನೇ ಸ್ಥಾನದಲ್ಲಿ ರಾಜಸ್ಥಾನವಿದೆ (608). ಕರ್ನಾಟಕದಲ್ಲಿ ಈ ಸಂಖ್ಯೆಯು 296 ಇದೆ. ಇಂತಹ ದೌರ್ಜನ್ಯಕ್ಕೆ ಅತಿಹೆಚ್ಚು ಮಹಿಳೆಯರು ಒಳಗಾದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಐದನೇ ಸ್ಥಾನದಲ್ಲಿದೆ.

ಈ ಸಮುದಾಯಗಳ ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳೆಲ್ಲವೂ ಗೌರವಕ್ಕೆ ಧಕ್ಕೆ ತರುವ ಸ್ವರೂಪದವೇ ಆಗಿವೆ. ಅವುಗಳಲ್ಲಿ ಅತ್ಯಾಚಾರದ್ದೇ ಸಿಂಹಪಾಲು. ಜತೆಗೆ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ತೆಗಳುವುದು–ಹಲ್ಲೆ ನಡೆಸುವುದು, ಸಾರ್ವಜನಿಕವಾಗಿ ಬೆತ್ತಲುಗೊಳಿಸುವುದು, ಅತ್ಯಾಚಾರ ಯತ್ನದಂತಹ ಕೃತ್ಯಗಳಿಗೆ ಈ ಮಹಿಳೆಯರು ಸಂತ್ರಸ್ತೆಯರಾಗಿದ್ದಾರೆ. ಮಹಿಳೆಯರು ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾಗ ಕದ್ದು ನೋಡಿದಂತಹ ಮತ್ತು ಗೋಪ್ಯವಾಗಿ ಚಿತ್ರೀಕರಿಸಿದಂತಹ ಕೃತ್ಯಗಳೂ ಇದರಲ್ಲಿ ಸೇರಿವೆ. ಕರ್ನಾಟಕಕ್ಕೆ ಸೀಮಿತಗೊಳಿಸಿ ವಿಶ್ಲೇಷಿಸುವುದಾದರೆ, ಮಹಿಳೆಯ ಗೌರವಕ್ಕೆ ಧಕ್ಕೆ ತರುವ ಉದ್ದೇಶದ ಬೈಗುಳ ಮತ್ತು ಹಲ್ಲೆ ಪ್ರಕರಣಗಳ ಸಂಖ್ಯೆಯೇ ಹೆಚ್ಚಿದೆ.

ಬೆತ್ತಲುಗೊಳಿಸುವ ಕೃತ್ಯ

2022ರಲ್ಲಿ ಮಹಿಳೆಯರನ್ನು ಅವರ ಜಾತಿಯ ಕಾರಣದಿಂದ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಸಾರ್ವಜನಿಕವಾಗಿ ಬೆತ್ತಲುಗೊಳಿಸಿದ 343 ಪ್ರಕರಣಗಳಿಗೆ ದೇಶವು ಸಾಕ್ಷಿಯಾಗಿದೆ. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಇಂಥ 36 ಪ್ರಕರಣಗಳು ದಾಖಲಾಗಿವೆ.

ಪರಿಶಿಷ್ಟ ಜಾತಿಗಳ ಸಂತ್ರಸ್ತೆಯರ ವಿವರ

* ಆವರಣದಲ್ಲಿರುವುದು 2021ರ ದತ್ತಾಂಶ



ಆಧಾರ: ಎನ್‌ಸಿಆರ್‌ಬಿಯ ಭಾರತದಲ್ಲಿ ಅಪರಾಧ– 2018, 2019, 2020, 2021, 2022 ವರದಿಗಳು

ಬೂದಿ ಮುಚ್ಚಿದ ‘ಕೆಂಡ!’

ಗೋಪಾಲಕೃಷ್ಣ ದೇಶಪಾಂಡೆ

‘ಗಂಟುಮೂಟೆ’ ಚಿತ್ರದ ಮೂಲಕ ಗಮನ ಸೆಳೆದಿದ್ದ ರೂಪಾ ರಾವ್ ನಿರ್ಮಿಸಿ, ಸಹದೇವ್ ಕೆಲವಡಿ ನಿರ್ದೇಶಿಸಿರುವ ‘ಕೆಂಡ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಸಾಮಾನ್ಯ ಹುಡುಗನೊಬ್ಬ ವ್ಯವಸ್ಥೆಯ ಅಡಕತ್ತರಿಗೆ ಸಿಕ್ಕು ಅಸಾಮಾನ್ಯವಾಗಿ ಠೇಂಕರಿಸುವ ಕಥೆಯೇ ಈ ಚಿತ್ರದ ಜೀವಾಳ. ಇದೊಂದು ವಿಭಿನ್ನ ಬಗೆಯ ಚಿತ್ರ ಎಂಬುದನ್ನು ಪೋಸ್ಟರ್, ಟೀಸರ್ ಮೂಲಕ ಹಂತಹಂತವಾಗಿ ಹೇಳುವ ಯತ್ನ ಮಾಡಿದ್ದೇವೆ’ ಎನ್ನುತ್ತಾರೆ ನಿರ್ದೇಶನದೊಂದಿಗೆ ಚಿತ್ರದ ಛಾಯಾಗ್ರಹಣವನ್ನೂ ಮಾಡಿರುವ ಸಹದೇವ್ ಕೆಲವಡಿ.

ಬಹುತೇಕ ರಂಗಭೂಮಿ ಪ್ರತಿಭೆಗಳೇ ಈ ಚಿತ್ರದಲ್ಲಿದ್ದಾರೆ. ಬಿ.ವಿ ಭರತ್, ಪ್ರಣವ್ ಶ್ರೀಧರ್, ವಿನೋದ್ ರವೀಂದ್ರನ್, ಗೋಪಾಲ ದೇಶಪಾಂಡೆ ಮುಂತಾದವರ ತಾರಾಬಳಗವಿದೆ. ಸಾಹಿತಿ ಜಯಂತ್ ಕಾಯ್ಕಿಣಿ ಅವರ ಪುತ್ರ ರಿತ್ವಿಕ್ ಕಾಯ್ಕಿಣಿ ಈ ಸಿನಿಮಾ ಮೂಲಕ ಸಂಗೀತ ನಿರ್ದೇಶಕರಾಗುತ್ತಿದ್ದಾರೆ. ಚಿತ್ರದ ಎರಡು ಹಾಡುಗಳಿಗೆ ಜಯಂತ್ ಕಾಯ್ಕಿಣಿ ಸಾಹಿತ್ಯ ಬರೆದಿದ್ದಾರೆ.

ಆಸ್ಕರ್ ಪ್ರಶಸ್ತಿ ವಿಜೇತ ‘ಎಲಿಫೆಂಟ್ ವಿಸ್ಪರ್ಸ್’ ಚಿತ್ರದ ಭಾಗವಾಗಿದ್ದ ಶ್ರೇಯಾಂಕ್ ನಂಜಪ್ಪ ಈ ಚಿತ್ರಕ್ಕೆ ಶಬ್ದ ಸಂಯೋಜನೆ ಮಾಡಿದ್ದಾರೆ. ❖

ಯಶಸ್ವಿನಿ, ಸಾಗರ್, ಅಂಕಿತಾಗೌಡ

ಪ್ರಾರಂಭವಾಯ್ತು ‘ಸಿಂಹರೂಪಿಣಿ’

‘ಕೆಜಿಎಫ್’ ಚಿತ್ರದ ಅಮ್ಮನ ಹಾಡಿಗೆ ಸಾಹಿತ್ಯ ಬರೆದು ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದ ಕಿನ್ನಾಳ ರಾಜ್ ಇದೀಗ ಚಿತ್ರವೊಂದಕ್ಕೆ ಆ್ಯಕ್ಷನ್‌-ಕಟ್ ಹೇಳುತ್ತಿದ್ದಾರೆ. ಅವರ ನಿರ್ದೇಶನದ ‘ಸಿಂಹರೂಪಿಣಿ’ ಚಿತ್ರ ಇತ್ತೀಚೆಗಷ್ಟೇ ಪ್ರಾರಂಭಗೊಂಡಿದೆ.

‘ಈಗ ಭಕ್ತಿ ಪ್ರಧಾನ ಚಿತ್ರಗಳು ಕಡಿಮೆ ಆಗುತ್ತಿವೆ. ಹೀಗಾಗಿ ಆ ಜಾನರ್‌ನ ಕಥೆ ಆಯ್ದುಕೊಂಡಿದ್ದೇನೆ. ರಾಕ್ಷಸನನ್ನು ಸಂಹಾರ ಮಾಡಲು ಪಾರ್ವತಿದೇವಿ ಏಳು ಅವತಾರಗಳಲ್ಲಿ ಭೂಮಿಗೆ ಬರುತ್ತಾಳೆ. ಅದರಲ್ಲಿ ಕೊನೆಯದು ಮಾರಮ್ಮ ದೇವಿಯ ಅವತಾರ. ಅದರ ಕುರಿತ ಚಿತ್ರವಿದು. ಸಾಕಷ್ಟು ಗ್ರಾಫಿಕ್ಸ್‌ನೊಂದಿಗೆ ತಾಯಿಯ ಪವಾಡಗಳನ್ನು ತೋರಿಸುವ ಪ್ರಯತ್ನ ಮಾಡುತ್ತೇವೆ’ ಎಂದರು ನಿರ್ದೇಶಕರು.

ಕೆ.ಎಂ.ನಂಜುಂಡೇಶ್ವರ ಅವರು ಚಿತ್ರದ ಕಥೆ ಬರೆದು ಶ್ರೀಚಕ್ರ ಫಿಲ್ಮ್ಸ್ ಅಡಿಯಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಹೊಸ ಪ್ರತಿಭೆ ಸಾಗರ್, ಯಶಸ್ವಿನಿ, ಅಂಕಿತಾಗೌಡ ಚಿತ್ರದ ನಾಯಕ–ನಾಯಕಿಯರು. ಹರೀಶ್‌ರಾಯ್, ಯಶ್‌ಶೆಟ್ಟಿ, ದಿನೇಶ್ ಮಂಗಳೂರು, ನೀನಾಸಂ ಅಶ್ವತ್ಥ್, ಹಿರಿಯ ನಟ ಸುಮನ್, ತಮಿಳಿನ ದಿನಾ ತಾರಾಗಣದಲ್ಲಿದ್ದಾರೆ.

ನಾಲ್ಕು ಗೀತೆಗಳಿದ್ದು, ಆಕಾಶ್‌ಪರ್ವ ಸಂಗೀತ ಸಂಯೋಜಿಸುತ್ತಿದ್ದಾರೆ. ನಂದಕುಮಾರ್ ಛಾಯಾಗ್ರಹಣ, ವೆಂಕಿ ಯು.ಡಿ.ವಿ. ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ದೊಡ್ಡಬಳ್ಳಾಪುರ ಹಾಗೂ ಕರ್ನಾಟಕದ ಪುಣ್ಯ ಕ್ಷೇತ್ರಗಳಲ್ಲಿ ಚಿತ್ರೀಕರಣ ನಡೆಸಲು ತಂಡ ಆಲೋಚಿಸಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ನಾಯಕರು ಸಭೆಯಲ್ಲಿ ಗುಂಪುಚಿತ್ರ ತೆಗೆಸಿಕೊಳ್ಳುವ ಸಂದರ್ಭದಲ್ಲಿ ಮುಸ್ಲಿಮರ ‘ಅಜಾನ್’ ಅನ್ನು ಹಾಕಲಾಗಿದೆ ಎಂದು ಆರೋಪಿಸಿ, ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ‘ಈ ಮೈತ್ರಿಕೂಟದಿಂದ ಎಚ್ಚರದಲ್ಲಿರಿ’ ಎಂಬಂಥ ಪೋಸ್ಟ್‌ಗಳನ್ನು ಈ ವಿಡಿಯೊದೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ‘2024ರ ಲೋಕಸಭಾ ಚುನಾವಣೆಯಲ್ಲಿ ಮತಚಲಾಯಿಸುವಾಗ ಎರಡಲ್ಲ ಮೂರು ಬಾರಿ ಯೋಚಿಸಿ. ನಾನಂತೂ ಈಗಾಗಲೇ ಯೋಚಿಸಿದ್ದೇನೆ’ ಎಂದೂ ಪೋಸ್ಟ್ ಮಾಡಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ. ವಿಡಿಯೊವನ್ನು ತಿರುಚಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ.

ವಿಡಿಯೊದಲ್ಲಿ ಇರುವ ದೃಶ್ಯಗಳಲ್ಲಿ, ‘ಇಂಡಿಯಾ’ ಮೈತ್ರಿಕೂಟದ ನಾಯಕರು ಗುಂಪುಚಿತ್ರಕ್ಕೆ ನಿಂತಿರುವ ಹಿಂಬದಿಯಲ್ಲಿ ದೊಡ್ಡದಾದ ಡಿಜಿಟಲ್ ಬ್ಯಾನರ್‌ವೊಂದು ಕಾಣಿಸುತ್ತದೆ. ಈ ಬ್ಯಾನರ್‌ನಲ್ಲಿ ಆಗಸ್ಟ್ 31 ಹಾಗೂ ಸೆಪ್ಟೆಂಬರ್ 1 ಎಂದು ಬರೆದುಕೊಳ್ಳಲಾಗಿದೆ. ಇದೇ ದಿನಾಂಕಗಳಲ್ಲಿ ಮುಂಬೈನಲ್ಲಿ ಈ ಮೈತ್ರಿಕೂಟದ ಸಭೆ ನಡೆದಿತ್ತು. ಈ ಬಗ್ಗೆ ಹಲವು ಪತ್ರಿಕೆಗಳು ವರದಿ ಮಾಡಿದ್ದವು ಹಾಗೂ ವಿಡಿಯೊಗಳನ್ನು ಚಿತ್ರೀಕರಿಸಿ ತಮ್ಮ ತಮ್ಮ ಡಿಜಿಟಲ್ ಚಾನೆಲ್‌ಗಳಲ್ಲಿ ಪ್ರಸಾರ ಮಾಡಿದ್ದವು. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ದೃಶ್ಯಗಳಿಗೂ ಪತ್ರಿಕೆಗಳು ಪ್ರಸಾರ ಮಾಡಿದ ವಿಡಿಯೊ ತುಣುಕುಗಳಿಗೂ ಹೋಲಿಕೆ ಇದೆ. ಆದರೆ, ಆ ವಿಡಿಯೊಗಳಲ್ಲಿ ‘ಅಜಾನ್’ ಇರಲಿಲ್ಲ. ಈಗ ಆ ದೃಶ್ಯಗಳಿಗೆ ಅಜಾನ್‌ನ ಆಡಿಯೊವನ್ನು ಸೇರಿಸಿ ತಿರುಚಿದ ವಿಡಿಯೊವನ್ನು ಸೃಷ್ಟಿಸಿ ಹಂಚಿಕೊಳ್ಳಲಾಗುತ್ತಿದೆ ಎಂದು ‘ದಿ ಕ್ವಿಂಟ್’ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಡಿಸೆಂಬರ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ನವಮಿ ಗಂ. 27-05 **ನಕ್ಷತ್ರ:** ಉತ್ತರಫಲ್ಗುನಿ ಅಹೋರಾತ್ರ ಯೋಗ: ಪ್ರೀತಿ ಗಂ 23-29 **ಕರಣ:** ತೈತಿಲ ಗಂ. 13-54, ವೃಶ್ಚಿಕ ಮಾಸದ 20 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 1.
ರಾಹುಕಾಲ: ಮಧ್ಯಾಹ್ನ 12-00 - 01-30
ಸೂರ್ಯೋದಯ: 06-44 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ: 21 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ: 5, 9

ಮೇಷ: ವಾಯು ಪ್ರಕೋಪದಿಂದ ದೈಹಿಕ ಸಮಸ್ಯೆಗಳು ಕಾಡಬಹುದು. ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸ ಒಪ್ಪಿಕೊಳ್ಳಬಹುದು. ದೈನಂದಿನ ಚಟುವಟಿಕೆಗಳಲ್ಲಿನ ವ್ಯತ್ಯಾಸಗಳಾಗುವುದು.

ವೃಷಭ: ವ್ಯಾಪಾರ ವ್ಯವಹಾರಗಳಲ್ಲಿನ ಅವ್ಯವಹಾರಗಳು ನಿಷ್ಠಾವಂತ ಸಿಬ್ಬಂದಿಯಿಂದ ಗಮನಕ್ಕೆ ಬರಲಿದೆ. ವಿದೇಶಿ ಸ್ನೇಹಿತರಿಂದ ವ್ಯಾವಹಾರಿಕ ಸಲಹೆ ಪಡೆಯುವಂತಾಗಲಿದೆ. ನಿಮ್ಮ ವ್ಯವಹಾರಕ್ಕೆ ಪ್ರತಿಸ್ಪರ್ಧಿಗಳು ಹುಟ್ಟುವರು.

ಮಿಥುನ: ಮನೆಯಲ್ಲಿನ ಮಕ್ಕಳ ಸಂತೋಷಕ್ಕಾಗಿ ಹೆಚ್ಚಿನ ವೆಚ್ಚ ಉಂಟಾಗುವುದು. ಮಗಳ ಮದುವೆಯ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾದುದು. ಜಾಹಿರಾತು ಏಜೆನ್ಸಿಯವರಿಗೆ ಅಧಿಕ ಆದಾಯ.

ಕರ್ಕಾಟಕ: ಬಹಳ ಸಮಯದಿಂದ ಇತ್ಯರ್ಥವಾಗದ ನಿಮ್ಮ ಕೌಟುಂಬಿಕ ಸಮಸ್ಯೆಗೆ ಈ ದಿನದಲ್ಲಿ ಉತ್ತಮ ಮತ್ತು ನ್ಯಾಯ ಸಮ್ಮತವಾದ ಉತ್ತರ ಸಿಗಲಿದೆ. ಇಂದಿನ ಯೋಜಿತ ಕಾರ್ಯದಲ್ಲಿ ವ್ಯತ್ಯಾಸಗಳು ಉಂಟಾಗಲಿದೆ.

ಸಿಂಹ: ಅತ್ಯುತ್ತಮ ಜೀವನ ಶೈಲಿ ಬಯಸುವವರು ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ. ಸುಗಂಧ ದ್ರವ್ಯ ಹಾಗೂ ಅಲಂಕಾರಿಕ ವಸ್ತುಗಳ ವ್ಯಾಪಾರಿಗಳಿಗೆ ಆಶಾದಾಯಕ ದಿನ.

ಕನ್ಯಾ: ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಮತ್ತು ತಕ್ಷಣದಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕಾದ ಸನ್ನಿವೇಶ ಎದುರಾಗಲಿದೆ. ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ.

ತುಲಾ: ತಂದೆಯವರ ಆರೋಗ್ಯ ಸುಧಾರಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಔದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯುವ ಸಂಭವವಿದೆ. ವಿಷ್ಣುಸಹಸ್ರನಾಮ ಸ್ತೋತ್ರ ಪಠಿಸಿರಿ.

ವೃಶ್ಚಿಕ: ಈ ದಿನ ನಡೆಯುವ ಎಲ್ಲಾ ವಿಷಯಗಳಲ್ಲಿಯೂ ನಿಮ್ಮ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರುವುದು ಉತ್ತಮ. ದೈವಾರಾಧನೆಯಿಂದ ರೈತರಿಗೆ ನೈಸರ್ಗಿಕ ಬಾಧೆ ಕಡಿಮೆಯಾಗುವುದು.

ಧನು: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಯೋಚನೆಯು ಮೂಡುವುದು. ಕೆಲಸ ಕಾರ್ಯಗಳಲ್ಲಿ ನಾಯಕತ್ವದ ಸಾಮರ್ಥ್ಯವನ್ನು ಪ್ರದರ್ಶಿಸುವಿರಿ.

ಮಕರ: ಕೇವಲ ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದರಿಂದ ಅದರಲ್ಲಿಯೇ ಹೆಚ್ಚಿನ ಸಮಯ ಕಳೆಯುವಂತಾಗುವುದು. ಆಡಳಿತ ವರ್ಗದರಿಗೆ ಸಿಬ್ಬಂದಿಯಿಂದ ಪ್ರಶಂಸೆ ದೊರೆಯುತ್ತದೆ.

ಕುಂಭ: ಸಂಶೋಧನಾಕಾರರು ಹೆಚ್ಚಿನ ವ್ಯಾಸಂಗಕ್ಕಾಗಿ ಸಮಯ ಮೀಸಲಿಡಬೇಕಾಗಲಿದೆ. ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ, ಪೋಷಣೆಯಲ್ಲಿ ದುಡುಕಬೇಡಿ, ಗಮನವಿರಲಿ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲ ಆಗಲಿದೆ.

ಮೀನ: ಈ ದಿನ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಮಹತ್ವ ನೀಡಿ ಅವುಗಳನ್ನು ಕಾರ್ಯಗತಗೊಳಿಸಿರಿ. ನಿಮ್ಮ ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಆರ್ಥಿಕ ಕ್ಷೇತ್ರದಲ್ಲಿ ಮುನ್ನಡೆ ಇರುವುದು.

ನುಡಿ ಬೆಳಗು

ಯಾರು ಅರ್ಥ ಮಾಡಿಕೊಳ್ಳಬೇಕು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಹಿರಿಯ ಗೆಳೆಯರೊಬ್ಬರು ಸಿಕ್ಕರು. ನಿವೃತ್ತರಾದ ಮೇಲೆ ಯಾರೂ ಮಾತಾಡಿಸಲು ಸಿಗುವುದಿಲ್ಲವೆಂದು ಕೊರಗಿದರು. ಎಲ್ಲರೂ ತಮ್ಮನ್ನು ಮರೆತಿದ್ದಾರೆ ಎಂಬ ಅಳಲು ಅವರನ್ನು ಕಾಡಿಸುತ್ತಿತ್ತು. ಮಾತುಗಳು ಮೃದುವಾಗಿ, ಹೃದಯ ಭಾರವಾಗಿದ್ದಂತೆ ಕಂಡಿತು. ಇನ್ನೂ ಬಗೆಹರಿಯದ ಮನೆಯ ಹಲವು ಸಮಸ್ಯೆಗಳ ಬಗ್ಗೆ ಮಾತಾಡಿದರು. ತಾವು ನಿರೀಕ್ಷೆ ಮಾಡಿದಂತೆ ಮಕ್ಕಳು ಬಾಳುತ್ತಿಲ್ಲ. ಮನೆಯಲ್ಲಿ ಸಿಗಬೇಕಾದ ಗೌರವ ದಕ್ಕುತ್ತಿಲ್ಲ. ಕಾಯಿಲೆ ಸತಾಯಿಸುತ್ತಿದೆ. ಮನೆಯ ಲೋನು ಬಾಕಿ ಇದೆ. ಹೀಗೇ ಉದ್ದ ಪಟ್ಟಿ ಬೆಳೆಸಿದರು.

‘ಈ ಜಗತ್ತಿನಿಂದ ನೀವು ಗೌರವ ನಿರೀಕ್ಷೆ ಮಾಡುವುದು ತಪ್ಪಲ್ಲ. ಆದರೆ ತಾವು ಅಧಿಕಾರದಲ್ಲಿದ್ದಾಗ, ಕೈ, ಕಾಲು, ತಲೆ ನೆಟ್ಟಗಿದ್ದಾಗ ಎಷ್ಟು ದರ್ಪದಿಂದ ನಡೆದುಕೊಂಡಿದ್ದೀರಿ ಎಂಬುದು ಮರೆತಿದ್ದೀರಿ. ನನ್ನನ್ನೂ ಸೇರಿದಂತೆ ಅನೇಕರಿಗೆ ತೀವ್ರವಾಗಿ ನೋಯಿಸಿದ್ದೀರಿ. ನಾನೀಗ ಮರೆತಿದ್ದೇನೆ. ಆದರೆ ಕೆಲವರು ಕಹಿಯನ್ನು ನುಂಗುವುದಿಲ್ಲ. ನಾಲಿಗೆ ಮೇಲೆ ಇಟ್ಟುಕೊಂಡು ಕಾಲ ಬಂದಾಗ ವಾಪಸ್ಸು ಕೊಡುತ್ತಾರೆ. ನಮ್ಮ ಮಮತೆಯ ನಡವಳಿಕೆ, ತ್ಯಾಗಗುಣಗಳು ಮಾತ್ರ ನಮಗೆ ಆತ್ಮತೃಪ್ತಿ ಕೊಡುವ ಗೆಳೆಯರನ್ನು ಕುಟುಂಬವನ್ನು ಕಟ್ಟಿ ಕೊಡಬಲ್ಲವು. ನಾವು ಮತ್ತೊಬ್ಬರಿಂದ ಏನನ್ನೂ ನಿರೀಕ್ಷೆ ಮಾಡಬಾರದು. ಹೆಂಡತಿ, ಮಕ್ಕಳು, ಮಿತ್ರರು, ನೆರೆಹೊರೆಯವರು, ನೆಂಟರೆಲ್ಲರೂ ನಾನು ಅಪೇಕ್ಷೆ ಪಟ್ಟಂತೆ ಇರಬೇಕೆಂಬ ಆಲೋಚನೆಯೇ ತಪ್ಪು. ಈ ಪ್ರಕೃತಿಯಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ವಿಭಿನ್ನ. ವ್ಯಕ್ತಿ ಆಲೋಚಿಸುವ ರೀತಿ, ವಿಷಯ ಮತ್ತು ಸಂದರ್ಭಗಳನ್ನು ಅರ್ಥ ಮಾಡಿಕೊಳ್ಳುವ ಬಗೆ ಎಲ್ಲವೂ ಬೇರೆ ಬೇರೆ. ಯಾರೂ ಯಾರಂತೆ ಆಗುವುದಿಲ್ಲ ಮತ್ತು ಆಗಕೂಡದು.

ನಮ್ಮ ನಿರೀಕ್ಷೆಗಳನ್ನು ಮತ್ತೊಬ್ಬರು ಅರ್ಥ ಮಾಡಿಕೊಂಡು ಅದರಂತೆ ನಡೆದುಕೊಳ್ಳಬೇಕೆಂದು ಬಯಸುವುದು ಮೂರ್ಖತನ. ನೀವು ಯಾವತ್ತೂ ಯಾರ ನಿರೀಕ್ಷೆಗಳನ್ನೂ ಅರ್ಥ ಮಾಡಿಕೊಂಡವರಲ್ಲ. ಹಟ, ಒರಟುತನಗಳ ಮುಂದು ಮಾಡಿ ಬಾಳಿದವರು. ಹೀಗಿದ್ದಾಗ ಅನ್ಯರು ಮಾತ್ರ ನನ್ನ ಒಪ್ಪಿಕೊಳ್ಳಬೇಕು ಎಂದು ಯಾವ ಆಧಾರದ ಮೇಲೆ ಬಯಸುತ್ತಿದ್ದೀರಿ. ಆಸೆಯೇ ದುಃಖಕ್ಕೆ ಮೂಲ ಎಂದು ಬುದ್ಧ ಹೇಳಿದ ಹಾಗೆ ಅತಿ ನಿರೀಕ್ಷೆಗಳೇ ಎಲ್ಲಾ ಶೋಕಗಳಿಗೆ ಮೂಲ. ನಿರೀಕ್ಷೆ ಬಿಡಿ. ಜೊತೆ ಬಾಳುವ ಎಲ್ಲರ ಮನಸುಗಳ ಅರ್ಥ ಮಾಡಿಕೊಂಡು, ಹೊಂದಿಕೊಂಡು ಬದುಕುವ ಅಭ್ಯಾಸ ಇಟ್ಟುಕೊಳ್ಳಿ’ ಎಂದೆ. ಅವರು ದಿಟ್ಟಿಸಿ ನೋಡಿ ಹೊರಟು ಹೋದರು.

ಎಲ್ಲರೂ ಇಂತಹ ಬೇಗುದಿಯಲ್ಲೇ ನರಳುತ್ತಿದ್ದಾರೆಂದು ಭಾವಿಸುವುದು ತಪ್ಪು. ಮನಸ್ಸಿಗೆ ವಯಸ್ಸು ಮಾಡಿಕೊಳ್ಳದೆ, ಓದು, ಪ್ರವಾಸ, ವ್ಯವಸಾಯ, ಫೋಟೋಗ್ರಫಿಗಳಂತಹ ತಮ್ಮಿಷ್ಟದ ಹವ್ಯಾಸದಲ್ಲಿ ತೊಡಗಿಸಿಕೊಂಡ ಅನೇಕರಿದ್ದಾರೆ. ಹರೆಯದ ಹುಡುಗರಂತೆ ಚುರುಕಾಗಿದ್ದಾರೆ. ತಮ್ಮ ವೃತ್ತಿಗಳಿಂದ ಎಂದೂ ನಿವೃತ್ತರಾಗದ, ಬದುಕಿನ ಕನಿಷ್ಠ ಸುಖಗಾಣದ ರೈತರು, ಮಹಿಳೆಯರು, ಕಾರ್ಮಿಕರ ಬಗ್ಗೆ ಯೋಚಿಸಿದರೆ ನಮ್ಮೆಲ್ಲರ ರೋದನಗಳೇ ಅರ್ಥಹೀನ ಎನಿಸುತ್ತದೆ. ತಾಪತ್ರಯಗಳಿಲ್ಲದೆ ನಾವು ಜೀವಿಸುವ ಭರವಸೆಯನ್ನೇ ಇಟ್ಟುಕೊಳ್ಳಬಾರದು. ಇವುಗಳೊಂದಿಗೆ ಜೀವಿಸುವ ಕಲೆಯ ದಾರಿ ಹುಡುಕಬೇಕು. ❖

ಪದಬಂಧ 5521

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸತ್ಯಾಗ್ರಹವನ್ನು ಮಾಡುತ್ತಿರುವವನು (4)
3.ಕ್ರೈಸ್ತರು ಧರಿಸುವ ಧಾರ್ಮಿಕ ಲಾಂಛನ (3)
5.ಭಿಕ್ಷುಕ ಇಲ್ಲಿದ್ದಾನೆ (3)
7.ಒನಪಿನೊಡನೆ ತೋರಿದ ಬಿಂಕ (3)
8.ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲಿ ಕೇಳಿಸುತ್ತಿದೆ (3)
12.ದುಃಖದೊಡನೆ ಬರುವ ಜೋಡುನುಡಿ (3)
15.ಕುದುರೆಯನ್ನೇರುವ ಬಳೆ (3)
16.ಸಾರವತ್ತಾದ ಭಾಗದೊಂದಿಗಿರುವ ಕ್ಷೀರ (4)

ಮೇಲಿಂದ ಕೆಳಕ್ಕೆ
1.ವಸತಿ ಹತ್ತಿರವಿರುವ ಉಪಪತ್ನಿ (3)
2.ಮಹಿಮಾವಂತನ ಮೇಲೆ ಬಿದ್ದಿರುವ ಮಂಜು (2)
3.ಶಿರದೊಳಗಿರುವ ಚಳಿಗಾಲ! (3)
4.ಹೀಗೆ ಹೆದರಿಸು! (4)
6.ದೇವಾಲಯ ಗೋಪುರದ ತುದಿ (3)
7.ಕೆಲಸಕ್ಕೆ ಬಾರದ ಮಾತು (5)
9.ಇದು ದಾಖಲೆ (3)
10.ಕೊಬ್ಬಿದ ಆನೆಯಿದು (4)
11.ವ್ಯಾಕರಣದಲ್ಲಿ ಗಂಡುಜಾತಿಯನ್ನು ಸೂಚಿಸುವ ಶಬ್ದವು ಉಲ್ಟಾ ಆಗಿದೆ (3)
13.ನಮ್ಮ ರಾಷ್ಟ್ರ ಪಕ್ಷಿ (3)
14.ಸಂದೇಹ ಹೀಗೆ ಬಂದಿದೆ (2)



5520ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಮೇದುವಾರ 3.ಕಪಾಳ 5.ದನ 7.ಕನ್ನಡಿ 8.ತಪ್ಪುಕಲ್ಪನೆ 11.ಪಯಣ 12.ಣಗು 14.ಸಬೂಬು 15.ಪಾಕಪ್ರವೀಣ

ಮೇಲಿಂದ ಕೆಳಕ್ಕೆ:
1.ಉಪಕಾರಿ 2.ವಾಗ್ವಾದ 4.ಳವಾಡಿಮ 6.ನವೀಕರಣ 7.ಕಲ್ಪನೆ 8.ತರುಣ 9.ಉಪವಾಸ 10.ಆಭರಣ 13.ಗುಣಕ

ಸುಡೊಕು 5907

	9	6			8	5		1
			2	1				
1		2			5			8
6		9				8		
			5		6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5906 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಎಂಇಎಸ್, ಶಿವಸೇನಾ ಮುಖಂಡರ ವಿರುದ್ಧ ಪ್ರಕರಣ ದಾಖಲು

ಬೆಳಗಾವಿ: ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಚಂದಗಡ ತಾಲ್ಲೂಕಿನ ಶಿನೋಳಿಯಲ್ಲಿ ಬೆಳಗಾವಿ–ವೆಂಗುರ್ಲಾ ರಸ್ತೆಯನ್ನು 3 ಗಂಟೆ ತಡೆದು, ಪ್ರತಿಭಟನೆ ನಡೆಸಿದ್ದ ಎಂಇಎಸ್ ಮತ್ತು ಶಿವಸೇನಾ (ಉದ್ಧವ್ ಠಾಕ್ರೆ ಬಣ) ಮುಖಂಡರು ಸೇರಿ 40 ಜನರ ವಿರುದ್ಧ ಚಂದಗಡ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ವಿಧಾನಮಂಡಲ ಅಧಿವೇಶನಕ್ಕೆ ಪರ್ಯಾಯವಾಗಿ, ನಗರದಲ್ಲಿ 'ಮಹಾಮೇಳಾವ್' ನಡೆಸಲು ಎಂಇಎಸ್ ಉದ್ದೇಶಿಸಿತ್ತು. ಪೊಲೀಸರು ಅನುಮತಿ ನೀಡದ ಕಾರಣ ಶಿನೋಳಿಯಲ್ಲಿ ಸೋಮವಾರ ರಸ್ತೆ ತಡೆ ನಡೆಸಿದರು. ಇದರಿಂದ 2 ಕಿ.ಮೀ.ವರೆಗೆ ವಾಹನಗಳು ಸಾಲುಗಟ್ಟಿದ್ದವು.

'ರಸ್ತೆ ತಡೆಗೆ ಸಂಬಂಧಿಸಿ ಎಂಇಎಸ್ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ್, ಶಿವಸೇನಾ ಕೊಲ್ಹಾಪುರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ ದೇವನೆ, ಪ್ರಕಾಶ ಮರಗಾಳೆ, ಶುಭಂ ಶೆಳಕೆ, ಸರಿತಾ ಪಾಟೀಲ ವಿರುದ್ಧ ಪ್ರಕರಣ ದಾಖಲಿಸಿದೆ' ಎಂದು ಚಂದಗಡ ಠಾಣೆ ಇನ್‌ಸ್ಪೆಕ್ಟರ್ ನಿತಿನ್ ಸಾವಂತ್ ತಿಳಿಸಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

2ನೇ ವರ್ಷದ ಪುಣ್ಯಸ್ಮರಣೆ

ಕು|| ಅನಿತಾ
(ಸಾಫ್ಟ್‌ವೇರ್ ಮ್ಯಾನೇಜರ್)
ಮರಣ: 06-12-2021

"ಸಮಯವು ವೇಗವಾಗಿ ಸಾಗುತ್ತದೆ. ಜೀವನವು ತನ್ನದೇ ಆದಿ ಮೇಲೆ ಹೋಗುತ್ತದೆ. ಆದರೆ ನಿನ್ನ ನೆನಪುಗಳು ಎಂದಿಗೂ ನಮ್ಮ ಮನಸ್ಸಿನಿಂದ ಮರೆತು ಹೋಗುವುದಿಲ್ಲ. ನೀನು ಯಾವಾಗಲೂ ನಮ್ಮ ಆಲೋಚನೆಗಳಲ್ಲಿ ಶಾಶ್ವತವಾಗಿ ಇರುತ್ತೀಯಾ"

ನಮ್ಮ ಮಗಳು ಅನಾಥಾಶ್ರಮಗಳಿಗೆ ಮಾಡುತ್ತಿದ್ದ ದಾನ–ಧರ್ಮಗಳನ್ನು ನಾವು ಮುಂದುವರೆಸಿಕೊಂಡು ಹೋಗುತ್ತೇವೆ. ಹಾಗೂ ಅವಳ ದೇಹ ಮತ್ತು ಕಣ್ಣುಗಳನ್ನು ಆಸ್ಪತ್ರೆಗೆ ದಾನ ಮಾಡಿರುತ್ತೇವೆ.

ದುಃಖತಪ್ತರು
ತಂದೆ – ಸಿ. ಬಸವರಾಜು
ತಾಯಿ – ರಾಜೇಶ್ವರಿ
ಸ್ನೇಹಿತರು ಮತ್ತು ಬಂಧುಮಿತ್ರರು
ವಿದ್ಯಾರಣ್ಯಪುರ, ಬೆಂಗಳೂರು - 97

42ನೇ ಜನುಮ ದಿನದ ನೆನಪು

ಎಂ.ಎಸ್. ಸಂದೀಪ್, ಎಂ.ಎಸ್.
ಜನನ : 06-12-1981

ನೀನು ನಡೆದ ಪ್ರತಿಯೊಂದು ಹೆಜ್ಜೆಯು ಸದಾ ನಮ್ಮ ಬಾಳಲ್ಲಿ ಹಚ್ಚಹಸಿರಾಗಿದೆ.

ನಿನ್ನ ನೆನಪಿನಲ್ಲಿ
ಉಷಾ ಮತ್ತು ಎಂ.ಕೆ. ಶಂಕರಲಿಂಗೇಗೌಡ, ಐ.ಎ.ಎಸ್.(ನಿ)
ಇ–ಮೇಲ್: mssundeeptrust@gmail.com

LOOKING TO BUILD, BUY OR SELL A PROPERTY
Please refer Classifieds on Sunday

ಚೆನ್ನೈನಲ್ಲಿ ಮಳೆ ಭಾಗಶಃ ಬಿಡುವು • ಜಲಾವೃತವಾಗಿರುವ ವಸತಿ ಪ್ರದೇಶಗಳು • ತಪ್ಪದ ಬವಣೆ

ಮಿಚಾಂಗ್: ಮೃತರ ಸಂಖ್ಯೆ 12ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: 'ಮಿಚಾಂಗ್' ಚಂಡಮಾರುತದ ಪರಿಣಾಮ ಚೆನ್ನೈನಲ್ಲಿ ಮಂಗಳವಾರವೂ ಮುಂದುವರಿದಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಮೃತಪಟ್ಟವರ ಸಂಖ್ಯೆ 12ಕ್ಕೆ ಏರಿದ್ದು, ಇತರೆ 11 ಮಂದಿ ಗಾಯಗೊಂಡಿದ್ದಾರೆ. ಮಳೆ ಬಾಧಿತ ವಸತಿ ಪ್ರದೇಶಗಳಿಂದ 54 ಕುಟುಂಬಗಳನ್ನು ರಕ್ಷಿಸಲಾಗಿದೆ.

ಮೃತರಲ್ಲಿ 60 ವರ್ಷದ ಮಹಿಳೆ, 48 ವರ್ಷದ ಕಾನ್‌ಸ್ಟೆಬಲ್ ಸೇರಿದ್ದಾರೆ. ತಾತ್ಕಾಲಿಕ ಜನರೇಟರ್ ಕೊಠಡಿ ಕುಸಿದು ಅದರಲ್ಲಿ ಸಿಲುಕಿದ್ದ ಮೂವರು ಹಾಗೂ ಅಡ್ಯಾರ್ ನದಿ ಪ್ರವಾಹದಿಂದ ಬಹುತೇಕ ಮುಳುಗಡೆಯಾಗಿದ್ದ ಮನೆಯೊಂದರಿಂದ ಮೂವರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೆನ್ನೈ, ಇತರೆ ನಾಲ್ಕು ಜಿಲ್ಲೆಗಳಲ್ಲಿ ಜನಜೀವನ ಮಂಗಳವಾರವೂ ಅಸ್ತವ್ಯಸ್ತಗೊಂಡಿತ್ತು. ಚೆನ್ನೈನ ಬಹುತೇಕ ಪ್ರದೇಶಗಳಲ್ಲಿ ನೀರು ನಿಂತಿದೆ. ಎರಡು ದಿನ ಸತತ ಸುರಿದ ಮಳೆ ಮಂಗಳವಾರ ಭಾಗಶಃ ಬಿಡುವು ನೀಡಿತ್ತು. ಇದು, ರಕ್ಷಣಾ ಕಾರ್ಯವನ್ನು ಚುರುಕುಗೊಳಿಸಲು ತಂಡಗಳಿಗೆ ನೆರವಾಯಿತು.

ಅಧಿಕಾರಿಗಳ ಪ್ರಕಾರ, ನಗರದ ಹಲವೆಡೆ ವಿದ್ಯುತ್ ವ್ಯತ್ಯಯವಾಗಿದೆ. ತಗ್ಗು ಭಾಗದ ಮುತಿಯಾಲ್‌ಪೇಟ್‌ನಲ್ಲಿ 54 ಕುಟುಂಬಗಳನ್ನು ರಕ್ಷಿಸಿದ್ದು ಇವರಲ್ಲಿ ನವಜಾತ ಶಿಶು, ಬಾಣಂತಿ ಸೇರಿದ್ದಾರೆ. ಕೊತ್ತೂರುಪುರಂನ ಶಿಬಿರದಲ್ಲಿ 250 ಜನ ಆಶ್ರಯ ಪಡೆದಿದ್ದಾರೆ. ನೀರಿನಲ್ಲಿ ಸಿಲುಕಿದ್ದ ಬಸ್‌ನಿಂದ 22 ಪ್ರಯಾಣಿಕರನ್ನು ರಕ್ಷಿಸಲಾಗಿದೆ.

ಮಳೆ ಪರಿಣಾಮ ಕುರಿತಂತೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, 'ಸಮರೋಪಾದಿಯಲ್ಲಿ ರಕ್ಷಣಾ ಚಟುವಟಿಕೆಗಳು ನಡೆದಿವೆ. ಚೆನ್ನೈ ಸೇರಿದಂತೆ ಬಾಧಿತ ಜಿಲ್ಲೆಗಳಲ್ಲಿ ಸಂತ್ರಸ್ತರಿಗಾಗಿ ಅಗತ್ಯ ಶಿಬಿರಗಳನ್ನು ಸ್ಥಾಪಿಸಲಾಗಿದೆ' ಎಂದರು.

ಈ ಶಿಬಿರಗಳಲ್ಲಿ ಆಶ್ರಯ ಪಡೆದಿರುವವರೂ ಸೇರಿ ಬಾಧಿತ ಪ್ರದೇಶಗಳಲ್ಲಿ ಜನರಿಗೆ 11 ಲಕ್ಷ ಆಹಾರ ಪೊಟ್ಟಣಗಳನ್ನು ವಿತರಿಸಲಾಗಿದೆ. ರಕ್ಷಣಾ ಕಾರ್ಯದಲ್ಲಿ ತೊಡಗಿಸಲು ಇತರೆ ಜಿಲ್ಲೆಗಳಿಂದ ಸುಮಾರು 5,000 ಜನರನ್ನು ಕರೆಯಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

2015ರಲ್ಲಿ ಎದುರಾಗಿದ್ದ ಪರಿಸ್ಥಿತಿಗೆ ಹೋಲಿಸಿದರೆ ಈ ಬಾರಿ ಪರಿಹಾರ ಕ್ರಮಗಳು ಸುಧಾರಿಸಿವೆ. ಚೆಂಬಾರಂಬಕ್ಕಂ ಜಲಾಶಯದಿಂದ ಅಡ್ಯಾರ್ ನದಿಗೆ ಏಕಾಏಕಿ 1 ಲಕ್ಷ ಕ್ಯೂಸೆಕ್ ನೀರು ಹರಿಸಿದ್ದು, ಸಮಸ್ಯೆ ಉಲ್ಬಣವಾಗಲು ಕಾರಣ ಎಂದು ಮುಖ್ಯಮಂತ್ರಿ ಹೇಳಿದರು.

'2005ರಲ್ಲೂ ಇಂಥದೇ ಸಮಸ್ಯೆ ಎದುರಾಗಿತ್ತು. ಆಗ ಮೂರು ದಿನ ಸಿಕ್ಕಿಬಿದ್ದಿದ್ದೆವು. ಈಗ ಮತ್ತೆ ಅದೇ ಸ್ಥಿತಿ ಬಂದಿದೆ. ವಿದ್ಯುತ್, ನೀರಿನ ಸಮಸ್ಯೆ ಈಗಾಗಲೇ ಬಾಧಿಸುತ್ತಿದೆ' ಎಂದರು.

ಚೆನ್ನೈನಲ್ಲಿ ಮಂಗಳವಾರ ಮಳೆಯಿಂದಾಗಿ ಮಂಡಿಯುದ್ದ ನೀರು ನಿಂತಿದ್ದ ರಸ್ತೆಯಲ್ಲಿಯೇ ಜನರು ಸಾಗಿದರು –ಪಿಟಿಐ ಚಿತ್ರ

'₹ 5,000 ಕೋಟಿ ಮಧ್ಯಂತರ ಪರಿಹಾರಕ್ಕೆ ಮನವಿ'

ನವದೆಹಲಿ: ಚೆನ್ನೈ, ಇತರ ಮಳೆ ಬಾಧಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳು ಹಾಗೂ ಮೂಲಸೌಕರ್ಯಗಳ ಮರುಸ್ಥಾಪನೆಗಾಗಿ ₹5000 ಕೋಟಿ ಮಧ್ಯಂತರ ಪರಿಹಾರ ನೀಡುವಂತೆ ನೀಡುವಂತೆ ತಮಿಳುನಾಡು ಸರ್ಕಾರ ಕೇಂದ್ರವನ್ನು ಕೋರಿದೆ.

ರಾಜ್ಯಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಡಿಎಂಕೆ ನಾಯಕ ತಿರುಚ್ಚಿ ಶಿವ ಅವರು, ಧಾರಾಕಾರ ಮಳೆಯಿಂದಾಗಿ ಚೆನ್ನೈ ಹಾಗೂ ನಾಲ್ಕು ಜಿಲ್ಲೆಗಳು ಬಹುತೇಕ ಬಹುತೇಕ ಮುಳುಗಿವೆ ಎಂದು ತಿಳಿಸಿದರು.

ಡೇರಿ ಘಟಕಗಳು ಮುಳುಗಡೆ

ರಾಜ್ಯದ ಹೈನುಗಾರಿಕೆ ಸಚಿವ ಟಿ.ಮನೊ ತ್ಯಾಗರಾಜ್ ಅವರು, 'ಶೋಲಿಂಗಾನಲ್ಲೂರು ಮತ್ತು ಮಾದಾವರಂನಲ್ಲಿ ಇರುವ ರಾಜ್ಯದ 'ಆವಿನ್' ಹಾಲಿನ ಒಕ್ಕೂಟದ ಘಟಕಗಳು ಪೂರ್ಣವಾಗಿ ಮುಳುಗಿವೆ' ಎಂದು ತಿಳಿಸಿದ್ದಾರೆ. ಆದರೆ, ಅಗತ್ಯ ಪ್ರಮಾಣದ ಹಾಲು ಮತ್ತು ಹಾಲು ಉತ್ಪನ್ನಗಳು ಲಭ್ಯವಿವೆ. ಹಾಲು ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಬಿಡಿ ಮಾರಾಟಗಾರರು ಅಗತ್ಯ ಸಹಕಾರವನ್ನು ನೀಡಬೇಕು ಎಂದೂ ಕೋರಿದ್ದಾರೆ.

ಆಂಧ್ರ ಕರಾವಳಿಯತ್ತ 'ಮಿಚಾಂಗ್'

ಅಮರಾವತಿ: ಮಿಚಾಂಗ್ ಚಂಡಮಾರುತ ಮಂಗಳವಾರ ಸಂಜೆಯ ವೇಳೆಗೆ ಕರಾವಳಿ ಭಾಗದಲ್ಲಿ ಅಪ್ಪಳಿಸಬಹುದು ಎಂಬ ಎಚ್ಚರಿಕೆಯ ಹಿನ್ನೆಲೆಯಲ್ಲಿ ಆಂಧ್ರದ ಬಾಪಟ್ಲಾ ಮತ್ತು ಇತರೆ ಭಾಗಗಳಿಂದ ಸುಮಾರು 9,450 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಹವಾಮಾನ ಇಲಾಖೆಯ ಪ್ರಕಾರ, ಆಂಧ್ರದ ಕರಾವಳಿ ಜಿಲ್ಲೆಗಳು ಮತ್ತು ಯನಂನಲ್ಲಿ ಮಳೆಯಾಗುವ ಸಾಧ್ಯತೆಗಳಿವೆ. ನೆಲ್ಲೂರು, ಮಚಿಲಿಪಟ್ಟಣಂ, ಬಾಪಟ್ಲ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗಬಹುದು.

ಈ ಭಾಗದಲ್ಲಿ ಚಂಡಮಾರುತದ ವೇಗವು ಗಂಟೆಗೆ ಗರಿಷ್ಠ 90–100 ಕಿ.ಮೀ ವೇಗದಲ್ಲಿ ಇರಲಿದೆ. ಕ್ರಮೇಣ 110 ಕಿ.ಮೀ.ವರೆಗೂ ಹೆಚ್ಚುವ ಸಂಭವವು ಇದೆ ಎಂದು ಇಲಾಖೆಯು ಮುನ್ಸೂಚನೆ ನೀಡಿದೆ.

ಒಡಿಶಾದ ವಿವಿಧೆಡೆ ಮಳೆ : ಮಿಚಾಂಗ್ ಚಂಡಮಾರುತದ ಪರಿಣಾಮ ಒಡಿಶಾದ ಮಲ್ಕಂಗಿರಿ, ಕೊರಪುಟ್, ರಾಯಗಢ, ಗಂಜಾಂ, ಗಜಪತಿ ಜಿಲ್ಲೆಗಳಲ್ಲಿ ಸೋಮವಾರ ಸಂಜೆಯೇ ಮಳೆ ಶುರುವಾಗಿದೆ. ಮಂಗಳವಾರ ಬೆಳಿಗ್ಗೆ ದಾಖಲಾದಂತೆ 24 ಗಂಟೆಗಳಲ್ಲಿ ವಿವಿಧೆಡೆ 1.5 ಮಿ.ಮೀ ಯಿಂದ 8.5 ಮಿ.ಮೀ ವರೆಗೆ ಮಳೆಯಾಗಿದೆ.

ನಟ ಅಮೀರ್‌ಖಾನ್, ಸಹನಟನ ರಕ್ಷಣೆ

ಚೆನ್ನೈ: ಮಳೆ ಬಾಧಿತ ಪ್ರದೇಶ ಇಲ್ಲಿನ ಕರ್ಪಕಂನ ಮನೆಯೊಂದಲ್ಲಿ ವಾಸವಿದ್ದ ನಟ ಬಾಲಿವುಡ್ ಅಮೀರ್‌ಖಾನ್, ಸಹನಟ ಕೂಡಾ ಮಳೆ ಸಮಸ್ಯೆಗೆ ಸಿಲುಕಿದವರಲ್ಲಿ ಸೇರಿದ್ದಾರೆ. ಇವರು ಸುಮಾರು 24 ಗಂಟೆ ನೀರು, ವಿದ್ಯುತ್ ಸಂಪರ್ಕವಿಲ್ಲದೆ, ಮೊಬೈಲ್ ಫೋನ್ ಸಂಪರ್ಕವೂ ಇಲ್ಲದೆ ಪಡಿಪಾಟಲು ಪಟ್ಟಿದ್ದಾರೆ.

ಮಾಹಿತಿ ತಿಳಿದ ಹಿಂದೆಯೇ ರಕ್ಷಣಾ ಸಿಬ್ಬಂದಿ 24 ಗಂಟೆಗಳ ಬಳಿಕ, ಅಮೀರ್ ಖಾನ್, ನಟ ವಿಷ್ಣು ವಿಶಾಲ್ ಹಾಗೂ ವಸತಿ ಪ್ರದೇಶದ ಇತರೆ ನಿವಾಸಿಗಳನ್ನು ದೋಣಿಗಳ ನೆರವಿನಲ್ಲಿ ಸುರಕ್ಷಿತ ಸ್ಥಳಗಳತ್ತ ಕರೆದೊಯ್ದಿದ್ದಾರೆ. ಅನಾರೋಗ್ಯದ ಪರಿಣಾಮ ಚಿಕಿತ್ಸೆ ಪಡೆಯುತ್ತಿರುವ ತನ್ನ ತಾಯಿಯ ಜೊತೆಗಿರಲು ಅಮೀರ್ ಖಾನ್ ಕೆಲ ತಿಂಗಳ ಹಿಂದೆ ಚೆನ್ನೈಗೆ ಸ್ಥಳಾಂತರಗೊಂಡಿದ್ದರು.

ಮಯೂರ, ಸುಧಾ ಓದಿರಿ

ಗೋದಾಮು ದುರಂತ: 7 ಸಾವು

ಒಂದನೇ ಪುಟದಿಂದ

ತಲಾ ₹7 ಲಕ್ಷ ಪರಿಹಾರ: ವಿಧಾನಮಂಡಲ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಮಧ್ಯರಾತ್ರಿ 12.30ಕ್ಕೆ ಘಟನಾ ಸ್ಥಳಕ್ಕೆ ಬಂದು, ರಕ್ಷಣಾ ಕಾರ್ಯಾಚರಣೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಆತಂಕ ಮತ್ತು ನೋವಿನಲ್ಲಿದ್ದ ಇತರ ಕಾರ್ಮಿಕರಿಗೆ ಮತ್ತು ಕುಟುಂಬದವರಿಗೆ ಸಾಂತ್ವನ ಹೇಳಿದರು. ನಂತರ ಘಟನೆ ಕುರಿತು ಸಂಪೂರ್ಣ ಮಾಹಿತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿಳಿಸಿದರು.

ವಿಜಯಪುರ ಜಿಲ್ಲಾಸ್ಪತ್ರೆಗೆ ಮಂಗಳವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಎಂ.ಬಿ.ಪಾಟೀಲ ಅವರು ಮೃತ ಕಾರ್ಮಿಕರಿಗೆ ಅಂತಿಮ ನಮನ ಸಲ್ಲಿಸಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೃತ ಕಾರ್ಮಿಕರ ಕುಟುಂಬಗಳಿಗೆ ತಲಾ ₹7 ಲಕ್ಷ ಪರಿಹಾರ ಕೊಡಲಾಗುವುದು. 'ರಾಜ್‌ಗುರು ಫುಡ್ಸ್'ನ ಮಾಲೀಕ ಕಿಶೋರ್ ಜೈನ್ ₹5 ಲಕ್ಷ ನೀಡಿದರೆ, ರಾಜ್ಯ ಸರ್ಕಾರವು ₹2 ಲಕ್ಷ ಪರಿಹಾರ ಕೊಡಲಿದೆ. ತೀವ್ರ ಸ್ವರೂಪದಲ್ಲಿ ಗಾಯಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಒಬ್ಬ ಕಾರ್ಮಿಕನಿಗೆ ₹50 ಸಾವಿರ ಪರಿಹಾರ ಕೊಡಲಾಗುವುದು' ಎಂದರು.

'ಕಾರ್ಮಿಕರ ಶವಗಳನ್ನು ಸಮೀಪದ ವಿಮಾನ ನಿಲ್ದಾಣದ ಮೂಲಕ ಬಿಹಾರ ರಾಜಧಾನಿ ಪಟ್ನಾಕ್ಕೆ ವಿಮಾನದಲ್ಲಿ ಸಾಗಿಸಿ, ಕಾರ್ಮಿಕರ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ' ಎಂದರು.

15 ಗಂಟೆ ಕಾರ್ಯಾಚರಣೆ: ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ ಸೋನಾವಣೆ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ನೇತೃತ್ವದಲ್ಲಿ ಪೊಲೀಸರು, ಅಗ್ನಿಶಾಮಕ ಪಡೆ ಸಿಬ್ಬಂದಿ ಕಾರ್ಮಿಕರ ರಕ್ಷಣೆಗಾಗಿ 15 ಗಂಟೆ ಅಹೋರಾತ್ರಿ ಕಾರ್ಯಾಚರಣೆ ನಡೆಸಿದರು.

ಬೆಳಗಾವಿ, ಕಲಬುರಗಿಯಿಂದ ರಾಜ್ಯ ವಿಪತ್ತು ಕಾರ್ಯನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಮಧ್ಯರಾತ್ರಿ 2.30ಕ್ಕೆ ಮತ್ತು ಪುಣೆಯಿಂದ ರಾಷ್ಟ್ರೀಯ ವಿಪತ್ತು ಕಾರ್ಯ ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮಂಗಳವಾರ ಬೆಳಿಗ್ಗೆ 8ಕ್ಕೆ ಸ್ಥಳಕ್ಕೆ ಬಂದು ಕಾರ್ಯಾಚರಣೆಯಲ್ಲಿ ಭಾಗಿಯಾದವು.

ವಿಜಯಪುರದ ಅಲಿಯಾಬಾದ್ ಕೈಗಾರಿಕಾ ಪ್ರದೇಶದ 'ರಾಜ್ ಗುರು ಫುಡ್' ಗೋದಾಮಿನಲ್ಲಿ ಸಿಲುಕಿದ್ದ ಕಾರ್ಮಿಕರ ರಕ್ಷಣೆಗೆ ಎನ್‌ಡಿಆರ್‌ಎಫ್, ಎಸ್‌ಟಿಆರ್‌ಎಫ್, ಅಗ್ನಿ ಶಾಮಕ, ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

'ಅವಘಡಕ್ಕೆ ನಿರ್ಲಕ್ಷ್ಯ ಕಾರಣ'

ಗೋದಾಮಿನಲ್ಲಿ ಕಾರ್ಮಿಕರ ರಕ್ಷಣೆಗೆ ಯಾವುದೇ ಮುಂಜಾಗ್ರತಾ ಕ್ರಮಗಳಿರಲಿಲ್ಲ ಮತ್ತು ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ ಇರಲಿಲ್ಲ. ಇದರ ಬಗ್ಗೆ ನಿರ್ಲಕ್ಷ್ಯ ತೋರಿದ್ದ ಆರೋಪದ ಮೇಲೆ ಗೋದಾಮಿನ ಮಾಲೀಕ ಕಿಶೋರ ಜೈನ್ ಮತ್ತು ಮೇಲ್ವಿಚಾರಕ ಪ್ರವೀಣಚಂದ್ರ ಶ್ರೀವೇದಿ ವಿರುದ್ಧ ವಿಜಯಪುರ ಎಪಿಎಂಸಿ ಠಾಣೆಯಲ್ಲಿ ದೂರು ದಾಖಲಾಗಿದೆ.

'ರಾಜಗುರು ಫುಡ್ಸ್' ಎಂಬುದು ರೈತರಿಂದ ನೇರವಾಗಿ ಮೆಕ್ಕೆಜೋಳ ಖರೀದಿಸಿ, ಶುಚಿಗೊಳಿಸಿ ಗೋಣಿ ಚೀಲದಲ್ಲಿ ಪ್ಯಾಕಿಂಗ್ ಮಾಡಿ, ಮಾರಾಟ ಮಾಡುವ ಸಂಸ್ಥೆಯಾಗಿದ್ದು ಇಲ್ಲಿ ಪ್ಯಾಕಿಂಗ್ ಘಟಕ, ಗೋದಾಮು ಇವೆ.

ಸುಮಾರು 50 ಕಾಯಂ ಸಿಬ್ಬಂದಿ ಇದ್ದಾರೆ. 150 ಮಂದಿ ಬಿಹಾರದ ಕಾರ್ಮಿಕರು ಗುತ್ತಿಗೆ ಆಧಾರದಲ್ಲಿ ಹಲವು ವರ್ಷಗಳಿಂದ ಕೂಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪ್ರತಿ ದಿನಕ್ಕೆ ₹500 ರಿಂದ ₹600 ಕೂಲಿ ಕೊಡಲಾಗುತ್ತದೆ. ಈ ಗೋದಾಮಿನ ಒಳಗೆ 500 ರಿಂದ 600 ಟನ್ ಸಾಮರ್ಥ್ಯದ ಮೂರು ಸರಣಿ ಟ್ಯಾಂಕ್‌ಗಳು (ಮೆಕ್ಕೆಜೋಳ ಸ್ವಚ್ಛಗೊಳಿಸಿ, ಸಂಗ್ರಹಿಸುವ) ಇವೆ.

ಕರ್ನಾಟಕ ಸರ್ಕಾರದ ಪ್ರತಿಪಾದನೆ • ಕೇಂದ್ರಕ್ಕೆ ಪತ್ರ

ಮೀಸಲಾತಿ ಹೆಚ್ಚಿಸುವ ಅಧಿಕಾರ ರಾಜ್ಯಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಸರ್ಕಾರಕ್ಕೆ ಮೀಸಲಾತಿ ಹೆಚ್ಚಿಸುವ ಅಧಿಕಾರ ಇದೆ ಎಂದು ಬಲವಾಗಿ ಪ್ರತಿಪಾದಿಸಿರುವ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಈ ವರ್ಷದ ನವೆಂಬರ್ 23ರಂದು ಪತ್ರ ಬರೆದಿದೆ.

ಲೋಕಸಭೆಯಲ್ಲಿ ಕೋಲಾರದ ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ಅವರು ಮಂಗಳವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವ ಡಾ.ವೀರೇಂದ್ರ ಕುಮಾರ್ ಈ ಸಂಬಂಧ ಉತ್ತರ ನೀಡಿದ್ದಾರೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯವರಿಗೆ ಈಗ ಒಳ ಮೀಸಲಾತಿ ಇಲ್ಲ ಎಂದೂ ಸ್ಪಷ್ಟಪಡಿಸಿದ್ದಾರೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದರೂ ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿದ್ದ ಎಡಗೈ–ಬಲಗೈ ಸಮುದಾಯದವರಿಗೆ ಒಳಮೀಸಲಾತಿ ಕಲ್ಪಿಸುವ ತೀರ್ಮಾನವನ್ನು ಹಿಂದಿನ ಬಿಜೆಪಿ ಸರ್ಕಾರವು ಮಾರ್ಚ್ ತಿಂಗಳಲ್ಲಿ ಕೈಗೊಂಡಿತ್ತು. ಎಡಗೈ ಒಳಪಂಗಡಕ್ಕೆ ಶೇ 6, ಬಲಗೈಗೆ ಶೇ 5.5, ಲಂಬಾಣಿ, ಬೋವಿ, ಕೊರಮ, ಕೊರಚ ಒಳಪಂಗಡಗಳಿಗೆ ಶೇ 4.5 ಹಾಗೂ ಈ ಎಲ್ಲ ಗುಂಪಿಗೆ ಸೇರದ ಒಳಪಂಗಡಗಳಿಗೆ ಶೇ 1 ಮೀಸಲಾತಿ ಹಂಚಿಕೆ ಮಾಡಲಾಗಿತ್ತು.

'ರಾಜ್ಯದಲ್ಲಿ ಪರಿಶಿಷ್ಟ ಜಾತಿಯ 101 ಒಳ ಪಂಗಡಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿ ಒಳಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿ ಮಾಡುವುದು ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಸಾಮಾಜಿಕ ನ್ಯಾಯ ಸಚಿವಾಲಯಕ್ಕೆ ಮಾರ್ಚ್ 28ರಂದು ಪತ್ರ ಬರೆದಿತ್ತು. ಆಂಧ್ರ ಪ್ರದೇಶ ಸರ್ಕಾರ ಹಾಗೂ ಇ.ವಿ. ಚಿನ್ನಯ್ಯ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಪರಿಶಿಷ್ಟ ಜಾತಿಗಳ ಇನ್ನಷ್ಟು ಒಳ ವರ್ಗೀಕರಣಕ್ಕೆ ಅವಕಾಶ ಇಲ್ಲ ಎಂದು 2004ರ ನವೆಂಬರ್‌ನಲ್ಲಿ ತೀರ್ಪು ನೀಡಿತ್ತು. ಈ ನಡುವೆ, ಪಂಜಾಬ್ ಸರ್ಕಾರ ಹಾಗೂ ದೇವಿಂದರ್ ಸಿಂಗ್ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ಸಂವಿಧಾನ ಪೀಠವು ಇ.ವಿ. ಚಿನ್ನಯ್ಯ ಪ್ರಕರಣದ ಆದೇಶದ ಮರುಪರಿಶೀಲನೆ ಅಗತ್ಯವಿದೆ ಎಂದು 2020ರ ಆಗಸ್ಟ್‌ನಲ್ಲಿ ಅಭಿಪ್ರಾಯ ಪಟ್ಟಿತ್ತು. ಈ ವಿಷಯವನ್ನು ಏಳು ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸುವಂತೆ ಸಂವಿಧಾನ ಪೀಠವು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಶಿಫಾರಸು ಮಾಡಿತ್ತು. ಈ ಪ್ರಕರಣದ ವಿಚಾರಣೆಯನ್ನು ಜನವರಿ 17ರಂದು ನಡೆಸಲು ಸುಪ್ರೀಂ ಕೋರ್ಟ್ ಪಟ್ಟಿ ಮಾಡಿದೆ ಎಂದು ವೀರೇಂದ್ರ ಕುಮಾರ್ ತಿಳಿಸಿದರು.

ಚಂದ್ರಯಾನ–3: ನೋದನ ಘಟಕ ಮರಳಿ ಭೂಕಕ್ಷೆಗೆ

ಬೆಂಗಳೂರು (ಪಿಟಿಐ): 'ಚಂದ್ರಯಾನ–3' ಬಾಹ್ಯಾಕಾಶ ಕಾರ್ಯಕ್ರಮದ ನೋದನ ಘಟಕವನ್ನು (ಪ್ರೊಪಲ್ಷನ್ ಮಾಡ್ಯೂಲ್) ಚಂದ್ರನ ಕಕ್ಷೆಯಿಂದ ಭೂಮಿಯ ಕಕ್ಷೆಯೊಂದಕ್ಕೆ ಮರಳಿ ಸೇರಿಸುವ ವಿಶಿಷ್ಟ ಪ್ರಯೋಗ ಮಾಡಲಾಗಿದೆ ಎಂದು ಇಸ್ರೊ ಹೇಳಿದೆ.

ಚಂದಿರನ ದಕ್ಷಿಣ ಧ್ರುವದ ಮೇಲ್ಮೈನಲ್ಲಿ ಗಗನನೌಕೆಯ ಸಾಫ್ಟ್ ಲ್ಯಾಂಡಿಂಗ್ ಮಾಡುವುದು ಈ ಚಂದ್ರಯಾನ–3ರ ಉದ್ದೇಶವಾಗಿತ್ತು. ಲ್ಯಾಂಡರ್ (ವಿಕ್ರಮ್) ಹಾಗೂ ರೋವರ್ (ಪ್ರಜ್ಞಾನ್) ನೋದನ ಘಟಕದಿಂದ ಬೇರ್ಪಟ್ಟು, ಚಂದ್ರನ ದಕ್ಷಿಣ ಧ್ರುವದತ್ತ ಪಯಣ ಬೆಳೆಸಿದ್ದವು.

ನಂತರ, ನೋದನ ಘಟಕವು ಚಂದ್ರನ ಕಕ್ಷೆಯಲ್ಲಿಯೇ ಪರಿಭ್ರಮಿಸುತ್ತಿತ್ತು. ಈ ಘಟಕದಲ್ಲಿ ಅಳವಡಿಸಲಾಗಿದ್ದ 'ಸ್ಪೆಕ್ಟ್ರೊ ಪೊಲ್ಯಾರಿಮೆಟ್ರಿ ಆಫ್ ಹ್ಯಾಬಿಟೆಬಲ್ ಪ್ಲಾನೆಟ್ ಅರ್ಥ್' (ಎಸ್‌ಎಚ್‌ಎಪಿಇ) ಎಂಬ ಸಾಧನವು ತನ್ನ ಕಾರ್ಯಾಚರಣೆ ಆರಂಭಿಸಿತ್ತು.

ನೋದನ ಘಟಕವು ಮೂರು ತಿಂಗಳು ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿತ್ತು. ಈ ಮೂರು ತಿಂಗಳಲ್ಲಿ 'ಎಚ್‌ಎಚ್‌ಎಪಿಇ' ಸಾಧನವನ್ನು ಬಳಸಿಕೊಂಡು, ಭವಿಷ್ಯದ ಕಾರ್ಯಕ್ರಮಗಳಿಗಾಗಿ ಬಾಹ್ಯಾಕಾಶ ವಿದ್ಯಮಾನಗಳ ಅಧ್ಯಯನ, ಮಾಹಿತಿ ಸಂಗ್ರಹಿಸುವ ಉದ್ದೇಶವನ್ನು ಹೊಂದಲಾಗಿತ್ತು ಎಂದು ಇಸ್ರೊ ತಿಳಿಸಿದೆ.

ಆದರೆ, ಉಡ್ಡಯನ ವಾಹನ 'ಎಲ್‌ವಿಎಂ3', ನೋದನ ಘಟಕವನ್ನು ಅತ್ಯಂತ ಕರಾರುವಾಕ್ಕಾಗಿ ಕಕ್ಷೆಯಲ್ಲಿ ಸೇರಿಸಿತ್ತು. ಇದರ ಫಲವಾಗಿ, ಒಂದು ತಿಂಗಳ ಕಾರ್ಯಾಚರಣೆ ನಂತರವೂ ನೋದನ ಘಟಕದಲ್ಲಿ 100 ಕೆ.ಜಿಗೂ ಅಧಿಕ ಇಂಧನ ಲಭ್ಯವಿತ್ತು.

ಈ ಹೆಚ್ಚುವರಿ ಇಂಧನ ಲಭ್ಯತೆ ಬಳಸಿಕೊಂಡು, ಚಂದ್ರನ ಕಕ್ಷೆಯಿಂದ ಭೂ ಕಕ್ಷೆಗೆ ನೋದನ ಘಟಕವನ್ನು ಮರಳಿ ನೂಕುವಂತೆ ಮಾಡಲು ನಿರ್ಧರಿಸಿ, ಈ ಪ್ರಯೋಗ ನಡೆಸಲಾಯಿತು ಎಂದು ಇಸ್ರೊ ಪ್ರಕಟಣೆ ತಿಳಿಸಿದೆ.

ಬಿಜೆಪಿ ಮುಖಂಡ ಪೃಥ್ವಿಸಿಂಗ್ ಮೇಲೆ ಹಲ್ಲೆ ಪ್ರಕರಣ

ಸದನದಲ್ಲೇ ಉತ್ತರಿಸುವೆ: ಲಕ್ಷ್ಮಿ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಪೃಥ್ವಿಸಿಂಗ್ ಅವರ ಮೇಲಿನ ಹಲ್ಲೆಗೆ ಸಂಬಂಧಿಸಿ ರಾಜೀನಾಮೆ ನೀಡುವಂತೆ ಬಿಜೆಪಿ ಮುಖಂಡರು ಆಗ್ರಹಿಸಿದ್ದಾರೆ. ಅವರಿಗೆ ಸದನದಲ್ಲೇ ಉತ್ತರಿಸುತ್ತೇನೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

'ಪ್ರಕರಣ ಉದ್ದೇಶಪೂರ್ವಕವಾಗಿದೆ. ಪೃಥ್ವಿಸಿಂಗ್ ಮನೆಗೆ ಹೋಗಿ, ಮನೆಯ ಕರಾರುಪತ್ರ ಕೊಡುವಂತೆ ನಮ್ಮವರು ಕೇಳಿದ್ದು ನಿಜ. ಉಳಿದ ವಿಷಯಗಳ ಬಗ್ಗೆ ಪೊಲೀಸರು ತನಿಖೆ ನಡೆಸುವರು. ಸತ್ಯ ಹೊರಬರುವುದು' ಎಂದು ಸುದ್ದಿಗಾರರಿಗೆ ತಿಳಿಸಿದರು.

ಪೃಥ್ವಿಸಿಂಗ್ ಮೇಲಿನ ಹಲ್ಲೆ ಪ್ರಕರಣದಲ್ಲಿ ಚನ್ನರಾಜ ಹಟ್ಟಿಹೊಳಿ ಅವರನ್ನು ಬಂಧಿಸದಿದ್ದಲ್ಲಿ, ಉಗ್ರ ಹೋರಾಟ ಮಾಡಲಾಗುವುದು.
ಆರ್. ಅಶೋಕ ವಿರೋಧ ಪಕ್ಷದ ನಾಯಕ

ಪೃಥ್ವಿಸಿಂಗ್ ಅವರ ಮೇಲೆ ಹಲ್ಲೆ ಮಾಡಿದ ಪ್ರಕರಣದ ಸಮಗ್ರ ತನಿಖೆ ಮಾಡಿ ವರದಿ ನೀಡಲು ಪೊಲೀಸರಿಗೆ ಸೂಚಿಸಿದ್ದೇನೆ. ಅವರ ವರದಿ ಆಧರಿಸಿ ಕ್ರಮ ಕೈಗೊಳ್ಳುತ್ತೇನೆ'
ಜಿ.ಪರಮೇಶ್ವರ, ಗೃಹ ಸಚಿವ

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರು ಅತಿ ಉತ್ಸಾಹದಲ್ಲಿದ್ದಾರೆ. ಅವರು ಚನ್ನರಾಜ ಮೇಲೆ ಮಾಡಿದ ಆರೋಪಗಳಿಗೆ 24 ಗಂಟೆಗಳಲ್ಲಿ ಉತ್ತರ ಸಿಗಲಿದೆ' ಎಂದರು.

ಚಿಲ್ಲರೆ ರಾಜಕಾರಣ ಮಾಡಲ್ಲ: 'ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ, ಪರಿಶಿಷ್ಟ ಸಮಾಜದ ಮುಖಂಡ ಪೃಥ್ವಿಸಿಂಗ್ ಅವರ ಮೇಲಿನ ಹಲ್ಲೆಗೆ ವಿಚಾರದಲ್ಲಿ, ಪೊಲೀಸರ ನಡೆ ಖಂಡನಾರ್ಹ. ಅವರಿಗೆ ಎಚ್ಚರಿಕೆ ಕೊಡುತ್ತೇನೆ. ತಕ್ಷಣ ಎಫ್‌ಐಆರ್ ಮಾಡಿ ತನಿಖೆ ನಡೆಸಬೇಕು' ಎಂದು ಶಾಸಕ ರಮೇಶ ಜಾರಕಿಹೊಳಿ ಆಗ್ರಹಿಸಿದರು.

'ಪೊಲೀಸರು ಈ ಪ್ರಕರಣದ ಸರಿಯಾದ ಕ್ರಮ ವಹಿಸದೇ ಇದ್ದರೆ ನ್ಯಾಯಾಲಯದ ಮೂಲಕ ಸಿಬಿಐ ತನಿಖೆಗೆ ಕೋರುತ್ತೇವೆ. ದೂರು ಕೊಡದಿದ್ದರೂ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಮಾಡಬಹುದು. ಆರೋಪ ಸುಳ್ಳಿದ್ದರೆ ಬಿ– ರಿಪೋರ್ಟ್ ಹಾಕಬಹುದಿತ್ತು. ಆದರೆ, ಹಾಗೆ ಮಾಡಿಲ್ಲ' ಎಂದರು.

'ಪೃಥ್ವಿಸಿಂಗ್ ವಿಚಾರದಲ್ಲಿ ನಾನು ಯಾರ ಮೇಲೂ ಈಗ ಆರೋಪ ಮಾಡುವುದಿಲ್ಲ. ತನಿಖೆ ನಡೆದ ಬಳಿಕ ಮಾತನಾಡುತ್ತೇನೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದು ಏನನ್ನೂ ಹೇಳುವುದಿಲ್ಲ. ರಾಜಕಾರಣ ಬೇರೆ, ವೈಯಕ್ತಿಕ ಜಗಳ ಬೇರೆ. ಸುಳ್ಳು ಹೇಳಬೇಡವೆಂದು ಪೃಥ್ವಿಸಿಂಗ್ ಅವರಿಗೂ ಹೇಳಿದ್ದೇನೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಉದ್ಯೋಗಾವಕಾಶ: ಸಂಸ್ಥೆಯಲ್ಲಿ ಸೇವಾ ತರಬೇತಿಯೊಂದಿಗೆ ಉದ್ಯೋಗವನ್ನು ಮಾಡಲು ಕನಿಷ್ಠ ವಿದ್ಯಾರ್ಹತೆ SSLC, PUC, Degree ಆಗಿರುವ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳನ್ನು ಆಸ್ಪತ್ರೆಗಳಲ್ಲಿ ತರಬೇತಿಗೊಳಿಸಿ ಉದ್ಯೋಗಕ್ಕೆ ಆಯ್ಕೆ ಮಾಡಲಾಗುವುದು.ಸಂಬಳ ಪ್ರಾರಂಭದಲ್ಲಿ 15,000 ದಿಂದ 25,000 ತನಕ ಅನುಭವದ ಮೇರೆಗೆ ಕೊಡಲಾಗುವುದು. ಊಟ,ಹಾಸ್ಟೆಲ್,ಸಮವಸ್ತ್ರ ಉಚಿತ ಹಾಗೂ ಈಗಾಗಲೇ ತರಬೇತಿಹೊಂದಿ ಅನುಭವವಿರುವ ನರ್ಸ್,ಹೋಂನರ್ಸ್ ಗಳಿಗೆ ಉತ್ತಮ ಸಂಬಳ ಮತ್ತು ಮಗುಬಾಣಂತಿ ಆರೈಕೆಗಾಗಿ ಸಂಪರ್ಕಿಸಿರಿ. ದಾಸ್ ಸೇವಾಸಂಸ್ಥೆ(ರಿ) (ಸರಕಾರಿ ನೋಂದಾಯಿತ ಸಂಸ್ಥೆ) ಬೆಂಗಳೂರು: ಕೋರಮಂಗಲ:8431298241, ಶೇಷಾದ್ರಿಪುರಂ:9242730143, ಮಂಗಳೂರು:9343568915, ಮೈಸೂರು:9243306815, ಹುಬ್ಬಳ್ಳಿ:9242302918, ಬೆಳಗಾಂ:9242096219, ಹಾಸನ:9241324003, ಶಿವಮೊಗ್ಗ:9241127545, ದಾವಣಗೆರೆ:7760164111, ಬಳ್ಳಾರಿ:9972851518

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಬೆಂಗಳೂರಿನಲ್ಲಿರುವ SLV ಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18ರಿಂದ45). ಊಟ ವಸತಿಯೊಂದಿಗೆ ಟ್ರೈನಿಂಗ್ ಕೊಟ್ಟು ಸಂಬಳ 10000/ ರಿಂದ 20000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆ ಮಾಡಿ. 7019869181, 9886922255

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 99457191526

Domestic Helpers / Housekeeping

ಬೆಂಗಳೂರಿನ ಜೆಪಿ ನಗರದ ಮನೆಯಲ್ಲೇ ಉಳಿದುಕೊಂಡು ಮನೆಕೆಲಸ ಮಾಡುವ, ಕನ್ನಡ ಅಥವಾ ತೆಲುಗು ಅಥವಾ ತಮಿಳು ಮಾತನಾಡುವ ದಂಪತಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ: 9986071243

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 8050198999, 6366430266

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ12,000- 17,000, 8951315839, 7022770052

ಭವಿಷ್ಯ

Astrology

"ಕೆಲಸ ಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಸಾರ್ವಜನಿಕ ಪ್ರಕಟಣೆ

PUBLIC NOTICE
BEFORE THE KARNATAKA STATE CONSUMER DISPUTES REDRESSAL COMMISSION BASAVA BHAVAN, HIGH GROUNDS BANGALORE-560001
First Appeal No. 1930/2022(Against the order dated 11 Aug 2022 in Complaint Number CC/116/2021 of the District Forum Bangalore 2nd Additional)
Umashankar C.L.
Petitioner/Complainant/ Appellant
Versus
M/s Sai Cars, Party/ Respondents(s)
To
Opposite Party / Respondent Name:
1 . M/s Sai Cars,
No. 25, old No.36, SMRS Tower, 80ft. Road, Revenue Lay out, Radhakrishna Layout, Padmanabhanagar, Bengaluru 560 070.
Whereas, the Appellant has filed the above appeal against the orders passed by the 2nd Additonal District Consumer Comission, Bangalore in complaint No.116/2021 dated: 11/08/2022 You are hereby notified to appear before this Commission in person or through a pleader or person authorized to answer all the material facts relating to the Appeal on 21st December, 2023 at 11.00 AM.
Take notice that in case of default of your appearance on the day mentioned above Appeal will be heard and determined in your absence.
Given under the hand and seal of this Commission on this 4th December. 2023
By order of the Commission,
ASST.REGISTRAR- CUM-ASST. ADMN. OFFICER K.S.C.D.R.C, BANGALORE: 560001

ಪ್ರವಾಸ

Travel

10 ದಿನಗಳ ಗುಜರಾತ್. 8 ದಿನಗಳ ಕಾಶಿಯಾತ್ರೆ. 12 ದಿನಗಳ ಮಧ್ಯಪ್ರದೇಶ. 6 ದಿನಗಳ ದುಬೈ ಪ್ರವಾಸ. ಶ್ರೀನಂದಿ ಹಾಲಿಡೇಸ್ 9740228186 9980270467

ಶಿವನಂದಿ ಟ್ರಾವೆಲ್ಸ್,(ರಿ.) ಹನುಮಂತನಗರ,ಬೆಂಗಳೂರು 17.1.2024 5ದಿನಗಳ ತಮಿಳುನಾಡು:ಮದುರೈ ತಿರುಪ್ಪರಕುಂಡ್ರಮ್ ಕನ್ಯಾಕುಮಾರಿ,ರಾಮೇಶ್ವರ ಶ್ರೀರಂಗಂ. 15.2.2024, 13ದಿನಗಳ ಗುಜರಾತ್, ಮಧ್ಯಪ್ರದೇಶ್: ಅಹಮದಾಬಾದ್ ನಿಷ್ಕಳಂಕ ಮಹದೇವ್ ದ್ವಾರಕ,ಮಾತೃಗಯ ಓಂಕಾರೇಶ್ವರ್ ಉಜ್ಜೈನಿ. 6.3.2024 12ದಿನಗಳ ಹರಿದ್ವಾರ್ ಮನಾಲಿ,ಕಟ್ರಾ ವೈಷ್ಣೋದೇವಿ ಹರಿದ್ವಾರ್,ಅಮೃತಸರ್. 21.3.2024 11ದಿನಗಳ ನೇಪಾಳ ಮುಕ್ತಿನಾಥ್: ಬಾಬಾಬೈದ್ಯನಾಥ್ ಗೊರಕ್‌ಪುರ ಸೋನಾಲಿಬಾರ್ಡರ್ ಲುಮ್‌ಬಿನಿ ಪೋಕ್ರಾ ಕಟ್ಮಂಡು ಮುಕ್ತಿನಾಥ್ ಮನೋಕಾಮನ ಚಿತ್ವಾನ್. ವಿಮಾನ/ಬಸ್ಸಿನಲ್ಲಿ. 9036056352 9481027363

ಇತರೆ

Books & Periodicals

ಶಾಂತಿ ಮತ್ತು ಕ್ಷಮೆಯ ಧರ್ಮವಾಗಿದೆ 'ಇಸ್ಲಾಮ್'. ಇಸ್ಲಾಮಿನ ಕುರಿತು ಸಂಶಯವೇ? ಮುಸ್ಲಿಮರ ಬಗ್ಗೆ ತಪ್ಪು ಕಲ್ಪನೆಯೇ? ಧರ್ಮ ಅಧ್ಯಯನದ ಜಿಜ್ಞಾಸೆಯೇ? ಓದಲು ಪುಸ್ತಕಗಳನ್ನು ರವಾನಿಸಲಾಗುವುದು. ಪೂರ್ಣ ಹೆಸರು, ಸ್ಪಷ್ಟ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಬರೆಯಿರಿ. ಇಸ್ಮಿಕಾ, ಪಿ.ಬಿ.ನಂ. 229, ಮಂಗಳೂರು-1, ಮೊಬೈಲ್: 9060341799. Email:info@ismika.com, Web:www.ismika.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE

BOOK NOW
www.dhclassifieds.com
Book your ad with us now! For more details contact:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿ: ದಕ್ಷಿಣ ಕೊರಿಯಾಗೆ ಸೋಲು

ಅರಿಜಿತ್ ಹ್ಯಾಟ್ರಿಕ್, ಭಾರತಕ್ಕೆ ಜಯ

ಕ್ವಾಲಾಲಂಪುರ (ಪಿಟಿಐ): ಅರಿಜಿತ್ ಸಿಂಗ್ ಹುಂಡಲ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡ, ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ ಮಂಗಳವಾರ ದಕ್ಷಿಣ ಕೊರಿಯಾ ತಂಡದ ವಿರುದ್ಧ ಅಧಿಕಾರಯುತ ಆಟದ ಪ್ರದರ್ಶನ ನೀಡಿ 4–2 ಗೋಲುಗಳಿಂದ ಜಯಗಳಿಸಿತು.

ನ್ಯಾಷನಲ್ ಹಾಕಿ ಕ್ರೀಡಾಂಗಣದಲ್ಲಿ ನಡೆದ 'ಸಿ' ಗುಂಪಿನ ಈ ಪಂದ್ಯದಲ್ಲಿ ಹುಂಡಲ್ ಅವರು 11, 16 ಮತ್ತು 41ನೇ ನಿಮಿಷ ಚೆಂಡನ್ನು ಗುರಿಮುಟ್ಟಿಸಿದರು. ಅಮನ್‌ದೀಪ್ ಪಂದ್ಯದ 30ನೇ ನಿಮಿಷ ಭಾರತದ ಉಳಿದೊಂದು ಗೋಲನ್ನು ಗಳಿಸಿದರು.

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು –ಹಾಕಿ ಇಂಡಿಯಾ ಎಕ್ಸ್ ಚಿತ್ರ

ಕೊರಿಯಾ ಪರ ಡೊಹ್ಯೂನ್ ಲಿಮ್ (38ನೇ) ಮತ್ತು ಮಿನ್‌ಕ್ವೊನ್ ಕಿಮ್ (45ನೇ) ಅವರು ಗೋಲುಗಳನ್ನು ಗಳಿಸಿದರು.

ಎರಡು ವರ್ಷ ಹಿಂದೆ ಭುವನೇಶ್ವರದಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಭಾರತ ತಂಡ ಈ ಪಂದ್ಯದಲ್ಲಿ ಉತ್ತಮ ಆರಂಭ ಪಡೆಯಿತು.

ಮೊದಲ ಕ್ವಾರ್ಟರ್‌ನಲ್ಲಿ ಹುಂಡಲ್ ಅವರು ಪೆನಾಲ್ಟಿ ಕಾರ್ನರ್‌ಅನ್ನು ಗೋಲಾಗಿ ಪರಿವರ್ತಿಸಿ ಭಾರತಕ್ಕೆ ಮುನ್ನಡೆ ಒದಗಿಸಿದರು. ಎರಡನೇ ಕ್ವಾರ್ಟರ್‌ನಲ್ಲೂ ಭಾರತದ ಹಿಡಿತ ಮುಂದುವರಿಯಿತು. ಹುಂಡಲ್ ಮತ್ತು ಅಮನ್‌ದೀಪ್ ಫೀಲ್ಡ್ ಗೋಲುಗಳ ಮೂಲಕ ವಿರಾಮದ ವೇಳೆಗೆ ಭಾರತದ ಮುನ್ನಡೆಯನ್ನು 3–0ಗೆ ಹೆಚ್ಚಿಸಿದರು.

ಡೊಹ್ಯುನ್ ಗಳಿಸಿದ ಗೋಲಿನ ಮೂಲಕ ಕೊರಿಯಾ ಮೂರನೇ ಕ್ವಾರ್ಟರ್‌ನಲ್ಲಿ ಹಿನ್ನಡೆ ತಗ್ಗಿಸಿತು. ಆದರೆ ಹುಂಡಲ್ ಅವರು ಇನ್ನೊಂದು ಫೀಲ್ಡ್ ಗೋಲು ಗಳಿಸಿ ಹ್ಯಾಟ್ರಿಕ್ ಪೂರೈಸಿ ಪಂದ್ಯ ಕೈಜಾರದಂತೆ ತಡೆದರು.

4–1 ಮುನ್ನಡೆ ಪಡೆದಿದ್ದ ಭಾರತ ಕೊನೆಯ ಕ್ವಾರ್ಟರ್‌ನಲ್ಲಿ ಒಂದಿಷ್ಟು ನಿಧಾನಗತಿಯಲ್ಲಿ ಆಡಿತು. ಈ ವೇಳೆ ಕೊರಿಯಾ ತಂಡ ಹೆಚ್ಚಿನ ಪ್ರಯತ್ನ ನಡೆಸಿತು. ಮಿನ್‌ಕ್ವೊನ್ ಚೆಂಡನ್ನು ಗುರಿತಲುಪಿಸಿ ತಂಡದ ಹಿನ್ನಡೆಯನ್ನು ತಗ್ಗಿಸುವಲ್ಲಿ ಯಶಸ್ವಿ ಆದರು.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ ತಂಡ ಗುಂಪಿನ ತನ್ನ ಮುಂದಿನ ಪಂದ್ಯವನ್ನು ಸ್ಪೇನ್ ವಿರುದ್ಧ ಗುರುವಾರ ಆಡಲಿದೆ.

ಭಾರತ ಈ ಟೂರ್ನಿಯಲ್ಲಿ ಎರಡು ಬಾರಿ (2001, 2016) ಚಾಂಪಿಯನ್ ಆಗಿದ್ದು, ಒಮ್ಮೆ (1997) ರನ್ನರ್ಸ್ ಅಪ್ ಆಗಿದೆ.

ಭಾರತ ವನಿತೆಯರಿಗೆ ಮಣಿದ ಕಿವೀಸ್

ಸ್ಯಾಂಟಿಯಾಗೊ (ಚಿಲಿ): ಭಾರತ ತಂಡ, ಜೂನಿಯರ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಮಂಗಳವಾರ 'ಸಡನ್ ಡೆತ್'ನಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತು. ನಿಗದಿತ ಅವಧಿಯ ಆಟದ ನಂತರ ಸ್ಕೋರ್ 3–3 ಸಮನಾಗಿದ್ದು, ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತ 3–2 ರಿಂದ ಜಯಿಸಿತು.

9 ರಿಂದ 16ರವರೆಗಿನ ಸ್ಥಾನ ನಿರ್ಧಾರಕ್ಕೆ ಈ ಪಂದ್ಯಗಳನ್ನು ನಡೆಸಲಾಗುತ್ತಿದ್ದು, ಅಷ್ಟೇನೂ ಮಹತ್ವ ಹೊಂದಿಲ್ಲ. 60 ನಿಮಿಷಗಳ ನಿಗದಿತ ಆಟದಲ್ಲಿ ಭಾರತದ ಪರ ರೋಪ್ನಿ ಕುಮಾರಿ, ಜ್ಯೋತಿ ಚೆಟ್ರಿ ಮತ್ತು ಸುನೆಲಿಟಾ ಟೊಪ್ಪೊ ಗೋಲುಗಳನ್ನು ಗಳಿಸಿದರು.

ನ್ಯೂಜಿಲೆಂಡ್ ತಂಡಕ್ಕೆ ಇಸಬೆಲ್ಲಾ ಸ್ಟೊರಿ, ಮೆಡೆಲಿನ್ ಹ್ಯಾರಿಸ್ ಮತ್ತು ರಿಯಾನಾ ಪೊ ಗೋಲುಗಳನ್ನು ತಂದಿತ್ತರು. 9 ರಿಂದ 12ರವರೆಗಿನ ಸ್ಥಾನ ನಿರ್ಧಾರಕ್ಕೆ ಭಾರತ ಗುರುವಾರ ನಡೆಯುವ ಪಂದ್ಯದಲ್ಲಿ ದಕ್ಷಿಣ ಕೊರಿಯಾ-ದಕ್ಷಿಣ ಆಫ್ರಿಕಾ ಪಂದ್ಯದ ವಿಜೇತರನ್ನು ಎದುರಿಸಲಿದೆ.

ಕರ್ನಾಟಕಕ್ಕೆ ಮಣಿದ ಮಿಜೋರಾಂ

ಅಹಮದಾಬಾದ್: ವಾಸುಕಿ ಕೌಶಿಕ್, ಕೃಷ್ಣಪ್ಪ ಗೌತಮ್ ಮತ್ತು ಮನೋಜ್ ಭಾಂಡಗೆ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಮಿಜೋರಾಂ ವಿರುದ್ಧ ಗೆಲುವು ಸಾಧಿಸಿತು.

ಗುಜರಾತ್ ಕಾಲೇಜ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಕರ್ನಾಟಕ 6 ವಿಕೆಟ್‌ಗಳಿಂದ ಮಿಜೋರಾಂ ತಂಡವನ್ನು ಮಣಿಸಿತು. ಆಡಿರುವ ಏಳು ಪಂದ್ಯಗಳ ಪೈಕಿ ಆರರಲ್ಲಿ ಗೆದ್ದು, 24 ಅಂಕಗಳೊಂದಿಗೆ ಕರ್ನಾಟಕ ತಂಡ ಎರಡನೇ ಸ್ಥಾನದಲ್ಲಿದೆ. ಹರಿಯಾಣ ತಂಡದ ಆಡಿರುವ ಏಳೂ ಪಂದ್ಯಗಳಲ್ಲಿ ಗೆದ್ದು ಅಗ್ರಸ್ಥಾನದಲ್ಲಿದೆ.

ಮೊದಲು ಬ್ಯಾಟಿಂಗ್ ಮಾಡಿದ ಮಿಜೋರಾಂ ತಂಡ, ಕರ್ನಾಟಕ ತಂಡದ ದಾಳಿಯೆದುರು 37.2 ಓವರ್‌ಗಳಲ್ಲಿ 124 ರನ್‌ಗೆ ಕುಸಿಯಿತು. 45 ರನ್‌ಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಜೋಸೆಫ್ ಲಾಲ್ತನ್ಮುಮಾ (37; 64ಎ, 4x2, 6x2) ಮತ್ತು ಕನ್ನಡಿಗ ಕೆ.ಸಿ.ಕಾರಿಯಪ್ಪ (36; 27ಎ, 4x2, 6x3) ಕೊಂಚ ಬಲ ತುಂಬಿದರು. ಕೌಶಿಕ್ 7 ರನ್‌ಗೆ 4 ವಿಕೆಟ್ ಪಡೆದು ಮಿಂಚಿದರು. ಮನೋಜ್ 19ಕ್ಕೆ 2 ಮತ್ತು ಗೌತಮ್ 49 ರನ್ನಿಗೆ 3 ವಿಕೆಟ್ ಪಡೆದರು.

ಸುಲಭ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ ಆರಂಭದಲ್ಲೇ

ವಿ.ಕೌಶಿಕ್

ಆಘಾತ ಎದುರಿಸಿತು. 24 ರನ್ ಗಳಿಸುವಷ್ಟರಲ್ಲಿ ಬಿ.ಆರ್.ಶರತ್ (2), ಅಭಿನವ್ ಮನೋಹರ್ (14), ಕೃಷ್ಣಪ್ಪ ಗೌತಮ್ (0) ಪೆವಿಲಿಯನ್ ಸೇರಿದ್ದರು. ಈ ಹಂತದಲ್ಲಿ ನಾಯಕ ಮಯಂಕ್ ಅಗರ್‌ವಾಲ್ (ಔಟಾಗದೆ 48; 42ಎ, 4x8) ಎಚ್ಚರಿಕೆಯ ಆಟವಾಡಿದರು. ಮತ್ತೊಂದೆಡೆ ಮನೋಜ್ ಭಾಂಡಗೆ 8 ಎಸೆತಗಳಲ್ಲಿ ಎರಡು ಸಿಕ್ಸರ್ ಮತ್ತು ಎರಡು ಬೌಂಡರಿ ಸೇರಿದಂತೆ 21 ರನ್ ಗಳಿಸಿ ಮೋಹಿತ್ ಜಾಂಗ್ರಾ ಅವರಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಅನುಭವಿ ಮನೀಷ್ ಪಾಂಡೆ (ಔಟಾಗದೇ 38; 40ಎ, 4x2, 6x2) ಅವರು ಮಯಾಂಕ್ ಜತೆಗೂಡಿ 17 ಎಸೆತಗಳಿರುವಂತೆ ಗೆಲುವಿನ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರು: ಮಿಜೋರಾಂ: 37.2 ಓವರ್‌ಗಳಲ್ಲಿ 124 (ಜೋಸೆಫ್ ಲಾಲ್ತನ್ಮುಮಾ 37, ಕೆ.ಸಿ.ಕಾರಿಯಪ್ಪ 36; ವಿ. ಕೌಶಿಕ್ 7ಕ್ಕೆ 4, ಮನೋಜ್ ಭಾಂಡಗೆ 19ಕ್ಕೆ 2, ಕೆ. ಗೌತಮ್ 49ಕ್ಕೆ 3). **ಕರ್ನಾಟಕ:** 17.1 ಓವರ್‌ಗಳಲ್ಲಿ 4 ವಿಕೆಟ್‌ಗೆ 126 (ಮಯಾಂಕ್ ಅಗರ್‌ವಾಲ್ ಔಟಾಗದೆ 48, ಮನೀಷ್ ಪಾಂಡೆ ಔಟಾಗದೇ 38; ಮೋಹಿತ್ ಜಾಂಗ್ರಾ 37ಕ್ಕೆ 3).

ಫಲಿತಾಂಶ: ಕರ್ನಾಟಕಕ್ಕೆ 6 ವಿಕೆಟ್ ಜಯ

ವಾಲಿಬಾಲ್ ಹಬ್ಬಕ್ಕೆ ಬೆಂಗಳೂರು ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಮೊದಲ ಬಾರಿಗೆ ನಡೆಯುವ ಎಫ್‌ಐವಿಬಿ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನ ಆತಿಥ್ಯಕ್ಕೆ ಬೆಂಗಳೂರು ಸಜ್ಜಾಗಿದೆ.

ಕೂಟದ 19ನೇ ಆವೃತ್ತಿಯು ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾಗಲಿದೆ. 2023ರ ಪ್ರೈಮ್ ವಾಲಿಬಾಲ್ ಲೀಗ್‌ನ (ಪಿವಿಎಲ್) ಚಾಂಪಿಯನ್ ತಂಡವಾದ ಅಹಮದಾಬಾದ್ ಡಿಫೆಂಡರ್ಸ್ ಈ ಕೂಟದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದು, ಪ್ರಶಸ್ತಿ ಗೆಲ್ಲುವ ತವಕದಲ್ಲಿದೆ.

ಅಹಮದಾಬಾದ್ ಡಿಫೆಂಡರ್ಸ್ (ಭಾರತ) ತಂಡದೊಂದಿಗೆ ಹಾಲಿ ಚಾಂಪಿಯನ್ ಸರ್ ಸಿಕೋಮಾ ಪೆರುಗಿಯಾ (ಇಟಲಿ), ಸದಾ ಕ್ರೂಝೈರೊ ವೊಲಿ ಮತ್ತು ಇಟಾಂಬೆ ಮಿನಾಸ್ ಟೆನಿಸ್ ಕ್ಲಬ್ (ಬ್ರೆಜಿಲ್), ಸುಂಟೋರಿ ಸನ್‌ಬರ್ಡ್ಸ್ ಕ್ಲಬ್ (ಜಪಾನ್) ಹಾಗೂ ಹಾಲ್ಕ್‌ಬ್ಯಾಂಕ್ ಸ್ಪೋರ್ ಕುಲುಬು (ಟರ್ಕಿ) ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ. ಡಿಫೆಂಡರ್ಸ್ ತಂಡವನ್ನು ಮುತ್ತುಸ್ವಾಮಿ ಅಪ್ಪಾವು ಮುನ್ನಡೆಸಲಿದ್ದು, ಕರ್ನಾಟಕದ ಸೃಜನ್ ಶೆಟ್ಟಿ, ಅಶ್ವಲ್ ರೈ, ಅಜ್ಮತ್ ಹಾಗೂ ಮನೋಜ್ ಸ್ಥಾನ ಪಡೆದಿದ್ದಾರೆ.

ಈ ಟೂರ್ನಿಯಲ್ಲಿ ಭಾರತದ ತಂಡವೊಂದು ಮೊದಲ ಬಾರಿಗೆ ಸ್ಪರ್ಧಿಸುತ್ತಿದೆ. ಡಿಫೆಂಡರ್ಸ್ ತಂಡದ ಆಟಗಾರರು ಕೆಲ ದಿನಗಳಿಂದ ಬೆಂಗಳೂರಿನಲ್ಲೇ ಅಭ್ಯಾಸ ನಡೆಸುತ್ತಿದ್ದು, ಪ್ರಬಲ ತಂಡಗಳಿಗೆ ಉತ್ತಮ ಪೈಪೋಟಿ ನೀಡುವ ಹುಮ್ಮಸ್ಸಿನಲ್ಲಿದ್ದಾರೆ. ಟೂರ್ನಿಯು ಡಿ.10ರ ವರೆಗೆ ನಡೆಯಲಿದ್ದು, ತಲಾ ಮೂರು ತಂಡಗಳ ಎರಡು ಗುಂಪುಗಳನ್ನು ರಚಿಸಲಾಗಿದೆ.

'ಎ' ತಂಡದಲ್ಲಿ ಡಿಫೆಂಡರ್ಸ್ ಜತೆ ಸರ್ ಸಿಕೋಮಾ ಮತ್ತು ಮಿನಾಸ್ ತಂಡವಿದೆ. ಆತಿಥೇಯ ತಂಡವು ಮೊದಲ ಲೀಗ್ ಪಂದ್ಯದಲ್ಲಿ ಇಟಾಂಬೆ ಮಿನಾಸ್ (ಡಿ.6) ಮತ್ತು ಎರಡನೇ ಪಂದ್ಯದಲ್ಲಿ ಸರ್ ಸಿಕೋಮಾ ತಂಡವನ್ನು ಎದುರಿಸಲಿದೆ. ಡಿ.9 ರಂದು ಸೆಮಿಫೈನಲ್, 10ರಂದು ಫೈನಲ್ ಹಾಗೂ ಮೂರನೇ ಸ್ಥಾನ ನಿರ್ಣಯದ ಪಂದ್ಯಗಳು ನಡೆಯಲಿವೆ. ಇದು ₹ 2.91 ಕೋಟಿ ಬಹುಮಾನ ಮೊತ್ತದ ಟೂರ್ನಿ.

ಇಂದಿನ ಪಂದ್ಯಗಳು
ಹಾಲ್ಕ್‌ಬ್ಯಾಂಕ್ ಸ್ಪೋರ್–ಸುಂಟೋರಿ ಸನ್‌ಬರ್ಡ್ಸ್ (ಸಂಜೆ 5)
ಅಹಮದಾಬಾದ್ ಡಿಫೆಂಡರ್ಸ್–ಇಟಾಂಬೆ ಮಿನಾಸ್ (ರಾತ್ರಿ 8.30)
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್ ಕೋಡ್ ಆ್ಯಪ್

ಬಾಕ್ಸಿಂಗ್: ಭಾರತಕ್ಕೆ ಮೂರು ಚಿನ್ನ

ನವದೆಹಲಿ (ಪಿಟಿಐ): ಭಾರತದ ಯುವ ಬಾಕ್ಸರ್‌ಗಳಾದ ಪಾಯಲ್, ನಿಶಾ ಮತ್ತು ಅಕಾನ್ಶಾ ಅವರು ಅರ್ಮೇನಿಯಾದ ಯೆರವಾನ್‌ನಲ್ಲಿ ನಡೆಯುತ್ತಿರುವ ಜೂನಿಯರ್ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡರು. ಭಾರತದ ಮಂಗಳವಾರ ಮುಕ್ತಾಯಗೊಂಡ ಈ ಕೂಟದಲ್ಲಿ ಒಟ್ಟು 17 ಪದಕಗಳನ್ನು ಗೆದ್ದು ಸ್ಫೂರ್ತಿಯುತ ಪ್ರದರ್ಶನ ನೀಡಿತು.

ಭಾರತದ ಯುವ ಪಡೆ ಈ ಕೂಟದಲ್ಲಿ ಮೂರು ಚಿನ್ನ, ಒಂಬತ್ತು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಗೆದ್ದುಕೊಂಡಿತು. ಭಾರತ ಮಹಿಳೆಯರ ತಂಡ ಈ ಕೂಟದಲ್ಲಿ ಜಂಟಿ ಎರಡನೇ ಸ್ಥಾನವನ್ನು ಪಡೆಯಿತು. ಪಾಯಲ್ 48 ಕೆ.ಜಿ ಫೈನಲ್‌ನಲ್ಲಿ ಅರ್ಮೇನಿಯಾದ ಪೆಟ್ರೊಸಿಯಾನ್ ಹೆಗಿನಿ ಅವರನ್ನು ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿ ದೇಶಕ್ಕೆ ಮೊದಲ ಚಿನ್ನ ಗಳಿಸಿಕೊಟ್ಟರು.

ದೆಹಲಿ: 100 ಮೀಟರ್ ಓಡಿದ್ದ ಏಕಾಂಗಿ ಅಥ್ಲೀಟ್ ಸಹ ಕಳಂಕಿತ!

ನವದೆಹಲಿ (ಪಿಟಿಐ): ಸೆಪ್ಟೆಂಬರ್‌ನಲ್ಲಿ ನಡೆದ ದೆಹಲಿ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ 100 ಮೀ. ಓಟವನ್ನು ಏಕಾಂಗಿಯಾಗಿ ಓಡಿದ್ದ ಅಥ್ಲೀಟ್ ಲಲಿತ್ ಕುಮಾರ್ ಸಹ ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಲುಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಏಜೆನ್ಸಿಯ (ನಾಡಾ) ಸಿಬ್ಬಂದಿ ಬಂದಿರುವುದು ಗೊತ್ತಾದ ತಕ್ಷಣ ಈ ಸ್ಪ್ರಿಂಟ್ ಓಟದಿಂದ ಏಳು ಮಂದಿ ಹಿಂದೆ ಸರಿದಿದ್ದರು. ಹೀಗಾಗಿ ಲಲಿತ್ ಒಂಟಿಯಾಗಿ ಈ ಓಟ ಓಡಿದ್ದರು. ಸೆ. 26ರಂದು ರೇಸ್ ನಂತರ ಕುಮಾರ್ ಅವರ ಮೂತ್ರದ ಮಾದರಿ ಪಡೆಯಲಾಗಿದ್ದು, ನಿಷೇಧಿತ ಸ್ಟಿರಾಯ್ಡ್ ಸೇವನೆ ಮಾಡಿರುವುದು ಪರೀಕ್ಷೆ ವೇಳೆ ಪತ್ತೆಯಾಗಿದೆ.

ಪ್ರೊ ಕಬಡ್ಡಿ ಲೀಗ್: ಯು ಮುಂಬಾ ಪರಾಭವ

ಗುಜರಾತ್ ಜೈಂಟ್ಸ್‌ಗೆ ಹ್ಯಾಟ್ರಿಕ್ ಗೆಲುವು

ಅಹಮದಾಬಾದ್: ಸೋನು ಜಗ್ಲಾನ್ ಅವರು ಉತ್ತಮ ರೈಡಿಂಗ್ ಪ್ರದರ್ಶನ ಮುಂದುವರಿಸಿದ್ದು, ಗುಜರಾತ್ ಜೈಂಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಮಂಗಳವಾರ 39–37 ಪಾಯಿಂಟ್‌ಗಳಿಂದ ಯು ಮುಂಬಾ ತಂಡದ ಮೇಲೆ ಜಯಗಳಿಸಿತು.

ಇದು ಆತಿಥೇಯ ಗುಜರಾತ್ ತಂಡಕ್ಕೆ ಸತತ ಮೂರನೇ ಜಯ.

ಟ್ರಾನ್ಸ್ ಸ್ಟೇಡಿಯಾದಲ್ಲಿ ನಡೆದ ಪಂದ್ಯದಲ್ಲಿ ಸೋನು 11 ಪಾಯಿಂಟ್ಸ್ ಗಳಿಸಿದರು. ತಂಡದ ಮೂರೂ ಗೆಲುವುಗಳಲ್ಲಿ ಅವರು ಸೂಪರ್ 10 ಸಾಧನೆಗೆ ಪಾತ್ರರಾದರು. ಅವರಿಗೆ ಉತ್ತಮ ಬೆಂಬಲ ನೀಡಿದ ರಾಕೇಶ್ ಸುಂಗ್ರೊಯಾ 9 ಪಾಯಿಂಟ್ಸ್ ಗಳಿಸಿದರು.

ಯು ಮುಂಬಾ ತಂಡದ ಪರ ಗುಮನ್ ಸಿಂಗ್ ಮತ್ತು ಇರಾನ್‌ನ ಆಟಗಾರ ಅಮಿರ್ ಮೊಹಮ್ಮದ್ ಝುಫರ್‌ದಾನೇಶ್ ತಲಾ 10 ಪಾಯಿಂಟ್ಸ್ ಗಳಿಸಿದರು.



ಗುಜರಾತ್ ಜೈಂಟ್ಸ್ ಮತ್ತು ಯು ಮುಂಬಾ ನಡುವೆ ಪೈಪೋಟಿ

ವಿರಾಮದ ವೇಳೆ ಯು ಮುಂಬಾ ಎರಡು ಪಾಯಿಂಟ್‌ಗಳ (18–16) ಮುನ್ನಡೆ ಪಡೆದಿತ್ತು. ವಿರಾಮದ ನಂತರ ಸೋನು ಅವರೇ 'ಟಚ್ ಪಾಯಿಂಟ್'ಗಳ ಮೂಲಕ ತಂಡಕ್ಕೆ ಮುನ್ನಡೆ ದೊರಕಿಸಿಕೊಟ್ಟರು. ಆ ಅಲ್ಪ ಮುನ್ನಡೆಯನ್ನು ತಂಡ ಉಳಿಸಿಕೊಂಡಿತು.

ಪಂದ್ಯದ ಕೊನೆಯ ಕ್ಷಣಗಳಲ್ಲಿ ಮುಂಬೈ ತೀವ್ರ ಹೋರಾಟ ನೀಡಿದಾಗ, ಸೋನು ಮುನ್ನಡೆಯನ್ನು ಉಳಿಸಿಕೊಳ್ಳಲು ನೆರವಾದರು. ಇದು ಪ್ರೊ ಕಬಡ್ಡಿ ಲೀಗ್‌ನಲ್ಲಿ ಫಜಲ್ ಅತ್ರಾಚಲಿ ಅವರಿಗೆ ನಾಯಕನಾಗಿ ನೂರನೇ ಪಂದ್ಯವಾಗಿದ್ದು, ಗೆಲುವಿನ ಸವಿಯುಂಡರು.

ತನಿಷ್ಕಾಗೆ ಕಂಚು

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಾಲಭೈರವ್ ಅವರು ವಿಜಯವಾಡದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 13 ವರ್ಷದೊಳಗಿನವರ ವಿಭಾಗದ ಬಾಲಕಿಯರ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗೆದ್ದರು. ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಪಶ್ಚಿಮ ಬಂಗಾಲದ ಪ್ರತೀತಿ ಪೌಲ್ ವಿರುದ್ಧ 11-9, 4-11, 4-11, 11-9, 7-11 ಸೋತರು.

ತಟಸ್ಥ ಧ್ವಜದಡಿ ಸ್ಪರ್ಧೆಗೆ ಮನವಿ

ಲುಸಾನ್ (ಸ್ವಿಜರ್ಲೆಂಡ್) (ಎಎಫ್‌ಪಿ): 2024ರ ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳಲ್ಲಿ ರಷ್ಯಾ ಮತ್ತು ಬೆಲಾರಸ್ ಅಥ್ಲೀಟ್‌ಗಳಿಗೆ ತಟಸ್ಥ ಧ್ವಜದಡಿ ಸ್ಪರ್ಧಿಸಲು ಅವಕಾಶ ನೀಡುವಂತೆ ಅಂತರರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಪ್ರತಿನಿಧಿಗಳು ಕರೆ ನೀಡಿದ್ದಾರೆ.

ಲುಸಾನ್‌ನಲ್ಲಿ ನಡೆದ ಒಲಿಂಪಿಕ್ ಶೃಂಗದಲ್ಲಿ ಈ ಸಂಬಂಧ ಸ್ಪಷ್ಟತೆ ನೀಡುವಂತೆ ಅವು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಗೆ (ಐಒಸಿ) ಮನವಿ ಮಾಡಿವೆ.

ಈ ದೇಶಗಳ ಕ್ರೀಡಾಪಟುಗಳಿಗೆ ಮುಂದಿನ ಬೇಸಿಗೆಯಲ್ಲಿ ಸ್ಪರ್ಧಿಸಲು ಅನುಮತಿ ನೀಡಲಾಗುತ್ತದೆಯೇ ಎಂಬ ಬಗ್ಗೆ ಐಒಸಿ ಇನ್ನೂ ಅಂತಿಮ ತೀರ್ಪು ನೀಡಬೇಕಾಗಿದೆ.

ಉಕ್ರೇನ್ ವಿರುದ್ಧ ರಷ್ಯಾ ಕಾರ್ಯಾಚರಣೆ ಪ್ರಾರಂಭಿಸಿದಾಗಿನಿಂದ ಉಭಯ ದೇಶಗಳ ಕ್ರೀಡಾಪಟುಗಳು ಹಲವಾರು ಕ್ರೀಡೆಗಳಿಂದ ನಿರ್ಬಂಧ ಎದುರಿಸಿದ್ದಾರೆ.

ಷೇರುಪೇಟೆ ವಹಿವಾಟು 431



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,686
ಇಂದಿನ ಅಂತ್ಯ	20,855
▲	169
ದಿನದ ಗರಿಷ್ಠ	20,864

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹542

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1620)
ಸೋಯಾ (ರಿಫೈನ್ಡ್)	₹930 (932)
ಸೂರ್ಯಕಾಂತಿ (ರಿಫೈನ್ಡ್)	₹935 (945)
ಪಾಮೋಲಿನ್	₹836 (841)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹283-471
ದ್ವಿತಳಿ (ಬಿ.ವಿ)	₹326-609

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.37
£ ಪೌಂಡ್	105.22
€ ಯುರೊ	90.17
¥ ಯೆನ್ (100ಕ್ಕೆ)	57

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7800-7835
ತಿಪಟೂರು	₹7500-7902
ತುರುವೇಕೆರೆ	₹7500-7950

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗಣೇಶ್ ರಾವ್, ಉಡುಪಿ

• ಪ್ರಶ್ನೆ: ನಾನು ಒಂದು ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಈ ದೀರ್ಘ ಸೇವೆಯ ಕಾರಣಕ್ಕೆ ನಮಗೆ ಮನೆ ನಿರ್ಮಾಣಕ್ಕೆ ಸಂಬಂಧಿಸಿದ ಸಾಲ ಪಡೆಯುವ ಅವಕಾಶ ಸಿಕ್ಕಿದೆ. ಇದು ನಮಗೆ ಬ್ಯಾಂಕ್ ಬಡ್ಡಿಗಿಂತ ಶೇಕಡ 2 ರಷ್ಟು ಕಡಿಮೆ ದರದಲ್ಲಿ ಸಾಲ ನೀಡಲಾಗುತ್ತದೆ. ಒಂದು ವರ್ಷದ ಆದಾಯಕ್ಕೆ ಸಮನಾದ ಮೊತ್ತ ಸಾಲವಾಗಿ ಸಿಗುತ್ತದೆ. ಇದು ಸುಮಾರು ₹15 ಲಕ್ಷ ಮೊತ್ತವಾಗಿರುತ್ತದೆ. ಇದಕ್ಕೆ ಯಾವುದೇ ಭದ್ರತೆ ನೀಡುವ ಅಗತ್ಯವಿಲ್ಲ ಹಾಗೂ ಮನೆ ಆಸ್ತಿಯನ್ನು ಯಾವುದೇ ಅಡಮಾನ ನೀಡುವ ಅಗತ್ಯವಿರುವುದಿಲ್ಲ. ಆದರೆ ವೈಯಕ್ತಿಕ ಭದ್ರತೆಯ ಹಿನ್ನೆಲೆಯಲ್ಲಿ ಈ ಸಾಲವನ್ನು ಮನೆಯ ನಿರ್ಮಾಣಕ್ಕಾಗಿ ಮಾತ್ರ ನಮ್ಮ ಕಂಪನಿಯಲ್ಲಿ ನೀಡಲಾಗುತ್ತದೆ. ಇದಕ್ಕೆ ಪುರಾವೆಯಾಗಿ ನಮ್ಮ ಮನೆಯ ನಿರ್ಮಾಣ ನಕ್ಷೆ, ಕಾಮಗಾರಿ ಹಂತದಲ್ಲಿ ತೆಗೆದ ಚಿತ್ರ ಇತ್ಯಾದಿಗಳನ್ನು ನೀಡಬೇಕಾಗಿರುತ್ತದೆ. ನನ್ನ ಪ್ರಶ್ನೆ ಏನೆಂದರೆ, ಈ ಸಾಲಕ್ಕೆ ನಾನು ಯಾವುದೇ ತೆರಿಗೆ ಲಾಭ ಪಡೆಯಬಹುದೇ ? ನನಗೆ ಬಡ್ಡಿಯಲ್ಲಿ ರಿಯಾಯಿತಿ ಇರುವ ಕಾರಣಕ್ಕೆ ತೆರಿಗೆ ಹಾಕಲಾಗುತ್ತದೆ ಎಂದು ಕಂಪನಿಯವರು ತಿಳಿಸಿರುತ್ತಾರೆ. ಹೀಗಾಗಿ ಈ ಯೋಜನೆಯಿಂದ ನಿಜಕ್ಕೂ ಲಾಭ ಇದೆಯೇ.

ಉತ್ತರ: ನೀವು ಒಂದು ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದು ನಿಮ್ಮ ಕಂಪನಿಯವರು ದೀರ್ಘ ಕಾಲದ ಸೇವೆ ಮಾಡಿದ ಉದ್ಯೋಗಿಗಳಿಗೆ ಮನೆ ಕಟ್ಟುವಲ್ಲಿ ನೆರವಾಗಲು ಆರ್ಥಿಕ ಸಹಾಯ ಯೋಜನೆಯಡಿ ಸಾಲ ನೀಡುತ್ತಿದ್ದಾರೆ. ಆದರೆ ಯಾವುದೇ ಸಾಲಕ್ಕೆ ಆದಾಯ ತೆರಿಗೆಯ ಲಾಭ ಪಡೆಯಲು ಅಂಗೀಕೃತ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರಬೇಕು. ಅಂತಹ ಮಾನ್ಯತೆ ಪಡೆದ ಸಂಸ್ಥೆಗಳಿಗೆ ಅಸಲು-ಬಡ್ಡಿ ಸಂದಾಯವಾಗಿರಬೇಕು. ಆದರೆ ನಿಮ್ಮ ವಿಚಾರದಲ್ಲಿ ನೀಡಲಾದ ಸಾಲ ವೈಯಕ್ತಿಕ ಸಾಲವಾಗಿದ್ದು ನಿಮ್ಮ ಕಂಪನಿಗೆ ಪಾವತಿಯಾಗುವ ಕಾರಣ ತೆರಿಗೆ ಪ್ರಯೋಜನ ಪಡೆಯುವಲ್ಲಿ ನೆರವಾಗಲಾರದು.

ಇನ್ನು ಬಡ್ಡಿಯ ರಿಯಾಯಿತಿಗೆ ಅನ್ವಯವಾಗುವ ತೆರಿಗೆಯ ಬಗ್ಗೆ ಹೇಳುವುದಾದರೆ, ₹ 20 ಸಾವಿರಕ್ಕೂ ಮೇಲ್ಪಟ್ಟ ಸಾಲಕ್ಕೆ ರಿಯಾಯಿತಿ ದರದಲ್ಲಿ ಬಡ್ಡಿ ಪಾವತಿ ಮಾಡಿದಾಗ ರಿಯಾಯಿತಿ ದರದ ಮೊತ್ತದ ಬಡ್ಡಿಯನ್ನು ತೆರಿಗೆಗೆ ಒಳಪಡಿಸಲಾಗುತ್ತದೆ. ಇದಕ್ಕೆ ಆದಾಯ ತೆರಿಗೆಯ ನಿಯಮ 3(7)(i) ಅನ್ವಯವಾಗುತ್ತದೆ. ಇದರಂತೆ, ಪ್ರತಿ ತಿಂಗಳ ಕೊನೆಯ ದಿನ ಬಾಕಿ ಉಳಿದಿರುವ ಸಾಲದ ಅಸಲು ಮೊತ್ತಕ್ಕೆ, ಎಸ್‌ಬಿಐ ಅಂತಹ ಸಾಲಗಳಿಗೆ ವಿಧಿಸುವ ಬಡ್ಡಿ ದರ ಆಧರಿಸಿ ಬಡ್ಡಿ ಲೆಕ್ಕ ಹಾಕಬೇಕು. ಯಾವುದೇ ಬಡ್ಡಿ ಮೊತ್ತವನ್ನು ಉದ್ಯೋಗಿಯಿಂದ ಸಂಗ್ರಹಿಸಿದಾಗ ಅದನ್ನು ಕಳೆದು ಉಳಿದ ಮೊತ್ತವನ್ನಷ್ಟೇ ರಿಯಾಯಿತಿ ದರದ ಸವಲತ್ತು ಎಂದು ಪರಿಗಣಿಸಿ ವೇತನದೊಡನೆ ತೆರಿಗೆಗೊಳಪಡಿಸಲಾಗುತ್ತದೆ.

ಈ ದೃಷ್ಟಿಯಲ್ಲಿ ನಿಮ್ಮ ಒಟ್ಟು ಸಾಲ, ಬಡ್ಡಿಯ ಮೇಲಣ ರಿಯಾಯಿತಿ ಲಾಭ ಹಾಗೂ ವೈಯಕ್ತಿಕ ಸಾಲವಾದ ಕಾರಣ ಅಸಲು-ಬಡ್ಡಿ ಪಾವತಿಗೆ ಪಡೆಯಲಾಗದ ತೆರಿಗೆ ರಿಯಾಯಿತಿಗಳನ್ನು ಒಟ್ಟಾರೆ ತುಲನೆ ಮಾಡಿ ನಿರ್ಧಾರ ಕೈಗೊಳ್ಳಿ. ಇದರೊಡನೆ ಹೊಸ-ಹಳೆಯ ತೆರಿಗೆ ಪದ್ಧತಿಯ ಆಯ್ಕೆಯ ತುಲನೆಯೂ ಅಗತ್ಯ. ಹೀಗಾಗಿ ನಿಮ್ಮ ಆದಾಯದ ಪೂರ್ಣ ಮಾಹಿತಿಯೊಂದಿಗೆ ನಿಮ್ಮ ಕಂಪನಿಯ ತೆರಿಗೆ ವಿಭಾಗವನ್ನು ಅಥವಾ ಸಮೀಪದ ಯಾವುದೇ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಾಲೇಶ್, ದಾವಣಗೆರೆ

ಪ್ರಶ್ನೆ: ನಾನು ನನ್ನ ಮಿತ್ರನೊಬ್ಬನ ಪರವಾಗಿ ಈ ಪತ್ರ ಬರೆಯುತ್ತಿದ್ದೇನೆ. ಆತನ ಆಸ್ತಿ ವಿವರ ಈ ಕೆಳಗಿನಂತಿದೆ.

ಆಸ್ತಿ ಸಂಖ್ಯೆ -1 : ಅಪಾರ್ಟ್‌ಮೆಂಟ್‌ನಲ್ಲಿ ಒಂದು ಫ್ಲ್ಯಾಟನ್ನು ದಿನಾಂಕ 24/11/2021 ರಂದು ₹ 26 ಲಕ್ಷಕ್ಕೆ ಖರೀದಿಸಲಾಯಿತು. ಈ ಆಸ್ತಿಯನ್ನು ಮಾರಾಟ ಮಾಡುವ ಯೋಜನೆ ಇದ್ದು ದಿನಾಂಕ 31/05/2024 ರಂದು ₹ 43 ಲಕ್ಷಕ್ಕೆ ಮಾರಾಟಮಾಡುವ ತಯಾರಿಯಲ್ಲಿದ್ದಾರೆ.

ಆಸ್ತಿ ಸಂಖ್ಯೆ- 2: ವಾಸದ ಮನೆ ನಿರ್ಮಾಣಕ್ಕಾಗಿ ನಿವೇಶನ ಒಂದನ್ನು ದಿನಾಂಕ 9/12/2022 ರಂದು ₹ 16 ಲಕ್ಷಕ್ಕೆ ಖರೀದಿಸಲಾಯಿತು. ಈ ನಿವೇಶನದಲ್ಲಿ ಮನೆ ಕಟ್ಟಿಸಲಾಗುತ್ತಿದ್ದು ಇದೇ 31/12/2023 ರಂದು ನಿರ್ಮಾಣ ಪೂರ್ತಿಗೊಳ್ಳಲಿದೆ. ಇದರ ಅಂದಾಜು ವೆಚ್ಚ ₹ 33 ಲಕ್ಷ. ಈ ಹೂಡಿಕೆಗೆ ತೆರಿಗೆ ವಿನಾಯಿತಿ ಸಿಗುತ್ತದೆಯೇ. ಒಂದು ವೇಳೆ ತೆರಿಗೆ ಅನ್ವಯವಾದರೆ ಕ್ಯಾಪಿಟಲ್ ಗೇನ್ಸ್ ಎಷ್ಟಾಗುತ್ತದೆ ಮತ್ತು ನಾನು ಎಷ್ಟು ಟ್ಯಾಕ್ಸ್ ಕಟ್ಟಬೇಕಾಗುತ್ತದೆ. ಈ ಲೆಕ್ಕವನ್ನು ನಾನು ಯಾವ ವಿತ್ತೀಯ ವರ್ಷದಲ್ಲಿ ತೆಗೆದುಕೊಳ್ಳಬೇಕು.

ಉತ್ತರ: ನೀವು ನೀಡಿರುವ ಮಾಹಿತಿಯಂತೆ, ನಿಮ್ಮ ಸ್ನೇಹಿತರ ಆಸ್ತಿ ಮಾರಾಟದ ಆದಾಯ ತೆರಿಗೆ ವಿಚಾರದಲ್ಲಿ ಕೆಲವೆಲ್ಲ ಮಹತ್ವದ ಅಂಶಗಳನ್ನು ಪರಮರ್ಶೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯದು, ಒಂದನೆಯ ಆಸ್ತಿಯನ್ನು ದಿನಾಂಕ 24/11/2021 ರಂದು ಖರೀದಿಸಿದ್ದು ಆ ಮನೆಯನ್ನು ಮುಂದಿನ ವರ್ಷ 31/05/2024 ರಂದು, ಅಂದರೆ ಖರೀದಿಸಿದ ಎರಡು ವರ್ಷದ ನಂತರ ಮಾರಾಟ ಮಾಡುವವರಿದ್ದಾರೆ. ಎರಡನೆಯ ಅಂಶವೆಂದರೆ, ಮನೆ ಮಾರಾಟ ಮಾಡುವ 5 ತಿಂಗಳು ಮೊದಲು ಅವರ ಇನ್ನೊಂದು ಮನೆಯ ನಿರ್ಮಾಣ ಪೂರ್ತಿಗೊಳ್ಳುತ್ತಿರುವುದು.

ಆದಾಯ ತೆರಿಗೆಯ ಕಾನೂನಿನನ್ವಯ ಯಾವುದೇ ಸ್ಥಿರಾಸ್ತಿ ಖರೀದಿಸಿದ 24 ತಿಂಗಳ ನಂತರ ಮಾರಾಟ ಮಾಡಿದರೆ ಅದು ದೀರ್ಘಾವಧಿ ಬಂಡವಾಳ ಆದಾಯವಾಗುತ್ತದೆ. ಹಾಗೂ ಮಾರಾಟದ ಒಂದು ವರ್ಷಕ್ಕೂ ಮೊದಲು ಮನೆ ಹೊಸದೊಂದು ಮನೆಯನ್ನು ಹೊಂದಿದರೆ ಅಂತಹ ಸಂದರ್ಭದಲ್ಲೂ ತೆರಿಗೆ ರಿಯಾಯಿತಿಗೆ ಅವಕಾಶಗಳಿವೆ. ಹೀಗಾಗಿ ಸೆಕ್ಷನ್ 54 ರ ಅನ್ವಯ ತೆರಿಗೆ ವಿನಾಯಿತಿ ಲಭ್ಯವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪ್ರಸ್ತುತ ಇರುವ ಫ್ಲ್ಯಾಟ್ ಮಾರಾಟ ಮಾಡಿ ಇನ್ನೊಂದು ಮನೆಯನ್ನು ನಿರ್ಮಿಸುತ್ತಿದ್ದಾರೆ. ಹೀಗಾಗಿ ಮುಂದಿನ ವರ್ಷಕ್ಕೆ (2024-25) ಅನ್ವಯಿಸುವ ಹಣದುಬ್ಬರ ಸೂಚ್ಯಂಕ ಆಧರಿಸಿ (ಪ್ರಸ್ತುತ ಲಭ್ಯವಿಲ್ಲ) ನಿಜವಾಗಿ ಎಷ್ಟು ಲಾಭ ಬರುತ್ತದೆ ಎಂಬುದನ್ನು ನೋಡಬೇಕು. ಆ ಲಾಭಾಂಶಕ್ಕಿಂತ ಅಧಿಕ ಹಣ ಹೊಸ ಮನೆಗೆ ಹೂಡಿಕೆಯಾಗಿರಬೇಕು ಎಂಬುದೇ ಇಲ್ಲಿ ಪ್ರಮುಖ ಅಂಶ. ನೀವು ಪಡೆಯುವ ಲಾಭಕ್ಕಿಂತ ಅಧಿಕ ಮೊತ್ತವನ್ನು ಹೊಸ ಮನೆಗೆ ಹೂಡಿಕೆ ಮಾಡಿರುವ ಕಾರಣ ಸಂಪೂರ್ಣ ತೆರಿಗೆ ವಿನಾಯಿತಿ ಲಭ್ಯವಾಗಬೇಕು. ಈ ಬಗ್ಗೆ ಅಗತ್ಯ ತೆರಿಗೆ ಘೋಷಣೆಗಳನ್ನು ಮಾರಾಟ ಮಾಡಿದ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ಸಲ್ಲಿಸಿ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್:businessdesk@prajavani.co.in

ಸೇವೆಗಳಿಗೆ ನಿಧಾನಗತಿಯಲ್ಲಿ ಹೆಚ್ಚಿದ ಬೇಡಿಕೆ • ತಗ್ಗಿದ ಬೆಳವಣಿಗೆ

ಸೇವಾ ಚಟುವಟಿಕೆ: ವರ್ಷದ ಕನಿಷ್ಠ

ನವದೆಹಲಿ (ಪಿಟಿಐ/ರಾಯಿಟರ್ಸ್): ದೇಶದ ಸೇವಾ ವಲಯದ ಚಟುವಟಿಕೆಯು ನವೆಂಬರ್‌ನಲ್ಲಿ ಒಂದು ವರ್ಷದ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯು ಮಂಗಳವಾರ ಹೇಳಿದೆ.

ವಲಯದ ಚಟುವಟಿಕೆಯು ಸತತ ಎರಡನೇ ತಿಂಗಳಿನಲ್ಲಿಯೂ ಇಳಿಕೆ ಕಂಡಂತಾಗಿದೆ. ಅಕ್ಟೋಬರ್‌ನಲ್ಲಿ ಸೇವಾ ಚಟುವಟಿಕೆಯು 7 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿತ್ತು. ಸೇವೆಗಳಿಗೆ ಬೇಡಿಕೆಯು ನಿಧಾನಗತಿಯಲ್ಲಿ ಏರಿಕೆ ಕಂಡಿರುವುದು, ಕಂಪನಿಗಳಿಗೆ ಹೊಸ ವಹಿವಾಟುಗಳು ಕಡಿಮೆ ಪ್ರಮಾಣದಲ್ಲಿ ಸಿಗುತ್ತಿರುವುದೇ ಇದಕ್ಕೆ ಕಾರಣ ಎಂದು ಸಂಸ್ಥೆಯು ಹೇಳಿದೆ.

ಸೇವಾ ವಲಯದ ಬೆಳವಣಿಗೆ ಸೂಚ್ಯಂಕ



ಸೇವಾ ವಲಯದ ಬೆಳವಣಿಗೆಯನ್ನು ತಿಳಿಸುವ ಸರ್ವಿಸಸ್ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಅಕ್ಟೋಬರ್‌ನಲ್ಲಿ 58.4ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ 56.9ಕ್ಕೆ ಇಳಿಕೆ ಕಂಡಿದೆ. ಆದರೆ ಸೂಚ್ಯಂಕವು 50ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇರುವುದರಿಂದ ಸಕಾರಾತ್ಮಕ ಬೆಳವಣಿಗೆ ಮುಂದುವರಿದಂತಾಗಿದೆ.

ಹಣದುಬ್ಬರ ಏರಿಕೆ ಆಗುವ ಸಾಧ್ಯತೆ ಇದೆ. ಇದರಿಂದಾಗಿ ಕಂಪನಿಗಳ ವಹಿವಾಟು ನಡೆಸುವ ವಿಶ್ವಾಸವನ್ನು ನವೆಂಬರ್‌ನಲ್ಲಿ 4 ತಿಂಗಳ ಕನಿಷ್ಠ ಮಟ್ಟಕ್ಕೆ ತಗ್ಗಿದೆ. ಇದರ ಪ್ರತಿಕೂಲ ಪರಿಣಾಮವು ನೇಮಕದ ಮೇಲೆಯೂ ಆಗಿದೆ. ನವೆಂಬರ್‌ನಲ್ಲಿ ನೇಮಕಾತಿಯು 7 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿಯುವಂತೆ ಆಗಿದೆ ಎಂದು ಎಸ್ ಆ್ಯಂಡ್ ಪಿ ತಿಳಿಸಿದೆ.

'ಸದ್ಯದ ಬೆಳವಣಿಗೆ ದರವು ದೀರ್ಘಾವಧಿಯ ಸರಾಸರಿಗಿಂತಲೂ ಉತ್ತಮವಾಗಿದೆ. ಹಣದುಬ್ಬರದ ಏರಿಕೆಯು ವಹಿವಾಟು ನಡೆಸುವ ವಿಶ್ವಾಸವನ್ನು ಕುಗ್ಗಿಸುತ್ತಿದೆ. ಹೀಗಿದ್ದರೂ ಸೇವಾ ವಲಯದ ಬೆಳವಣಿಗೆ ಮುನ್ನೋಟವು ಉತ್ತಮವಾಗಿರಲಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ತಯಾರಿಕೆ ಮತ್ತು ಸೇವಾ ವಲಯದ ಒಟ್ಟು ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಅಕ್ಟೋಬರ್‌ನಲ್ಲಿ 58.4 ಇದ್ದಿದ್ದು ನವೆಂಬರ್‌ನಲ್ಲಿ 57.4ಕ್ಕೆ ಇಳಿಕೆ ಆಗಿದೆ.

ಚಿನ್ನದ ದರ ₹1,050, ಬೆಳ್ಳಿ ₹1,700 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನದ ದರ 10 ಗ್ರಾಂಗೆ ₹1,050 ಇಳಿಕೆ ಕಂಡು ₹63,250ರಂತೆ ಮಾರಾಟ ಆಯಿತು. ಸೋಮವಾರದ ವಹಿವಾಟಿನಲ್ಲಿ 10 ಗ್ರಾಂಗೆ ₹64,300ಕ್ಕೆ ಏರಿಕೆ ಕಂಡಿತ್ತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿದ್ದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ದರ ಇಳಿಕೆ ಕಾಣುವಂತಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1,700 ಇಳಿಕೆ ಕಂಡು ₹78,500ರಂತೆ ಮಾರಾಟ ಆಯಿತು.

ಮುಂಬೈ ಧಾರಣೆ

ಶೇಂಗಾ

05-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಸೋಯಾ ಕಚ್ಚಾ	912 (915)
ಪಾಮ್ ವಾರದ ಡೆಲಿವರಿ	834 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	62,100 (62,900)
ಬೆಳ್ಳಿ ಕೆ.ಜಿ	74,450 (76,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಮುದ್ರಾ ಯೋಜನೆ : 3ನೇ ಸ್ಥಾನದಲ್ಲಿ ಕರ್ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುದ್ರಾ ಯೋಜನೆಯಡಿ ಸಾಲ ಮಂಜೂರು ಮತ್ತು ವಿತರಣೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೂರನೇ ಸ್ಥಾನದಲ್ಲಿದೆ. ಪಿಎಂ ಸ್ವಾನಿಧಿ ಯೋಜನೆಯ ವಿಷಯದಲ್ಲಿ 5ನೇ ಸ್ಥಾನ ಪಡೆದುಕೊಂಡಿದೆ ಎಂದು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ (ಎಸ್‌ಎಲ್‌ಬಿಸಿ) ಸಂಚಾಲಕ ಮತ್ತು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ಭಾಸ್ಕರ್ ಚಕ್ರವರ್ತಿ ಅವರು ಹೇಳಿದ್ದಾರೆ.

ಎಸ್‌ಎಲ್‌ಬಿಸಿ 2023ರ ಸೆಪ್ಟೆಂಬರ್ ತ್ರೈಮಾಸಿಕದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಬರದಿಂದ (ನೈಸರ್ಗಿಕ ವಿಕೋಪ) ತೊಂದರೆಗೆ ಒಳಗಾಗಿರುವ ಎಲ್ಲ ರೈತರಿಗೂ ಪರಿಹಾರ ಕ್ರಮಗಳು ತಲುಪಬೇಕು. ಬ್ಯಾಂಕ್‌ಗಳು ಜಾಗೃತಿ ಶಿಬಿರಗಳನ್ನು ಆಯೋಜಿಸಬೇಕು ಮತ್ತು ನಿಗದಿತ ಕಟ್‌ಆಫ್ ದಿನಾಂಕದೊಳಗೆ ಎಲ್ಲಾ ಅರ್ಹ ಸಾಲಗಳನ್ನು ಮರುಹೊಂದಿಸಬೇಕು ಎಂದು ಸಲಹೆ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	585
ಅಡಿಕೆ	
ಬಂಟ್ವಾಳ	
ಹಳತು	42500-45500
ಕೋಕ	15000-27500
ಸಾಗರ	
ಬಿಳಿಗೋಟು	33099-33099
ಚಾಲಿ	38239-38649
ಕೋಕ	35599-35599
ರಾಶಿ	42899-46689
ಸಿಪ್ಪೆಗೋಟು	20799-21249
ಶಿವಮೊಗ್ಗ	
ಬೆಟ್ಟೆ	43300-53209
ಗೊರಬಾಳು	17099-40799
ಹೊಸತು	42869-47089
ರಾಶಿ	30009-47899
ಸರಕು	45159-78510
ಸಿದ್ದಾಪುರ	
ಬಿಳಿಗೋಟು	31099-34179
ಚಾಲಿ	37809-39549
ಕೋಕ	30389-33700
ಕೆಂಪುಗೋಟು	28000-32000
ರಾಶಿ	42309-46549
ತಟ್ಟಿಬೆಟ್ಟೆ	40109-44099
ಶಿರಸಿ	
ಬೆಟ್ಟೆ	39199-44319
ಬಿಳಿಗೋಟು	29099-35508
ಚಾಲಿ	37099-40468
ಕೆಂಪುಗೋಟು	28099-28099
ರಾಶಿ	45109-48599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12400	12200	-	179.40
ಎಸಿ	6750	6900	-	
ಆರ್‌ಪಿ	10200	10000	-	-
ಆರ್‌ಸಿ	6095	6000	-	2546

ಸಿಬ್ಬಂದಿಗೆ ವೇತನ: ಮನೆ ಅಡ ಇಟ್ಟ ಬೈಜು ರವೀಂದ್ರನ್?

ನವದೆಹಲಿ (ಪಿಟಿಐ): ಉದ್ಯೋಗಿಗಳಿಗೆ ವೇತನ ನೀಡಲು ಬೈಜುಸ್ ಕಂಪನಿಯ ಪ್ರವರ್ತಕರು ತಮ್ಮ ಕುಟುಂಬದ ಸದಸ್ಯರ ಒಂದಿಷ್ಟು ಷೇರುಗಳು, ಮನೆ ಮತ್ತು ಆಸ್ತಿಗಳನ್ನು ಅಡ ಇಡುವಂತಾಗಿದೆ ಎಂದು ಮೂಲಗಳು ತಿಳಿಸಿವೆ.

ಸ್ಥಾಪಕ ಬೈಜು ರವೀಂದ್ರನ್ ಅವರು ಈಚೆಗಷ್ಟೇ ತಮ್ಮ ಕುಟುಂಬದ ಸದಸ್ಯರ ಮನೆ ಮತ್ತು ಆಸ್ತಿಗಳನ್ನು ಅಡ ಇಟ್ಟಿರುವುದಾಗಿ ಮೂಲಗಳು ಹೇಳಿವೆ.

ರವೀಂದ್ರನ್

ಕಂಪನಿಯ ಕಾರ್ಯಾಚರಣಾ ವೆಚ್ಚದಲ್ಲಿ ಹೆಚ್ಚಿನ ಪಾಲು ಉದ್ಯೋಗಿಗಳ ವೇತನಕ್ಕೆ ಹೋಗುತ್ತಿದೆ. ಆದರೆ ವೆಚ್ಚ ನಿಭಾಯಿಸಲು ಪ್ರತಿ ತಿಂಗಳು ₹50 ಕೋಟಿಯಷ್ಟು ಕಡಿಮೆ ಬೀಳುತ್ತಿದೆ. ಇದಕ್ಕಾಗಿ ಈ ಕ್ರಮ ಕೈಗೊಂಡಿರುವುದಾಗಿ ಹೇಳಿವೆ.

2024ರ ಮಾರ್ಚ್‌ವರೆಗೆ ಕಂಪನಿಯ ಕಾರ್ಯಾಚರಣೆಯನ್ನು ನಡೆಸಲು ₹600 ಕೋಟಿಯಿಂದ ₹700 ಕೋಟಿಯಷ್ಟು ಸಾಲ ಪಡೆಯುವ ಪ್ರಕ್ರಿಯೆಗೂ ಪ್ರವರ್ತಕರು ಚಾಲನೆ ನೀಡಿರುವುದಾಗಿ ಮೂಲಗಳು ತಿಳಿಸಿವೆ. ಈ ಬೆಳವಣಿಗೆಗಳ ಕುರಿತು ಕಂಪನಿಯು ಪ್ರತಿಕ್ರಿಯೆ ನೀಡಿಲ್ಲ.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ,
ಕಾರ್ಪೊರೇಟ್ ಕೇಂದ್ರ, ಮುಂಬೈ
(ಜಾಹೀರಾತು ನಂ.CRPD/CR/2023-24/27)
ಇಮೇಲ್ ಐಡಿ: crpd@sbi.co.in
ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

ಭಾರತೀಯ ಸ್ಟೇಟ್ ಬ್ಯಾಂಕ್ ನ ಗುಮಾಸ್ತೆ ಹುದ್ದೆಯಲ್ಲಿ ಕಿರಿಯ ಸಹಯೋಗಿಗಳ (ಕಸ್ಟಮರ್ ಸಪೋರ್ಟ್ ಹಾಗೂ ಸೇಲ್ಸ್) ನಿಯುಕ್ತಿ.

ಭಾರತೀಯ ಸ್ಟೇಟ್ ಬ್ಯಾಂಕ್ ನ ಗುಮಾಸ್ತೆ ಹುದ್ದೆಯಲ್ಲಿ ಕಿರಿಯ ಸಹಯೋಗಿಗಳ (ಕಸ್ಟಮರ್ ಸಪೋರ್ಟ್ ಹಾಗೂ ಸೇಲ್ಸ್) ನಿಯುಕ್ತಿಗಾಗಿ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಮಂತ್ರಿಸಲಾಗಿದೆ.

ಖಾಲಿ ಹುದ್ದೆಗಳು: 8424 (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಒ ಬಿ ಸಿ ಯ 141 ಬ್ಲಾಕ್ ಲಾಗ್ ಖಾಲಿ ಹುದ್ದೆಗಳನ್ನು ಒಳಗೊಂಡು)

ಖಾಲಿ ಹುದ್ದೆಗಳ ವಿವರಗಳು, ಅರ್ಹತೆ ಮತ್ತು ನಿಯಮಗಳು ಮತ್ತು ಷರತ್ತುಗಳು ಮತ್ತು ಆನ್‌ಲೈನ್ ಅರ್ಜಿಗಾಗಿ ದಯವಿಟ್ಟು ಬ್ಯಾಂಕ್‌ನ ಈ ವೆಬ್‌ಸೈಟ್‌ಗೆ ಭೇಟಿ ನೀಡಿರಿ https://bank.sbi/web/careers/current-openings or https://www.sbi.co.in/web/careers/current-Openings- **"RECRUITMENT OF JUNIOR ASSOCIATES".** ಅಭ್ಯರ್ಥಿಗಳು ಇಲ್ಲಿ ಲಭ್ಯವಿರುವ ಲಿಂಕ್‌ನ ಮೂಲಕ ತಮ್ಮ ಅರ್ಜಿಯನ್ನು ನೋಂದಾಯಿಸಬಹುದಾಗಿದೆ.

- ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸಲು ದಿನಾಂಕ : 17.11.2023 ರಿಂದ 07.12.2023
- ಆನ್‌ಲೈನ್ ಪೂರ್ವಭಾವಿ ಪರೀಕ್ಷೆಗಾಗಿ ದಿನಾಂಕ (ಅಂದಾಜು): ಜನವರಿ 2024ರಲ್ಲಿ ವಿಭಿನ್ನ ದಿನಾಂಕಗಳು
- ಆನ್‌ಲೈನ್ ಮುಖ್ಯ ಪರೀಕ್ಷೆಗಾಗಿ ದಿನಾಂಕ (ಅಂದಾಜು): ಫೆಬ್ರವರಿ 2024ರಲ್ಲಿ

ಸ್ಥಳ : ಮುಂಬೈ
ದಿನಾಂಕ : 17.11.2023
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಂ)

ಭಾರತ– ಇಂಗ್ಲೆಂಡ್ ಮೊದಲ ಟಿ20 ಕ್ರಿಕೆಟ್ ಪಂದ್ಯ ಇಂದು

ಸುಧಾರಿತ ಪ್ರದರ್ಶನದ ವಿಶ್ವಾಸ

ಮುಂಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗಳಲ್ಲಿ ಭಾರತ ಮಹಿಳಾ ತಂಡದ ಪ್ರದರ್ಶನ ನಿರಾಶಾದಾಯಕವಾಗಿದೆ. ಆದರೆ ಇತ್ತೀಚಿನ ವಿವಿಧ ಟೂರ್ನಿಗಳಲ್ಲಿ ಭಾರತದ ಆಟಗಾರ್ತಿಯರು ಸುಧಾರಿತ ಪ್ರದರ್ಶನ ನೀಡಿದ್ದಾರೆ. ಆ ಆತ್ಮವಿಶ್ವಾಸದಿಂದ ಬುಧವಾರ ಇಂಗ್ಲೆಂಡ್ ವಿರುದ್ಧ ಆರಂಭವಾಗುವ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯ ತಂಡ ಕಣಕ್ಕಿಳಿಯಲಿದೆ.

ಈ ವರ್ಷ ಚುಟುಕು ಕ್ರಿಕೆಟ್ ಸರಣಿ ಯಲ್ಲಿ ಹರ್ಮನ್ ಪ್ರೀತ್ ಕೌರ್ ಬಳಗ ಯಶಸ್ಸು ಕಂಡಿದೆ. ಏಷ್ಯನ್ ಗೇಮ್ಸ್‌ನಲ್ಲಿ ಸ್ವರ್ಣ ಪದಕ ಕೊರಳಿಗೆ ಹಾಕಿಕೊಂಡಿದೆ. ಬಾಂಗ್ಲಾದೇಶ ತಂಡವನ್ನು ಅದರ ತವರಿನಲ್ಲಿ 2–1 ರಿಂದ ಸೋಲಿಸಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ತ್ರಿಕೋನ ಸರಣಿಯಲ್ಲಿ (ವೆಸ್ಟ್ ಇಂಡೀಸ್ ಇನ್ನೊಂದು ತಂಡ) ಫೈನಲ್ ತಲುಪಿದೆ. ಇನ್ನೊಂದೆಡೆ ವಿಶ್ವದ ಎರಡನೇ ಕ್ರಮಾಂಕದ ಇಂಗ್ಲೆಂಡ್ ತವರಿನಲ್ಲಿ ಶ್ರೀಲಂಕಾ ಎದುರಿನ ಸರಣಿಯಲ್ಲಿ 1–2 ರಲ್ಲಿ ಅನಿರೀಕ್ಷಿತ ಸೋಲನ್ನು ಕಂಡಿದೆ.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತ ತಂಡ ತವರಿನಲ್ಲಿ ಇಂಗ್ಲೆಂಡ್ ಎದುರು ಉತ್ತಮ ದಾಖಲೆ ಹೊಂದಿಲ್ಲ. ಇಂಗ್ಲೆಂಡ್ ವಿರುದ್ಧ ತವರಿನಲ್ಲಿ ಆಡಿರುವ 9 ಪಂದ್ಯಗಳಲ್ಲಿ ಭಾರತ ಗೆದ್ದಿರುವುದು ಎರಡು ಮಾತ್ರ. ಕೊನೆಯ ಬಾರಿ ಜಯಗಳಿಸಿದ್ದು 2018ರಷ್ಟು (ಮಾರ್ಚ್) ಹಿಂದೆ.

ಅಭ್ಯಾಸದಲ್ಲಿ ನಿರತವಾಗಿರುವ ಭಾರತ ತಂಡದ ಸ್ಮತಿ ಮಂದಾನಾ ಮತ್ತು ರೇಣುಕಾ ಸಿಂಗ್ –ಪಿಟಿಐ ಚಿತ್ರ

ಒಟ್ಟಾರೆ ಈ ತಂಡಗಳು 27 ಬಾರಿ ಮುಖಾಮುಖಿ ಆಗಿದ್ದು, ಭಾರತ ಏಳು ಪಂದ್ಯಗಳನ್ನು ಮಾತ್ರ ಗೆದ್ದಿದೆ. ಸಾಲದ್ದಕ್ಕೆ ಭಾರತ ಲಖನೌದಲ್ಲಿ ದಕ್ಷಿಣ ಆಫ್ರಿಕಾ ಎದುರು (2021ರ ಮಾರ್ಚ್) ಗೆದ್ದ ನಂತರ ತವರಿನಲ್ಲಿ ಒಂದೂ ಟಿ–20 ಪಂದ್ಯ ಗೆದ್ದಿಲ್ಲ. ಈಗ ಇದನ್ನೆಲ್ಲಾ ಮರೆತು ಸುಧಾರಿತ ಪ್ರದರ್ಶನ ನೀಡುವ ಅವಕಾಶ ಭಾರತಕ್ಕೆ ಒದಗಿದೆ.

ಆತಿಥೇಯ ಬೌಲರ್‌ಗಳ ಪೈಕಿ ದೀಪ್ತಿ ಶರ್ಮಾ 16 ಪಂದ್ಯಗಳಿಂದ 19 ವಿಕೆಟ್‌ಗಳನ್ನು ಪಡೆದಿದ್ದು, ಯಶಸ್ವಿ ಬೌಲರ್ ಎನಿಸಿದ್ದಾರೆ. ಆದರೆ ಬ್ಯಾಟರ್‌ಗಳ ಪ್ರದರ್ಶನ ಚೆನ್ನಾಗಿಯೇ ಇದೆ. ಹರ್ಮನ್‌ಪ್ರೀತ್, ಜೆಮಿಮಾ ರೋಡ್ರಿಗಸ್, ಉಪನಾಯಕಿ ಸ್ಮೃತಿ ಮಂದಾನಾ ತಂಡದ ವಿವಿಧ ಟೂರ್ನಿ, ಲೀಗ್‌ಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ಮೂರು ಪಂದ್ಯಗಳ ಈ ಸರಣಿಯಲ್ಲಿ ಭಾರತ ಮೂರು ಹೊಸಮುಖಗಳಿಗೆ ಅವಕಾಶ ನೀಡಿದೆ. ಕರ್ನಾಟಕದ ಆಫ್ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ, ಎಡಗೈ ಸ್ಪಿನ್ನರ್‌ಗಳಾದ ಮನ್ನತ್ ಕಶ್ಯಪ್ (ಪಂಜಾಬ್) ಮತ್ತು ಸೈಕಾ ಇಶಾಖ್ (ಬಂಗಾಳ) ಈ ಮೂವರು.

ಶ್ರೇಯಾಂಕಾ ಅವರು ಡಬ್ಲ್ಯುಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಪರ ಉತ್ತಮ ಪ್ರದರ್ಶನ ನೀಡಿದ್ದಾರೆ. ಮಹಿಳಾ ಕೆರಿಬಿಯನ್ ಲೀಗ್‌ನಲ್ಲಿ ಆಡಿದ ಭಾರತದ ಮೊದಲ ಆಟಗಾರ್ತಿ ಎನಿಸಿರುವ ಶ್ರೇಯಾಂಕಾ ಅಲ್ಲಿ ಐದು ಪಂದ್ಯಗಳಿಂದ 9 ವಿಕೆಟ್ ಕಬಳಿಸಿದ್ದಾರೆ.

ಇಂಗ್ಲೆಂಡ್ ಪರ ಅನುಭವಿ ಆಲ್‌ರೌಂಡರ್ ನಾಟ್ ಶಿವರ್ ಬ್ರಂಟ್ಸ್ ಅವರು ಯಾವುದೇ ತಂಡಕ್ಕೆ ತಲೆ-ನೋವಾಗಬಲ್ಲ ಆಟಗಾರ್ತಿ. ಮಹಿಳಾ ಪ್ರೀಮಿಯರ್ ಲೀಗ್‌ನಲ್ಲೂ ಉತ್ತಮ ಪ್ರದರ್ಶನ ನೀಡಿದ್ದಾರೆ. ಡಬ್ಲ್ಯು-ಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ 332 ರನ್ ಜೊತೆಗೆ 10 ವಿಕೆಟ್ ಗಳಿಸಿದ್ದಾರೆ. ಪಿಚ್ ಸ್ಪಿನ್ನರ್‌ಗಳಿ ನೆರವಾಗುವ ನಿರೀಕ್ಷೆಯಿದೆ.

ಪಂದ್ಯ ಆರಂಭ: ರಾತ್ರಿ 7 ಗಂಟೆ
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನೆಮಾ

ಅಖಿಲ ಭಾರತ ಸಬ್ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ (ಎಡದಿಂದ) ತನ್ವಿ ರೆಡ್ಡಿ (17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್), ರಿಷಿಕಾ ನಂದಿ (15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್), ಲಕ್ಷ್ ಚಂಗಪ್ಪ (17 ವರ್ಷದೊಳಗಿನ ಬಾಲಕರ ಸಿಂಗಲ್ಸ್), ಅಖಿಲ್ ರೆಡ್ಡಿ (15 ವರ್ಷದೊಳಗಿನ ಬಾಲಕರ ಸಿಂಗಲ್ಸ್) –ಪ್ರಜಾವಾಣಿ ಚಿತ್ರ

ಬ್ಯಾಡ್ಮಿಂಟನ್: ಲಕ್ಷ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಲಕ್ಷ್ ಚೆಂಗಪ್ಪ ಮಂಗಳವಾರ ಅಖಿಲ ಭಾರತ ಸಬ್ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ 17 ವರ್ಷದೊಳಗಿವರ ಬಾಲಕರ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡರು.

ಫೈನಲ್ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಲಕ್ಷ್ ಅವರು 21-18, 8-21, 21-8ರಿಂದ ಉತ್ತರಖಂಡದ ಅಂಶ್ ನೇಗಿ ಅವರನ್ನು ಮಣಿಸಿದರು.

15 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಕರ್ನಾಟಕದ ಹಿತ್ಯೈಶ್ರೀ ರಾಜಯ್ಯ 21-16, 12-21, 9-21 ರಿಂದ ದೆಹಲಿಯ ರಿಷಿಕಾ ನಂದಿ ವಿರುದ್ಧ ಸೋತು ರನ್ನರ್ ಅಪ್ ಆದರು.

ಕರ್ನಾಟಕದ ದೀಪಕ್ ರಾಜ್ ಅದಿತಿ ಮತ್ತು ಪೊನ್ನಮ್ಮ ಬಿ.ವಿ. ವೃದ್ಧಿ ಜೋಡಿಯು 17 ಮತ್ತು 15 ವರ್ಷದೊಳಗಿನವರ ಬಾಲಕಿಯರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. 17 ವರ್ಷದೊಳಗಿನ ವಿಭಾಗದಲ್ಲಿ ಅವರು 21-10, 21-12 ರಿಂದ ತೆಲಂಗಾಣದ ಲಕ್ಷ್ಮಿ ರಿಧಿಮಾ ದೇವಿನೇನಿ ಮತ್ತು ಸರಾಯು ಸೂರ್ಯನೇನಿ ಅವರನ್ನು ಹಾಗೂ 15 ವರ್ಷದೊಳಗಿನ ವಿಭಾಗದಲ್ಲಿ 21-10, 21-8 ರಿಂದ ಚಂಡೀಗಢದ ಏಂಜಲ್ ಚೌಧರಿ ಮತ್ತು ಶುಭಾಂಗಿ ಚೌಧರಿ ಅವರನ್ನು ಮಣಿಸಿದರು.

ಡಿ.8ರ ಬಳಿಕ ಕುಸ್ತಿ ಫೆಡರೇಷನ್ ಚುನಾವಣೆ ದಿನಾಂಕ ಘೋಷಣೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ)ಗೆ ಚುನಾವಣೆ ನಡೆಸಲು ಅಧಿಸೂಚನೆಯನ್ನು ಡಿ.8 ಅಥವಾ ನಂತರ ಹೊರಡಿಸುವ ಸಾಧ್ಯತೆಯಿದೆ.

ಈ ವರ್ಷದ ಆರಂಭದಲ್ಲಿ ಪ್ರಕಟಿಸಿರುವ ಮತದಾರರ ಪಟ್ಟಿಯಲ್ಲಿ ಬದಲಾವಣೆಗೆ ದಿನಾಂಕ ನಿಗದಿ ಪಡಿಸಲಾಗಿದೆ. ಡಬ್ಲ್ಯುಎಫ್‌ಐಗೆ ಚುನಾವಣೆ ನಡೆಸುವುದಕ್ಕೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂಕೋರ್ಟ್ ಇತ್ತೀಚೆಗಷ್ಟೇ ತೆರವು ಮಾಡಿದ್ದು, ಹೊಸ ಡಬ್ಲ್ಯುಎಫ್‌ಐ ಆಡಳಿತ ಮಂಡಳಿ ಆಯ್ಕೆ ಪ್ರಕ್ರಿಯೆಗೆ ದಾರಿ ಸುಗಮಗೊಂಡಿದೆ.

‘ಜುಲೈ 25ರಂದು ಅಧಿಸೂಚನೆ ಹೊರಡಿಸಲಾದ ಮತದಾರರ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಇದ್ದರೆ ತಿಳಿಸುವಂತೆ ಚುನಾವಣಾ ಅಧಿಕಾರಿ ಅವರು ಬಾಜ್ವಾ ಅವರನ್ನು ಕೇಳಿದ್ದಾರೆ. ಅದಕ್ಕೆ ಬಾಜ್ವಾ ಅವರು ಒಂದು ವಾರ ಕಾಲಾವಕಾಶ ಕೋರಿದ್ದಾರೆ. ಚುನಾವಣೆ ನಡೆಸಲು ಅಂತಿಮ ಅಧಿಸೂಚನೆ ಹೊರಡಿಸಲು 5 ದಿನಗಳಲ್ಲಿ ಅಂದರೆ ಡಿಸೆಂಬರ್ 8 ರಂದು ಅಥವಾ ಅದಕ್ಕೂ ಮೊದಲು ಸಂಪೂರ್ಣ ಮಾಹಿತಿ ಒದಗಿಸಬೇಕು’ ಎಂದು ಸಹಾಯಕ ಚುನಾವಣಾಧಿಕಾರಿ ತಪಸ್ ಭಟ್ಟಾಚಾರ್ಯ ಹೊರಡಿಸಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಾಳೆಯಿಂದ ಪಿಸಿಎಲ್ ಟೂರ್ನಿ

ಬೆಂಗಳೂರು: ನಗರದ ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ವತಿಯಿಂದ 16 ವರ್ಷದೊಳಗಿನ ಬಾಲಕರ ಪರಿಕ್ರಮ ಪುಟ್‌ಬಾಲ್ ಚಾಂಪಿಯನ್ಸ್ ಲೀಗ್ 2023 (ಪಿಸಿಎಲ್) ಅನ್ನು ಡಿ.7ರಿಂದ 9ರ ವರೆಗೆ ಆಯೋಜಿಸಲಾಗಿದೆ.

ನಗರದ ಅಶೋಕ ನಗರದಲ್ಲಿರುವ ಕರ್ನಾಟಕ ಫುಟ್‌ಬಾಲ್ ಕ್ರೀಡಾಂಗಣ-ದಲ್ಲಿ ಪಿಸಿಎಲ್‌ನ 11ನೇ ಆವೃತಿ ಪಂದ್ಯಗಳು ನಡೆಯಲಿವೆ. ಬೆಂಗಳೂರು ನಗರ, ಮಂಗಳೂರು, ರಾಜಸ್ಥಾನ, ಮಣಿಪುರ ಸೇರಿದಂತೆ ಒಟ್ಟು 16 ತಂಡಗಳು ‘ಸಮಾನತೆ ಮತ್ತು ಶಾಂತಿ ಫುಟ್‌ಬಾಲ್ ಕಪ್’ಗೆ ಸೆಣಸಲಿವೆ ಎಂದು ಫೌಂಡೇಷನ್ ಅಧ್ಯಕ್ಷೆ ಶುಕ್ಲಾ ಬೋಸ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಂದ್ಯಗಳು ‘ನಾಕ್‌ಔಟ್’ ಮಾದರಿಯಲ್ಲಿ ನಡೆಯಲಿದ್ದು, 9 ರಂದು ಫೈನಲ್ ಪಂದ್ಯ ನಡೆಯಲಿದೆ. ತಂಡಗಳಿಗೆ ಪ್ರವೇಶ ಶುಲ್ಕ ಇಲ್ಲ. ಇದೇ ವೇಳೆ ಬಾಲಕಿಯರ ತಂಡದಿಂದ ಪ್ರದರ್ಶನ ಪಂದ್ಯ ಏರ್ಪಡಿಸಲಾಗಿದೆ ಎಂದರು.

ಇದೇ ವೇಳೆ ಪಂದ್ಯಾವಳಿಯ ಟ್ರೋಫಿ ಮತ್ತು ಜರ್ಸಿಯನ್ನು ಕರ್ನಾಟಕ ಫುಟ್‌ಬಾಲ್ ಸಂಸ್ಥೆ ಉಪ ಕಾರ್ಯದರ್ಶಿ ಅಸ್ಲಂ ಖಾನ್, ಕಾರ್ಯದರ್ಶಿ ಕುಮಾರ್ ಅವರು ಅನಾವರಣ ಮಾಡಿದರು.